ಗುರುವಾರ, ಮಾರ್ಚ್ 12, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಜೋಡಿ ಗಿಳಿ...

ಗುಜರಾತ್‌ನ ಅಹಮದಾಬಾದ್‌ನಲ್ಲಿ ಗಿಳಿಗಳ ಜೋಡಿಯೊಂದು ಕ್ಯಾಮೆರಾ ಕಣ್ಣಿಗೆ ಸೆರೆಯಾಗಿದ್ದು ಹೀಗೆ...



ಸಿಲಿಂಡರ್‌ಗಾಗಿ ಕಾಯುತ್ತ

ಜಾರ್ಖಂಡ್‌ನ ರಾಂಚಿಯಲ್ಲಿ, ಎಲ್‌ಪಿಜಿಗಾಗಿ ಪಾಳಿಯಲ್ಲಿ ಕಾಯುತ್ತಿದ್ದ ಯುವತಿಯೊಬ್ಬರು ಕೊನೆಗೆ ಸಿಲಿಂಡರ್ ಮೇಲೆಯೇ ಕುಳಿತಿದ್ದರು

ಸೇವಾಲಾಲ್ ಜಯಂತಿ ಅವ್ಯವಹಾರ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ಜಿಲ್ಲೆ ಸೂರಗೊಂಡನ ಕೊಪ್ಪದಲ್ಲಿ ಪ್ರತಿ ವರ್ಷ ನಡೆಯುವ ಸಂತ ಸೇವಾಲಾಲ್ ಜಯಂತಿ ಆಚರಣೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು ತನಿಖೆ ನಡೆಸಬೇಕು ಎಂದು ಬುಧವಾರ ನಡೆದ ನ್ಯಾಯಕ್ಕಾಗಿ ಹೋರಾಟ ಸಮಿತಿ ಸಭೆ ಒತ್ತಾಯಿಸಿದೆ.

ಸೂರಗೊಂಡನಕೊಪ್ಪದಲ್ಲಿ ಇರುವ ಪ್ರತಿಷ್ಠಾನ ಸಮಿತಿ ನಿಯಮಗಳ ಅನುಸಾರ ಇಲ್ಲ. ಬೈ–ಲಾದಲ್ಲಿ ಇರುವ ಹಾಗೆ ಸಮಿತಿಯ ನಿರ್ದೇಶಕರು ನಡೆದುಕೊಂಡಿಲ್ಲ. ಸೂರಗೊಂಡನ ಕೊಪ್ಪದಲ್ಲಿರುವ ಧರ್ಮದರ್ಶಿಗಳನ್ನು ನೇಮಕ ಮಾಡಿದ್ದು ಯಾರು? ಅವರನ್ನು ಸರ್ಕಾರ ನೇಮಕ ಮಾಡಿಲ್ಲ. ತಾಂಡಾ ಅಭಿವೃದ್ಧಿ ನಿಗಮದ ಭ್ರಷ್ಟಾಚಾರ ಮಿತಿಮೀರಿದೆ ಎಂದು ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಸಭೆಯಲ್ಲಿ ಹೇಳಿದರು.

ಬೆಂಗಳೂರಿನಲ್ಲಿರುವ ಬಂಜಾರ ಭವನವನ್ನು ಬಂಜಾರ ಸಮುದಾಯದ ಸಭೆಗೆ ಉಚಿತವಾಗಿ ಕೊಡಬೇಕು ಎಂದು ಆಗ್ರಹಿಸಿದರು.

ಬಂಜಾರ ಭಾಷಾ ಅಕಾಡೆಮಿ ಮಾಜಿ ಅಧ್ಯಕ್ಷ ಎ.ಆರ್.ಗೋವಿಂದಸ್ವಾಮಿ, ಸಮಾಜದ ಮುಖಂಡರಾದ ವಿಠ್ಠಲ್ ಜಾಧವ್, ತುಳಸಿ ನಾಯಕ್, ನಿಂಬ್ಯಾ ನಾಯಕ್, ಗಿರೀಶ್ ಮೂಡ್, ಮಂಜು ನಾಯಕ್ ಹರಿಹರ, ಮಂಜು ಪಮರ್, ಶಿವಕುಮಾರ್, ಮಂಜು ನಾಯಕ್, ಅರುಣ್ ರಾಥೋಡ್ ಮತ್ತಿತರರು ಉಪಸ್ಥಿತರಿದ್ದರು.

ಕಿಡ್ನಿ ಕಸಿಗೆ 5 ಸಾವಿರ ನೋಂದಣಿ

ದಾನಕ್ಕೆ ಕುಟುಂಬಸ್ಥರ ಹಿಂದೇಟು ● ಕಿಡ್ನಿ ಸಮಸ್ಯೆಗೆ ಒಳಪಡುವವರ ಸಂಖ್ಯೆ ಏರಿಕೆ

● ವರುಣ ಹೆಗಡೆ

ಬೆಂಗಳೂರು: ಮಧುಮೇಹ, ಅಧಿಕ ರಕ್ತದೊತ್ತಡ, ಬದಲಾದ ಜೀವನಶೈಲಿ ಸೇರಿ ವಿವಿಧ ಕಾರಣಗಳಿಂದ ಮೂತ್ರಪಿಂಡ (ಕಿಡ್ನಿ) ಸಮಸ್ಯೆಗೆ ಒಳಪಡುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಮೂತ್ರಪಿಂಡದ ವೈಫಲ್ಯಕ್ಕೆ ಒಳಗಾದವರಲ್ಲಿ ಐದು ಸಾವಿರಕ್ಕೂ ಅಧಿಕ ಮಂದಿ ಅಂಗಾಂಗ ಕಸಿಗೆ ಎದುರು ನೋಡುತ್ತಿದ್ದಾರೆ.

ಆರೋಗ್ಯ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಜೀವಸಾರ್ಥಕತೆ ಸಂಸ್ಥೆಯು ಅಂಗಾಂಗಗಳ ಕೊರತೆ ನೀಗಿಸಲು ಶ್ರಮಿಸುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯಿಂದ ಪಡೆಯಲಾದ ಅಂಗಾಂಗಗಳನ್ನು ಸಂಸ್ಥೆಯಡಿ ಹೆಸರು ನೋಂದಾಯಿಸಿದವರಿಗೆ ಒದಗಿಸಲಾಗುತ್ತಿದೆ. ಆದರೆ, ದಾನಿಗಳ ಕೊರತೆ ಹಾಗೂ ಹೊಂದಾಣಿಕೆಯಾಗುವ ಅಂಗಾಂಗಗಳು ಸಿಗದ ಕಾರಣ ಹಲವರು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ.

ಮೂತ್ರಪಿಂಡ ವೈಫಲ್ಯದಂತಹ ಪ್ರಕರಣಗಳಲ್ಲಿ ಕುಟುಂಬಸ್ಥರು ಅಥವಾ ಸಂಬಂಧಿಗಳು ಅಂಗಾಂಗ ದಾನಕ್ಕೆ ಮುಂದೆ ಬಂದು, ಅವರ ಅಂಗಾಂಗ ಹೊಂದಾಣಿಕೆಯಾದಲ್ಲಿ ಕಸಿ ಮಾಡಲಾಗುತ್ತದೆ. ಇಲ್ಲವಾದಲ್ಲಿ, ಜೀವಸಾರ್ಥಕತೆಯಡಿ ಮೃತ ದಾನಿಯಿಂದ ಪಡೆದ ಅಂಗಾಂಗಕ್ಕೆ ಎದುರು ನೋಡಬೇಕಾಗುತ್ತದೆ. ಅದು ಹೊಂದಾಣಿಕೆಯಾದಲ್ಲಿ ಮಾತ್ರ ಕಸಿ ಸಾಧ್ಯವಾಗಲಿದೆ. ಕುಟುಂಬಸ್ಥರು ಹಾಗೂ ಸಂಬಂಧಿಗಳು ಮೂತ್ರಪಿಂಡ ದಾನಕ್ಕೆ ನಿರಾಸಕ್ತಿ ತೋರುತ್ತಿರುವ ಕಾರಣ, ಜೀವಸಾರ್ಥಕತೆಯಡಿ ಮೂತ್ರಪಿಂಡಕ್ಕೆ ಎದುರು ನೋಡುತ್ತಿರುವವರ ಸಂಖ್ಯೆಯಲ್ಲಿ ಏರಿಕೆ ಕಾಣುತ್ತಿದೆ.



ರಾಜ್ಯದಲ್ಲಿ ಅಂಗಾಂಗ ದಾನ ಹಾಗೂ ಕಸಿ ಹೆಚ್ಚುತ್ತಿದೆ. ಅಷ್ಟಾಗಿಯೂ ಅಂಗಾಂಗಗಳ ಕೊರತೆ ಇರುವ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಜನರು ಅಂಗಾಂಗ ದಾನಕ್ಕೆ ಮುಂದಾಗಬೇಕು
ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ



ಮೂತ್ರಪಿಂಡ ಕಾಯಿಲೆ ಎದುರಿಸುತ್ತಿರುವ ಬಹುತೇಕರಿಗೆ ಲಕ್ಷಣಗಳು ಗೋಚರಿಸುವುದಿಲ್ಲ. ಆದ್ದರಿಂದ ನಿಯಮಿತ ತಪಾಸಣೆ ಅಗತ್ಯ
ಡಾ.ಎಚ್. ಸುದರ್ಶನ್ ಬಲ್ಲಾಳ್
ಮಣಿಪಾಲ್ ಆಸ್ಪತ್ರೆಗಳ ಅಧ್ಯಕ್ಷ

ಕಸಿಗೆ ತೊಡಕು: ದಾನಿಗಳ ಕೊರತೆ ಹಾಗೂ ಹೊಂದಾಣಿಕೆಯಾಗುವ ಅಂಗಾಂಗಗಳು ಸಿಗದಿರುವುದರಿಂದ ಕಸಿ ಪ್ರಕ್ರಿಯೆಗೆ ತೊಡಕಾಗಿದೆ. ರಾಜ್ಯದಲ್ಲಿ ಕಳೆದ ವರ್ಷ ಮಿದುಳು ನಿಷ್ಕ್ರಿಯಗೊಂಡ 198 ಮಂದಿಯ 564 ಅಂಗಾಂಗಗಳನ್ನು ದಾನವಾಗಿ ಪಡೆಯಲಾಗಿತ್ತು. ಈ ಅಂಗಾಂಗಗಳಲ್ಲಿ 306 ಮೂತ್ರಪಿಂಡಗಳು ಸೇರಿವೆ. ಅಂಗಾಂಗ ದಾನ ವರ್ಷವಾರು ಹೆಚ್ಚಳವಾದರೂ, ಅಂಗಾಂಗ ವೈಫಲ್ಯಕ್ಕೆ ಒಳಪಡುವವರ ಸಂಖ್ಯೆಯೂ ಏರಿಕೆಯಾಗುತ್ತಿರುವ ಕಾರಣ ನಿರ್ವಹಣೆ ಕಷ್ಟಸಾಧ್ಯವಾಗಿದೆ. ರಾಜ್ಯವಾರು ಅಂಗಾಂಗ ದಾನದಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ.

‘ಮೂತ್ರಪಿಂಡಗಳು ರಕ್ತವನ್ನು ಶುದ್ಧೀಕರಿಸುವ, ತ್ಯಾಜ್ಯಗಳನ್ನು ಮೂತ್ರದ ಮೂಲಕ ಹೊರಹಾಕುವ ಮತ್ತು ದ್ರವಗಳ ಸಮತೋಲನವನ್ನು ಕಾಪಾಡುವ ಪ್ರಮುಖ ಕೆಲಸ ಮಾಡುತ್ತವೆ. ಮಧುಮೇಹ ಮತ್ತು ರಕ್ತದೊತ್ತಡವೇ ಮೂತ್ರಪಿಂಡ ಸಂಬಂಧಿ ಸಮಸ್ಯೆಗಳಿಗೆ ಪ್ರಮುಖ ಕಾರಣಗಳಾಗಿವೆ. ದೇಹದ ಅತಿಯಾದ ತೂಕ, ವೃದ್ಧಾಪ್ಯ ಸೇರಿ ವಿವಿಧ ಕಾರಣಗಳಿಂದಲೂ ಸಮಸ್ಯೆ ಕಾಣಿಸಿಕೊಳ್ಳಲಿವೆ. ಕಿಡ್ನಿ ಆರೋಗ್ಯವನ್ನು ಕಾಪಾಡಿಕೊಳ್ಳಲು ಸರಳ ಪರೀಕ್ಷೆಗಳನ್ನು ನಿಯಮಿತವಾಗಿ ಮಾಡಿಸಿಕೊಳ್ಳಬೇಕು’ ಎಂದು ಮೂತ್ರಪಿಂಡ ತಜ್ಞರು ಸಲಹೆ ನೀಡುತ್ತಾರೆ.

ರಾಜ್ಯದಲ್ಲಿ ಅಂಗಾಂಗಕ್ಕೆ ಕಾಯುತ್ತಿರುವವರು

5,009 ಜನ ಮೂತ್ರಪಿಂಡಕ್ಕಾಗಿ

679 ಜನ ಯಕೃತ್‌ಗಾಗಿ

106 ಜನ ಹೃದಯಕ್ಕಾಗಿ

43 ಜನ ಶ್ವಾಸಕೋಶಕ್ಕೆ

68 ಜನ ಇತರೆ ಅಂಗಾಂಗಗಳಿಗಾಗಿ

ಕಸಿ ಚಿಕಿತ್ಸೆಗೆ ನೆರವು

ಸರ್ಕಾರವು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಸದಸ್ಯರಿಗೆ ಉಚಿತವಾಗಿ ಕಸಿ ಶಸ್ತ್ರಚಿಕಿತ್ಸೆ ನಡೆಸುತ್ತಿದೆ. ಮೂತ್ರಪಿಂಡ ಕಸಿಗೆ ₹3 ಲಕ್ಷ (ಕಸಿ ವೆಚ್ಚ ಹಾಗೂ ಇಮ್ಯೊನೊಸಪ್ರೆಶನ್), ಯಕೃತ್ ಕಸಿಗೆ ₹11 ಲಕ್ಷ, ಹೃದಯ ಕಸಿಗೆ ₹10 ಲಕ್ಷ, ಶ್ವಾಸಕೋಶ ಕಸಿಗೆ ₹15 ಲಕ್ಷ ಹಾಗೂ ಹೃದಯ ಮತ್ತು ಶ್ವಾಸಕೋಶ ಕಸಿಗೆ ₹22 ಲಕ್ಷ ಚಿಕಿತ್ಸಾ ಪ್ಯಾಕೇಜ್ ನಿಗದಿಪಡಿಸಲಾಗಿದೆ. ರಾಜ್ಯದಲ್ಲಿ 86 ಆಸ್ಪತ್ರೆಗಳು ಅಂಗಾಂಗ ಕಸಿಗೆ ನೋಂದಣಿಯಾಗಿವೆ.

‘ಸೈಬರ್ ಕಮಾಂಡ್ ಘಟಕ’ದ ಕಾರ್ಯಾಚರಣೆ: ಇಬ್ಬರ ಸೆರೆ

ಸೈಬರ್ ವಂಚನೆಗೆ ಚೀನಾದ ನಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್‌ನಲ್ಲಿ ನಕಲಿ ಖಾತೆಗಳನ್ನು ತೆರೆದು ಜನರಿಗೆ ವಂಚಿಸುತ್ತಿದ್ದ ಸೈಬರ್ ಜಾಲದ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ‘ರಾಜ್ಯ ಸೈಬರ್ ಕಮಾಂಡ್ ಘಟಕ’ದ ಪೊಲೀಸರು, ಮಂಗಳೂರಿನ ಇಬ್ಬರನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

ಮಂಗಳೂರಿನ ಮೊಹಮ್ಮದ್ ಅನೀಶ್, ಸಲೀತ್ ಅಹಮ್ಮದ್ ಬಂಧಿತರು. ಚೀನಾ ಸೈಬರ್ ವಂಚಕರ ಜತೆಗೆ ಆರೋಪಿಗಳಿಬ್ಬರೂ ನಂಟು ಹೊಂದಿರುವುದು ತನಿಖೆ ವೇಳೆ ಪತ್ತೆಯಾಗಿದೆ.

ಆರೋಪಿಗಳಿಂದ ನಾಲ್ಕು ಮೊಬೈಲ್ ಫೋನ್, 18 ಡೆಬಿಟ್ ಕಾರ್ಡ್, ವಿವಿಧ ಬ್ಯಾಂಕ್‌ನ 17 ಪಾಸ್‌ಬುಕ್, 6 ಚೆಕ್‌ಬುಕ್, ಒಂದು ಕಾರು, 1,479.31 ಯುಎಸ್‌ಡಿಟಿ (ಕ್ರಿಪ್ಟೊಕರೆನ್ಸಿ) ಜಪ್ತಿ ಮಾಡಲಾಗಿದೆ ಎಂದು ಸೈಬರ್ ಕಮಾಂಡ್ ಘಟಕದ ಪೊಲೀಸರು ತಿಳಿಸಿದ್ದಾರೆ.

ಮೊಹಮ್ಮದ್ ಅನೀಶ್ ಹಾಗೂ ಸಲೀತ್ ಅಹಮ್ಮದ್ ಅವರು ಹೂಡಿಕೆಯ ಹೆಸರಿನಲ್ಲಿ ಸಾರ್ವಜನಿಕರಿಂದ ಬ್ಯಾಂಕ್ ಖಾತೆಗಳ ವಿವರ ಪಡೆದುಕೊಳ್ಳುತ್ತಿದ್ದರು. ಬಳಿಕ, ಆ ಖಾತೆಗಳನ್ನು ಸೈಬರ್ ವಂಚನೆಗೆ ಬಳಕೆ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.



ಮೊಹಮ್ಮದ್ ಅನೀಶ್



ಸಲೀತ್ ಅಹಮ್ಮದ್

ಚೀನಾ ನಂಟು: ಚೀನಾದ ಸೈಬರ್ ವಂಚಕರಿಗೆ ಕಡಿಮೆ ಬೆಲೆಗೆ ಕ್ರಿಪ್ಟೊ ಕರೆನ್ಸಿ ಬೇಕಾಗಿತ್ತು. ಬಂಧಿತರು ಭಾರತೀಯರಿಂದ ಕಡಿಮೆ ಬೆಲೆಗೆ ಕ್ರಿಪ್ಟೊ ಕರೆನ್ಸಿ ಖರೀದಿ ಮಾಡುತ್ತಿದ್ದರು. ಕ್ರಿಪ್ಟೊ ಕರೆನ್ಸಿಯನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಕ್ರಿಪ್ಟೊ ವ್ಯವಹಾರದ ಬದಲಾಗಿ ಆರೋಪಿಗಳು ರೂಪಾಯಿ ರೂಪದಲ್ಲಿ ಹಣ ವಾಪಸ್ ಪಡೆಯುತ್ತಿದ್ದರು. ಇದಕ್ಕಾಗಿ ಮಂಗಳೂರು ನಗರದ ಸಾರ್ವಜನಿಕರಿಂದ ಬ್ಯಾಂಕ್ ಖಾತೆಗಳನ್ನು ಸಂಗ್ರಹಿಸಿರುವುದು ಹಾಗೂ ದಾಖಲೆ ಪಡೆದು ನಕಲಿ ಖಾತೆ ತೆರೆದಿರುವುದು ತನಿಖೆ ವೇಳೆ ಪತ್ತೆಯಾಗಿದೆ ಎಂದು ಸೈಬರ್ ಪೊಲೀಸರು ಹೇಳಿದರು.

‘ವಾಟ್ಸ್‌ಆ್ಯಪ್ ಹಾಗೂ ಟೆಲಿಗ್ರಾಮ್ ಮೂಲಕ ಆರೋಪಿಗಳು ಚೀನಾದ ಸೈಬರ್ ವಂಚಕರ ಜತೆಗೆ ಸಂಪರ್ಕದಲ್ಲಿ ಇರುವುದು ಪತ್ತೆಯಾಗಿದೆ. ವ್ಯವಸ್ಥಿತ ರೀತಿಯಲ್ಲಿ ಈ ಜಾಲವು ಕಾರ್ಯಾಚರಣೆ ಮಾಡುತ್ತಿತ್ತು’ ಎಂದು ಸೈಬರ್ ಕಮಾಂಡ್ ಸೆಂಟರ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ವಿದೇಶದಲ್ಲೇ ಕುಳಿತು ವಂಚನೆ

ಆರೋಪಿಗಳಾದ ಮೊಹಮ್ಮದ್ ಅನೀಶ್ ಹಾಗೂ ಸಲೀತ್ ಅಹಮ್ಮದ್ ಅವರು 70ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಸಂಗ್ರಹಿಸಿ, ಚೀನಾದ ವಂಚಕರಿಗೆ ನೀಡಿದ್ದರು. ಜನರಿಂದ ಲಪಟಾಯಿಸುತ್ತಿದ್ದ ಹಣವನ್ನು ಆ ವಂಚಕರು ಇಲ್ಲಿನ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸುತ್ತಿದ್ದರು. ಬಳಿಕ ಹಣವು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆಗೊಳ್ಳುತ್ತಿತ್ತು.

ಮೊಹಮ್ಮದ್ ಅನೀಶ್ ತಾನು ನಡೆಸುತ್ತಿದ್ದ ಸೈಬರ್ ಸೆಂಟರ್‌ಗೆ ಬರುತ್ತಿದ್ದ ಜನರ ಮನವೊಲಿಸಿ ಬ್ಯಾಂಕ್ ದಾಖಲೆಗಳನ್ನು ಪಡೆದುಕೊಳ್ಳುತ್ತಿದ್ದರು. ಬಳಿಕ, ಬ್ಯಾಂಕ್ ದಾಖಲೆಗಳನ್ನು ಅಂತರರಾಷ್ಟ್ರೀಯ ಕೊರಿಯರ್ ಮೂಲಕ ಚೀನಾಕ್ಕೆ ಕಳುಹಿಸುತ್ತಿದ್ದರು. ಅಲ್ಲಿನ ವಂಚಕರು ಭಾರತದ ವಿವಿಧ ರಾಜ್ಯಗಳ ಜನರನ್ನು ವಂಚಿಸುತ್ತಿದ್ದರು ಎಂದು ಮೂಲಗಳು ಹೇಳಿವೆ.

ವಂಚನೆಗೆ ಬಳಸಿದ್ದ 37 ಬ್ಯಾಂಕ್ ಖಾತೆಗಳ ವಿರುದ್ಧ ದೇಶದಾದ್ಯಂತ 88ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಈ ಖಾತೆಗಳಲ್ಲಿ ಎಷ್ಟು ಹಣ ವರ್ಗಾವಣೆ ಆಗಿದೆ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮೂರು ತಿಂಗಳಿಂದ ಕಾರ್ಯಾಚರಣೆ

ಸೈಬರ್ ಕಮಾಂಡ್ ಸೆಂಟರ್‌ನ ಡಿಜಿಪಿ ಪ್ರಣವ್ ಮೊಹಂತಿ ಅವರ ನೇತೃತ್ವದಲ್ಲಿ ರಾಜ್ಯದಾದ್ಯಂತ ಕಳೆದ ಮೂರು ತಿಂಗಳಿಂದ ಕಾರ್ಯಾಚರಣೆ ನಡೆಯುತ್ತಿದೆ. ಇದುವರೆಗೆ 72 ‘ಮ್ಯೂಲ್ ಹರ್ಡರ್’ಗಳನ್ನು (ಬ್ಯಾಂಕ್ ಖಾತೆಗಳನ್ನು ಸೈಬರ್ ವಂಚಕರಿಗೆ ಮಾರಾಟ ಮಾಡುವವರು) ಬಂಧಿಸಲಾಗಿದೆ. ರಾಜ್ಯದಲ್ಲಿ 42 ಸಾವಿರ ನಕಲಿ ಖಾತೆಗಳನ್ನು ತೆರೆದಿರುವುದು ಕಾರ್ಯಾಚರಣೆ ವೇಳೆ ಪತ್ತೆಯಾಗಿದೆ. ಈ ಖಾತೆಗಳಲ್ಲಿ ನೂರಾರು ಕೋಟಿ ವರ್ಗಾವಣೆ ಆಗಿರುವುದು ತನಿಖೆ ವೇಳೆ ಕಂಡುಬಂದಿದೆ.

ಜೀತಕ್ಕೆ ಇಟ್ಟುಕೊಂಡು ದೌರ್ಜನ್ಯ: ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಉಡುಪಿ: ಕೊರಗ ಸಮುದಾಯದ ವ್ಯಕ್ತಿಯನ್ನು 30 ವರ್ಷಗಳಿಂದ ಜೀತದಾಳಾಗಿ ಇಟ್ಟುಕೊಂಡು ದೌರ್ಜನ್ಯ ಎಸಗಿದ ಆರೋಪದಲ್ಲಿ ಮಹಿಳೆಯೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಕುಂದಾಪುರ ತಾಲ್ಲೂಕಿನ ಕನ್ಯಾನ ಗ್ರಾಮದ ರಜನಿ ಶೆಟ್ಟಿ ಬಂಧಿತ ಮಹಿಳೆ. ಪರಿಶಿಷ್ಟ ಪಂಗಡದ ಕೊರಗ ಸಮುದಾಯಕ್ಕೆ ಸೇರಿದ ಕನ್ಯಾನ ಗ್ರಾಮದ ನಾಗ (65) ಎಂಬುವವರನ್ನು ಸುಮಾರು 30 ವರ್ಷಗಳಿಂದ ಕುಂದಾಪುರದ ಹೆಮ್ಮಾಡಿಯ ಕಬ್ಬೈಲು ನಿವಾಸಿಯಾದ ಸುಬ್ಬಣ್ಣ ಶೆಟ್ಟಿ ಎಂಬುವವರು ಕೆಲಸಕ್ಕೆ ಇಟ್ಟುಕೊಂಡಿದ್ದರು. ಸುಬ್ಬಣ್ಣ ಶೆಟ್ಟಿ ಅವರು ಮೃತಪಟ್ಟ ನಂತರ ಅವರ ಮಗಳು ರಜನಿ ಶೆಟ್ಟಿ ಮತ್ತು ಅಳಿಯ ಕರುಣಾಕರ ಶೆಟ್ಟಿ ಅವರು ಕೂಡ ನಾಗ ಅವರನ್ನು ದನ ಕಾಯುವ, ತೋಟದ ಕೆಲಸಕ್ಕಾಗಿ ಮನೆಯಲ್ಲಿ ಇಟ್ಟುಕೊಂಡಿದ್ದರು.



ರಜನಿ ಶೆಟ್ಟಿ

ನಾಗ ಅವರಿಂದ 30 ವರ್ಷಗಳಿಂದ ಬಲವಂತದಿಂದ ಜೀತದಾಳಾಗಿ ಕೆಲಸ ಮಾಡಿಸಿಕೊಂಡಿದ್ದು, ಸರಿಯಾದ ಕೂಲಿ ಕೊಡದೆ, ಉಳಿದುಕೊಳ್ಳಲು ಮೂಲ ಸೌಕರ್ಯ ನೀಡದೆ, ದನದ ಕೊಟ್ಟಿಗೆಯಲ್ಲಿ ಮಲಗಿಸಿರುವುದಾಗಿ ದೂರಿನಲ್ಲಿ ಹೇಳಲಾಗಿದೆ.

ತಿಂಡಿ ತಟ್ಟೆ, ಬಟ್ಟೆ, ಎಲ್ಲವನ್ನೂ ದನದ ಕೊಟ್ಟಿಗೆಯಲ್ಲಿಯೇ ಇಡುವಂತೆ ಒತ್ತಾಯ ಮಾಡಿದ್ದು, ಊಟವನ್ನು ಸಹ ಬಾಳೆ ಎಲೆಯಲ್ಲಿ ನೀಡುತ್ತಿದ್ದರು. ಮನೆಯಿಂದ ಹೊರಗೆ ಹೋಗಲು ಬಿಡದೆ ದೌರ್ಜನ್ಯ ಎಸಗಿದ್ದಾರೆ ಎಂದು ನಾಗ ಅವರು ದೂರಿನಲ್ಲಿ ಹೇಳಿದ್ದಾರೆ.

ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಂಧಿತ ಮಹಿಳೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಹರಿಹರ: ಠಾಣೆ ಮೆಟ್ಟಿಲೇರಿದ ಪ್ರಕರಣ– ಟ್ರಸ್ಟಿಗಳ ಎರಡು ಗುಂಪುಗಳ ನಡುವೆ ವಾಗ್ವಾದ

ಪಂಚಮಸಾಲಿ ಪೀಠದಲ್ಲಿ ಗಲಾಟೆ

ಪ್ರಜಾವಾಣಿ ವಾರ್ತೆ

ಹರಿಹರ: ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಲ್ಲಿ ಮಂಗಳವಾರ ಸಂಜೆ ಸ್ವಾಮೀಜಿ ಸಮ್ಮುಖದಲ್ಲೇ ಲೆಕ್ಕಪತ್ರ ವಿಚಾರವಾಗಿ ಟ್ರಸ್ಟಿಗಳ ಎರಡು ಗುಂಪುಗಳ ನಡುವೆ ತೀವ್ರ ವಾಗ್ವಾದ, ನೂಕಾಟ–ತಳ್ಳಾಟ ನಡೆದಿದೆ.



ವಚನಾನಂದ ಶ್ರೀ

‘ನಮ್ಮ ಮೇಲೆ ಹಲ್ಲೆ ನಡೆಸಿ, ಸಾಕ್ಷ್ಯ ನಾಶ ಮಾಡಲಾಗಿದೆ’ ಎಂದು ಆಡಳಿತಾಧಿಕಾರಿ ಹರಿಹರ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

ವಚನಾನಂದ ಶ್ರೀ ನೇತೃತ್ವದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಆಡಳಿತಾಧಿಕಾರಿ ಎಚ್.ಪಿ. ರಾಜಕುಮಾರ್ ಅವರು, ‘ಮಠಕ್ಕೆ ಈ ಹಿಂದೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಹಾಗೂ ಹಳೆಯ ಲೆಕ್ಕಪತ್ರಗಳನ್ನು ನೀಡಿ’ ಎಂದು ಪಟ್ಟು ಹಿಡಿದ್ದಾರೆ. ಅದಕ್ಕೆ ಕೆಲವು ಟ್ರಸ್ಟಿಗಳು, ‘ನೀವು ಅಧಿಕಾರ ವಹಿಸಿಕೊಂಡ ದಿನದಿಂದ ಮಾತ್ರ ಲೆಕ್ಕಪತ್ರ ಪರಿಶೀಲಿಸಿ’ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಇದೇ ವಿಚಾರವಾಗಿ ಮಾತಿನ ಚಕಮಕಿ ನಡೆದು, ಕೆಲವರು ಕೈಕೈ ಮಿಲಾಯಿಸಲು ಮುಂದಾದರು. ನೂಕಾಟದಲ್ಲಿ ಆಡಳಿತಾಧಿಕಾರಿ ಎದೆಗೆ ಪೆಟ್ಟು ಬಿದ್ದಿದೆ ಎಂದು ದೂರಲಾಗಿದೆ. ತಕ್ಷಣವೇ ಅವರನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ.



ಹರಿಹರದ ಪಂಚಮಸಾಲಿ ಗುರುಪೀಠದ ಆಡಳಿತಾಧಿಕಾರಿ ರಾಜಕುಮಾರ್ ಅವರನ್ನು ಮಂಗಳವಾರ ರಾತ್ರಿ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಯಿತು

ಹಲ್ಲೆಗೆ ಸಂಬಂಧಿಸಿದಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆದರೆ, ಘಟನೆಯ ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಟ್ರಸ್ಟಿ ಚಂದ್ರಶೇಖರ್ ಪೂಜಾರ್ ಅವರ ಬೆಂಬಲಿಗರು ಮಠದ ಸಿ.ಸಿ. ಟಿ.ವಿ ಡಿವಿಆರ್ ಅನ್ನು ಕಳವು ಮಾಡಿದ್ದಾರೆ ಎಂದು ಆಡಳಿತಾಧಿಕಾರಿ ನೀಡಿದ ಮತ್ತೊಂದು ದೂರಿನ ಅನ್ವಯ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಹಿನ್ನೆಲೆ ಏನು?: ಸಭೆಯ ಆರಂಭದಲ್ಲಿ ಪೀಠದ ಸಂಸ್ಥಾಪಕ ಟ್ರಸ್ಟಿ ಬಾವಿ ಬೆಟ್ಟಪ್ಪ ಅವರು, ‘8 ವರ್ಷಗಳ ಹಿಂದೆ ಪೀಠಾರೋಹಣದ ಸಮಯದಲ್ಲಿ ನಡೆದ ಒಪ್ಪಂದದಂತೆ ವಚನಾನಂದ ಶ್ರೀಗಳು ಬೆಂಗಳೂರಿನ ಶ್ವಾಸ ಯೋಗ ಪೀಠವನ್ನು ತ್ಯಜಿಸಿ ಪೂರ್ಣ ಪ್ರಮಾಣದಲ್ಲಿ ಸಮುದಾಯದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತಿಲ್ಲ. ಎರಡೂ ಪೀಠಗಳ ನಿರ್ವಹಣೆ ಮಾಡುವುದು ಬೇಡ. ಎರಡರಲ್ಲಿ ಒಂದು ಪೀಠದಲ್ಲಿರುವುದು ಸೂಕ್ತ’ ಎಂದು ಶ್ರೀಗಳಿಗೆ ಸಲಹೆ ನೀಡಿದರು.

ಆ ಸಮಯದಲ್ಲಿ ಆಡಳಿತಾಧಿಕಾರಿಯವರು ಹಳೆಯ ಲೆಕ್ಕಪತ್ರದ ವಿಷಯ ತೆಗೆದರು. ಆಗ ಕೆಲ ಟ್ರಸ್ಟಿಗಳು ಮಧ್ಯ ಪ್ರವೇಶಿಸಿ, ‘ಈ ಹಿಂದೆ ನಡೆದ ಸಭೆಯಲ್ಲಿ ಹಳೆಯ ಲೆಕ್ಕಕ್ಕಾಗಿ ಆಂತರಿಕ ಸಮಿತಿಯನ್ನು ರಚಿಸುವುದು, ವರದಿ ನೀಡುವ ಕುರಿತು ನಿರ್ಣಯಿಸಲಾಗಿತ್ತು. ಆಂತರಿಕ ಸಮಿತಿ ವರದಿ ನೀಡಿದೆ. ಈಗ ಮತ್ತೇಕೆ ಹಳೆಯ ಲೆಕ್ಕಪತ್ರದ ವಿಷಯ’ ಎಂದು ಪ್ರಶ್ನಿಸಿದಾಗ ಮಾತಿನ ಚಕಮಕಿ ನಡೆಯಿತು ಎಂದು ಸಭೆಯಲ್ಲಿದ್ದ ಕೆಲವು ಟ್ರಸ್ಟಿಗಳು ‘ಪ್ರಜಾವಾಣಿ’ಗೆ ತಿಳಿಸಿದರು.

ಸಭೆಯಲ್ಲಿ ಪ್ರಧಾನ ಟ್ರಸ್ಟಿ ಬಿ.ಸಿ.ಉಮಾಪತಿ, ಟ್ರಸ್ಟಿಯಾಗಿರುವ ಗಡಿನಾಡು ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಪಿ.ಡಿ.ಶಿರೂರು, ಮಹೇಶ್, ಬಸವರಾಜ್ ದಿಂಡೂರು, ಪ್ರಕಾಶ್ ಪಾಟೀಲ್,ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಯುವ ಘಟಕದ ಅಧ್ಯಕ್ಷ ಖಿಚಡಿ ಕೊಟ್ರೇಶ್ ಹಾಗೂ ಇತರರು ಇದ್ದರು.

ಸಭೆಯಲ್ಲಿ ನಡೆದ ಬೆಳವಣಿಗೆ ಬಗ್ಗೆ ಪ್ರತಿಕ್ರಿಯೆ ಪಡೆಯಲು ವಚನಾನಂದ ಶ್ರೀಗಳಿಗೆ ಕರೆ ಮಾಡಿದರೂ ಅವರು ಸ್ವೀಕರಿಸಲಿಲ್ಲ.

prajavani.net prajavani
ಗುರುವಾರ, ಮಾರ್ಚ್ 12, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 71 | ಪುಟ 16
www.prajavani.net


ಅಗ್ರಸ್ಥಾನದಲ್ಲಿ ಅಭಿಷೇಕ್
ಭಾರತ ಕ್ರಿಕೆಟ್ ತಂಡದ ಆಟಗಾರ ಅಭಿಷೇಕ್ ಶರ್ಮಾ ಅವರು ಐಸಿಸಿ ಟಿ20 ಬ್ಯಾಟರ್‌ಗಳ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 76,863 | ನಿಫ್ಟಿ 23,866 | $/₹ 92.01 | ಚಿನ್ನ (Std. 10g) ₹1,68,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,87,800 (ಬೆಂಗಳೂರು)

ಕಾಲುವೆ ಹೂಳು: ರೈತರಿಂದಲೇ ತೆರವು

ಪ್ರಮುಖ ಅಂಶಗಳು
- ಕೃಷಿ ಚಟುವಟಿಕೆಗೆ ನೀರು ಬಳಸಿಕೊಳ್ಳಲು ಪಣ
- ಹೂಳು ತೆರವಿಗೆ ಮೂರು ದಿನ ಕಾರ್ಯಾಚರಣೆ
- 2 ಸಾವಿರ ಎಕರೆ ಭತ್ತದ ಬೆಳೆಗೆ ಉಪಯುಕ್ತ

ಪ್ರಜಾವಾಣಿ ವಾರ್ತೆ

ಕಂಪ್ಲಿ (ಬಳ್ಳಾರಿ ಜಿಲ್ಲೆ): ವಿಜಯನಗರ ಮುಖ್ಯ ಕಾಲುವೆಯಲ್ಲಿ ನೀರು ಸರಾಗವಾಗಿ ಹರಿಯಲು ಅಡ್ಡಿಯಾಗಿದ್ದ ಕಸ, ಗಿಡ, ನೆಲಬಳ್ಳಿ, ತ್ಯಾಜ್ಯ ಸೇರಿ ಹೂಳನ್ನು ತೆರವುಗೊಳಿಸುವ ಮೂರು ದಿನಗಳ ಶ್ರಮದಾನವನ್ನು ರೈತರು ಕೈಗೊಂಡಿದ್ದಾರೆ.

ಕಾಲುವೆಯ ಕೊನೆ ಭಾಗದ ಜಮೀನುಗಳಿಗೆ ನೀರು ಸಮರ್ಪಕವಾಗಿ ಪೂರೈಕೆ ಆಗದ ಕಾರಣ ರೈತರು ಸ್ವಯಂ–ಪ್ರೇರಣೆಯಿಂದ ಈ ಕಾರ್ಯ ಕೈಗೊಂಡಿದ್ದು, 130 ಮಂದಿ ಭಾಗಿಯಾಗಿದ್ದಾರೆ. ಸುಡು ಬಿಸಿಲು, ಸುಸ್ತು ಲೆಕ್ಕಿಸದೇ, ನಿಗದಿತ ಅವಧಿಯೊಳಗೆ ಕಾರ್ಯ ಪೂರ್ಣಗೊಳಿಸಬೇಕು ಎಂದು ಪಣತೊಟ್ಟಿದ್ದಾರೆ.

‘ಕಾಲುವೆಯ 1.8 ಕಿಲೋಮೀಟರ್‌ನಿಂದ 6.3 ಕಿಲೋಮೀಟರ್ ವ್ಯಾಪ್ತಿಯವರೆಗೆ ಹೂಳು ತುಂಬಿದ್ದರಿಂದ ಕೊನೆಯ ಭಾಗದ ಗ್ರಾಮಗಳ ಜಮೀನುಗಳಿಗೆ ನೀರು ತಲುಪುತ್ತಿರಲಿಲ್ಲ. ಅದಕ್ಕೆ ರೈತರು ಜೊತೆಗೂಡಿ, ಹೂಳು ತೆರವಿಗೆ ನಿರ್ಧರಿಸಿದರು. ಮಂಗಳವಾರದಿಂದ ಕಾರ್ಯಾಚರಣೆ ನಡೆದಿದೆ’ ಎಂದು ವಿಜಯನಗರ ನೀರು ಬಳಕೆದಾರರ ಸಹಕಾರ ಸಂಘದ ಉಪಾಧ್ಯಕ್ಷ ಟಿ.ಗಂಗಣ್ಣ ತಿಳಿಸಿದರು.

‘ರೈತರು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಕಾಲುವೆಯ ಕೆಲಸ ಪೂರ್ಣಗೊಳಿಸಿ, ನಂತರ ಇತರ ಕಾರ್ಯಗಳಲ್ಲಿ ತೊಡಗುತ್ತಾರೆ. ಹೂಳು ಸಂಪೂರ್ಣವಾಗಿ ತೆರವಾದಲ್ಲಿ, ಕಂಪ್ಲಿ ಕೋಟೆ ಪ್ರದೇಶ, ಬೆಳಗೋಡುಹಾಳು, ಅರಳಿಹಳ್ಳಿ ಮತ್ತು ಸಣಾಪುರ ಮಾಗಾಣಿ ವ್ಯಾಪ್ತಿಯ 2 ಸಾವಿರ ಎಕರೆಯಷ್ಟು ಬೇಸಿಗೆ ಭತ್ತದ ಬೆಳೆಗೆ ನೀರಿನ ಅನುಕೂಲವಾಗಲಿದೆ’ ಎಂದು ಹೇಳಿದರು.

‘ಸಂಘದ ಕಾರ್ಯದರ್ಶಿ ಅಶೋಕ, ನಿರ್ದೇಶಕ ವಿರೂಪಣ್ಣ, ರೈತರಾದ ಬೆಳಗೋಡು ವಿರೂಪಾಕ್ಷಿ, ಬೆಳಗೋಡು ಬಸವರಾಜ ಸೇರಿ ಕಂಪ್ಲಿ, ಬೆಳಗೋಡುಹಾಳು, ಸಣಾಪುರ ನೀರು ಬಳಕೆದಾರರ ಸಹಕಾರ ಸಂಘ ವ್ಯಾಪ್ತಿಯ ರೈತರು ಕಾರ್ಯಕ್ಕೆ ಸಹಕರಿಸಿದರು’ ಎಂದರು.



ಸರಕು ನೌಕೆ ಮೇಲೆ ಇರಾನ್ ದಾಳಿ

ಗುಜರಾತಿಗೆ ಬರುತ್ತಿದ್ದ ಥಾಯ್ಲೆಂಡ್‌ನ ಹಡಗು • ಭಾರತದ ಇಬ್ಬರ ಸಾವು, ಒಬ್ಬರಿಗೆ ಶೋಧ • 20 ನಾವಿಕರ ರಕ್ಷಣೆ

ದುಬೈ/ನವದೆಹಲಿ (ಎಪಿ/ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷ ಬುಧವಾರ ಇನ್ನಷ್ಟು ತಾರಕಕ್ಕೇರಿದ್ದು, ಅಮೆರಿಕ ಸೇನೆಯು ಇರಾನ್‌ನ ಯುದ್ಧನೌಕೆಗಳನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸಿದ್ದರೆ, ಇರಾನ್ ದೇಶವು ಪರ್ಷಿಯನ್ ಕೊಲ್ಲಿಯಾದ್ಯಂತ ವಾಣಿಜ್ಯ ಹಡಗುಗಳನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸಿದೆ.

ಭಾರತಕ್ಕೆ ಸರಕು ಹೊತ್ತು ತರುತ್ತಿದ್ದ, ಥಾಯ್ಲೆಂಡ್ ಧ್ವಜ ಹೊಂದಿದ್ದ ‘ಮಯೂರಿ ನಾರಿ’ ಹೆಸರಿನ ಹಡಗು ಇರಾನ್ ದಾಳಿಗೆ ಈಡಾಗಿದೆ. ಹೊರ್ಮುಜ್ ಜಲಸಂಧಿಯಲ್ಲಿ ಇರಾನ್ ಈ ಹಡಗಿನ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದು, ಇಬ್ಬರು ಭಾರತೀಯರು ಮೃತಪಟ್ಟಿದ್ದಾರೆ. ಮತ್ತೊಬ್ಬರಿಗಾಗಿ ಶೋಧ ನಡೆದಿದೆ.

ಥಾಯ್ ಕಂಪನಿಯಾದ ‘ಪ್ರೆಷಿಯಸ್ ಶಿಪ್ಪಿಂಗ್ ಪಿಸಿಎಲ್’ ಒಡೆತನದ ಈ ಹಡಗು ಯುಎಇಯ ಖಲೀಫಾ ಬಂದರಿನಿಂದ ಗುಜರಾತಿನ ಕಾಂಡ್ಲಾ ಬಂದರಿನೆಡೆಗೆ ಹೊರಟಿತ್ತು. ಈ ವೇಳೆ ದಾಳಿ ನಡೆಯಿತು. ದಾಳಿಯ ಹೊಣೆಯನ್ನು ಇರಾನ್ ಹೊತ್ತುಕೊಂಡಿದೆ ಎಂದು ‘ರಾಯಲ್ ಥಾಯ್ ನೌಕಾಪಡೆ’ಯ ಪ್ರಕಟಣೆ ತಿಳಿಸಿದೆ.

ಹಡಗಿನಿಂದ ದಟ್ಟವಾದ ಕಪ್ಪು ಹೊಗೆ ಬರುತ್ತಿರುವ ಫೋಟೊಗಳನ್ನು ನೌಕಾಪಡೆ ಬಿಡುಗಡೆ ಮಾಡಿದೆ. ಹಡಗಿನಲ್ಲಿದ್ದ 23 ನಾವಿಕರ ಪೈಕಿ 20 ಜನರನ್ನು ರಕ್ಷಿಸಲಾಗಿದೆ ಎಂದು ಅದು ಹೇಳಿದೆ.

‘ಕೊಲ್ಲಿಯಲ್ಲಿ ಬುಧವಾರ ಒಟ್ಟು ಮೂರು ವಾಣಿಜ್ಯ ಹಡಗುಗಳ ಮೇಲೆ ದಾಳಿಯಾಗಿದೆ’ ಎಂದು ‘ದಿ ಯುನೈಟೆಡ್ ಕಿಂಗ್‌ಡಮ್ ಮೇರಿಟೈಮ್ ಟ್ರೇಡ್ ಆರ್ಗನೈಸೇಷನ್’ (ಯುಕೆಎಂಟಿಒ) ಹೇಳಿದೆ.

ಇರಾನ್‌ನ 16 ಯುದ್ಧ ನೌಕೆಗಳು ಧ್ವಂಸ: ಇರಾನ್ ನೌಕಾಪಡೆಯ ನೆಲೆಗಳು ಮತ್ತು ಅಬ್ಬಾಸ್ ಬಂದರು ನಗರವನ್ನು ಗುರಿಯಾಗಿಸಿ ಅಮೆರಿಕ ಮಂಗಳವಾರ ಮತ್ತು ಬುಧವಾರ ತೀವ್ರವಾದ ವೈಮಾನಿಕ ದಾಳಿ ನಡೆಸಿದೆ. ಇದರಲ್ಲಿ ಇರಾನ್‌ನ 16 ಯುದ್ಧನೌಕೆಗಳನ್ನು ಅಮೆರಿಕ ಧ್ವಂಸಗೊಳಿಸಿದೆ.

‘ಜಗತ್ತಿನ ಶೇ 20ರಷ್ಟು ತೈಲ ಸಾಗುವ ಹೊರ್ಮುಜ್ ಜಲಸಂಧಿಯಲ್ಲಿ ಇರಾನ್ ಅಳವಡಿಸಿರುವ ಸ್ಫೋಟಕಗಳನ್ನು ತಕ್ಷಣ ತೆರವುಗೊಳಿಸದಿದ್ದರೆ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಆ ದೇಶದ ಮೇಲೆ ದಾಳಿ ನಡೆಸುತ್ತೇವೆ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ ಬೆನ್ನಲ್ಲೇ, ಅಮೆರಿಕದ ಸೇನೆಯು ಇರಾನ್‌ನ ಹಲವು ನೌಕೆಗಳ ಮೇಲೆ ದಾಳಿ ನಡೆಸಿ ನಾಶಪಡಿಸಿದೆ. ಈ ಕುರಿತು ಅದು ಕೆಲ ಚಿತ್ರಗಳನ್ನು ಬಿಡುಗಡೆ ಮಾಡಿದೆ. ▶11



ಪರ್ಷಿಯನ್ ಕೊಲ್ಲಿಯಲ್ಲಿ ಭಾರತದ 28 ಹಡಗುಗಳು

ನವದೆಹಲಿ: 778 ಮಂದಿ ನಾವಿಕರು ಇರುವ ಭಾರತದ 28 ಹಡಗುಗಳು ಪರ್ಷಿಯಾ ಕೊಲ್ಲಿಯಲ್ಲಿ ಸಿಲುಕಿವೆ ಎಂದು ಕೇಂದ್ರ ಬಂದರು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ತಿಳಿಸಿದ್ದಾರೆ. ಈ ಪೈಕಿ 677 ನಾವಿಕರಿರುವ 24 ಹಡಗುಗಳು ಹೊರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿದ್ದರೆ, 101 ಮಂದಿ ಇರುವ 4 ಹಡಗುಗಳು ಪೂರ್ವ ಭಾಗದಲ್ಲಿ ಸಿಲುಕಿವೆ ಎಂದಿದ್ದಾರೆ.

ಭಾರತಕ್ಕೆ ಸರಕು ಸಾಮಗ್ರಿಗಳನ್ನು ಹೊತ್ತು ತರುತ್ತಿದ್ದ ಥಾಯ್ಲೆಂಡ್‌ನ ಹಡಗಿನ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, ಹಡಗಿನಿಂದ ದಟ್ಟವಾದ ಕಪ್ಪು ಹೊಗೆ ಹರಡಿತ್ತು — ಎಎಫ್‌ಪಿ ಚಿತ್ರ

ಬ್ಯಾಂಕ್‌ಗಳ ಮೇಲೆ ದಾಳಿಯ ಎಚ್ಚರಿಕೆ

ಪಶ್ಚಿಮ ಏಷ್ಯಾ ಮತ್ತು ಕೊಲ್ಲಿ ದೇಶಗಳ ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಕಾರ್ಪೊರೇಟ್ ಸಂಸ್ಥೆಗಳ ಕಚೇರಿಗಳೇ ಮುಂದಿನ ಗುರಿಗಳಾಗಲಿವೆ ಎಂದು ಇರಾನ್‌ನ ಜಂಟಿ ಸೇನಾ ಕಮಾಂಡರ್ ಘೋಷಿಸಿದ್ದಾರೆ. ಇದು ಯುಎಇಯ ದುಬೈಗೆ ಅಪಾಯವನ್ನು ಉಂಟುಮಾಡಬಹುದು ಎಂದು ಹೇಳಲಾಗಿದೆ.

ಟೆಹರಾನ್‌ನ ಹಣಕಾಸು ಸಂಸ್ಥೆ ‘ಬ್ಯಾಂಕ್ ಸೆಪಾಹ್’ ಮೇಲೆ ಅಮೆರಿಕ ಬುಧವಾರ ದಾಳಿ ನಡೆಸಿದ್ದು, ಅದರಲ್ಲಿ ಒಬ್ಬರು ಸಿಬ್ಬಂದಿ ಮೃತಪಟ್ಟಿದ್ದಾರೆ. ಈ ದಾಳಿ ಬಳಿಕ ಇರಾನ್ ಪಶ್ಚಿಮ ಏಷ್ಯಾ ಮತ್ತು ಕೊಲ್ಲಿ ದೇಶಗಳ ಹಣಕಾಸು ಸಂಸ್ಥೆಗಳ ಮೇಲೆ ದಾಳಿ ನಡೆಸುವ ಕಠಿಣ ಎಚ್ಚರಿಕೆ ನೀಡಿದೆ.

ದುಬೈ ಮೇಲೆ ಇರಾನ್ ದಾಳಿ: ಈ ಎಚ್ಚರಿಕೆಯ ಬೆನ್ನಲ್ಲೇ ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರಾನ್ ಎರಡು ಡ್ರೋನ್‌ಗಳ ಮೂಲಕ ದಾಳಿ ನಡೆಸಿದೆ. ಆದರೆ ವಿಮಾನಯಾನ ಮುಂದುವರಿದಿದೆ.

‘ಇರಾನ್‌ನ ಎಂಟು ಡ್ರೋನ್‌ಗಳ ಧ್ವಂಸ’

ಇರಾನ್‌ನ ಎಂಟು ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಕುವೈತ್ ಹೇಳಿಕೊಂಡಿದೆ. ಇನ್ನೊಂದೆಡೆ, ಸೌದಿ ಅರೇಬಿಯಾ ತನ್ನ ಶೈಬಾ ತೈಲ ನಿಕ್ಷೇಪದ ಕಡೆಗೆ ಬರುತ್ತಿದ್ದ ಐದು ಡ್ರೋನ್‌ಗಳನ್ನು ಯಶಸ್ವಿಯಾಗಿ ನಿಷ್ಕ್ರಿಯಗೊಳಿಸಿರುವುದಾಗಿ ಹೇಳಿದೆ. ▶11

ಹರೀಶ್ ರಾಣಾ ಪ್ರಕರಣ: ‘ಸುಪ್ರೀಂ’ ಮಹತ್ವದ ತೀರ್ಪು

ದಯಾಮರಣಕ್ಕೆ ಅನುಮತಿ

ನವದೆಹಲಿ (ಪಿಟಿಐ): ಹನ್ನೆರಡು ವರ್ಷದಿಂದಲೂ ಕೋಮಾದಲ್ಲಿರುವ 32 ವರ್ಷದ ಯುವಕನ ದಯಾಮರಣಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಅನುಮತಿ ನೀಡಿದೆ.

ಗಾಜಿಯಾಬಾದ್‌ನ ಹರೀಶ್ ರಾಣಾ ‘ಸುಪ್ರೀಂ’ನಿಂದ ದಯಾಮರಣಕ್ಕೆ ಅವಕಾಶ ಪಡೆದವರು. ದಯಾಮರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿದ ಮಹತ್ವದ ಮೊದಲ ತೀರ್ಪು ಇದಾಗಿದೆ. ದೀರ್ಘಕಾಲ ಚರ್ಚಿಸಲಾದ ಈ ಭಾವನಾತ್ಮಕ ವಿಷಯದ ಬಗ್ಗೆ ತೀರ್ಪು ನೀಡಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಕೆ.ವಿ. ವಿಶ್ವನಾಥನ್ ಅವರಿದ್ದ ಪೀಠವು, ದಯಾಮರಣದ ಕುರಿತು ಸಮಗ್ರ ಕಾಯ್ದೆಯೊಂದನ್ನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಪಂಜಾಬ್ ವಿಶ್ವವಿದ್ಯಾಲಯದ ಬಿ.ಟೆಕ್ ವಿದ್ಯಾರ್ಥಿಯಾಗಿದ್ದ ಗಾಜಿಯಾಬಾದ್‌ನ ಹರೀಶ್ ರಾಣಾ ಅವರು 2013ರಲ್ಲಿ ತಾವು ವಾಸವಿದ್ದ ವಸತಿಗೃಹದ ನಾಲ್ಕನೇ ಮಹಡಿಯಿಂದ ಬಿದ್ದಿದ್ದರಿಂದ, ತಲೆಗೆ ಗಂಭೀರ ಗಾಯಗಳಾಗಿದ್ದವು. ಆಗಿನಿಂದಲೂ ಅವರು ಕೋಮಾದಲ್ಲಿದ್ದರು (ದೀರ್ಘಕಾಲದ ಅಸಹಜ ಪ್ರಜ್ಞಾಶೂನ್ಯ ಸ್ಥಿತಿ).

ಪೈಪ್ ಮೂಲಕ ನೀಡುತ್ತಿರುವ ಪೌಷ್ಟಿಕಾಂಶಯುಕ್ತ ಆಹಾರದಿಂದಲೇ ಹರೀಶ್ ಅವರ ಜೀವ ಉಳಿದಿದೆ ಎಂಬುದನ್ನು ನ್ಯಾಯಾಲಯವು ಪರಿಗಣಿಸಿತು. ಪ್ರಸ್ತುತ ಉಪಶಾಮಕ ಆರೈಕೆಯಲ್ಲಿರುವ ಅವರಿಗೆ ನೀಡಲಾಗುತ್ತಿರುವ ವೈದ್ಯಕೀಯ ಚಿಕಿತ್ಸೆಯನ್ನು ಹಿಂತೆಗೆದುಕೊಳ್ಳುವಂತೆ ನ್ಯಾಯಪೀಠವು ನವದೆಹಲಿಯ ಏಮ್ಸ್‌ಗೆ ನಿರ್ದೇಶಿಸಿತು. ಜೀವರಕ್ಷಕ ವ್ಯವಸ್ಥೆಯ ಹಿಂಪಡೆಯುವಿಕೆಯನ್ನು ಮಾನವೀಯ ರೀತಿಯಲ್ಲಿ ಕೈಗೊಳ್ಳಬೇಕು. ಘನತೆಯನ್ನು ಕಾಪಾಡಿಕೊಳ್ಳಲು ಅನುಗುಣವಾದ ಯೋಜನೆಯೊಂದಿಗೆ ಚಿಕಿತ್ಸೆಯನ್ನು ಹಿಂಪಡೆಯಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದೂ ಪೀಠ ಹೇಳಿದೆ. ▶6

‘ದಯಾಮರಣ ಮೂಲಭೂತ ಹಕ್ಕು’

ವ್ಯಕ್ತಿಯೊಬ್ಬರು ಘನತೆಯಿಂದ ದಯಾಮರಣ ಹೊಂದುವುದು ಸಹ ಮೂಲಭೂತ ಹಕ್ಕು ಎಂಬುದನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್, 2018ರಲ್ಲಿ ಮಾನದಂಡಗಳನ್ನು ರೂಪಿಸಿತು (ಕಾಮನ್ ಕಾಸ್ ತೀರ್ಪು). 2023ರಲ್ಲಿ ಇದನ್ನು ಮಾರ್ಪಡಿಸಿದೆ.

ದಯಾಮರಣ ಮತ್ತು ಘನತೆಯಿಂದ ಸಾಯುವ ಹಕ್ಕನ್ನು ಸಂವಿಧಾನದ ವಿಧಿ 21ರ ಅಡಿಯಲ್ಲಿ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು 2018ರ ತೀರ್ಪಿನಲ್ಲಿ ಹೇಳಿದೆ.

ದೀರ್ಘಕಾಲದಿಂದಲೂ ಗುಣಮುಖರಾಗದ ಅನಾರೋಗ್ಯಪೀಡಿತರಿಗೆ ದಯಾಮರಣ ನೀಡುವ ಪ್ರಕ್ರಿಯೆಯನ್ನು ಸುಲಭಗೊಳಿಸಲು 2018ರಲ್ಲಿ ರೂಪಿಸಿದ್ದ ದಯಾಮರಣದ ಮಾರ್ಗಸೂಚಿಗಳನ್ನು ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು 2023ರ ಜ.24ರಂದು ಮಾರ್ಪಡಿಸಿತು.



ಸುಪ್ರೀಂ ಕೋರ್ಟ್ 2023ರಲ್ಲಿ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ, ಕೋಮಾದಲ್ಲಿರುವ ರೋಗಿಗೆ ಅಳವಡಿಸಲಾಗಿರುವ ಕೃತಕ ಜೀವರಕ್ಷಕ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ತಜ್ಞರ ಅಭಿಪ್ರಾಯಕ್ಕಾಗಿ ಪ್ರಾಥಮಿಕ ಮತ್ತು ದ್ವಿತೀಯ ವೈದ್ಯಕೀಯ ಮಂಡಳಿ ರಚಿಸಬೇಕಿದೆ.

ದಯಾಮರಣವು ಜೀವ ರಕ್ಷಕವನ್ನು ತಡೆಹಿಡಿಯುವ ಅಥವಾ ಹಿಂತೆಗೆದುಕೊಳ್ಳುವ ಮೂಲಕ ರೋಗಿಯು ಮರಣ ಹೊಂದುವಂತೆ ಮಾಡುವ ಉದ್ದೇಶಪೂರ್ವಕ ಕ್ರಿಯೆ ಆಗಿದೆ.

ಅರುಣಾ ಶಾನಭಾಗ್‌ಗೆ ಸಿಕ್ಕಿರಲಿಲ್ಲ ಅವಕಾಶ

ತಾನು ಕೆಲಸ ಮಾಡುತ್ತಿದ್ದ ಮುಂಬೈನ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯಲ್ಲೇ ವಾರ್ಡ್ ಬಾಯ್‌ನಿಂದ ಘೋರ ಹಲ್ಲೆ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ 42 ವರ್ಷ ಕೋಮಾದಲ್ಲಿದ್ದ ಶುಶ್ರೂಷಕಿ ಅರುಣಾ ಶಾನಭಾಗ್ ಅವರಿಗೆ ಸುಪ್ರೀಂ ಕೋರ್ಟ್ 2011ರಲ್ಲಿ ದಯಾಮರಣ ನಿರಾಕರಿಸಿತ್ತು. ▶6

ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸೋಲು ವಿವರ ಪುಟ ▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಸದನದಲ್ಲಿ ಭರವಸೆ

ತಿಂಗಳಿಗೊಂದು ಸಿಲಿಂಡರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಇಲ್ಲ. ಪ್ರತಿ ಕುಟುಂಬಕ್ಕೆ 25 ದಿನಗಳ ಬದಲಿಗೆ, ತಿಂಗಳಿಗೆ ಒಂದು ಸಿಲಿಂಡರ್ ಅನ್ನು ಕಡ್ಡಾಯವಾಗಿ ಪೂರೈಸಲಾಗುವುದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.


ಮುನಿಯಪ್ಪ

ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಎಚ್.ಡಿ.ರಂಗನಾಥ್ ಈ ಕುರಿತು ಪ್ರಸ್ತಾಪಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಮುನಿಯಪ್ಪ ಅವರು ಸಿಲಿಂಡರ್ ಪೂರೈಕೆಯ ವಾಸ್ತವ ಸ್ಥಿತಿ ವಿವರಿಸಿದರು. ‘ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ತೈಲ ಕಂಪನಿಗಳ ಅಧಿಕಾರಿಗಳ ಜತೆ ಸಭೆ ನಡೆಸಿ ಪರಿಸ್ಥಿತಿಯ ಅವಲೋಕನ ಮಾಡಿದ್ದೇನ’ ಎಂದರು. ▶5

‘ಹೋಟೆಲ್, ಕಲ್ಯಾಣ ಮಂಟಪಕ್ಕೆ ತುಸು ತೊಂದರೆ’

‘ಆಸ್ಪತ್ರೆ, ಶಾಲೆ, ಹಾಸ್ಟೆಲ್ ಸೇರಿದಂತೆ ತುರ್ತು ಅಗತ್ಯವಿರುವ ಕಡೆ ವಾಣಿಜ್ಯ ಸಿಲಿಂಡರ್ ಪೂರೈಕೆ ಮಾಡಲಾಗುವುದು. ಆದ್ದರಿಂದ ಹೋಟೆಲ್, ಕಲ್ಯಾಣ ಮಂಟಪ, ಕನ್ವೆನ್ಷನ್ ಸೆಂಟರ್‌ಗಳಿಗೆ ತುಸು ತೊಂದರೆಯಾಗಲಿದೆ. ಅವರು ಸಹಕರಿಸಬೇಕು. ದೇಶ ಗಂಭೀರ ಪರಿಸ್ಥಿತಿಯಲ್ಲಿಇರುವ ಸಂದರ್ಭದಲ್ಲಿ ಯಾರೂ ವಿನಾಕಾರಣ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿಕೊಳ್ಳಬಾರದು’ ಎಂದು ಮುನಿಯಪ್ಪ ಮನವಿ ಮಾಡಿದರು.

ಜಮ್ಮು: ಫಾರೂಕ್ ಅಬ್ದುಲ್ಲಾ ಹತ್ಯೆ ಯತ್ನ

ಜಮ್ಮು (ಪಿಟಿಐ): ಮದುವೆ ಸಮಾರಂಭಕ್ಕೆ ತೆರಳಿದ್ದ ವೇಳೆ, ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಹಾಗೂ ಜಮ್ಮು–ಕಾಶ್ಮೀರದ ಉಪಮುಖ್ಯಮಂತ್ರಿ ಸುರೀಂದರ್ ಚೌಧರಿ ಮೇಲೆ ಗುಂಡು ಹಾರಿಸಿ ವ್ಯಕ್ತಿಯೊಬ್ಬ ಹತ್ಯೆ ಮಾಡಲು ಯತ್ನಿಸಿದ ಘಟನೆ ಬುಧವಾರ ರಾತ್ರಿ ನಡೆದಿದೆ. ಈ ಘಟನೆಯಲ್ಲಿ ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿವರ ಪುಟ ▶10

28ರಿಂದ ಐಪಿಎಲ್ ಕ್ರಿಕೆಟ್ ಹಬ್ಬ ಆರ್‌ಸಿಬಿ–ಸನ್ ಮುಖಾಮುಖಿ



ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೊದಲ ಹಂತದ ವೇಳಾಪಟ್ಟಿ ಬುಧವಾರ ಪ್ರಕಟವಾಗಿದೆ. ಇದರಲ್ಲಿ ಒಟ್ಟು 16 ದಿನಗಳ ಅವಧಿಯಲ್ಲಿ 20 ಪಂದ್ಯಗಳು ನಡೆಯಲಿವೆ.

ಇದೇ 28ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ಮುಖಾಮುಖಿಯಾಗಲಿವೆ.

ಆರ್‌ಸಿಬಿಯು ಎರಡು ಪಂದ್ಯಗಳನ್ನು ತವರಿನಂಗಳದಲ್ಲಿ ಆಡಲಿದೆ. ಈ ಋತುವಿನ ಲೀಗ್ ಹಂತದಲ್ಲಿ ಆರ್‌ಸಿಬಿಯು ತವರಿನಂಗಳದಲ್ಲಿ ಐದು ಮತ್ತು ರಾಯಪುರದಲ್ಲಿ ಎರಡು ಪಂದ್ಯಗಳನ್ನು ಆಡಲಿದೆ.

ಮೊಬೈಲ್ ಸ್ಟೋರೇಜ್ ಬಾಕ್ಸ್‌ನಲ್ಲಿದ್ದರೂ ಅಪರಾಧ

ಮಕ್ಕಳ ಅಶ್ಲೀಲ ಚಿತ್ರ: ಜೈಲು ಖಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ಮೊಬೈಲ್‌ನಲ್ಲಿರುವ ಮಕ್ಕಳ ಅಶ್ಲೀಲ ಚಿತ್ರ ಮತ್ತು ವಿಡಿಯೊಗಳನ್ನು ನಾನು ಯಾರಿಗೂ ಫಾರ್ವರ್ಡ್ ಮಾಡಿಲ್ಲ. ಸ್ಟೋರೇಜ್ ಬಾಕ್ಸ್‌ನಲ್ಲಿ ಉಳಿಸಿಕೊಂಡಿದ್ದೇನೆ’ ಎಂದು ಹಲುಬಿದರೆ ಪ್ರಯೋಜನವಿಲ್ಲ. ನಿಮ್ಮ ಮೊಬೈಲ್ ಫೋನ್‌ನಲ್ಲಿ ಅಥವಾ ಇನ್ನಾವುದೇ ಎಲೆಕ್ಟ್ರಾನಿಕ್ ರೂಪದಲ್ಲಿ ಮಕ್ಕಳನ್ನು ಅಶ್ಲೀಲ, ಅಸಭ್ಯ ಅಥವಾ ಲೈಂಗಿಕ ರೀತಿಯಲ್ಲಿ ಚಿತ್ರಿಸಿರುವುದು ಉಳಿದುಕೊಂಡಿದ್ದರೂ ಜೈಲಿಗೆ ಹೋಗುವುದು ಖಚಿತ.

ತಮ್ಮ ಮೊಬೈಲ್‌ನಲ್ಲಿ ಹೇರಳವಾಗಿ ಮಕ್ಕಳ ಅಶ್ಲೀಲ ಚಿತ್ರ ಮತ್ತು ವಿಡಿಯೊಗಳನ್ನು ಸಂಗ್ರಹಿಸಿದ್ದ ವ್ಯಕ್ತಿಯೊಬ್ಬರ ವಿರುದ್ಧದ ವಿಚಾರಣೆ ರದ್ದುಗೊಳಿಸಲು ನಿರಾಕರಿಸಿರುವ ಹೈಕೋರ್ಟ್, ‘ಈ ವಿಷಯದಲ್ಲಿ ವಿನಾಯಿತಿ ನೀಡಲು ಸುತರಾಂ ಸಾಧ್ಯವಿಲ್ಲ’ ಎಂದು ನುಡಿದಿದೆ.

‘ನನ್ನ ವಿರುದ್ಧ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ತ್ವರಿತಗತಿ ನ್ಯಾಯಿಕ ಪ್ರಕ್ರಿಯೆಯ ವಿಶೇಷ ಕೋರ್ಟ್–1ರಲ್ಲಿರುವ (ಎಫ್‌ಟಿಎಸ್‌ಸಿ) ಕ್ರಿಮಿನಲ್ ಪ್ರಕರಣದ ವಿಚಾರಣೆ ರದ್ದುಪಡಿಸಬೇಕು’ ಎಂದು ಕೋರಿ ಕೇರಳದ ತ್ರಿಶ್ಯೂರ್ ಜಿಲ್ಲೆಯ ಚೊಟ್ಟೂರುಪುರ ಕಿಲ್ಲನೂರಿನ ಪಿ.ಜೆ.ಬಿನೋಜ್ (38) ಕರ್ನಾಟಕ ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 2004ರ ಸುಪ್ರೀಂ ಕೋರ್ಟ್‌ನ ‘ಜಸ್ಟ್ ರೈಟ್ಸ್ ಫಾರ್ ಚಿಲ್ಡ್ರನ್ ಅಲೈಯನ್ಸ್ ವರ್ಸಸ್ ಎಸ್.ಹರೀಶ್’ ಪ್ರಕರಣದ ತೀರ್ಪು ಉಲ್ಲೇಖಿಸುವ ಮೂಲಕ, ‘ಯಾವುದೇ ವ್ಯಕ್ತಿ ತನ್ನ ಮೊಬೈಲ್‌ನಲ್ಲಿ ಮಕ್ಕಳ ಅಶ್ಲೀಲ ಚಿತ್ರ ಅಥವಾ ವಿಡಿಯೊಗಳನ್ನು ಹೊಂದಿದ್ದು ಅವುಗಳನ್ನು ಪ್ರಸಾರ ಮಾಡಿಲ್ಲ ಎಂಬುದಕ್ಕೆ ಪುರಾವೆ ಇದೆ ಎಂದಾದರೆ ಅದು ನಿಶ್ಚಿತವಾಗಿ ಅಪರಾಧ’ ಎಂಬ ಶಾಸನದ ನಿಬಂಧನೆಗೆ ಮುದ್ರೆ ಒತ್ತಿದೆ. ▶11

ಪ್ರಕರಣವೇನು?

ಅಪರಾಧ ಪ್ರಕರಣವೊಂದರಲ್ಲಿ ಸಿಲುಕಿಕೊಂಡ ಅರ್ಜಿದಾರರ ಮೊಬೈಲ್ ಫೋನ್ ಅನ್ನು ಪೊಲೀಸರು ತನಿಖೆಯ ವೇಳೆ ವಶಕ್ಕೆ ಪಡೆದಿದ್ದರು. ಅದನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಿದಾಗ ಅದರ ಸ್ಟೋರೇಜ್ ಬಾಕ್ಸ್‌ನಲ್ಲಿ ಹೇರಳವಾಗಿ ಮಕ್ಕಳ ಅಶ್ಲೀಲ ಚಿತ್ರ ಮತ್ತು ವಿಡಿಯೊಗಳು ಇದ್ದುದು ಪತ್ತೆಯಾಗಿತ್ತು.

ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು, ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ (ಐಟಿ) ಕಲಂ 67(ಬಿ) ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012ರ (ಪೋಕ್ಸೊ) ಕಲಂ 15ರ ಅನ್ವಯ; ಮಕ್ಕಳ ಅಶ್ಲೀಲ ಚಿತ್ರಗಳ ರಚನೆ, ಬ್ರೌಸಿಂಗ್, ಸಂಗ್ರಹಣೆ ಮತ್ತು ಪ್ರಸರಣ ಶಿಕ್ಷಾರ್ಹ ಅಪರಾಧ ಎಂಬ ಅಂಶಗಳ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಿಸಿದ್ದರು.

ಅಧೀನ ನ್ಯಾಯಾಲಯದ ವಿಚಾರಣೆ ರದ್ದುಪಡಿಸುವಂತೆ ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಾಸಿಕ್ಯೂಷನ್ ಪರ ವಿನಯ್ ಮಹದೇವಯ್ಯ ವಾದ ಮಂಡಿಸಿದ್ದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದೆ

ಇಬ್ಬರು ತಹಶೀಲ್ದಾರ್ ಅಮಾನತು

ಬೆಂಗಳೂರು: ಕಂದಾಯ ಇಲಾಖೆಯಲ್ಲಿನ ನ್ಯಾಯಾಲಯದ ಪ್ರಕರಣಗಳನ್ನು ನಿಗದಿತ ಅವಧಿಯೊಳಗೆ ಮುಗಿಸದೆ ನಿರ್ಲಕ್ಷ್ಯ ತೋರಿದ ಇಬ್ಬರು ತಹಶೀಲ್ದಾರ್‌ಗಳನ್ನು ಅಮಾನತು ಮಾಡಲಾಗಿದೆ.

ದಕ್ಷಿಣ ತಾಲ್ಲೂಕಿನ ಗ್ರೇಡ್ 1 ತಹಶೀಲ್ದಾರ್ ಜಿ.ಅಶ್ವಿನಿ, ವಿಶೇಷ ತಹಶೀಲ್ದಾರ್ ವರ್ಷಾ ವಡೆಯರ್ ಅವರು ಅಮಾನತುಗೊಂಡವರು. 'ಪ್ರಕರಣಗಳ ವಿಲೇವಾರಿಗೆ ಕ್ರಮವಹಿಸದೇ, ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡ ದೂರಿನ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಕಂದಾಯ ಇಲಾಖೆ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ಇಂಡಕ್ಷನ್ ಕುಕ್‌ಟಾಪ್‌ಗೆ ಭರ್ಜರಿ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಆಗಬಹುದು ಎಂಬ ಭೀತಿಯಿಂದಾಗಿ ಜನರು ಇಂಡಕ್ಷನ್ ಸ್ಟವ್ ಖರೀದಿಸುವುದು ನಗರದಲ್ಲಿ ಹೆಚ್ಚಾಗಿದೆ.

ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಮಾರಾಟ ಮಾಡುವ ಬೆಂಗಳೂರಿನ ಕೆಲವು ಪ್ರಮುಖ ಮಳಿಗೆಗಳಲ್ಲಿ ಇವುಗಳ ಮಾರಾಟವು ಬಿರುಸು ಪಡೆದುಕೊಂಡಿದೆ.

ಕೆಲವು ಮಳಿಗೆಗಳ ಪ್ರತಿನಿಧಿಗಳು, 'ಒಂದೆರಡು ದಿನಗಳಲ್ಲಿ ಬಂದರೆ ಸ್ಟವ್ ಸಿಗುತ್ತದೆ. ಆದರೆ, ವಿಳಂಬ ಮಾಡಿದರೆ ಇರುವ ಸಂಗ್ರಹ ಖಾಲಿ ಆಗಬಹುದು' ಎಂದು ಹೇಳುತ್ತಿದ್ದಾರೆ.

'ತಿಂಗಳಿಗೆ ಎಂಟು ಸ್ಟವ್ ಕೂಡ ಮಾರಾಟ ಆಗುತ್ತಿರಲಿಲ್ಲ. ಬುಧವಾರ ಬೆಳಿಗ್ಗೆಯಿಂದ 10 ಸ್ಟವ್ ಮಾರಾಟ ಮಾಡಿದ್ದೇವೆ' ಎಂದು ಮಲ್ಲೇಶ್ವರದ ಮಳಿಗೆಯೊಂದರ ಪ್ರತಿನಿಧಿ ಹೇಳಿದರು.

'₹25 ಸಾವಿರ ಕೋಟಿ ಹಿಂಪಡೆಯಿರಿ'

ಗ್ಯಾರಂಟಿಗೆ ಎಸ್‌ಸಿಎಸ್‌ಪಿ ಟಿಎಸ್‌ಪಿ ಹಣ ಬೇಡ: ದಲಿತ ಸಂಘರ್ಷ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಸಿಎಸ್‌ಪಿ ಟಿಎಸ್‌ಪಿಗೆ ಮೀಸಲಿರುವ ಶೇ 24.1ರಷ್ಟು ಅನುದಾನದಲ್ಲಿ ಗ್ಯಾರಂಟಿಗೆ ವರ್ಗಾಯಿಸಿದ ₹25 ಸಾವಿರ ಕೋಟಿ ವಾಪಸ್ ಪಡೆಯಬೇಕು ಎಂಬುದೂ ಸೇರಿದಂತೆ 16 ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿಯಿಂದ (ಕೃಷ್ಣಪ್ಪ ಬಣ) ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

'ಪರಿಶಿಷ್ಟ ಜಾತಿಯವರಿಗೆ ಶೇ 17, ಪರಿಶಿಷ್ಟ ವರ್ಗದವರಿಗೆ ಶೇ 7ರಷ್ಟು ಮೊತ್ತವನ್ನು ಎಸ್‌ಸಿಎಸ್‌ಪಿ ಟಿಎಸ್‌ಪಿ ಅಡಿ ಮೀಸಲಿಡಬೇಕು ಎಂದು ಕಾಯ್ದೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಅದನ್ನು ಗ್ಯಾರಂಟಿ ಸಹಿತ ಬೇರೆ ಉದ್ದೇಶಗಳಿಗೆ ಬಳಕೆ ಮಾಡುತ್ತಿರುವುದು ಸರಿಯಲ್ಲ. ದುರ್ಬಳಕೆ ತಪ್ಪಿಸಲು ಕಾಯ್ದೆಯ ಸೆಕ್ಷನ್ 7ಸಿ ತೆಗೆದು ಹಾಕಬೇಕು' ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು.

'ನಿವೇಶನ ಖರೀದಿಸಲು ₹5 ಲಕ್ಷ ಹಾಗೂ ಕಟ್ಟಡ ನಿರ್ಮಾಣಕ್ಕೆ ಕನಿಷ್ಠ ₹5 ಲಕ್ಷ ಸಹಾಯಧನ ನೀಡಬೇಕು' ಎಂದು ಆಗ್ರಹಿಸಿದರು.

'ಆದಿವಾಸಿ ಕುಟುಂಬಗಳಿಗೆ 'ಮುಖ್ಯಮಂತ್ರಿ ಆದಿವಾಸಿ ಗೃಹಭಾಗ್ಯ' ಯೋಜನೆಯಡಿ ವಸತಿ ನೀಡಬೇಕು.



ಕರ್ನಾಟಕ ದಲಿತ ಸಂಘರ್ಷ ಸಮಿತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು ಪ್ರಜಾವಾಣಿ ಚಿತ್ರ

ಲಿಡಕರ್ ನಿಗಮಕ್ಕೆ ₹ 500 ಕೋಟಿ ಮೀಸಲಿಡಬೇಕು. ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಹಾಗೂ ಸಂರಕ್ಷಣಾ ಕಾಯ್ದೆಯನ್ನು ರದ್ದುಪಡಿಸಬೇಕು. ದನದ ಮಾಂಸ ರಫ್ತು ನಿಲ್ಲಿಸಬೇಕು' ಎಂದು ಒತ್ತಾಯಿಸಿದರು.

'ದಮನಿತರ ಪರವಾಗಿ ನಿರಂತರವಾಗಿ ಹೋರಾಡುತ್ತಲೇ ಅವರಲ್ಲಿ ಸ್ವಾಭಿಮಾನ ಮೂಡಿಸಿದ ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ಪ್ರೊ.ಬಿ.ಕೃಷ್ಣಪ್ಪ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ ಮಾಡಬೇಕು' ಎಂದು ಆಗ್ರಹಿಸಿದರು.

ಸಮಿತಿ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ, ರಾಜ್ಯ ಸಂಘಟನಾ ಸಂಚಾಲಕ ಹನುಮಂತಪ್ಪ ಕಾಕರಕಲ್, ರತ್ನಮ್ಮ ಚಿಕ್ಕಬಳ್ಳಾಪುರ, ಮುಂಡರಗಿ ನಾಗರಾಜ್, ಕಮಲವ್ವ ಕರೆಮ್ಮನವರ್ ಅವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸ್ವಾತಂತ್ರ್ಯ ಉದ್ಯಾನದ ಸುತ್ತಮುತ್ತ ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾ.12ರಂದು ಒಳ ಮೀಸಲಾತಿ ಹೋರಾಟ ಸಮಿತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಉದ್ಯಾನದ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಶಾಂತಲಾ ಜಂಕ್ಷನ್ ಮತ್ತು ಖೋಡೆ ಸರ್ಕಲ್‌ನಿಂದ ಆನಂದ ರಾವ್ ಮೇಲ್ಸೇತುವೆ, ಶೇಷಾದ್ರಿ ರಸ್ತೆಯಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ವಾಹನ ಸಂಚಾರ ನಿಷೇಧಿಸಲಾಗಿದೆ.

ಲುಲು ಮಾಲ್, ರಾಜೀವ್ ಗಾಂಧಿ ಸರ್ಕಲ್, ಮಂತ್ರಿ ಮಾಲ್, ಸ್ವಸ್ತಿಕ್ ವೃತ್ತ, ಶೇಷಾದ್ರಿಪುರ, ನೆಹರು ವೃತ್ತ, ರೇಸ್ ಕೋರ್ಸ್ ಮೇಲ್ಸೇತುವೆ ಕಡೆಗೆ ವಾಹನಗಳು ಸಂಚರಿಸಬಹುದು.

ಮೈಸೂರು ಬ್ಯಾಂಕ್ ಕಡೆಯಿಂದ ಚಾಲುಕ್ಯ ವೃತ್ತದ ಕಡೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಕೆ.ಜಿ ರಸ್ತೆ, ಮೈಸೂರು ಬ್ಯಾಂಕ್ ಜಂಕ್ಷನ್, ಸಾಗರ್ ಜಂಕ್ಷನ್, ಕೆ.ಜಿ ಜಂಕ್ಷನ್, ಎಲೈಟ್, ಟಿಬಿ ರಸ್ತೆ, ರಾಜೀವ್ ಗಾಂಧಿ ವೃತ್ತ, ಸ್ವಸ್ತಿಕ್, ರೇಸ್ ಕೋರ್ಸ್ ಮೇಲ್ಸೇತುವೆಯ ಮೂಲಕ ಸಂಚರಿಸಬಹುದು.

ಚಾಲುಕ್ಯ ವೃತ್ತದಿಂದ ಮೈಸೂರು ಬ್ಯಾಂಕ್ ಕಡೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಚಾಲುಕ್ಯ ವೃತ್ತ, ಎಲ್‌ಆರ್‌ಡಿ, ರಾಜಭವನ ರಸ್ತೆ, ಇನ್‌ಫೆಂಟ್ರಿ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತದ ಮೂಲಕ ಸಂಚರಿಸಬಹುದು.

ಮದ್ಯ ಮಾರಾಟ ನಿಷೇಧ

ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯ ಜನರು ಭಾಗವಹಿಸುವ ನಿರೀಕ್ಷೆಯಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಗುರುವಾರ ಮದ್ಯಮಾರಾಟ ನಿಷೇಧಿಸಿ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಆದೇಶಿಸಿದ್ದಾರೆ.

ಪಶ್ಚಿಮ ವಿಭಾಗದ ಉಪ್ಪಾರಪೇಟೆ, ಸಿಟಿ ಮಾರ್ಕೆಟ್, ಕಲಾಸಿಪಾಳ್ಯ, ಚಾಮರಾಜಪೇಟೆ ಠಾಣಾ ವ್ಯಾಪ್ತಿ, ಶೇಷಾದ್ರಿಪುರ, ಹೈಗ್ರೌಂಡ್ಸ್, ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಎಲ್ಲ ಮದ್ಯದಂಗಡಿ, ಬಾರ್, ರೆಸ್ಟೋರೆಂಟ್‌ಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಕಾಳಿದಾಸ ರಸ್ತೆಯ ಕನಕದಾಸ ಜಂಕ್ಷನ್ ಕಡೆಯಿಂದ ಸ್ವಾತಂತ್ರ್ಯ ಉದ್ಯಾನ ಕಡೆಗೆ ಸಂಚಾರ ನಿರ್ಬಂಧಿಸಲಾಗಿದೆ. ವಾಹನ ಸವಾರರು, ಕನಕದಾಸ ಜಂಕ್ಷನ್ ನಲ್ಲಿ ಬಲಕ್ಕೆ ತಿರುವು ಪಡೆದು ಸಾಗರ ಜಂಕ್ಷನ್ ಕಡೆಗೆ ಸಂಚರಿಸಬಹುದಾಗಿದೆ.


ಮೌರ್ಯ/ಸುಬ್ಬಣ್ಣ ಜಂಕ್ಷನ್‌ನಿಂದ ಸ್ವಾತಂತ್ರ್ಯ ಉದ್ಯಾನದ ಕಡೆಗೆ ಎಲ್ಲ ಮಾದರಿಯ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಅಲ್ಲಿಂದ ಬಲಕ್ಕೆ ತಿರುವು ಪಡೆದು ಆನಂದರಾವ್ ವೃತ್ತ ಚಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊಲೆಗೆ ಯತ್ನ: ಮೂವರು ಆರೋಪಿಗಳು ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರಹಾರದ ದಾಸರಹಳ್ಳಿ ರಸ್ತೆಯಲ್ಲಿ ಸಂತೋಷ್ ಎಂಬುವವರ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೊಲೆಗೆ ಯತ್ನಿಸಿದ್ದ ಮೂವರನ್ನು ಮಾಗಡಿ ರಸ್ತೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಎಸ್.ಮಂಜುನಾಥ್, ಶರತ್ ಕುಮಾರ್ ಹಾಗೂ ಸುರೇಶ್ ಬಂಧಿತರು. ಮಾರ್ಚ್ 9ರಂದು ಕೃತ್ಯ ಎಸಗಿದ್ದರು.



ಮಂಜುನಾಥ್



ಸುರೇಶ್



ಶರತ್

'ಹಳೆಯ ದ್ವೇಷದ ಕಾರಣಕ್ಕೆ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂದು ಪ್ರಾಥಮಿಕ ವಿಚಾರಣೆಯಿಂದ ಗೊತ್ತಾಗಿದೆ. ಸಂತೋಷ್ ಸ್ಥಿತಿ ಗಂಭೀರ ವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಂತೋಷ್ ಮೇಲೆ ಕೊಲೆ ಆರೋಪ ಇತ್ತು. ಕಾರು ವಿಚಾರಕ್ಕೆ ತನ್ನ ಸ್ನೇಹಿತ ಜತೆಗೆ ಸಂತೋಷ್ ಗಲಾಟೆ ಮಾಡಿಕೊಂಡಿದ್ದರು. 2024ರಲ್ಲಿ ಸ್ನೇಹಿತನ ಕೊಲೆ ನಡೆದಿತ್ತು. ಆ ಪ್ರಕರಣದಲ್ಲಿ ಸಂತೋಷ್ ಅವರನ್ನು ಪೊಲೀಸರು ಬಂಧಿಸಿದ್ದರು. ಜಾಮೀನಿನ ಮೇಲೆ ನಾಲ್ಕು ತಿಂಗಳ ಹಿಂದೆ ಜೈಲಿನಿಂದ ಬಿಡುಗಡೆ ಆಗಿದ್ದರು. ಕೊಲೆಯಾದ ವ್ಯಕ್ತಿಯ ಕಡೆ ಯವರು ಸಂತೋಷ್ ಮೇಲೆ ದ್ವೇಷ ಸಾಧಿಸುತ್ತಿದ್ದರು. ಮಾರ್ಚ್ 9ರಂದು ಅಗ್ರಹಾರದ ದಾಸರಹಳ್ಳಿ ರಸ್ತೆಯಲ್ಲಿ ಸಂತೋಷ್ ಸಾಗುವಾಗ ಅಡ್ಡಗಟ್ಟಿ ಕೊಲೆಗೆ ಯತ್ನಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಭರಣ ಕಳ್ಳತನ: ಆರೋಪಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಮಾಲೀಕರ ಸಂಬಂಧಿಯ ಮನೆಯಲ್ಲಿ ಚಿನ್ನ ಹಾಗೂ ವಜ್ರದ ಆಭರಣಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಅಮೃತಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಜಕ್ಕೂರಿನ ಅಭಿಲಾಷ್ ಗೌಡ (30) ಬಂಧಿತ ಆರೋಪಿ. ಮತ್ತೊಬ್ಬ ಆರೋಪಿ ಮದನ್‌ಕುಮಾರ್ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಆರೋಪಿಯಿಂದ ₹13 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಅಮೃತಹಳ್ಳಿಯ ನಿವಾಸಿ ಕೆ.ಆರ್.ಪ್ರತೀಕ್ ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಅಭಿಲಾಷ್ ಗೌಡ

'ಕೆ.ಆರ್. ಪ್ರತೀಕ್ ಅವರ ಪತ್ನಿ ಭಾವನಾ ಅವರ ತಾಯಿಯ ಮನೆಯಲ್ಲಿ ಆರೋಪಿ ಅಭಿಲಾಷ್ 10 ವರ್ಷಗಳಿಂದ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದರು. ಪ್ರತೀಕ್ ಹಾಗೂ ಅವರ ಸಂಬಂಧಿಕರ ಮನೆಗಳು ಇರುವ ಸ್ಥಳಗಳು ಅಭಿಲಾಷ್‌ಗೆ ಗೊತ್ತಿತ್ತು. ಮದುವೆ ಹಾಗೂ ಇತರೆ ಸಮಾರಂಭಗಳಿಗೆ ಹೋಗಿ ಬಂದ ಮೇಲೆ ಚಿನ್ನವನ್ನು ಇಟ್ಟಿದ್ದ ಸ್ಥಳವನ್ನು ಆರೋಪಿ ಗಮನಿಸಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆ, ತನ್ನ ಸಹಚರ ಮದನ್‌ಕುಮಾರ್ ಅವರನ್ನು ಕರೆಸಿಕೊಂಡು ಚಿನ್ನ ಹಾಗೂ ವಜ್ರದ ಆಭರಣಗಳನ್ನು ಕಳ್ಳತನ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಕದ್ದ ಚಿನ್ನವನ್ನು ಅಭಿಲಾಷ್ ಚಿನ್ನದ ಅಂಗಡಿಗಳು ಹಾಗೂ ಸ್ನೇಹಿತರಿಗೆ ಮಾರಾಟ ಮಾಡಿದ್ದರು. ಅದರಿಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

ಆರೋಪಿ ಸೆರೆ: ಮನೆಗೆ ನುಗ್ಗಿ ಟಿ.ವಿ, ಲ್ಯಾಪ್‌ಟಾಪ್, ಮೊಬೈಲ್ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಕೊಡಿಗೇಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದೊಡ್ಡಬೊಮ್ಮಸಂದ್ರದ ರಂಜಿತ್ ಅಲಿಯಾಸ್ ಕರಿಯ (29) ಬಂಧಿತ ಆರೋಪಿ.



ರಂಜಿತ್

ಆರೋಪಿಯಿಂದ ₹ 1.23 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ದೇವಿನಗರದ ಸಿ.ಪಿ ಲೇಔಟ್‌ನ ನಿವಾಸಿ, ರೊಟ್ಟಿಮನೆ ಹೋಟೆಲ್ ಮಾಲೀಕ ನರಸಪ್ಪ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕದ್ದ ವಸ್ತುಗಳನ್ನು ಆರೋಪಿ ತನ್ನ ಮನೆಯಲ್ಲಿಯೇ ಇಟ್ಟುಕೊಂಡಿದ್ದರು. ಎಲ್ಲ ವಸ್ತುಗಳನ್ನೂ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ವಿಶ್ವ ಮೂತ್ರಪಿಂಡ ದಿನದ ಅಂಗವಾಗಿ ಜಾಗೃತಿ ಜಾಥಾ: ಅತಿಥಿಗಳು: ಡಾ.ಟಿ.ಎ. ವೀರಭದ್ರಯ್ಯ, ಡಾ.ಜಿ.ಕೆ. ವೆಂಕಟೇಶ್, ಡಾ. ವೀರಭದ್ರ ಗುಪ್ತಾ ಕೆ., ಡಾ. ಎಚ್.ಎನ್. ನವೀನ್, ಆಯೋಜನೆ: ಭಾರತೀಯ ವೈದ್ಯಕೀಯ ಸಂಘ, ಸ್ಥಳ: ಭಾರತೀಯ ವೈದ್ಯಕೀಯ ಸಂಘ, ಚಾಮರಾಜಪೇಟೆ, ಬೆಳಿಗ್ಗೆ 8.30ರಿಂದ

ಅಂತರರಾಷ್ಟ್ರೀಯ ಮಹಿಳಾ ದಿನ: ಅತಿಥಿಗಳು: ಉಮಾ ಮಹದೇವನ್, ಎಸ್.ವಿ. ಸುರೇಶ, ಶುಭ ಮಂಗಳ, ರಾಜಲಕ್ಷ್ಮಿ ಎ., ಧೃತಿ ಬಾಲ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ ಆವರಣ, ಬೆಳಿಗ್ಗೆ 10

'ಕನ್ನಡ ನಾಟಕ ಸಾಹಿತ್ಯ ಮತ್ತು ರಂಗಭೂಮಿ-ಸಮಕಾಲೀನ ಮುಖಾಮುಖಿ' ಒಂದು ದಿನದ ವಿಚಾರಸಂಕಿರಣ: ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಎಸ್. ಜೋಸೆಫ್, ಮಾದೇಶ್ ಎನ್., ಆಯೋಜನೆ ಮತ್ತು ಸ್ಥಳ: ಮದರ್ ತೆರೇಸಾ ಸಭಾಂಗಣ, ಸೇಂಟ್ ಕ್ಲಾರೆಟ್ ಕಾಲೇಜು, ಬೆಳಿಗ್ಗೆ 10

ತೆಂಗು ನಾರಿನ ನವೀನ ಉತ್ಪನ್ನಗಳ ಪ್ರದರ್ಶನ: ಆಯೋಜನೆ: ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಸ್ಥಳ: ಈಡನ್ ಪಾರ್ಕ್ ರೆಸ್ಟೋರೆಂಟ್, ಕನ್ನಿಂಗ್‌ಹ್ಯಾಮ್ ರಸ್ತೆ, ಶಿವಾಜಿನಗರ, ಸಂಜೆ 5

ಸಾಹಿತ್ಯ ಅಕಾಡೆಮಿ ಸಂಸ್ಥಾಪನಾ ದಿನ ಅಂಗವಾಗಿ ಸಾಹಿತ್ಯ ವೇದಿಕೆ: ಭಾಗವಹಿಸುವವರು: ನವೀನ್ ಕುಮಾರ್, ಬಸವರಾಜ ಕಲ್ಗುಡಿ, ಎಸ್.ಆರ್. ವಿಜಯಶಂಕರ, ಆಯೋಜನೆ ಮತ್ತು ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ದಾಸವಾಣಿ ಗಾಯನ: ಅನಂತ ಪದ್ಮನಾಭ, ಹಾರ್ಮೋನಿಯಂ: ನಾಗೇಶ್, ಮೃದಂಗ: ಶ್ರೀನಿವಾಸ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

'ರಾಜಲಕ್ಷ್ಮಿ ಬರಗೂರು' ಪ್ರಶಸ್ತಿ ಪ್ರದಾನ: ಲೋಲಾಕ್ಷಿ, ಪ್ರಶಸ್ತಿ ಸ್ವೀಕರಿಸುವವರು: ಎಚ್.ಎಲ್. ಪುಷ್ಪ, ಎನ್. ರತ್ನಮ್ಮ, ಅಧ್ಯಕ್ಷತೆ: ಬಿ. ರಮೇಶ್, ಆಯೋಜನೆ: ನಾಡೋಜ ಡಾ. ಬರಗೂರು ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ದಾಸರ ಪದಗಳ ಗಾಯನ: ಎಂ.ಎಸ್. ರುಚಿರ, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

'ವಿಶ್ವಮಿತ್ರ ಮೇನಕೆ ಡಾನ್ಸ್ ಮಾಡೋದು ಏನಕೆ ಆಸ್ಕ್ ಮಿಸ್ಟರ್ ವೈಎನ್‌ಕೆ' ನಾಟಕ ಪ್ರದರ್ಶನ: ನಿರ್ದೇಶನ: ಚಿತ್ರಶೇಖರ್ ಎನ್.ಎಸ್., ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಅಕ್ರಮ ತನಿಖೆ: ಎಸ್‌ಐಟಿ ರಚನೆಗೆ ಆಗ್ರಹ

ವಿಜಯ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ಅವ್ಯವಹಾರ: ಆರೋಪ

ಪ್ರಜಾವಾಣಿ ವಾರ್ತೆ

ವಿಧಾನಮಂಡಲ ಅಧಿವೇಶನ

ಬೆಂಗಳೂರು: 'ಬೆಂಗಳೂರಿನ ವಿಜಯ ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕರ ಮಂಡಳಿಯಲ್ಲಿ ನಡೆದಿರುವ ಅಕ್ರಮಗಳ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಸತೀಶ್ ರೆಡ್ಡಿ, 'ಮಂಡಳಿಯಲ್ಲಿ ನಡೆದಿರುವ ಅಕ್ರಮದಿಂದ ಸಾವಿರಾರು ಸದಸ್ಯರಿಗೆ ವಂಚನೆ ಆಗಿದೆ' ಎಂದರು.


ಆರ್. ಅಶೋಕ

'ಈ ಸಹಕಾರ ಸಂಘ 2005-06ರಲ್ಲಿ ಆರಂಭವಾಗಿತ್ತು. ಆಗ 120 ಎಕರೆ ಖರೀದಿ ಮಾಡಲಾಗಿದ್ದು, 1,700 ಮಂದಿ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದರು. ಆಗ ಭೂಮಿ ಅಭಿವೃದ್ಧಿ ಮಾಡುವುದಾಗಿ ಬಂದಿದ್ದ ಎಸ್‌ಪಿಆರ್ ಡೆವಲಪರ್ ವಂಚನೆ ಮಾಡಿದೆ. ಈ ಪ್ರಕರಣದ ತನಿಖೆ ನಡೆಸಿದ್ದ ಸಹಕಾರ ಇಲಾಖೆಯ ನಿಬಂಧಕರು, ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಹಣ ಪಾವತಿಸಿದವರಿಗೆ ಡೆವಲಪರ್ ₹644 ಕೋಟಿ ಪಾವತಿಸಬೇಕು. ಅಲ್ಲದೆ, ಡೆವಲಪರ್‌ನ್ನು ಬಂಧಿಸಬೇಕೆಂದು ಆದೇಶಿಸಿದ್ದರು. ಆದರೆ, ಆದೇಶ ಪಾಲನೆಯಾಗದೆ ನಿವೇಶನ ವಂಚಿತರು ಪರದಾಡುವಂತಾಗಿದೆ' ಎಂದರು.

ಆರ್. ಅಶೋಕ ಮಾತನಾಡಿ, 'ಈ ಪ್ರಕರಣದಲ್ಲಿ ಡೆವಲಪರ್ ತಿಮ್ಮೇಗೌಡ ಅವರಿಗೆ 2013ರಲ್ಲಿ ₹185 ಕೋಟಿ ಪಾವತಿಸುವಂತೆ ನ್ಯಾಯಾಲಯ ತಿಳಿಸಿತ್ತು. ನಂತರ ಸಹಕಾರ ಇಲಾಖೆಯ ನಿಬಂಧಕರು ₹644 ಕೋಟಿ ಪಾವತಿಗೆ ಸೂಚಿಸಿದ್ದರು. ಆದರೆ, ಈಗ ಇಲಾಖೆಯ ನಿಬಂಧಕರು, ಡೆವಲಪರ್ ಹಾಗೂ ಸಹಕಾರ ಸಂಘದ ನಿರ್ದೇಶಕ ಮಂಡಳಿ ಒಟ್ಟಾಗಿ ಇಡೀ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದರು.

ಮುಖ್ಯಮಂತ್ರಿಯ ಪರವಾಗಿ ಪ್ರತಿಕ್ರಿಯಿಸಿದ ಸಚಿವ ಪ್ರಿಯಾಂಕ್ ಖರ್ಗೆ, 'ಸರ್ಕಾರ ಯಾವುದೇ ಡೆವಲಪರ್ ಪರ ಅಲ್ಲ. ನಾವು ಜನರ ಪರ ಕೆಲಸ ಮಾಡುತ್ತೇವೆ. ಎಸ್‌ಐಟಿ ರಚನೆಯ ಬೇಡಿಕೆಯನ್ನು ಮುಖ್ಯಮಂತ್ರಿಯ ಗಮನಕ್ಕೆ ತರುತ್ತೇನೆ. ಅಲ್ಲದೆ, ಪ್ರಕರಣದ ಗಂಭೀರತೆಯನ್ನೂ ವಿವರಿಸುತ್ತೇನೆ' ಎಂದು ಭರವಸೆ ನೀಡಿದರು.

ನೈಸ್ ಸಂಸ್ಥೆ ವಿರುದ್ಧ ದಾವೆ: ಸತೀಶ ಜಾರಕಿಹೊಳಿ

ಬೆಂಗಳೂರು: ಯೋಜನೆಯ ತಾಂತ್ರಿಕ ವರದಿ (ಪಿಟಿಆರ್) ಅನ್ವಯ ನೈಸ್ ರಸ್ತೆಯನ್ನು ನಿರ್ಮಾಣ ಮಾಡಿಲ್ಲ. ಸರ್ಕಾರದ ಅನುಮತಿ ಪಡೆಯದೇ ದರ ಪರಿಷ್ಕರಣೆ ಮಾಡಲಾಗಿದೆ. ಹಾಗಾಗಿ, ಸಂಸ್ಥೆಯ ವಿರುದ್ಧ ಹೈಕೋರ್ಟ್‌ನಲ್ಲಿ ದಾವೆ ಹೂಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.


ಸತೀಶ ಜಾರಕಿಹೊಳಿ

ಕಾಂಗ್ರೆಸ್‌ನ ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯನ್ನು ಅನುಷ್ಠಾನಗೊಳಿಸಲು ಸಂಸ್ಥೆಯ ಜತೆ 1997ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸ್ವಾಧೀನಪಡಿಸಿಕೊಂಡ ಜಮೀನನ್ನು ನೀಡಲಾಗಿತ್ತು. ಟೋಲ್ ರಸ್ತೆ ಹಾಗೂ ಐದು ಟೌನ್‌ಶಿಪ್ ನಿರ್ಮಾಣದ ಷರತ್ತು ವಿಧಿಸಲಾಗಿತ್ತು. ಈ ಒಪ್ಪಂದ 30 ವರ್ಷಗಳ ಅವಧಿಗೆ ಆಗಿದೆ. ಹೆಚ್ಚುವರಿ ಅವಧಿಗೆ ವಿಸ್ತರಿಸಲು ಅವಕಾಶವಿದೆ ಎಂದು ವಿವರ ನೀಡಿದರು.

2000ನೇ ಇಸವಿಯಲ್ಲಿ ಟೋಲ್ ಸಂಗ್ರಹಕ್ಕೆ ಅನುಮತಿ ನೀಡಲಾಗಿತ್ತು. ಕಾಲಕಾಲಕ್ಕೆ ಟೋಲ್ ದರ ಹೆಚ್ಚಳಕ್ಕೆ ಅವಕಾಶವಿದೆ. ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವಕ್ಕೆ 30 ದಿನಗಳ ಒಳಗೆ ರಾಜ್ಯ ಸರ್ಕಾರ ಅನುಮೋದನೆ ನೀಡಬೇಕು. ಇಲ್ಲದಿದ್ದರೆ ಅನುಮೋದನೆ ಇದೆ ಎಂದು ಪರಿಗಣಿಸಿ, ದರ ಪರಿಷ್ಕರಣೆ ಮಾಡಲು ಸಂಸ್ಥೆಗೆ ಅವಕಾಶವಿದೆ. 2022ರ ನಂತರ ಸಂಸ್ಥೆಯು ದರ ಪರಿಷ್ಕರಣೆಯ ಪ್ರಸ್ತಾಪವನ್ನೇ ಸಲ್ಲಿಸಿಲ್ಲ ಎಂದರು.

ಯೋಜನೆಯ ತಾಂತ್ರಿಕ ವರದಿ ಪ್ರಕಾರ ರಸ್ತೆ ನಿರ್ಮಾಣ ಮಾಡಿಲ್ಲ ಎಂದು ನೋಟಿಸ್ ನೀಡಲಾಗಿತ್ತು. ನೋಟಿಸ್ ಪ್ರಶ್ನಿಸಿ ಸಂಸ್ಥೆಯು ಕೋರ್ಟ್ ಮೊರೆ ಹೋಗಿದೆ. ಮಾಹಿತಿ ನೀಡದೆ ದರ ಪರಿಷ್ಕರಣೆ ವಿರುದ್ಧ ರಾಜ್ಯ ಸರ್ಕಾರವೂ ದಾವೆ ಹೂಡಿದೆ. ಯೋಜನೆಯ ಸಮಗ್ರ ಪರಿಶೀಲನೆ, 2008ರಿಂದ ಇಲ್ಲಿಯವರೆಗೂ ಗಳಿಸಿದ ಆದಾಯದ ವಿವರಗಳನ್ನು ಪರಿಶೀಲಿಸಲು ಸಂಪುಟ ಉಪಸಮಿತಿ ರಚಿಸಲಾಗಿದೆ. ಸಮಿತಿಯ ಸೂಚನೆಯಂತೆ ಸಮಾಲೋಚಕರನ್ನು ನೇಮಿಸಲಾಗಿದೆ ಎಂದು ಹೇಳಿದರು.

ಕೃಷಿಗೆ ರಾಸಾಯನಿಕ ಬಳಕೆ ಕ್ಯಾನ್ಸರ್‌ಗೆ ದಾರಿ

ಬೆಂಗಳೂರು: ಕೃಷಿ ಭೂಮಿಗೆ ಅವೈಜ್ಞಾನಿಕವಾಗಿ ಅಧಿಕ ರಾಸಾಯನಿಕ ಬಳಸುತ್ತಿರುವ ಕಾರಣ ನೀರಿನ ಮೂಲಗಳು ಕಲುಷಿತಗೊಂಡು ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳಿಗೆ ಜನರು ತುತ್ತಾಗುತ್ತಿರುವುದು ನಿಜ ಎಂದು ಕೃಷಿ ಸಚಿವ ಎನ್.ಚಲುವನಾರಾಯಣಸ್ವಾಮಿ ಒಪ್ಪಿಕೊಂಡರು.


ಚಲುವನಾರಾಯಣ ಸ್ವಾಮಿ

ಬಿಜೆಪಿಯ ಧನಂಜಯ ಸರ್ಜಿ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಅವರು, ಪ್ರತಿಯೊಬ್ಬರೂ ಮಣ್ಣು ಪರೀಕ್ಷೆ ನಡೆಸಿ, ಅದಕ್ಕೆ ಅನುಗುಣವಾಗಿ ಸಮತೋಲಿತ ಗೊಬ್ಬರ ಬಳಸಬೇಕು. ಮಣ್ಣಿನ ಫಲವತ್ತತೆ ಸಂರಕ್ಷಣೆ ಜತೆಗೆ, ಅಧಿಕ ಇಳುವರಿ ಪಡೆಯಬಹುದು ಎಂದರು.

ಈ ಕುರಿತು ಕೃಷಿ ವಿಶ್ವವಿದ್ಯಾಲಯಗಳಿಂದ ಜನರಿಗೆ ಅರಿವು ಮೂಡಿಸಲಾಗುತ್ತಿದೆ. ರಾಸಾಯನಿಕ ಗೊಬ್ಬರ ಬಳಕೆ ತಗ್ಗಿಸಿ, ಹಸಿರೆಲೆ ಗೊಬ್ಬರ, ಜೈವಿಕ ಗೊಬ್ಬರ ಬಳಕೆಗೆ ಉತ್ತೇಜನ ನೀಡಲಾಗಿದೆ. ಕೇಂದ್ರ ಸರ್ಕಾರದ ಸಹಯೋಗದಲ್ಲಿ ಸಾವಯವ ಗೊಬ್ಬರಗಳ ಉತ್ಪಾದನೆಗೆ ಉತ್ತೇಜನ ನೀಡಲಾಗುತ್ತಿದೆ. 49,500 ಹೆಕ್ಟೇರ್ ಪ್ರದೇಶದಲ್ಲಿ ನೈಸರ್ಗಿಕ ಕೃಷಿಗೆ ಪ್ರೋತ್ಸಾಹ ನೀಡಲಾಗಿದೆ ಎಂದು ಹೇಳಿದರು.

'ಸಾಫ್ಟ್‌ವೇರ್ ರಫ್ತು ಪ್ರಮಾಣ: ₹5.50 ಲಕ್ಷ ಕೋಟಿ ಮೀರಲಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷ ಸಾಫ್ಟ್‌ವೇರ್ ರಫ್ತು ಪ್ರಮಾಣ ₹5.50 ಲಕ್ಷ ಕೋಟಿ ಮೀರುವ ಸಾಧ್ಯತೆ ಇದೆ ಎಂದು ಐಟಿ– ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.


ಪ್ರಿಯಾಂಕ್ ಖರ್ಗೆ

ವಿಧಾನಸಭೆಯಲ್ಲಿ ಬಿಜೆಪಿಯ ವೇದವಾಸ ಕಾಮತ್ ಪ್ರಶ್ನೆಗೆ ಉತ್ತರಿಸಿದ ಅವರು, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ವರದಿ ಪ್ರಕಾರ, 2022–23 ರಲ್ಲಿ ₹3.55 ಲಕ್ಷ ಕೋಟಿ, 2023–24 ರಲ್ಲಿ ₹4.09 ಲಕ್ಷ ಕೋಟಿ, 2024–25 ರಲ್ಲಿ ₹.458 ಲಕ್ಷ ಕೋಟಿ ಮೌಲ್ಯದ ಸಾಫ್ಟ್‌ವೇರ್ ರಫ್ತು ಮಾಡಲಾಗಿದೆ ಎಂದರು.

ಮಂಗಳೂರು ಭಾಗದಲ್ಲಿ ಉತ್ತಮ ವಾತಾವರಣ ಸೃಷ್ಟಿಯಾದರೆ ಅಲ್ಲಿನ ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ವೇಗ ಸಿಗಲಿದೆ. ಮಂಗಳೂರು ಐಟಿ– ಬಿಟಿ ಕ್ಷೇತ್ರದಲ್ಲಿ ವೇಗದ ಬೆಳವಣಿಗೆಯ ಎಲ್ಲ ಸಾಮರ್ಥ್ಯವನ್ನು ಹೊಂದಿದೆ ಎಂದು ಅವರು ತಿಳಿಸಿದರು.

ರಾಜ್ಯದ ಜಿಡಿಪಿಯಲ್ಲಿ ಬೆಂಗಳೂರು ಬಿಟ್ಟರೆ ಎರಡನೇ ಸ್ಥಾನದಲ್ಲಿ ಮಂಗಳೂರು ಇದೆ. ಬೆಂಗಳೂರಿನ ಜಿಡಿಪಿ ಶೇ 39 ಇದ್ದರೆ, ಮಂಗಳೂರು ಜಿಡಿಪಿ ಶೇ 5.4 ಇದೆ. ಇನ್ನೂ ಶೇ 2 ರಷ್ಟು ಹೆಚ್ಚು ಜಿಡಿಪಿ ಸಾಧಿಸುವ ಸಾಮರ್ಥ್ಯ ಹೊಂದಿದೆ. ಬೆಂಗಳೂರು ಗ್ರಾಮಾಂತರ ಜಿಡಿಪಿ ಶೇ 1.2 ಇದೆ ಎಂದು ವಿವರಿಸಿದರು.

ಮಂಗಳೂರು, ಉಡುಪಿ, ಮಣಿಪಾಲವನ್ನು ಸೇರಿಸಿ ಕ್ಲಸ್ಟರ್ ಆಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಹೂಡಿಕೆಗೆ ಇರುವ ಮಾನದಂಡಗಳ ಸರಳೀಕರಣ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಸಾಗರ ಕೃಷಿ ಕುರಿತ ನೀತಿಯನ್ನೂ ರೂಪಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಸುಸ್ಥಿರ ಡೇಟಾ ನೀತಿಗೆ ಚಿಂತನೆ: ರಾಜ್ಯದಲ್ಲಿ ಸುಸ್ಥಿರ ದತ್ತಾಂಶ ಕೇಂದ್ರ (ಡೇಟಾ ಸೆಂಟರ್) ನೀತಿ ರೂಪಿಸಲಾಗುವುದು. ರಾಜ್ಯದಲ್ಲಿ ಒಟ್ಟು 32 ಖಾಸಗಿ ದತ್ತಾಂಶ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಎಐ, ಮೆಷಿನ್ ಲರ್ನಿಂಗ್, ಉದಯೋನ್ಮುಖ ತಂತ್ರಜ್ಞಾನಗಳಿಗೆ ದತ್ತಾಂಶ ಕೇಂದ್ರಗಳ ಅಗತ್ಯವಿದೆ. ಆದರೆ, ಈ ಕೇಂದ್ರಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್, ನೀರಿನ ಅಗತ್ಯವಿದೆ. ಸದ್ಯ ರಾಜ್ಯದಲ್ಲಿ 2-3 ವರ್ಷ ಹಳೆಯ ನೀತಿಯಿದ್ದು, ಬದಲಾದ ತಂತ್ರಜ್ಞಾನಕ್ಕೆ ಪೂರಕವಾಗಿ ಸುಸ್ಥಿರ ನೀತಿ ರೂಪಿಸಲು ಚಿಂತಿಸಲಾಗಿದೆ ಎಂದು ಅವರು ಬಿಜೆಪಿ ಧೀರಜ್ ಮುನಿರಾಜು ಅವರ ಪ್ರಶ್ನೆಗೆ ಉತ್ತರಿಸಿದರು.

'ಬೆಂಗಳೂರು ಬದಲು ಮಂಗಳೂರು ಇಲ್ಲವೇ ಕರಾವಳಿ ಪ್ರದೇಶದಲ್ಲಿ ದತ್ತಾಂಶ ಕೇಂದ್ರಗಳ ಸ್ಥಾಪನೆಗೆ ನೀಡಲು ಚಿಂತನೆ ನಡೆಸಲಾಗಿದೆ. ಈ ಸಂಬಂಧ ಕೇಂದ್ರ ದೂರಸಂಪರ್ಕ ಸಚಿವರಿಗೂ ಪತ್ರ ಬರೆದು ಸಬ್‌ಸೀ ಕೇಬಲ್ ಲ್ಯಾಂಡಿಂಗ್ ವ್ಯವಸ್ಥೆ ಕಲ್ಪಿಸುವಂತೆ ಕೋರಲಾಗಿದೆ. ಖಾಸಗಿ ಸಂಸ್ಥೆಗಳು ಆಸಕ್ತಿ ತೋರಿದರೆ ಸಹಕಾರ ನೀಡುವುದಾಗಿ ಕೇಂದ್ರ ತಿಳಿಸಿದೆ' ಎಂದರು.

ವಿದ್ಯುತ್ ಗುತ್ತಿಗೆದಾರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸ್ತಿತ್ವದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುವ ಕುರಿತು ಆರು ತಿಂಗಳ ಹಿಂದೆ ಸಚಿವ ಸಂಪುಟದಲ್ಲಿ ಕೈಗೊಂಡ ತೀರ್ಮಾನ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳೊಂದಿಗೆ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

'ಒಂದು ಬಾರಿ ವಿನಾಯಿತಿ ನೀಡಿ ಅನುಮತಿ ನೀಡಬೇಕು. ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಎಲ್ಲಾ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ನೀಡಿ ಶಾಶ್ವತ ಸಂಪರ್ಕಕ್ಕೆ ಅನುಮತಿ ನೀಡಬೇಕು' ಎಂದು ಸಂಘದ ಅಧ್ಯಕ್ಷ ಸಿ.ರಮೇಶ್ ಆಗ್ರಹಿಸಿದರು.


ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

'ರೈತರು ನಿರ್ಮಿಸಿಕೊಂಡಿರುವ ಕೋಳಿ, ಕುರಿ ಸಾಕಣೆ ಹಾಗೂ ತೋಟದ ಮನೆಗಳು, ಇತರೆ ಕೃಷಿ ಚಟುವಟಿಕೆಗಳ ವಿದ್ಯುತ್ ಸಂಪರ್ಕಕ್ಕೂ ದೃಢೀಕರಣ ಪತ್ರ ನೀಡುವುದರಿಂದ ವಿನಾಯಿತಿ ನೀಡಬೇಕು. ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಆಗುತ್ತಿರುವ ತೊಂದರೆ ತಪ್ಪಿಸಬೇಕು. ಹೊಸ ಕಟ್ಟಡ ನಿರ್ಮಿಸುವವರಿಗೆ ಸ್ಥಳೀಯ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳಿಗೆ ಸೂಕ್ತ ಮಾರ್ಗಸೂಚಿ ನೀಡಬೇಕು' ಎಂದು ಒತ್ತಾಯಿಸಿದರು.

ಪ್ರತಿಭಟನೆಗೆ ಬೆಂಬಲ ಸೂಚಿಸಿದ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ವಿದ್ಯುತ್ ಸಂಪರ್ಕದ ವಿಚಾರದಲ್ಲಿ ಸುಪ್ರೀಂಕೋರ್ಟ್ ಆದೇಶವನ್ನೇ ನೆಪ ಮಾಡಿಕೊಂಡು ಒಸಿ, ಸಿಸಿ ಜಾರಿಗೊಳಿಸಿ ರಾಜ್ಯದ ಕಾಂಗ್ರೆಸ್ ಸರ್ಕಾರ ಲೂಟಿಗೆ ಇಳಿದಿದೆ. ಯಾವುದೇ ಹೊರೆಯಿಲ್ಲದೇ ಜನರಿಗೆ ವಿದ್ಯುತ್ ಸಂಪರ್ಕ ಪಡೆಯಲು ಒಸಿಯಿಂದ ವಿನಾಯಿತಿ ನೀಡಬೇಕು. ಸುಪ್ರೀಂ ಕೋರ್ಟ್‌ಗೂ ಮನವರಿಕೆ ಮಾಡಿಕೊಡಬೇಕು. ಈ ಕುರಿತು ಸದನದಲ್ಲೂ ಪ್ರಸ್ತಾಪ ಮಾಡುತ್ತೇನೆ' ಎಂದು ಹೇಳಿದರು. ವಿಧಾನಪರಿಷತ್ ಸದಸ್ಯ ರವಿಕುಮಾರ್ ಅವರು ಗುತ್ತಿಗೆದಾರರ ಅಳಲನ್ನು ಆಲಿಸಿದರು.

ಎಸ್.ಟಿಗೆ 'ಬೆಸ್ತ' ಸೇರಿಸಿ

ಬೆಂಗಳೂರು: ಕೋಲಿ, ಕಬ್ಬಲಿಗ, ಬೆಸ್ತ ಅಂಜಿಗ, ಬಾರ್ಕಿ ಪದಗಳನ್ನು ಒಳಗೊಂಡ ಜಾತಿಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿ ಬಿಜೆಪಿಯ ತಳವಾರ ಸಾಬಣ್ಣ ಸಭಾಪತಿ ಪೀಠದ ಮುಂದೆ ಏಕಾಂಗಿಯಾಗಿ ಧರಣಿ ನಡೆಸಿದರು.


ತಳವಾರ ಸಾಬಣ್ಣ

ವಿಧಾನಪರಿಷತ್ ಕಲಾಪದಲ್ಲಿ ಅವರ ಗಮನ ಸೆಳೆಯುವ ಸೂಚನೆ ಕುರಿತು ಮಾತನಾಡುವಾಗ ಮಧ್ಯ ಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ, 'ನಿಮ್ಮ ಪ್ರಶ್ನೆಗೆ ಸರ್ಕಾರ ಲಿಖಿತ ಉತ್ತರ ನೀಡಿದೆ. ಹೆಚ್ಚಿನ ಚರ್ಚೆಗೆ ಉತ್ತರ ನೀಡಬೇಕಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸದನದಲ್ಲಿ ಹಾಜರಿಲ್ಲ. ಹಾಗಾಗಿ, ಚರ್ಚೆ ಮುಂದುವರಿಸುವುದು ಬೇಡ' ಎಂದರು.

ಸಭಾಪತಿ ಮಾತಿಗೆ ಕೆರಳಿದ ಸಾಬಣ್ಣ, ಸಣ್ಣ ಸಮುದಾಯದ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ವಿಳಂಬ ಮಾಡುತ್ತಿದೆ. ಸಂಶೋಧನೆಯ ನೆಪದಲ್ಲಿ ಕಾಲಹರಣ ಮಾಡುತ್ತಿದೆ. ಈ ಕುರಿತು ಚರ್ಚೆ ನಡೆಸಲು ಸದನದಲ್ಲೂ ಅವಕಾಶ ನೀಡದಿದ್ದರೆ ಹೇಗೆ? ಎಂದು ಆಕ್ರೋಶ ವ್ಯಕ್ತಪಡಿಸಿ, ಸಭಾಪತಿ ಪೀಠದತ್ತ ಧಾವಿಸಿದರು.

ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಆದೇಶಿಸಲಾಗಿದೆ. ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಅಧ್ಯಯನ ನಡೆಸಲು ಪ್ರಸ್ತಾವ ಸಲ್ಲಿಸಿದೆ. ವರದಿ ಬಂದ ತಕ್ಷಣ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಸಭಾನಾಯಕ ಎನ್.ಎಸ್.ಬೋಸರಾಜು ಮಾಹಿತಿ ನೀಡಿದರು.

ಉತ್ತಮ ಹಣಕಾಸು ಯೋಜನೆಯು ಇಂದು ನಾವು ಮಾಡುವ ಆಯ್ಕೆಯು ಮುಂದೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ನಿಖರವಾಗಿ ಹೇಳುವ ಭವಿಷ್ಯದರ್ಶಿಯಾಗಿದೆ
ಅಲೆಕ್ಸಾ ವಾನ್ ಟೋಬೆಲ್, ಹಣಕಾಸು ಸಲಹೆಗಾರ

ದುಡ್ಡಿನಂಥಾ ಮಾತು

ಹೊಸತನದ ಮೇಲೆ ಹೂಡಿಕೆ

• ನಿತಿನ್ ಜೈನ್

ಹೊಸ ಆಲೋಚನೆಗಳೊಂದಿಗೆ ಹುಟ್ಟುವ ಕಂಪನಿಗಳಲ್ಲಿ ಹೂಡಿಕೆ ಮಾಡುವುದು ಅಂದರೆ ವೆಂಚರ್ ಕ್ಯಾಪಿಟಲ್‌ಗಳ (ವಿ.ಸಿ) ಕೆಲಸ ಎಂದು ಮೊದಲಿನಿಂದಲೂ ಭಾವಿಸಲಾಗಿದೆ. ಆದರೆ ಇಂದು ಬಂಡವಾಳ ಮಾರುಕಟ್ಟೆಯಲ್ಲಿ ಇಂತಹ ಕಂಪನಿಗಳ ಮೇಲೆ ಹೂಡಿಕೆ ಮಾಡಲು ಹಲವು ಅವಕಾಶಗಳು ಸಿಗುತ್ತಿವೆ



ಹೊಸತನದ ಮೇಲಿನ ಹೂಡಿಕೆ ತಂತ್ರವು ಹೊಸ ತಂತ್ರಜ್ಞಾನ, ಹೊಸ ಉತ್ಪನ್ನ ಅಥವಾ ಹೊಸ ವಾಣಿಜ್ಯ ಮಾದರಿಗಳಲ್ಲಿ ಮುಂಚೂಣಿಯಲ್ಲಿ ಇರುವ, ಸಾಂಪ್ರದಾಯಿಕ ಕಂಪನಿಗಳ ವಹಿವಾಟಿನಲ್ಲಿ ಭಾರಿ ಬದಲಾವಣೆ ತರಬಲ್ಲ ಕಂಪನಿಗಳ ಮೇಲೆ ಗಮನ ನೀಡುತ್ತದೆ. ಊಬರ್, ಅಮೆಜಾನ್ ಅಥವಾ ನೆಟ್‌ಫ್ಲಿಕ್ಸ್‌ನಂತಹ ಕಂಪನಿಗಳು ಗ್ರಾಹಕರಿಗೆ ಹೆಚ್ಚು ಉತ್ತಮವಾದ ಸೇವೆಯನ್ನು ಒದಗಿಸಿ ಭಾರಿ ಸಂಖ್ಯೆಯಲ್ಲಿ ಗ್ರಾಹಕರನ್ನು ಸಂಪಾದಿಸಿವೆ.

ಅದೇ ಬಗೆಯಲ್ಲಿ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಗೂಗಲ್‌ನಂಥವು ತಮ್ಮ ಅಪಾರ ಸಂಖ್ಯೆಯ ಬಳಕೆದಾರರ ನೆಲೆಯನ್ನು ಬಳಸಿಕೊಂಡು ಜಾಹೀರಾತು ಆಧಾರಿತ ಹೊಸ ವಾಣಿಜ್ಯ ಮಾದರಿಗಳನ್ನು ಕಟ್ಟಿವೆ. ಇವುಗಳ ಬಳಕೆದಾರರು ಯಾವುದೇ ಶುಲ್ಕ ಪಾವತಿಸುವುದಿಲ್ಲ. ಇಂದು ಎ.ಐ ಮತ್ತು ಕ್ಲೌಡ್ ಕಂಪ್ಯೂಟಿಂಗ್ ಸೇವೆಗಳು ಜಾಗತಿಕ ಮಟ್ಟದಲ್ಲಿ ಉದ್ದಿಮೆಗಳ ಕೆಲಸದ ಸ್ವರೂಪವನ್ನು ಬದಲಾಯಿಸುತ್ತಿವೆ. ಇಂತಹ ಕಂಪನಿಗಳು ಸಾಮಾನ್ಯವಾಗಿ ಹೊಸದೊಂದು ಆಲೋಚನೆ, ದೂರದೃಷ್ಟಿಯ ನಾಯಕತ್ವ, ಭಾರಿ ನಷ್ಟಕ್ಕೆ ಗುರಿಯಾಗುವ ಸಾಧ್ಯತೆ ಇರುವ ಹೂಡಿಕೆಯೊಂದಿಗೆ ಆರಂಭವಾಗುತ್ತವೆ. ಈ ವಲಯದಲ್ಲಿ ವೈಫಲ್ಯದ ಪ್ರಮಾಣವು ಹೆಚ್ಚಿದ್ದರೂ, ಸರಿಯಾದ ಆಲೋಚನೆ ಹಾಗೂ ಸರಿಯಾದ ತಂಡಕ್ಕೆ ಬೆಂಬಲವಾಗಿ ನಿಂತಲ್ಲಿ ಅಸಾಧಾರಣ ಪ್ರಮಾಣದಲ್ಲಿ ಲಾಭ ಸಿಗಬಹುದು.

ನಾವು ಇಂದು ಜಾಗತಿಕ ಮಟ್ಟದಲ್ಲಿ ಯಶಸ್ಸಿನ ಕಥೆಗಳಾಗಿ ಹೇಳುತ್ತಿರುವ ಹಲವು ಕಂಪನಿಗಳು ಶುರುವಾಗಿದ್ದು ಇದೇ ಬಗೆಯಲ್ಲಿ.

ಹೊಸ ಆಲೋಚನೆಗಳೊಂದಿಗೆ ಹುಟ್ಟುವ ಕಂಪನಿಗಳಲ್ಲಿ ಹೂಡಿಕೆ ಮಾಡುವುದು ಅಂದರೆ ಮೊದಲಿನಿಂದಲೂ ವೆಂಚರ್ ಕ್ಯಾಪಿಟಲ್‌ಗಳ (ವಿ.ಸಿ) ಕೆಲಸ ಎಂದು ಭಾವಿಸಲಾಗಿದೆ. ಆದರೆ ಇಂದು ಬಂಡವಾಳ ಮಾರುಕಟ್ಟೆಯಲ್ಲಿ ಇಂತಹ ಕಂಪನಿಗಳ ಮೇಲೆ ಹೂಡಿಕೆ ಮಾಡಲು ಹಲವು ಅವಕಾಶಗಳು ಸಿಗುತ್ತಿವೆ. ಇಲ್ಲಿ ತೀರಾ ಆರಂಭಿಕ ಹಂತದ ಖಾಸಗಿ ಹೂಡಿಕೆಗಿಂತ ಕಡಿಮೆ ಪ್ರಮಾಣದ ರಿಸ್ಕ್ ಇರುತ್ತದೆ.

ಭಾರತದಲ್ಲಿ ಇದು ಹೇಗಿದೆ?: ಕಳೆದ 10–15 ವರ್ಷಗಳಲ್ಲಿ ಭಾರತದಲ್ಲಿ ಉದ್ಯಮಶೀಲತೆಯು ಭಾರಿ ಪ್ರಮಾಣದ ಬೆಳವಣಿಗೆ ಕಂಡಿದೆ. ಇದರ ಪರಿಣಾಮವಾಗಿ ಸಾಂಪ್ರದಾಯಿಕ ವಹಿವಾಟು ಮಾದರಿಗಳಲ್ಲಿ ಪಲ್ಲಟಗಳನ್ನು ತರಬಲ್ಲ ಹಲವು ಹೊಸ ಉದ್ದಿಮೆಗಳು ಶುರುವಾಗಿವೆ. ಭಾರತದಲ್ಲಿ ಪ್ರತಿಭೆಯು ಯಾವಾಗಲೂ ಇದ್ದಿತ್ತಾದರೂ, ಸೀಮಿತ ಬಂಡವಾಳ ಮತ್ತು ಉದ್ದಿಮೆಗಳಿಗೆ ಅಷ್ಟೇನೂ ಪ್ರೋತ್ಸಾಹಕರವಲ್ಲದ ಹಿಂದಿನ ಸಂದರ್ಭದಲ್ಲಿ ದೇಶದಲ್ಲಿ ಉದ್ಯಮಶೀಲತೆ ಸಂಸ್ಕೃತಿಯ ಕೊರತೆ ಕಾಣುತ್ತಿತ್ತು. ಆದರೆ ಕಳೆದ ಒಂದು ದಶಕದಲ್ಲಿ ಅದು ಬದಲಾಗಿದೆ.

ಇಂತಹ ಕಂಪನಿಗಳ ಪಾಲಿಗೆ ಈ ಬಗೆಯ ಸವಾಲುಗಳು ಇರುತ್ತವೆ

- ಸ್ಪರ್ಧೆಯ ಸವಾಲು ಮತ್ತೆ ಮತ್ತೆ ಎದುರಾಗುತ್ತಿರುತ್ತದೆ. ಏಕೆಂದರೆ ಯಶಸ್ಸು ಕಂಡ ಆಲೋಚನೆಯನ್ನು ಅನುಕರಿಸಲು ಹಲವರು ಮುಂದಾಗುತ್ತಾರೆ.
- ಇವುಗಳ ಷೇರು ಮೌಲ್ಯ ಹೆಚ್ಚಿನ ಮಟ್ಟದಲ್ಲಿರುತ್ತದೆ. ಹೀಗಾಗಿ ನಿರೀಕ್ಷಿತ ಕೆಲಸಗಳಲ್ಲಿ ತುಸು ವ್ಯತ್ಯಾಸವಾದರೂ ಷೇರು ಮೌಲ್ಯದ ಮೇಲೆ ಪರಿಣಾಮ ಆಗುತ್ತದೆ.
- ಇವುಗಳ ಕಾರ್ಯಚರಣೆ ವೆಚ್ಚ ಮತ್ತು ಷೇರುಮೌಲ್ಯದಲ್ಲಿ ಗಣನೀಯ ಏರಿಳಿತ ಇರುತ್ತದೆ.

ಇದಕ್ಕೆ ಮುಖ್ಯ ಕಾರಣಗಳು ಹೀಗಿವೆ...

- ಡಿಜಿಟಲ್ ಉಪಕರಣಗಳ ಬಳಕೆಯು ತೀವ್ರಗತಿಯಲ್ಲಿ ಹೆಚ್ಚಳ ಕಂಡಿದೆ. ಈಗ ದೇಶದ ಶೇಕಡ 50ರಷ್ಟಕ್ಕಿಂತ ಹೆಚ್ಚಿನ ಜನ ಆನ್‌ಲೈನ್ ಸಂಪರ್ಕ ಹೊಂದಿದ್ದಾರೆ.
- ವಾಣಿಜ್ಯ ವಹಿವಾಟು ನಡೆಸುವುದನ್ನು ಸುಲಭವಾಗಿಸುವ ಉದ್ದೇಶದಿಂದ ನಿಯಮಗಳಲ್ಲಿ ಸುಧಾರಣೆಗಳನ್ನು ತರಲಾಗಿದೆ.
- ಹೊಸ ವಹಿವಾಟಿನ ಮಾದರಿಗಳು ಸಾಧ್ಯವಾಗಬೇಕು ಎಂಬ ನಿಟ್ಟಿನಲ್ಲಿ ಬಲಿಷ್ಠ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು ಕಲ್ಪಿಸಲಾಗಿದೆ.
- ದೇಶದಲ್ಲಿ ಬಹಳ ಶಕ್ತಿಶಾಲಿಯಾದ ಔದ್ಯಮಿಕ ವ್ಯವಸ್ಥೆಯನ್ನು ಉತ್ತೇಜಿಸುವಂತಹ ಬಂಡವಾಳ ಲಭ್ಯವಾಗುತ್ತಿದೆ.

ಹೊಸತನವನ್ನು ಅರಸುವ, ಹೊಸತನಕ್ಕೆ ಅನುವು ಮಾಡಿಕೊಡುವ ಅಥವಾ ಈಗಾಗಲೇ ಇರುವ ವ್ಯವಹಾರಗಳಲ್ಲಿ ಭಾರಿ ಬದಲಾವಣೆಯನ್ನು ತರುವ ಉದ್ಯಮಗಳನ್ನು ನಾವು 'ಹೊಸತನದ ಉದ್ಯಮ'ಗಳು ಎಂದು ವ್ಯಾಖ್ಯಾನಿಸುತ್ತೇವೆ. ಈ ಉದ್ದಿಮೆಗಳ ಮುಂದೆ ಭಾರಿ ಗಾತ್ರದ ಮಾರುಕಟ್ಟೆಯೊಂದು ಇರುತ್ತದೆ, ಪ್ರತಿಸ್ಪರ್ಧಿಗಳಿಗಿಂತ ಮುಂದಿರುವ ಸಾಮರ್ಥ್ಯ ಇರುತ್ತದೆ, ನಿರಂತರವಾಗಿ ಹೆಚ್ಚಿನ ಪ್ರಮಾಣದ ಬೆಳವಣಿಗೆ ಸಾಧಿಸುವ ಶಕ್ತಿ ಕೂಡ ಇರುತ್ತದೆ. ಇಂತಹ ಹಲವು ಕಂಪನಿಗಳು ಇಂದು ಭಾರತದ ಬಂಡವಾಳ ಮಾರುಕಟ್ಟೆಯಲ್ಲಿ ಇವೆ, ಅವುಗಳ ಷೇರುಗಳು ಖರೀದಿಗೆ ಲಭ್ಯವಿವೆ. ಹೊಸತನದ ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಸಿದಂತೆಲ್ಲ, ಇಂತಹ ಕಂಪನಿಗಳ ಸಂಖ್ಯೆಯು ಹೆಚ್ಚುತ್ತಲೇ ಹೋಗುತ್ತದೆ.

ಹೆಚ್ಚಿನ ರಿಸ್ಕ್, ಹೆಚ್ಚಿನ ಲಾಭ: ಹೊಸತನದ ಕಂಪನಿಗಳಲ್ಲಿ ಹೂಡಿಕೆ ಮಾಡಿದಾಗ ಬೆಲೆಯಲ್ಲಿ ತೀವ್ರಗತಿಯ ಏರಿಳಿತವು ಬಹಳ ಸಹಜ. ಹೂಡಿಕೆ ಮಾಡಬಹುದಾದ ಕಂಪನಿಗಳಲ್ಲಿ ಸ್ಮಾಲ್‌ಕ್ಯಾಪ್ ಹಾಗೂ ಮಿಡ್‌ಕ್ಯಾಪ್ ವರ್ಗಕ್ಕೆ ಸೇರಿದ ಕಂಪನಿಗಳೇ ಹೆಚ್ಚು. ಇವುಗಳಲ್ಲಿ ಹೆಚ್ಚಿನ ಕಂಪನಿಗಳು ಆರಂಭಿಕ ಹಂತದಲ್ಲಿ ಇರುವಂಥವು, ಅವುಗಳ ಲಾಭದ ಪ್ರಮಾಣ ಕಡಿಮೆ, ಅವು ತಮ್ಮ ಭವಿಷ್ಯದ ವಹಿವಾಟುಗಳಿಗಾಗಿ ಹೆಚ್ಚಿನ ಮೊತ್ತ ಹೂಡಿಕೆ ಮಾಡುತ್ತಿರುತ್ತವೆ ಅಥವಾ ಅವು ಇನ್ನೂ ಲಾಭದ ಹಾದಿಗೆ ಬಂದಿರುವುದಿಲ್ಲ.

ಈ ಬಗೆಯ ಉದ್ದಿಮೆಗಳ ಷೇರುಮೌಲ್ಯವು ದುಬಾರಿಯಾಗಿ ಇರುತ್ತದೆ. ಕಂಪನಿಗಳ ಅಲ್ಪಾವಧಿ ಸಾಧನೆಯಲ್ಲಿ ಕುಸಿತ ಕಂಡುಬಂದರೆ ಷೇರುಮೌಲ್ಯ ಕೂಡ ತೀವ್ರವಾಗಿ ಕುಸಿಯುವ ಸಾಧ್ಯತೆ ಇರುತ್ತದೆ. ಹೀಗಾಗಿ ಅಲ್ಪಾವಧಿಯಲ್ಲಿ ಹೊಸತನದ ಕಂಪನಿಗಳ ಮೇಲಿನ ಹೂಡಿಕೆಯು ತೀವ್ರ ಪ್ರಮಾಣದ ಲಾಭದ ಅಥವಾ ತೀವ್ರ ಪ್ರಮಾಣದ ನಷ್ಟಕ್ಕೆ ಕಾರಣವಾಗಬಹುದು. ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಇಂತಹ ಕಂಪನಿಗಳು ತೀರಾ ಶೈಶವಾವಸ್ಥೆಯಲ್ಲಿ ಇರುವ ಹಾಗೂ ವಿ.ಸಿ ಬೆಂಬಲಿತ ನವೋದ್ಯಮಗಳಿಗಿಂತ ಹೆಚ್ಚು ಸ್ಥಿರವಾಗಿ ಇರುತ್ತವೆಯಾದರೂ, ಪ್ರಬುದ್ಧವಾದ ವಹಿವಾಟಿನ ಮಟ್ಟವನ್ನು ತಲುಪಿರುವ ಸಾಂಪ್ರದಾಯಿಕ ಕಂಪನಿಗಳಿಗಿಂತ ಹೆಚ್ಚಿನ ರಿಸ್ಕ್‌ಅನ್ನು ಅವು ಹೊತ್ತಿರುತ್ತವೆ ಎಂಬುದನ್ನು ಮರೆಯಬಾರದು.

ಈ ರಿಸ್ಕ್‌ಗಳನ್ನು ನಿರ್ವಹಿಸುವುದು ಹೇಗೆ?: ಹೊಸ ಬಗೆಯ ವಹಿವಾಟು ನಡೆಸುವ ಕಂಪನಿಗಳ ಮೇಲೆ ಹೂಡಿಕೆ ಮಾಡುವ ಕಾರ್ಯತಂತ್ರವು ರಿಸ್ಕ್ ಹೆಚ್ಚಿರುವಂಥದ್ದಾದರೂ, ವಿಶ್ವಾಸ ಮೂಡಿಸುವ ಕಂಪನಿಗಳನ್ನು ಗುರುತಿಸುವ ಸಂದರ್ಭದಲ್ಲಿ ಲೋಪಗಳನ್ನು ಕಡಿಮೆ ಮಾಡುವ ಯತ್ನದ ಭಾಗವಾಗಿ ತಂತ್ರವೊಂದನ್ನು ಅನುಸರಿಸಬಹುದು. ಮೂರು ಅಂಶಗಳನ್ನು ಆಧಾರವಾಗಿ ಇರಿಸಿಕೊಂಡು ಈ ಕೆಲಸ ಮಾಡಬಹುದು.

ವಹಿವಾಟಿನ ಗಟ್ಟಿತನವನ್ನು ಆಧರಿಸಿ ಹೂಡಿಕೆ: ಅಂದರೆ ಇಲ್ಲಿ ಉದ್ಯಮದ ವಹಿವಾಟಿನ ಗುಣಮಟ್ಟ ಏನು ಎಂಬುದು ಆ ಕಂಪನಿಯು ತನ್ನ ಬಗ್ಗೆ ತಾನೇ ಹೇಳಿಕೊಳ್ಳುವ ಸಂಗತಿಗಳಿಗಿಂತ ಹೆಚ್ಚು ಮುಖ್ಯವಾಗಿರುತ್ತದೆ. ಉದ್ಯಮವು ನಡೆಸುವ ವಹಿವಾಟು ಎಷ್ಟರಮಟ್ಟಿಗೆ ಚೆನ್ನಾಗಿದೆ, ಅಲ್ಲಿ ದೀರ್ಘಾವಧಿಯಲ್ಲಿ ಬೆಳವಣಿಗೆಗೆ ಯಾವ ಬಗೆಯ ಅವಕಾಶ ಇದೆ (ಅಂದರೆ ಕಂಪನಿಯ ಸೇವೆ ಅಥವಾ ಉತ್ಪನ್ನಕ್ಕೆ ಎಷ್ಟು ದೊಡ್ಡ ಮಾರುಕಟ್ಟೆ ಲಭ್ಯವಿದೆ, ಮಾರುಕಟ್ಟೆ ಪಾಲನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಕಂಪನಿಗೆ ಎಷ್ಟರಮಟ್ಟಿಗೆ ಇದೆ), ಹೂಡಿಕೆ ಮಾಡಿದ ಬಂಡವಾಳಕ್ಕೆ ಪ್ರತಿಯಾಗಿ ಎಷ್ಟು ಗಳಿಕೆ ಸಿಗಬಹುದು, ನಗದು ಹರಿವಿನ ಪ್ರಮಾಣ ಎಷ್ಟಿರಬಹುದು ಎಂಬುದನ್ನೆಲ್ಲ ಗಮನಿಸಲಾಗುತ್ತದೆ. ಬಹಳ ಉತ್ತಮ ಗುಣಮಟ್ಟದ ಕಂಪನಿ ಎಂಬ ವೇಷದಲ್ಲಿರುವ ಕಳಪೆ ಗುಣಮಟ್ಟದ ಕಂಪನಿಗಳ ಮೇಲೆ ಹೂಡಿಕೆ ಆಗದಂತೆ ನೋಡಿಕೊಳ್ಳುವುದು ಇದರ ಉದ್ದೇಶ. ತಂತ್ರಜ್ಞಾನದ ಕಾರಣದಿಂದಾಗಿ ಆಗಬಹುದಾದ ಬದಲಾವಣೆಗಳು ಉದ್ಯಮದ ಮೇಲೆ ಯಾವ ಬಗೆಯಲ್ಲಿ ಪರಿಣಾಮ ಉಂಟುಮಾಡಬಹುದು ಎಂಬುದನ್ನೂ ನಾವು ನಿರಂತರವಾಗಿ ಪರಿಶೀಲಿಸಬೇಕು.

ಆಡಳಿತದ ಗುಣಮಟ್ಟ: ಕಂಪನಿಗಳ ಆಡಳಿತದ ಗುಣಮಟ್ಟವು ಇಲ್ಲಿ ಮಹತ್ವದ್ದಾಗುತ್ತದೆ. ಅದರಲ್ಲೂ ಮುಖ್ಯವಾಗಿ, ಆರಂಭಿಕ ಹಂತದಲ್ಲಿ ಇರುವ, ಹೆಚ್ಚಿನ ಮಟ್ಟದ ಬೆಳವಣಿಗೆ ಸಾಧಿಸುತ್ತಿರುವ ಕಂಪನಿಗಳಲ್ಲಿ ಇದು ಹೆಚ್ಚು ಮಹತ್ವದ್ದಾಗುತ್ತದೆ. ಇತರ ಕಂಪನಿಗಳಿಗೆ ಅನ್ವಯವಾಗುವ ಸಹಜ ಮಾನದಂಡಗಳಷ್ಟೇ ಅಲ್ಲದೆ, ಕಂಪನಿಯ ಸಂಸ್ಥಾಪಕರ ತಂಡದ ಹಿನ್ನೆಲೆ, ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಅವರು ಹೊಂದಿರುವ ತಜ್ಞತೆ, ಬಂಡವಾಳವನ್ನು ವಿನಿಯೋಗಿಸುವಲ್ಲಿನ ಶಿಸ್ತು, ಲೆಕ್ಕಪತ್ರಗಳನ್ನು ಇರಿಸುವ ಕ್ರಮದ ಬಗ್ಗೆ ಗಮನ ನೀಡಲಾಗುತ್ತದೆ.

ಮೌಲ್ಯ: ಹೊಸತನದ ಕಂಪನಿಗಳ ಮೌಲ್ಯವನ್ನು ಅಳೆಯುವುದು ಬಹಳ ಸವಾಲಿನ ಕೆಲಸ. ಏಕೆಂದರೆ ಇದು, ಯೋಜನೆಯೊಂದು ಪೂರ್ಣಗೊಂಡ ನಂತರದಲ್ಲಿ ಕಂಪನಿಗೆ ಸಿಗುವ ವರಮಾನವನ್ನು ಆಧರಿಸಿರುತ್ತದೆ. ಬೆಳವಣಿಗೆಯ ವೇಗ ತುಸು ಕಡಿಮೆ ಆದರೆ ಅಥವಾ ಲಾಭದ ನಿರೀಕ್ಷಿತ ಪ್ರಮಾಣದಲ್ಲಿ ಇಳಿಕೆ ಕಂಡುಬಂದರೆ ಮೌಲ್ಯದ ಮೇಲೆ ಪರಿಣಾಮ ಆಗುತ್ತದೆ. ಬಡ್ಡಿ ದರಗಳು ಹಾಗೂ ಒಟ್ಟಾರೆಯಾಗಿ ರಿಸ್ಕ್‌ನ ಪ್ರಮಾಣ ಕೂಡ ಮೌಲ್ಯದ ಮೇಲೆ ಪ್ರಭಾವ ಬೀರುತ್ತವೆ.

ಒಟ್ಟಾರೆಯಾಗಿ ಹೇಳುವುದಿದ್ದರೆ ಇದು ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ ಇರುವ, ದೀರ್ಘಾವಧಿಗೆ ಹೂಡಿಕೆ ಮಾಡುವ ಮನಸ್ಸು ಇರುವವರಿಗೆ ಸೂಕ್ತವಾಗುತ್ತದೆ. ಈ ಬಗೆಯ ಹೂಡಿಕೆ ಕಾರ್ಯತಂತ್ರವು ವಿಸ್ತೃತ ಮಾರುಕಟ್ಟೆಯನ್ನು ಪ್ರತಿನಿಧಿಸುವ ಇತರ ಸೂಚ್ಯಂಕಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಲಾಭ ತಂದುಕೊಡುವ ಸಾಮರ್ಥ್ಯ ಹೊಂದಿದೆ ಎಂಬುದು ನಮ್ಮ ನಂಬಿಕೆ. ಆದರೆ ಸಾಂಪ್ರದಾಯಿಕ ಹೂಡಿಕೆಗಳಿಗಿಂತ ಹೆಚ್ಚಿನ ಚಂಚಲತೆ ಇದರಲ್ಲಿ ಇರುತ್ತದೆ. ಹೀಗಾಗಿ, ಅಲ್ಪಾವಧಿಯಲ್ಲಿ ಬಹಳ ತೀವ್ರ ಪ್ರಮಾಣದ ಏರಿಳಿತಗಳನ್ನು ಹಾಗೂ ಹೆಚ್ಚಿನ ರಿಸ್ಕ್ ಅನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವವರಿಗೆ, 10 ವರ್ಷಗಳವರೆಗೆ ಹೂಡಿಕೆ ಮಾಡುವ ಆಲೋಚನೆ ಇರುವವರಿಗೆ ಇದು ಬಹಳ ಸೂಕ್ತವಾಗಿದೆ.

ಲೇಖಕ ಯುಟಿಐ ಆಸ್ತಿ ನಿರ್ವಹಣಾ ಕಂಪನಿಯ ಈಕ್ವಿಟಿ ವಿಭಾಗದ ಉಪಾಧ್ಯಕ್ಷ


ಹೂಡಿಕೆದಾರರು ಬದಲಾದದ್ದು ಹೇಗೆ?

ದೇಶದ 13 ನಗರಗಳ 5,050 ಮಂದಿಯಿಂದ ಅಭಿಪ್ರಾಯ ಸಂಗ್ರಹಿಸಿ ವರದಿಯೊಂದನ್ನು ಸಿದ್ಧಪಡಿಸಿರುವ ಡಿಎಸ್‌ಪಿ ಮ್ಯೂಚುವಲ್ ಫಂಡ್ ಕಂಪನಿಯು, ಭಾರತದಲ್ಲಿ ಹೂಡಿಕೆಯ ಪ್ರವೃತ್ತಿಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗುರುತಿಸುವ ಪ್ರಯತ್ನ ಮಾಡಿದೆ. ವರದಿಯ ಆಸಕ್ತಿಕರ ಅಂಶಗಳು ಇಲ್ಲಿವೆ.

56%
2025ರಲ್ಲಿ ಸ್ವತಂತ್ರವಾಗಿ ಹೂಡಿಕೆ ತೀರ್ಮಾನ ತೆಗೆದುಕೊಳ್ಳುತ್ತಿರುವ ಮಹಿಳೆಯರ ಪ್ರಮಾಣ. 2022ರಲ್ಲಿ ಇವರ ಪ್ರಮಾಣ ಶೇ 44 ಆಗಿತ್ತು.


51%
2025ರಲ್ಲಿ ಷೇರುಗಳು, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ತೀರ್ಮಾನವನ್ನು ಸ್ವತಂತ್ರವಾಗಿ ತೆಗೆದುಕೊಳ್ಳುತ್ತಿರುವ ಮಹಿಳೆಯರು. ಇದು 2022ರಲ್ಲಿ ಶೇ 39ರಷ್ಟಿತ್ತು.

ಹೂಡಿಕೆ, ಗುರಿ ವಿಚಾರದಲ್ಲಿ ಸ್ಥಿತಿ ಹೀಗಿದೆ



84%
ತಾವೊಬ್ಬರೇ ಹೂಡಿಕೆ ನಿರ್ವಹಿಸಬಲ್ಲೆವು ಎಂಬ ವಿಶ್ವಾಸ ವ್ಯಕ್ತಪಡಿಸಿರುವ ಪ್ರಮಾಣ ಇದು.

ನಗರವಾಸಿಗಳಿಗೆ ಹೂಡಿಕೆ ಕಲಿಸಿದ್ದು ಯಾರು?



ಆಧಾರ: ಡಿಎಸ್‌ಪಿ ವಿನ್ವೆಸ್ಟರ್ ಪಲ್ಸ್ ವರದಿ

ಜಿಯೊ ಫೈನಾನ್ಶಿಯಲ್ ಸರ್ವಿಸಸ್

ಬ್ರೋಕರೇಜ್ ಮಾತು

ಜಿಯೊ ಫೈನಾನ್ಶಿಯಲ್ ಸರ್ವಿಸಸ್‌ನ ಪ್ರತಿ ಷೇರಿನ ಬೆಲೆ ₹320 ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ. ಬ್ಯಾಂಕೇತರ ಹಣಕಾಸು ಸೇವಾ ಕಂಪನಿಯಾದ (ಎನ್‌ಬಿಎಫ್‌ಸಿ) ಜಿಯೊ ಫೈನಾನ್ಶಿಯಲ್ ಸರ್ವಿಸಸ್, ಸಾಲ ನೀಡುವಿಕೆ, ಆಸ್ತಿ ನಿರ್ವಹಣೆ, ಸಂಪತ್ತು ನಿರ್ವಹಣೆ ಸೇರಿದಂತೆ ಇತರ ಹಲವು ಡಿಜಿಟಲ್ ಹಣಕಾಸು ಸೇವೆಗಳನ್ನು ಒದಗಿಸುತ್ತದೆ.

ಕಂಪನಿಯ ಸಾಲ ನೀಡುವಿಕೆ ಪ್ರಮಾಣ ಹೆಚ್ಚಳವಾಗುತ್ತಿದೆ. ಕಳೆದ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ ಕಂಪನಿಯ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹19 ಸಾವಿರ ಕೋಟಿಯಷ್ಟಾಗಿದೆ. ಜಿಯೊ ಪೇಮೆಂಟ್ಸ್ ಬ್ಯಾಂಕ್, ಜಿಯೊ ಬ್ಲ್ಯಾಕ್‌ರಾಕ್ ಅಸೆಟ್ ಮ್ಯಾನೇಜ್‌ಮೆಂಟ್ ಮತ್ತು ಜಿಯೊ ಇನ್ಶೂರೆನ್ಸ್ ಎಯುಎಂ ಹೆಚ್ಚಳಕ್ಕೆ ನೆರವಾಗಿವೆ.

ದೇಶದ ಡಿಜಿಟಲ್ ಹಣಕಾಸು ವಲಯದಲ್ಲಿ ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಪ್ರಮುಖ ಪಾತ್ರ ವಹಿಸಲಿದೆ ಎಂಬುದು ತನ್ನ ನಂಬಿಕೆ ಎಂದು ಕೂಡ ಮೋತಿಲಾಲ್ ಓಸ್ವಾಲ್ ಹೇಳಿದೆ. 2025–26ರಿಂದ 2027–28ರ ವೇಳೆಗೆ ಕಂಪನಿಯ ತೆರಿಗೆ ನಂತರದ ಲಾಭದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ ಶೇ 48ರಷ್ಟಿರಲಿದೆ ಎಂದು ತಿಳಿಸಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹238.65 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

39. Develop the story using the clues given below: (B)

32. Once there was a sailor…. Sindbad…. a violent storm…… ship got wrecked…. drifted off to an unknown island…. discovered the egg of a giant bird ….. strapped himself to the bird's leg ….. bind carried him to a valley ……full of snaker. *(…..Contd)* covered with beautiful diamonds…… Sindbad remembered the stories of merchants ….. came to the valley ……diamonds stick to the piece of meat….. eagles would carry the meat ….. Sindbad did the same …… collected as much diamonds as he could…… strapped himself to a piece of meat….. Sindbad joined the merchants…. traded diamonds…... became rich and began to live in a grand palace

Ans:- Once, Sindbad, a sailor, was shipwrecked on a mysterious island. He tied himself to a giant bird's leg, and it flew him to a valley filled with snakes and diamonds. Sindbad remembered stories of merchants collecting diamonds by attaching them to meat. He did the same and collected many diamonds. Then, he tied himself to a piece of meat and escaped. Sindbad traded his diamonds for wealth and became rich. He lived in a grand palace, famous for his bravery and cleverness. Sindbad's adventure taught him to think creatively and take risks to achieve his goals.

40. Write a letter to your friend, inviting her and her family to attend on your brother's first birthday on 1st of January.

Ans :

Sangeetha
24, 3rd cross,
Bender Extension.
Gadag
03/12/ 2025

Dear Janaki,

We all are well and wish the same with all of there. Its long time since we met.

It is my baby brother Ramesh's birth day on 1st January. We have a pooja ceremony at 10.30 am. I take this opportunity to invite you and your parents to attend his first birthday and bless him. We all can have a good time here. Please reply soon about your date of arrival. Please convey my respects to ant and uncle.

Awaiting for your arrival

Your lovingly.
Sangeetha

(OR)

Write a informal letter to your father, telling him about performance in formative assessments and summative assessment of 9th standard. And tell him about your preparation for 10th standard exams.

Ans :

My dear father.

I am safe and in good health. How are you? I hope it's good on your side as well. I received your letter and noted the contents.

I'm very glad to write to you that I performed extremely well in my formative and summative assessments, scoring 92% or A+ grade in my 9th std. For the coming grade, since I am planning to join a reputed college I have decided to raise my bar and get better scores, therefore I am determined to prepare working very hard. Everyday I study for about 5-6 hours and practice the same before going to bed . I'm sure that I'll be able to score really well in my Board exams.

Please convey my due respects to grandparents and Mother. I hope to receive you reply at the earliest.

Your son,
Manjunath

To
Mr. Shiv Narayan Gowda
At and Post:- Kadime
TQ :- KUMTA
Dt:- Utter Kannada

41. Read the following passage and answer the questions that follow:

Man has altered many of the physical features of the earth with the tools of science. He has transformed woodlands and prairies into farmland. He has constructed lakes and dams to irrigate or to harness hydroelectric power. By cutting through mountains, he has almost modified the very face of the earth.

However his attempts to bring about change in the physical environment have not always been beneficial to the nature. Today pollution of the air and water endangers the health of the living organisms our planet. The automobile exhausts and the smokes from the factories are affecting our health. Pollution from oil is killing marine life throwing it out of balance.

Industrial and domestic wastes have choked several rivers. Conservationists strongly feel that if mankind and life were to survive on earth then the man must limit the growth of technology.

A. What are the effects of pollution?

Ans:- Currently pollution of the air and water endangers all the living creatures on the planet earth, including man. It is also affecting our health. Leakage of oil is killing the marine life. Industrial and domestic wastes have choked several rivers.

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ್‌ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

Biology

MULTIPLE CHOICE QUESTIONS

9) Match the microbial products listed under column I with the related microbes given under column II choose the appropriate option from the given choices.

Column I	Column II
A. Citric acid	1. Methanobacterium
B. Cyclosporine A	2. Monascus purpureus
C. Statin	3. Aspergillus niger
D. Gobar gas	4. Trichoderma polysporum

	A	B	C	D
(a)	3	4	2	1
(b)	5	2	4	3
(c)	2	4	5	3
(d)	3	4	2	5

Ans:(a) Citric acid, a weak organic acid used as a preservative and to add an sour or an acidic taste in food and drinks is produced by a fungi Aspergillus Niger,

cyclosporine-A is a bioactive molecule which acts as a powerful immunosuppressive agent is produced by a fungi. Trichoderma polysporum,

strain is also a bioactive molecule which acts as a blood cholesterol lowering agent is produced by the yeast Monascus purpureus.

Gobar gas produced by Methanobacterium is used as a fuel for cooking and lighting.

10) What would happen if oxygen availability to activated sludge flocs is reduced?

a) It will slow down the rate of degradation of organic matter
b) The centre of flocs will become anoxic, which would cause death of bacteria and eventually breakage of flocs.
c) Flocs would increase in size as anaerobic bacteria would grow around flocs.
d) Protozoa would grow in large numbers.

Ans:- b

11) Match the hormone with its site of production

Hormone	Site of production
a. hCG and hPL	i. Ovary
b. Progesterone	ii. Placenta
c. Androgens	iii. Corpus luteum
d. Relaxin	iv. Leydig cells

(A) a-iii, b-I, c-iv, d-ii (B) a-iv, b-i, c-ii, d-iii
(C) a-i, b-ii, c-iv, d-iii (D) a-ii, b-iii, c-iv, d-i

Ans. D

12) Mycorrhiza does not help the host plant in –

a) Enhancing its phosphorus uptake capacity
b) Increasing its tolerance to drought
c) Enhancing its resistance to root pathogens
d) Increasing its resistance to insects

Ans:- d

13) Big holes in Swiss cheese are made by a –

a) A machine
b) A bacterium that produces methane gas
c) A bacterium producing la large amount of carbon dioxide
d) A fungus that releases a lot of gases during it s metabolic activities. **Ans:- c**

14) Continuous self-pollination results in

a) Inbreeding depression
b) Self-incompatibility
c) Formation of unisexual flowers
d) Gametes loose vigour

Ans: a

Expln:- Continuous self–pollination results in inbreeding depression. So, flowering plants have developed the following devices to discourage self-pollination and to encourage cross-pollination:-
(i) In some species, pollen release and stigma receptivity are not synchronised.
(ii) In some other species, the anther and stigma are placed at a different position, So that the pollen cannot come in contact with the stigma of the same flower.
(iii) The third devices to prevent inbreeding is self-incompatibility It prevents self- pollen from fertilizing the ovules by inhibiting pollen germination or pollen tube growth in the pistil.
(iv) Dicliny (unisexuality) i.e. flowers are unisexual, So that self-pollination is not possible.

15) With respect to Eichhornia:

Statement X: It drains off oxygen from water and is seen growing in standing water.
Statement Y: It is indigenous species of our country.

a) Both statement X and Y are correct
b) Both statement X and Y are wrong
c) Only statement X is correct and Y is wrong
d) Only statement Y is correct and X is wrong


Ans: c

Expln:- Eichhornia is an alien or exotic species, These plants are introduced in India because of its beautiful flowers and shape of leaves. Since it can propagate vegetatively at a phenomenal rate and spread all over the water body in a short period of time. It is the most invasive weeds found growing wherever there is standing water. It drains oxygen from the water, which leads to the death of fishes. It adversely affects aquatic life and increases the biological oxygen demand.

A species is defined as indigenous to a given region or ecosystem, if its presence in that region is the result of the only natural process, with no human intervention. Indigenous Species include those that are endemic i.e., naturally occurring in an area and restricted entirely to that area. So, Eichhornia is not an indigenous species of our country.

ಮೂತ್ರಪಿಂಡ ಸಮಸ್ಯೆಗಳಿಗೆ ಮುನ್ನೆಚ್ಚರಿಕೆ ಮೊದಲ ಮದ್ದು!

ವಿಶ್ವ ಕಿಡ್ನಿ ದಿನದ ಅಂಗವಾಗಿ ಮಣಿಪಾಲ್ ಆಸ್ಪತ್ರೆಯಿಂದ 'ಕಿಡ್ನಿ ಡೇ ಕಾಂಕ್ಲೇವ್' ಆಯೋಜನೆ, ತಜ್ಞರಿಂದ ಜಾಗೃತಿ ಸಂದೇಶ



ಬೆಂಗಳೂರು: ದೇಹದ ಅಂಗಾಂಗಗಳ ಪೈಕಿ ಕಿಡ್ನಿ ಅತ್ಯಂತ ಪ್ರಮುಖವಾಗಿದ್ದು, ಯಾವುದೇ ರೋಗ ಲಕ್ಷಣವಿಲ್ಲದೇ ಹಾನಿಗೊಳಗಾಗುತ್ತದೆ. ಹೀಗಾಗಿ, ಪ್ರತಿಯೊಬ್ಬರೂ ಮೂತ್ರಪಿಂಡದ ಆರೋಗ್ಯಕ್ಕೆ ಕಾಳಜಿ ವಹಿಸಬೇಕೆಂದು ಮಣಿಪಾಲ್ ಆಸ್ಪತ್ರೆಗಳ ಅಧ್ಯಕ್ಷ ಡಾ.ಎಚ್.ಸುದರ್ಶನ್ ಬಲ್ಲಾಳ್ ಹೇಳಿದರು.

ವಿಶ್ವ ಕಿಡ್ನಿ ದಿನದ ಅಂಗವಾಗಿ ನಗರದ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯ 'ಕಿಡ್ನಿ ಡೇ ಕಾಂಕ್ಲೇವ್' ಉದ್ಘಾಟಿಸಿ ಮಾತನಾಡಿದ ಅವರು, ಹೃದಯದ ಬಗ್ಗೆ ಜನರಲ್ಲಿ ಸಾಕಷ್ಟು ಜಾಗೃತಿ ಮೂಡಿದೆ. ಆದರೆ, ಮೂತ್ರಪಿಂಡದ ಕುರಿತಂತೆ ಸಾಕಷ್ಟು ನಿರ್ಲಕ್ಷ್ಯ ಧೋರಣೆ ನಮ್ಮ ಜನಸಮುದಾಯದಲ್ಲಿದೆ. ಹೀಗಾಗಿಯೇ ನಮ್ಮಲ್ಲಿ ಮೂತ್ರಪಿಂಡ ಕಾಯಿಲೆಗಳು ನಿರೀಕ್ಷೆ ಮೀರಿ ಏರಿಕೆಯಾಗುತ್ತಿವೆ. ಇದೇ ಕಾರಣಕ್ಕೆ 'ಕಿಡ್ನಿ ಹೆಲ್ತ್ ಫಾರ್ ಆಲ್: ಕೇರಿಂಗ್ ಪೀಪಲ್, ಪ್ರೊಟೆಕ್ಟಿಂಗ್ ಪ್ಲಾನೆಟ್' ಎನ್ನುವ ವಿಷಯದಡಿ 'ಕಿಡ್ನಿ ಡೇ' ಆಚರಿಸುತ್ತಿದ್ದೇವೆ. ಮೂತ್ರಪಿಂಡ ಕಾಯಿಲೆಗಳು ಗೊತ್ತಾಗದಂತೆ ಆವರಿಸುತ್ತವೆ ಮತ್ತು ಶೇ.90ರಷ್ಟು ಕಾರ್ಯಕ್ಷಮತೆ ಕುಸಿದ ನಂತರವೇ ಲಕ್ಷಣಗಳು ಗೋಚರಿಸುತ್ತವೆ ಎಂದು ಅವರು ಎಚ್ಚರಿಸಿದರು. ರೋಗಿಗಳು ಐದು 'ಎಸ್'ಗಳಾದ ಧೂಮಪಾನ (ಸ್ಮೋಕಿಂಗ್), ಸಕ್ಕರೆ (ಶುಗರ್), ಉಪ್ಪು (ಸಾಲ್ಟ್), ಒತ್ತಡ (ಸ್ಟ್ರೆಸ್) ಮತ್ತು ಜಡ ಜೀವನಶೈಲಿ (ಸೆಡೆಂಟರಿ ಲೈಫ್‌ಸ್ಟೈಲ್) ವಿಚಾರಗಳಲ್ಲಿ ಅತ್ಯಂತ ಜಾಗರೂಕರಾಗಿರಬೇಕು. ಈ ಐದು ಎಸ್‌ಗಳು ಮೂತ್ರಪಿಂಡವನ್ನು ಹಾನಿಗೊಳಿಸುತ್ತವೆ. ವ್ಯಕ್ತಿ ಯಾವುದೇ ಸೂಚನೆಯನ್ನು ನೀಡದೇ ಸಾವಿನ ದವಡೆಗೆ ತಲುಪಿಸುತ್ತವೆ ಎಂದರು.

ಆಧುನಿಕ ಡಯಾಲಿಸಿಸ್ ಬಗ್ಗೆ ಮಾತನಾಡುತ್ತಾ, ಹಿಮೋಡಿಯಾಫಿಲ್ಟ್ರೇಷನ್ (ಎಚ್‌ಡಿಎಫ್) ವಿಧಾನವು ಅಲ್ಟ್ರಾ ಪ್ಯೂರ್ ವಾಟರ್ ತಂತ್ರಜ್ಞಾನದ ಮೂಲಕ ವಿಷಪದಾರ್ಥಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಹೊರಹಾಕಲು ಮತ್ತು ಹೃದಯದ ಸ್ಥಿರತೆ ಕಾಪಾಡಲು ನೆರವಾಗುತ್ತದೆ ಎಂದು ಮಾಹಿತಿ ನೀಡಿದರು. ಜತೆಗೆ, ಮೂತ್ರಪಿಂಡದ ಕುರಿತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ಹಂಚಿಕೊಂಡರು.

ಯುವಜನತೆ ಮತ್ತು ಆಹಾರ ಪದ್ಧತಿ: ನೆಫ್ರಾಲಜಿ ಸಲಹೆಗಾರರಾದ ಡಾ. ಶಿಲ್ಪಾ ಶೆಟ್ಟಿ ಮಾತನಾಡಿ, 'ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ಕಂಡುಬರುತ್ತಿರುವ ಆಹಾರ ಪದ್ಧತಿಯ ಬದಲಾವಣೆಯ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಫಿಟ್ನೆಸ್ ಹೆಸರಿನಲ್ಲಿ ವೈದ್ಯಕೀಯ ಮಾರ್ಗದರ್ಶನವಿಲ್ಲದೆ ಅತಿಯಾದ ಪ್ರೋಟೀನ್ ಪೌಡರ್ ಮತ್ತು ಸಪ್ಲಿಮೆಂಟ್‌ಗಳನ್ನು ಸೇವಿಸುವುದು ಮೂತ್ರಪಿಂಡಗಳ ಮೇಲೆ ತೀವ್ರ ಒತ್ತಡ ಹೇರುತ್ತದೆ. ಈಗಾಗಲೇ ಮೂತ್ರಪಿಂಡದ ಸಮಸ್ಯೆ ಇರುವವರು ಇವುಗಳನ್ನು ಬಳಸುವುದರಿಂದ ಹಾನಿ ಮತ್ತಷ್ಟು ವೇಗವಾಗುತ್ತದೆ. ಆದ್ದರಿಂದ ಸಮತೋಲಿತ ಪೋಷಣೆಗೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಕಿಡ್ನಿ ಕಸಿ ಮತ್ತು ಸುಧಾರಿತ ಶಸ್ತ್ರ ಚಿಕಿತ್ಸೆ: ಯುರಾಲಜಿ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ತಜ್ಞರಾದ ಡಾ.ಶಿವಶಂಕರ್. ಆರ್ ಮಾತನಾಡಿ, ಅಂತಿಮ ಹಂತದ ಕಿಡ್ನಿ ವೈಫಲ್ಯಕ್ಕೆ ಕಿಡ್ನಿ ಕಸಿ ಅತ್ಯುತ್ತಮ ಪರಿಹಾರವಾಗಿದೆ ಎಂದರು. ಪ್ರಸ್ತುತ ಲಭ್ಯವಿರುವ ರೋಬೋಟಿಕ್ ಮತ್ತು ಲ್ಯಾಪ್ರೋಸ್ಕೋಪಿಕ್ ತಂತ್ರಜ್ಞಾನಗಳಿಂದಾಗಿ ಶಸ್ತ್ರಚಿಕಿತ್ಸೆಯ ಗಾಯಗಳು ಚಿಕ್ಕದಾಗಿರುತ್ತವೆ. ಜತೆಗೆ, ಕಿಡ್ನಿ ದಾನಿಗಳು ಅತ್ಯಂತ ವೇಗವಾಗಿ ಚೇತರಿಸಿಕೊಂಡು ತಮ್ಮ ಸಾಮಾನ್ಯ ಜೀವನಕ್ಕೆ ಮರಳಲು ಸಾಧ್ಯವಾಗುತ್ತದೆ. ಸುಧಾರಿತ ಇಮ್ಯುನೋಸಪ್ರೆಸಿವ್ ಚಿಕಿತ್ಸೆಗಳು ಕಸಿ ನಂತರದ ಜಟಿಲತೆಗಳನ್ನು ಗಣನೀಯವಾಗಿ ಕಡಿಮೆಗೊಳಿಸಿವೆ ಎಂದರು.

ಮಧುಮೇಹ, ರಕ್ತದೊತ್ತಡದಿಂದ ಕಿಡ್ನಿ ವೈಫಲ್ಯ: ನೆಫ್ರಾಲಜಿ ವಿಭಾಗದ ಮುಖ್ಯಸ್ಥ ಡಾ.ವಿಶ್ವನಾಥ್. ಎಸ್. ಮಾತನಾಡಿ, ದೀರ್ಘಕಾಲದ ಮಧುಮೇಹ ಮತ್ತು ರಕ್ತದೊತ್ತಡವು ಕಿಡ್ನಿಯೊಳಗಿನ ಸೂಕ್ಷ್ಮ ರಕ್ತನಾಳಗಳನ್ನು ಹಾನಿಗೊಳಿಸುತ್ತವೆ ಎಂದು ವಿವರಿಸಿದರು. ಜಗತ್ತಿನಾದ್ಯಂತ ಕಂಡುಬರುವ ಕ್ರೋನಿಕ್ ಕಿಡ್ನಿ ಡಿಸೀಸ್ (ಸಿಕೆಡಿ) ಪ್ರಕರಣಗಳಲ್ಲಿ ಇವೇ ಪ್ರಮುಖ ಕಾರಣಗಳಾಗಿವೆ. ಭಾರತದಲ್ಲಿ ಸುಮಾರು ಶೇ.10ರಷ್ಟು ಜನಸಂಖ್ಯೆ ಈ ಕಾಯಿಲೆಯಿಂದ ಬಳಲುತ್ತಿದ್ದು, 2040ರ ವೇಳೆಗೆ ಇದು ಸಾವಿನ ಐದನೇ ಪ್ರಮುಖ ಕಾರಣವಾಗುವ ಸಾಧ್ಯತೆಯಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮಕ್ಕಳಲ್ಲಿ ಕಿಡ್ನಿ ಕಸಿ: ಮಕ್ಕಳಲ್ಲಿಯೂ ಕಿಡ್ನಿ ರೋಗಗಳು ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಮಣಿಪಾಲ್ ಆಸ್ಪತ್ರೆಯಲ್ಲಿ ನುರಿತ ಮಕ್ಕಳ ತಜ್ಞರು, ಅನಸ್ತೇಶಿಯಾ ಮತ್ತು ಕ್ರಿಟಿಕಲ್ ಕೇರ್ ತಂಡಗಳ ಸಮನ್ವಯದಿಂದ ಸಂಕೀರ್ಣ ಪೀಡಿಯಾಟ್ರಿಕ್ ಟ್ರಾನ್ಸ್‌ಪ್ಲಾಂಟ್ ಪ್ರಕರಣಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ. ಆಧುನಿಕ ತಂತ್ರಜ್ಞಾನದಿಂದಾಗಿ ಕಸಿ ಪಡೆದ ಮಕ್ಕಳು ಮತ್ತೆ ಸಾಮಾನ್ಯ ಜೀವನಕ್ಕೆ ಮರಳಿ ಶಾಲೆಗೆ ಹೋಗುತ್ತಿದ್ದಾರೆಂದು ತಿಳಿಸಿದರು.

ಕಿಡ್ನಿ ದಾನ ಮತ್ತು ಆಧುನಿಕ ಶಸ್ತ್ರ ಚಿಕಿತ್ಸೆ: ಕಿಡ್ನಿ ದಾನದ ಮಹತ್ವದ ಬಗ್ಗೆ ಮಾತನಾಡಿದ ನೆಫ್ರಾಲಜಿ ಮತ್ತು ಟ್ರಾನ್ಸ್‌ಪ್ಲಾಂಟ್ ತಜ್ಞ ಡಾ.ರವಿ ಜಂಗಮನಿ, 20ರಿಂದ 60 ವರ್ಷದ ಆರೋಗ್ಯವಂತ ವ್ಯಕ್ತಿಗಳು ಸುರಕ್ಷಿತವಾಗಿ ಕಿಡ್ನಿ ದಾನ ಮಾಡಬಹುದು. ಆಧುನಿಕ 'ಮಿನಿಮಲಿ ಇನ್‌ವೇಸಿವ್' ಶಸ್ತ್ರ ಚಿಕಿತ್ಸೆಗಳಿಂದ ದಾನಿಗಳು ಕೆಲವೇ ವಾರಗಳಲ್ಲಿ ತಮ್ಮ ದೈನಂದಿನ ಕೆಲಸಗಳಿಗೆ ಮರಳಬಹುದು. ಅಲ್ಲದೆ, ಎಬಿಒ-ಅಸಂಗತ ಕಸಿ ಮತ್ತು ಸ್ವಾಪ್ ಕಸಿ ಮುಂತಾದ ಹೊಸ ವಿಧಾನಗಳು ದಾನಿಗಳ ಹುಡುಕಾಟದಲ್ಲಿರುವ ರೋಗಿಗಳಿಗೆ ವರದಾನವಾಗಿವೆ.

ಯುವಕರಲ್ಲಿ ಕಿಡ್ನಿ ಕಲ್ಲು ಮತ್ತು ಕ್ಯಾನ್ಸರ್ ಭೀತಿ: ಯುರೋ-ಆಂಕಾಲಜಿ ತಜ್ಞ ಡಾ.ಆನಂದ್ ಪಾಟೀಲ್ ಮಾತನಾಡಿ, ಉತ್ತರ ಕರ್ನಾಟಕದಂತಹ ಬಿಸಿಲು ಪ್ರದೇಶಗಳಲ್ಲಿ ಯುವಕರಲ್ಲಿ ಕಿಡ್ನಿ ಕಲ್ಲು ಪ್ರಕರಣಗಳು ಹೆಚ್ಚುತ್ತಿರುವುದನ್ನು ಉಲ್ಲೇಖಿಸಿದರು. ಇದಕ್ಕೆ ಮುಖ್ಯ ಕಾರಣಗಳಾದ ದೇಹದಲ್ಲಿ ನೀರಿನ ಕೊರತೆ ಮತ್ತು ಕಡಿಮೆ ನೀರು ಸೇವನೆ, ಹೆಚ್ಚು ಉಪ್ಪು ಮತ್ತು ಪ್ರೊಸೆಸ್ಡ್ ಆಹಾರಗಳ ಸೇವನೆ, ಅತಿಯಾದ ತೂಕ ಮತ್ತು ಕೆಂಪು ಮಾಂಸದ ಸೇವನೆ ಕುರಿತು ಜಾಗೃತಿ ವಹಿಸಬೇಕೆಂದರು.

ಕಿಡ್ನಿ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿ (4 ಸೆ.ಮೀ ಗಿಂತ ಕಡಿಮೆ) ಪತ್ತೆಹಚ್ಚಿದರೆ, ಸಂಪೂರ್ಣ ಕಿಡ್ನಿ ತೆಗೆಯುವ ಅಗತ್ಯವಿಲ್ಲದೆ 'ಕಿಡ್ನಿ ಉಳಿಸುವ ಶಸ್ತ್ರ ಚಿಕಿತ್ಸೆ' ಮಾಡಬಹುದು. ಮಣಿಪಾಲ್ ಆಸ್ಪತ್ರೆಯಲ್ಲಿ ರೋಬೋಟಿಕ್ ಸಹಾಯಿತ ತಂತ್ರಜ್ಞಾನದ ಮೂಲಕ ಅತ್ಯಂತ ನಿಖರವಾಗಿ ಮತ್ತು ಕಡಿಮೆ ಕಡಿಮೆ ರಕ್ತಸ್ರಾವ, ನೋವು ರಹಿತ ಚಿಕಿತ್ಸೆ ನೀಡಲಾಗುತ್ತದೆ. ಇದರಿಂದ ರೋಗಿ ಬಹುಬೇಗನೆ ಚೇತರಿಸಿಕೊಳ್ಳಲು ಸಾಧ್ಯ ಎಂದರು.

ಯುವಜನರಲ್ಲಿ ಹೆಚ್ಚುತ್ತಿರುವ ಕಿಡ್ನಿ ಸಮಸ್ಯೆಗಳು: ನೆಫ್ರಾಲಜಿ ಮತ್ತು ಟ್ರಾನ್ಸ್‌ಪ್ಲಾಂಟ್ ವಿಭಾಗದ ಕನ್ಸಲ್ಟೆಂಟ್ ಡಾ.ಕಿಶೋರ್ ಬಾಬು ಮಾತನಾಡಿ, ಯುವಕರಲ್ಲಿ ರಾತ್ರಿ ವೇಳೆ ಪದೇಪದೇ ಮೂತ್ರ ವಿಸರ್ಜನೆ ಆಗುವುದು ಅಥವಾ ಮಕ್ಕಳಲ್ಲಿ ಸರಿಯಾದ ಬೆಳವಣಿಗೆ ಕಾಣಿಸದಿರುವುದು ಕಿಡ್ನಿ ಸಮಸ್ಯೆಯ ಲಕ್ಷಣಗಳಾಗಿರಬಹುದು. ಅಲ್ಲದೆ, ಅತಿಯಾದ ತೂಕ, ಮಧುಮೇಹ ಮತ್ತು ರಕ್ತದೊತ್ತಡದಂತಹ ಜೀವನಶೈಲಿ ಕಾರಣಗಳ ಜೊತೆಗೆ ಗ್ರಾಮೀಣ ಭಾಗಗಳಲ್ಲಿ ಬಿಸಿಲಿನ ಒತ್ತಡ ಹಾಗೂ ನೀರಿನ ಕೊರತೆಯಿಂದಾಗಿ ಅಜ್ಞಾತ ಮೂಲದ ದೀರ್ಘಕಾಲೀನ ಮೂತ್ರಪಿಂಡ ಕಾಯಿಲೆಗಳು (ಸಿಕೆಡಿ-ಯು) ಹೆಚ್ಚುತ್ತಿವೆ ಎಂದರು.


ಡಯಾಲಿಸಿಸ್ ಚಿಕಿತ್ಸೆ ಮತ್ತು ತಪ್ಪು ಕಲ್ಪನೆಗಳು: ಇಂಟರ್ವೆಂಷನಲ್ ನೆಫ್ರಾಲಜಿ ತಜ್ಞ ಡಾ. ಹೇಮಂತ್ ಕುಮಾರ್ ಎಂ.ಕೆ. ಮಾತನಾಡಿ, ಡಯಾಲಿಸಿಸ್ ಮೂತ್ರಪಿಂಡ ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸುವುದಿಲ್ಲ. ಬದಲಾಗಿ ಕಿಡ್ನಿಗಳು ವಿಫಲವಾದಾಗ ದೇಹದ ತ್ಯಾಜ್ಯ ಮತ್ತು ಹೆಚ್ಚುವರಿ ದ್ರವವನ್ನು ಹೊರಹಾಕಲು ನೆರವಾಗುವ ಚಿಕಿತ್ಸೆಯಾಗಿದೆ ಎಂದರು. ಚಿಕಿತ್ಸಾ ವಿಧಾನಗಳ ಬಗ್ಗೆ ಮಾತನಾಡುತ್ತಾ, ದೀರ್ಘಕಾಲದ ಡಯಾಲಿಸಿಸ್‌ಗೆ 'ಆರ್ಟೀರಿಯೋವೆನಸ್ ಫಿಸ್ಟುಲಾ' ಅತ್ಯಂತ ಸುರಕ್ಷಿತ ಮತ್ತು ಪರಿಣಾಮಕಾರಿ ವಿಧಾನವಾಗಿದ್ದು, ಭಯದಿಂದ ಇದನ್ನು ವಿಳಂಬ ಮಾಡಬಾರದು ಎಂದರು.

ಮೂತ್ರಪಿಂಡ ಕ್ಯಾನ್ಸರ್‌ಗೆ ಆಧುನಿಕ ಶಸ್ತ್ರ ಚಿಕಿತ್ಸೆ: ಯೂರಾಲಜಿ ತಜ್ಞ ಡಾ.ನವೀನ್ ಕುಮಾರ್ ರೆಡ್ಡಿ.ಎಂ ಮಾತನಾಡಿ, 'ರೋಬೋಟಿಕ್ ಪಾರ್ಶಿಯಲ್ ನೆಫ್ರೆಕ್ಟಮಿ' ತಂತ್ರಜ್ಞಾನದ ಮೂಲಕ ಇಡೀ ಮೂತ್ರಪಿಂಡವನ್ನು ತೆಗೆಯುವ ಬದಲಿಗೆ ಕೇವಲ ಕ್ಯಾನ್ಸರ್ ಗಡ್ಡೆಯನ್ನು ಮಾತ್ರ ತೆಗೆದು ಆರೋಗ್ಯಕರ ಭಾಗವನ್ನು ಉಳಿಸಿಕೊಳ್ಳಲು ಸಾಧ್ಯವಿದೆ ಎಂದರು. ಕಿಡ್ನಿ ಕ್ಯಾನ್ಸರ್ ಬಹುಪಾಲು ಲಕ್ಷಣ ರಹಿತವಾಗಿ ಬೆಳೆಯುವುದರಿಂದ ವರ್ಷಕ್ಕೊಮ್ಮೆ ಅಲ್ಟ್ರಾ ಸೌಂಡ್ ಪರೀಕ್ಷೆ ಮಾಡಿಸಿಕೊಳ್ಳುವುದು ಆರಂಭಿಕ ಪತ್ತೆಗೆ ಸಹಕಾರಿ. ಈ ರೋಬೋಟಿಕ್ ವಿಧಾನವು ಹೆಚ್ಚಿನ ನಿಖರತೆ, ಕಡಿಮೆ ನೋವು ಮತ್ತು ರೋಗಿಗಳು ಶೀಘ್ರವಾಗಿ ಚೇತರಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದರು.

ಯುವಜನರಲ್ಲಿ ಜೀವನಶೈಲಿಯ ಜಾಗೃತಿ ಅಗತ್ಯ: ಮಣಿಪಾಲ್ ಆಸ್ಪತ್ರೆಯ ನೆಫ್ರಾಲಜಿ ಮತ್ತು ಟ್ರಾನ್ಸ್‌ಪ್ಲಾಂಟ್ ವೈದ್ಯ ಡಾ. ರೋಹನ್ ಆಗಸ್ಟಿನ್, ಯುವಕರಲ್ಲಿ ಕಾಣುವ ಹೈಪರ್‌ಟೆನ್ಷನ್ ಪ್ರಕರಣಗಳಲ್ಲಿ ಸುಮಾರು ಶೇ.60ರಿಂದ 70ರಷ್ಟು ಪ್ರಕರಣಗಳು ಜೀವನಶೈಲಿ ಸಂಬಂಧಿತ ಕಾರಣಗಳಿಗೆ ಸೇರಿವೆ. ಸ್ಥೂಲಕಾಯ, ಅತಿಯಾದ ಉಪ್ಪಿನ ಸೇವನೆ, ಧೂಮಪಾನ, ದೈಹಿಕ ಚಟುವಟಿಕೆಗಳ ಕೊರತೆ ಹಾಗೂ ನಿದ್ರೆ ಸಂಬಂಧಿತ ಅಸ್ವಸ್ಥತೆಗಳು ಇದಕ್ಕೆ ಪ್ರಮುಖ ಕಾರಣಗಳಾಗಿವೆ. ಮೂತ್ರಪಿಂಡ ಸಮಸ್ಯೆಗಳನ್ನು ಹಲವು ವೇಳೆ 'ಮೌನ ಕಾಯಿಲೆ' ಎಂದು ಕರೆಯಲಾಗುತ್ತದೆ, ಏಕೆಂದರೆ ಇವು ಆರಂಭಿಕ ಹಂತದಲ್ಲಿ ಸ್ಪಷ್ಟ ಲಕ್ಷಣಗಳನ್ನು ತೋರಿಸುವುದಿಲ್ಲ. ಆದ್ದರಿಂದ ಯುವಕರು ಸರಳ ರಕ್ತ ಮತ್ತು ಮೂತ್ರ ಪರೀಕ್ಷೆಗಳ ಮೂಲಕ ನಿಯಮಿತ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯ ಎಂದು ಸಲಹೆ ನೀಡಿದರು.

ರಕ್ತದೊತ್ತಡ, ಸೋಂಕುಗಳ ಜಾಗೃತಿ ಅಗತ್ಯ: ಯುರೊಲೊಜಿಸ್ಟ್ ಡಾ. ಸೂರ್ಯಕಾಂತ್ ಚೌಬೆ ಮಾತನಾಡಿ, ಹೈಪರ್‌ಟೆನ್ಷನ್ ಹೊಂದಿರುವವರಲ್ಲಿ ಕೇವಲ ಶೇ.50ರಷ್ಟು ಜನರಿಗೆ ಮಾತ್ರ ತಮ್ಮ ಸಮಸ್ಯೆಯ ಬಗ್ಗೆ ತಿಳಿದಿರುತ್ತದೆ. ಈ ಪೈಕಿ ಕೇವಲ ಶೇ.20 ಜನರಲ್ಲೇ ರಕ್ತದೊತ್ತಡ ಸಮರ್ಪಕವಾಗಿ ನಿಯಂತ್ರಣದಲ್ಲಿರುತ್ತದೆ. ಹೈಪರ್‌ಟೆನ್ಷನ್‌ನಿಂದ ಮಾತ್ರವಲ್ಲದೇ ಪದೇ ಪದೇ ಕಾಣಿಸಿಕೊಳ್ಳುವ ಮೂತ್ರನಾಳದ ಸೋಂಕುಗಳು (ಯುಟಿಐ), ಕಿಡ್ನಿ ಕಲ್ಲುಗಳು ಸಹ ಮೂತ್ರಪಿಂಡದ ವೈಫಲ್ಯದ ಲಕ್ಷಣಗಳಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಯೂರಿನ್ ಕಲ್ಚರ್ ಮತ್ತು ಅಲ್ಟ್ರಾ ಸೌಂಡ್ ಪರೀಕ್ಷೆಯ ಮೂಲಕ ಹೆಚ್ಚಿನ ವೈದ್ಯಕೀಯ ಮೌಲ್ಯಮಾಪನ ಮಾಡಿಸಿಕೊಳ್ಳುವುದು ಸೂಕ್ತ ಎಂದರು.

ಪರ್ಯಾಯ ಔಷಧಿಗಳಿಂದ ಅಪಾಯ: ನೆಫ್ರಾಲಜಿ ಮತ್ತು ಟ್ರಾನ್ಸ್‌ಪ್ಲಾಂಟ್ ವೈದ್ಯ ಡಾ.ಮೊಹಮ್ಮದ್ ಫಹಾದ್ ಖಾನ್, ನಿಯಂತ್ರಣವಿಲ್ಲದೆ ಬಳಸಲಾಗುವ ಹರ್ಬಲ್ ಔಷಧಿಗಳ ಬಗ್ಗೆ ಎಚ್ಚರ ವಹಿಸಬೇಕು. ಇವು 'ಪ್ರಾಕೃತಿಕ' ಎಂದು ಪ್ರಚಾರವಾಗುತ್ತಿದ್ದರೂ, ಇವುಗಳಲ್ಲಿ ಸೀಸ, ಆರ್ಸೆನಿಕ್‌ನಂತಹ ಹಾನಿಕಾರಕ ಲೋಹಗಳು ಅಥವಾ ಸ್ಟಿರಾಯ್ಡ್‌ಗಳಿರುವ ಸಾಧ್ಯತೆಯಿದೆ. ಇವು ಮೂತ್ರಪಿಂಡಗಳಿಗೆ ತೀವ್ರ ಹಾನಿ ಉಂಟುಮಾಡಿ, ಡಯಾಲಿಸಿಸ್ ಅಗತ್ಯವಾಗುವ ಮಟ್ಟಿಗೆ ಮೂತ್ರಪಿಂಡ ವೈಫಲ್ಯವನ್ನು ವೇಗವಾಗಿ ಹೆಚ್ಚಿಸುತ್ತವೆ ಎಂದರು.



'ಹಿಮೋಡಿಯಾಫಿಲ್ಟ್ರೇಷನ್ ವಿಧಾನದಲ್ಲಿ ಡಿಫ್ಯೂಷನ್ ಮತ್ತು ಕನ್ವೆಕ್ಷನ್ ಎರಡೂ ಪ್ರಕ್ರಿಯೆಗಳು ಸೇರಿ ಕೆಲಸ ಮಾಡುತ್ತವೆ. ಇದರಿಂದ ಸಾಮಾನ್ಯ ಡಯಾಲಿಸಿಸ್‌ನಿಗಿಂತ ದೇಹದಲ್ಲಿನ ಅನಾವಶ್ಯಕ ವಸ್ತುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಹೊರಹಾಕಲು ಸಾಧ್ಯವಾಗುತ್ತದೆ. ಮಣಿಪಾಲ್ ಆಸ್ಪತ್ರೆ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ನಮ್ಮ ವಿಶೇಷ ಡಯಾಲಿಸಿಸ್ ವ್ಯವಸ್ಥೆಗಳು ಅಲ್ಟ್ರಾ ಪ್ಯೂರ್ ವಾಟರ್ ತಂತ್ರಜ್ಞಾನ ಮತ್ತು ಸುಧಾರಿತ ಫಿಲ್ಟ್ರೇಶನ್ ವಿಧಾನಗಳನ್ನು ಬಳಸುತ್ತವೆ. ಇದರಿಂದ ವಿಷಪದಾರ್ಥಗಳ ನಿವಾರಣೆ ಉತ್ತಮವಾಗುವುದರೊಂದಿಗೆ ಹೃದಯದ ಸ್ಥಿರತೆ ಕಾಪಾಡಲು ಸಹಾಯವಾಗುತ್ತದೆ ಮತ್ತು ಚಿಕಿತ್ಸೆ ವೇಳೆ ರೋಗಿಗಳಿಗೆ ಹೆಚ್ಚು ಅನುಕೂಲಕರ ಅನುಭವ ದೊರಕುತ್ತದೆ. ಈ ರೀತಿಯ ಸುಧಾರಿತ ಡಯಾಲಿಸಿಸ್ ಸೌಲಭ್ಯಗಳು ಟ್ರಾನ್ಸ್‌ಪ್ಲಾಂಟ್ (ಕಿಡ್ನಿ ಕಸಿ)ಗಾಗಿ ಕಾಯುತ್ತಿರುವ ರೋಗಿಗಳಿಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ನೆರವಾಗುತ್ತವೆ. ಜತೆಗೆ, ಅವರ ಜೀವನಮಟ್ಟವನ್ನು ಗಮನಾರ್ಹವಾಗಿ ಉತ್ತಮಗೊಳಿಸುತ್ತವೆ.'

ಡಾ.ಎಚ್.ಸುದರ್ಶನ್ ಬಲ್ಲಾಳ್, ಅಧ್ಯಕ್ಷರು, ಮಣಿಪಾಲ್ ಆಸ್ಪತ್ರೆಗಳು.

ಅತ್ಯಾಧುನಿಕ ಸೌಕರ್ಯ

ಬೆಂಗಳೂರಿನ ಹಳೆ ವಿಮಾನ ನಿಲ್ದಾಣ ರಸ್ತೆ ಮಣಿಪಾಲ್ ಆಸ್ಪತ್ರೆಯಲ್ಲಿ ಕಿಡ್ನಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಅತ್ಯಾಧುನಿಕ ಡಯಾಲಿಸಿಸ್ ಘಟಕ, ರೋಬೋಟಿಕ್ ಚಿಕಿತ್ಸಾ ಸೌಲಭ್ಯ ಮತ್ತು ನುರಿತ ವೈದ್ಯಕೀಯ ತಂಡವಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಅಕ್ರಮ ಗಣಿಗಾರಿಕೆ: ನಷ್ಟದ ವರದಿ ನೀಡಿ

ನಿವೃತ್ತ ನ್ಯಾಯಮೂರ್ತಿ ಧುಲಿಯಾ ಸಮಿತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬಳ್ಳಾರಿ ಹಾಗೂ ಆಂಧ್ರ ಪ್ರದೇಶದ ಗಡಿ ಭಾಗದಲ್ಲಿ ಅಕ್ರಮ ಗಣಿಗಾರಿಕೆಯಿಂದ ಸರ್ಕಾರಿ ಬೊಕ್ಕಸಕ್ಕೆ ಆಗಿರುವ ಅಂದಾಜು ನಷ್ಟದ ಬಗ್ಗೆ ವರದಿ ಸಲ್ಲಿಸುವಂತೆ ನಿವೃತ್ತ ನ್ಯಾಯಮೂರ್ತಿ ಸುಧಾಂಶು ಧುಲಿಯಾ ನೇತೃತ್ವದ ಸಮಿತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.


ಓಬಳಾಪುರಂ ಗಣಿ ಕಂಪನಿಯ (ಓಎಂಸಿ) ಗಣಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಗುತ್ತಿಗೆಗೆ ಪಡೆದ ಪ್ರದೇಶಗಳು ಮತ್ತು ಮೀಸಲು ಅರಣ್ಯ ಪ್ರದೇಶಗಳ ಗಡಿಗಳನ್ನು ಗುರುತಿಸಿ ವರದಿ ಸಲ್ಲಿಸಲು ಸಮಿತಿಗೆ ಸುಪ್ರೀಂ ಕೋರ್ಟ್ ಆರು ವಾರಗಳ ಕಾಲಾವಕಾಶ ನೀಡಿದೆ.

ಓಎಂಸಿ ಗಣಿ ಅಕ್ರಮ ಪ್ರಕರಣದಲ್ಲಿ ವಿವಿಧ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠವು ಈ ನಿರ್ದೇಶನ ನೀಡಿದೆ.

ಮೀಸಲು ಅರಣ್ಯ ಪ್ರದೇಶ ಅತಿಕ್ರಮಣವಾಗಿದೆಯೇ? ಆಗಿದ್ದರೆ ಯಾರಿಂದ? ಗಣಿ ಗುತ್ತಿಗೆ ಪಡೆದ ಪ್ರದೇಶದ ಗಡಿಗಳು ಮೀಸಲು ಅರಣ್ಯ ಪ್ರದೇಶಗಳನ್ನು ಅತಿಕ್ರಮಣ ಮಾಡಿದೆಯೇ? ಅಕ್ರಮ ಗಣಿಗಾರಿಕೆ ಅಥವಾ ಇತರ ಅನಧಿಕೃತ ಚಟುವಟಿಕೆಗಳ ಪ್ರಮಾಣ ಎಷ್ಟು? ಎಂಬುದರ ಕುರಿತು ಬೆಳಕು ಚೆಲ್ಲುವಂತೆ ಸಮಿತಿಗೆ ನ್ಯಾಯಪೀಠ ಸೂಚನೆ ನೀಡಿದೆ.

'ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ನಡುವಿನ ಅಂತರ-ರಾಜ್ಯ ಗಡಿ ವಿವಾದದ ಪರಿಣಾಮವಾಗಿ, ಗಣಿಗಾರಿಕೆ ಚಟುವಟಿಕೆಗಳನ್ನು 2010ರಲ್ಲಿ ನಿಷೇಧಿಸಲಾಗಿತ್ತು. ಅದಾದ ಬಳಿಕವೂ, ವಿವಿಧ ಸ್ಥಳಗಳಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಅನಧಿಕೃತ ಚಟುವಟಿಕೆಗಳು ನಿರಂತರವಾಗಿ ಮುಂದುವರಿದಿವೆ. ಅಕ್ರಮ ಗಣಿಗಾರಿಕೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿದೆ. ಆದರೆ, ತನಿಖೆಯಿಂದ ನಿರ್ದಿಷ್ಟ ಫಲಿತಾಂಶ ಹೊರಬಂದಿಲ್ಲ' ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ವರದಿ ಸಲ್ಲಿಕೆಗೆ ಮೂರು ತಿಂಗಳ ಕಾಲಾವಕಾಶ



ನ್ಯಾಯಮೂರ್ತಿ ಧುಲಿಯಾ ನೇತೃತ್ವದ ಸಮಿತಿಯನ್ನು 2025ರ ಸೆಪ್ಟೆಂಬರ್‌ನಲ್ಲಿ ರಚಿಸಿದ್ದ ಸುಪ್ರೀಂ ಕೋರ್ಟ್, ವರದಿ ಸಲ್ಲಿಕೆಗೆ ಮೂರು ತಿಂಗಳ ಕಾಲಾವಕಾಶ ನೀಡಿತ್ತು.

ಆಂಧ್ರಪ್ರದೇಶದಲ್ಲಿರುವ ಓಬಳಾಪುರಂ ಗಣಿ ಕಂಪನಿಯ ಗಣಿ ಗುತ್ತಿಗೆ ಪ್ರದೇಶಗಳನ್ನು ಖರೀದಿಸಿದ್ದ ರಾಜ್ಯದ ಆಗಿನ ಸಚಿವ ಜಿ. ಜನಾರ್ದನ ರೆಡ್ಡಿ ಕುಟುಂಬ, ಅಂತರ ರಾಜ್ಯ ಗಡಿ ಗುರುತುಗಳನ್ನೇ ಸ್ಫೋಟಿಸಿ, ರಾಜ್ಯದ ಭೂ ಪ್ರದೇಶವನ್ನು ಅತಿಕ್ರಮಿಸಿ ಅಕ್ರಮ ಗಣಿಗಾರಿಕೆ ನಡೆಸಿದ ಆರೋಪ 2007ರಲ್ಲಿ ಕೇಳಿಬಂದಿತ್ತು.

ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸಿದ್ದ ಹಿಂದಿನ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಅವರು ವರದಿ ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್ ಆದೇಶದಂತೆ ತನಿಖೆ ನಡೆಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ), ಅಕ್ರಮ ಗಣಿಗಾರಿಕೆಯಿಂದ ಅಂತರ ರಾಜ್ಯ ಗಡಿ ಗುರುತುಗಳು ನಾಶವಾಗಿರುವುದನ್ನು ದೃಢಪಡಿಸಿತ್ತು.

ಪ್ರಾಣೇಶ್ ಪ್ರಕರಣ: ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹೈಕೋರ್ಟ್ ಆದೇಶ ಪ್ರಶ್ನಿಸಿ ವಿಧಾನ ಪರಿಷತ್ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಪ್ರಾಣೇಶ್, ಪರಾಜಿತ ಅಭ್ಯರ್ಥಿ ಎ.ವಿ.ಗಾಯತ್ರಿ ಶಾಂತೇಗೌಡ ಹಾಗೂ ಚುನಾವಣಾ ಆಯೋಗದ ವಕೀಲರ ವಾದ ಆಲಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಪೀಠವು ಲಿಖಿತ ಪ್ರಮಾಣಪತ್ರ ಸಲ್ಲಿಸುವಂತೆ ವಕೀಲರಿಗೆ ಸೂಚಿಸಿತು.

ಗಾಯತ್ರಿ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ, 'ಪ್ರಾಣೇಶ್ ಆಯ್ಕೆಯಾಗಿ ನಾಲ್ಕು ವರ್ಷಗಳು ಈಗಾಗಲೇ ಕಳೆದಿವೆ. ಅವರು ಅಧಿಕಾರದ ಸುಖ ಅನುಭವಿಸುತ್ತಿದ್ದಾರೆ. ಇದು ಸರಿಯಲ್ಲ' ಎಂದರು.

'ಹಿಂದಿನ ಸರ್ಕಾರದ ಅವಧಿಯಲ್ಲಿ (ಬಿಜೆಪಿ) ನಾಮನಿರ್ದೇಶನಗೊಂಡ ಸದಸ್ಯರು ಬಿಜೆಪಿ ಅಭ್ಯರ್ಥಿ ಪರ ಮತ ಚಲಾಯಿಸಿದ್ದಾರೆ. ರಾಷ್ಟ್ರಪತಿ ಚುನಾವಣೆಯಲ್ಲೂ ನಾಮನಿರ್ದೇಶಿತ ಸಂಸದರಿಗೆ ಮತದಾನದ ಹಕ್ಕು ಇಲ್ಲ. ಆದರೆ, ವಿಧಾನ ಪರಿಷತ್ ಚುನಾವಣೆಯಲ್ಲಿ ನಿಯಮಬಾಹಿರವಾಗಿ ಮತದಾನದ ಹಕ್ಕು ನೀಡಲಾಗಿದೆ' ಎಂದರು.

ಪ್ರಾಣೇಶ್ ಪರ ವಾದ ಮಂಡಿಸಿದ ವಕೀಲರು, 'ಪರಿಷತ್ ಚುನಾವಣೆಯ ಫಲಿತಾಂಶ ಪ್ರಕಟವಾಗುವವರೆಗೆ ಎದುರಾಳಿ ಅಭ್ಯರ್ಥಿ ಯಾವುದೇ ತಕರಾರು ಎತ್ತಿರಲಿಲ್ಲ. ಮತದಾರರ ಪಟ್ಟಿ ಬಗ್ಗೆ ಆಕ್ಷೇಪಣೆಗಳಿದ್ದರೆ ಕೂಡಲೇ ಆಕ್ಷೇಪಣೆ ಸಲ್ಲಿಸಬೇಕಿತ್ತು. ಚುನಾವಣೆಯಲ್ಲಿ ಸೋತ ಬಳಿಕ ಹೈಕೋರ್ಟ್ ಮೊರೆ ಹೋಗಿದ್ದಾರೆ. ಹೈಕೋರ್ಟ್ ಈ ಎಲ್ಲ ಅಂಶಗಳನ್ನು ಪರಿಗಣಿಸದೆಯೇ ತೀರ್ಪು ನೀಡಿದೆ' ಎಂದರು. ಚುನಾವಣಾ ಆಯೋಗದ ಪರ ವಕೀಲರು, 'ಹೈಕೋರ್ಟ್ ತೀರ್ಪು ನೀಡಿದ ಬಳಿಕ ನಾಮನಿರ್ದೇಶಿತ ಸದಸ್ಯರಿಗೆ ಚುನಾವಣೆಯಲ್ಲಿ ಮತದಾನದ ಹಕ್ಕು ನೀಡಿಲ್ಲ. ಈ ಪ್ರಕರಣದಲ್ಲಿ ಹೈಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿಯನ್ನೂ ಸಲ್ಲಿಸಿಲ್ಲ. ನ್ಯಾಯಾಲಯದ ತೀರ್ಪನ್ನು ಪಾಲಿಸುತ್ತೇವೆ' ಎಂದು ಸ್ಪಷ್ಟಪಡಿಸಿದರು.

'ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳ ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕು ಇಲ್ಲ' ಎಂದು ಹೈಕೋರ್ಟ್ 2022ರಲ್ಲಿ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಪ್ರಾಣೇಶ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

2021ರ ಡಿಸೆಂಬರ್‌ನಲ್ಲಿ ನಡೆದಿದ್ದ ಚುನಾವಣೆ

ಚಿಕ್ಕಮಗಳೂರು ಕ್ಷೇತ್ರದಿಂದ ವಿಧಾನಪರಿಷತ್ ಸ್ಥಾನಕ್ಕೆ 2021ರ ಡಿಸೆಂಬರ್‌ನಲ್ಲಿ ಚುನಾವಣೆ ನಡೆದಿತ್ತು. ಚಲಾವಣೆಯಾಗಿದ್ದ 2,410 ಮತಗಳ ಪೈಕಿ 39 ಮತಗಳು ಅಸಿಂಧುವಾಗಿದ್ದವು. ಪ್ರಾಣೇಶ್ 1,188 ಮತಗಳನ್ನು ಪಡೆದಿದ್ದರು. ಗಾಯತ್ರಿ ಶಾಂತೇಗೌಡ ಅವರು 1,182 ಮತಗಳನ್ನ ಗಳಿಸಿದ್ದರು. ಪ್ರಾಣೇಶ್ ಆರು ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದರು.

'ಶೃಂಗೇರಿ, ಕೊಪ್ಪ, ಎನ್.ಆರ್.ಪುರ, ಮೂಡಿಗೆರೆ ಪಟ್ಟಣ ಪಂಚಾಯಿತಿಗಳ 12 ನಾಮನಿರ್ದೇಶಿತ ಸದಸ್ಯರು ಮತದಾನ ಮಾಡಿದ್ದರು. ಅವರಿಗೆ ಮತದಾನ ಮಾಡಲು ಅವಕಾಶ ಇಲ್ಲ' ಎಂದು ಗಾಯತ್ರಿ ಶಾಂತೇಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು.

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತ

ಹೋಟೆಲ್, ವಸತಿನಿಲಯಕ್ಕೆ ತಟ್ಟಿದ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತವಾಗಿರುವ ಕಾರಣ ಬೆಂಗಳೂರು ನಗರದ ಹೋಟೆಲ್, ಪೇಯಿಂಗ್ ಗೆಸ್ಟ್‌ಗಳು (ಪಿ.ಜಿ) ಸರ್ಕಾರಿ ಶಾಲೆಗಳು, ವಸತಿನಿಲಯಗಳು, ಕಲ್ಯಾಣಮಂಟಪಗಳಿಗೂ ಬಿಸಿ ತಟ್ಟಿದೆ. ಕೆಲ ಹೋಟೆಲ್‌ಗಳ ಮಾಲೀಕರು ಹೋಟೆಲ್ ಮೆನುವಿನಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ.

ಕಡಿಮೆ ಅನಿಲ ಬಳಸಿ ಮಾಡುವ ಅಕ್ಕಿಯ ಪದಾರ್ಥಗಳಾದ ಚಿತ್ರಾನ್ನ, ಪುಲಾವ್, ಬಿಸಿಬೇಳೆ ಭಾತ್ ತಯಾರಿಸಲು ಹೋಟೆಲ್‌ಗಳಲ್ಲಿ ಆದ್ಯತೆ ನೀಡಲಾಗುತ್ತಿದೆ. 'ಎಣ್ಣೆಯಲ್ಲಿ ಕರಿದ ತಿಂಡಿಗಳನ್ನು ಕೇಳಬೇಡಿ' ಎನ್ನುವ ಫಲಕಗಳು ಹೋಟೆಲ್‌ಗಳಲ್ಲಿ ಕಾಣಿಸುತ್ತಿವೆ.

'ವಾಣಿಜ್ಯ ಸಿಲಿಂಡರ್‌ಗಳ ದಾಸ್ತಾನು ಇಲ್ಲದಿರುವ ಕಾರಣ ಎಣ್ಣೆಯಲ್ಲಿ ಕರಿಯುವ ತಿಂಡಿಗಳನ್ನು ತಯಾರಿಸದಿರಲು ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆ. ಇದರಿಂದ ಹೋಟೆಲ್‌ಗಳಿಗೆ ಶೇ 20ರಿಂದ 30ರಷ್ಟು ಆದಾಯ ಕುಸಿಯುವ ಸಾಧ್ಯತೆ ಇದೆ' ಎಂದು ಹೋಟೆಲ್ ಮಾಲೀಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಂಗಳೂರು ನಗರದಲ್ಲಿ 15 ಸಾವಿರಕ್ಕೂ ಹೆಚ್ಚು ಪಿ.ಜಿಗಳಿದ್ದು, 8 ಲಕ್ಷದಿಂದ 10 ಲಕ್ಷ ಮಂದಿ ಪಿ.ಜಿಗಳಲ್ಲಿ ವಾಸಿಸುತ್ತಿದ್ದಾರೆ. ವಾಣಿಜ್ಯ ಸಿಲಿಂಡರ್‌ಗಳ ಕೊರತೆ ಆಗಿರುವ ಕಾರಣ ನಮ್ಮ ಗ್ರಾಹಕರಿಗೆ ಸೋಮವಾರದಿಂದ ಶುಕ್ರವಾರದವರೆಗೆ ದಿನಕ್ಕೆ ಎರಡು ಬಾರಿ ಹಾಗೂ ಶನಿವಾರ ಹಾಗೂ ಭಾನುವಾರ ಮೂರು ಹೊತ್ತು ಊಟ ನೀಡುವಂತೆ ನಗರದ ಎಲ್ಲ ಪಿ.ಜಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಪಿ.ಜಿ ಮಾಲೀಕರ ಕಲ್ಯಾಣ ಸಂಘದ ಅಧ್ಯಕ್ಷ ಡಿ.ಟಿ. ಅರುಣ್‌ಕುಮಾರ್ ತಿಳಿಸಿದರು.

'ಪಿ.ಜಿಗಳಲ್ಲಿ ಇಂಡಕ್ಷನ್ ಸ್ಟೌ ಬಳಕೆ ಮಾಡಬೇಕು. ಎಲೆಕ್ಟ್ರಿಕ್ ರೈಸ್ ಕುಕ್ಕರ್‌ಗಳನ್ನು ಬಳಸಬೇಕು. ಒಂದೇ ಪಿ.ಜಿಗಳಲ್ಲಿ ಆಹಾರ ತಯಾರಿಸಿ ಇತರೆ ಪಿ.ಜಿಗಳಿಗೆ ವಿತರಿಸುವಂತೆ ಎಲ್ಲ ಪಿ.ಜಿಗಳಿಗೆ ಸೂಚನೆ ನೀಡಲಾಗಿದೆ' ಎಂದು ವಿವರಿಸಿದರು.



ಎಲ್‌ಪಿಜಿ ಸಿಲಿಂಡರ್ ಕೊರತೆ ಉಂಟಾಗಿರುವುದರಿಂದ ಕಟ್ಟಿಗೆಗೆ ಬೇಡಿಕೆ ಬರುವ ನಿರೀಕ್ಷೆಯಲ್ಲಿ ಬೆಂಗಳೂರಿನ ಶಿವಾಜಿನಗರದ ಕಟ್ಟಿಗೆ ವ್ಯಾಪಾರಿಗಳು ಇರುವುದು ಕಂಡು ಬಂತು ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಎಲೆಕ್ಟ್ರಿಕ್ ಸ್ಟೌ ಮೊರೆ

'ಇಂಡಕ್ಷನ್ ಸ್ಟೌ ಬಳಸಿಕೊಂಡು ಕಾಫಿ–ಟೀ ತಯಾರಿಸಲಾಗುತ್ತಿದೆ. ಇದರಿಂದ ಕನಿಷ್ಠ 10 ಕೆ.ಜಿ ಎಲ್‌ಪಿಜಿ ಅನಿಲ ಉಳಿಸಬಹುದು. ₹2 ಲಕ್ಷ ಬೆಲೆಯ ಎಲೆಕ್ಟ್ರಿಕ್ ದೋಸೆ ಒಲೆ ಖರೀದಿಸುವ ಕುರಿತು ಚಿಂತನೆ ಮಾಡುತ್ತಿದ್ದೇವೆ. ಎಲೆಕ್ಟ್ರಿಕ್ ಒಲೆಗೆ ಬೇಕಾಗುವ ಪಾತ್ರೆಗಳನ್ನು ಖರೀದಿಸಬೇಕು. ನಮ್ಮ ಉದ್ಯಮ ಉಳಿಸಿಕೊಳ್ಳಬೇಕು ಹಾಗೂ ಗ್ರಾಹಕರಿಗೆ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತಿದ್ದೇವೆ' ನಿಸರ್ಗ ಗ್ರ್ಯಾಂಡ್‌ನ ಮಾಲೀಕ ಎಸ್.ಪಿ. ಕೃಷ್ಣರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಅಕ್ರಮ ದಾಸ್ತಾನಿಗೆ ಕಡಿವಾಣ ಹಾಕಿ'

'ಕಾಳಸಂತೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಮಾರಾಟ ಮತ್ತು ಅಕ್ರಮ ದಾಸ್ತಾನು ಆಗದಂತೆ ಪೊಲೀಸ್, ಸಾರಿಗೆ ಹಾಗೂ ಆಹಾರ ಇಲಾಖೆಯ ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾ ವಹಿಸಬೇಕು' ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚನೆ ನೀಡಿದ್ದಾರೆ.

ಲಭ್ಯ ಇರುವ ಸಿಲಿಂಡರ್ ಗಳಲ್ಲಿ ಶೇ 50ರಷ್ಟನ್ನು ಹೋಟೆಲ್‌ಗಳಿಗೆ ಪೂರೈಸುವಂತೆ ಹೋಟೆಲ್ ಮಾಲೀಕರ ಸಂಘವು ಸಭೆಯಲ್ಲಿ ಮನವಿ ಮಾಡಿತು. ಹೆಚ್ಚು ಸಿಲಿಂಡರ್‌ಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ಈ ಹಂತದಲ್ಲಿ ನೀವು ಸಹಕಾರ ನೀಡಬೇಕು ಎಂದು ಶಾಲಿನಿ ರಜನೀಶ್ ಹೇಳಿದು. 'ಎಲ್‌ಪಿಜಿಗೆ ಸಂಬಂಧಿಸಿದ ಸಾರ್ವಜನಿಕರ ಅಹವಾಲು ಆಲಿಸಲು ಸಹಾಯವಾಣಿ ಆರಂಭಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು' ಎಂದು ಬೆಂಗಳೂರು ಹೋಟೆಲ್‌ಗಳ ಮಾಲೀಕರ ಸಂಘದ ಗೌರವ ಅಧ್ಯಕ್ಷ ಪಿ.ಸಿ ರಾವ್ ಹೇಳಿದರು.

ಉಪಾಹಾರದಲ್ಲಿ ಬದಲಾವಣೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಅಡುಗೆ ಅನಿಲ ಸಿಲಿಂಡರ್ ಕೊರತೆ ಕಾರಣ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಬೆಳಗಿನ ಉಪಾಹಾರ ವಿತರಣೆಯಲ್ಲಿ ಬುಧವಾರದಿಂದ ಬದಲಾವಣೆ ಮಾಡಲಾಗಿದೆ. ಬೇಯಿಸುವ ತಿನಿಸುಗಳ ಬದಲಿಗೆ ಅವಲಕ್ಕಿ, ಮೊಸರು ವಿತರಣೆ ಮಾಡಲಾಗುತ್ತಿದೆ. ಸದ್ಯ ದೇವಸ್ಥಾನದಲ್ಲಿ ಮೂರು ದಿನಗಳವರೆಗೆ ಬೇಕಾಗುವಷ್ಟು ಸಿಲಿಂಡರ್‌ಗಳು ಮಾತ್ರ ಲಭ್ಯ ಇವೆ. ಪೂರೈಕೆ ಆಗದೆ ಇದ್ದಲ್ಲಿ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ. ಎಂದು ದೇವಸ್ಥಾನದ ಮೂಲಗಳು ತಿಳಿಸಿವೆ.

ತಿಂಗಳಿಗೊಂದು ಸಿಲಿಂಡರ್

ಒಂದನೇ ಪುಟದಿಂದ...

'ಯುದ್ಧ ಮುಂದುವರಿದರೂ ಗೃಹ ಬಳಕೆ ಬೇಕಾದ ಸಿಲಿಂಡರ್‌ಗಳಿಗೆ ಕೊರತೆಯಾಗದು. ಅಗತ್ಯ ದಾಸ್ತಾನು ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಶೇ 20ರಿಂದ ಶೇ 30 ಎಲ್‌ಪಿಜಿ ಉತ್ಪಾದನೆ ದೇಶಿಯವಾಗಿಯೇ ಆಗುತ್ತಿದೆ. ಉಳಿದದ್ದು ಹೊರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. 14 ಕೆ.ಜಿ. ತೂಕದ ಒಂದು ಸಿಲಿಂಡರ್ ಅನ್ನು 4–5 ಜನರಿರುವ ಒಂದು ಕುಟುಂಬಕ್ಕೆ ತಿಂಗಳಿಗೆ ಒಂದು ನೀಡಲಾಗುವುದು' ಎಂದರು.

ಕಾಳಸಂತೆಯಲ್ಲಿ ಯಾರಾದರೂ ಸಿಲಿಂಡರ್ ಮಾರಲು ಪ್ರಯತ್ನಿಸಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಇದನ್ನು ತಡೆಗಟ್ಟಲೆಂದೇ ಕೇಂದ್ರ ಸರ್ಕಾರ ಎಸ್ಮಾ ಜಾರಿ ಮಾಡಿದೆ' ಎಂದು ಮುನಿಯಪ್ಪ ಹೇಳಿದರು.

ಸಿಲಿಂಡರ್ ಕೊರತೆಯಾಗದಂತೆ ಕ್ರಮ ಕೈಗೊಳ್ಳಲು ರಾಮಲಿಂಗಾರೆಡ್ಡಿ ಸೂಚನೆ

15 ದೇವಸ್ಥಾನಗಳಲ್ಲಿ 'ಪ್ರಸಾದ'ಕ್ಕೆ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಅನಿಲ ಪೂರೈಕೆಯ ಕೊರತೆಯಿಂದಾಗಿ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿರುವ ಪ್ರಮುಖ 15 ದೇವಸ್ಥಾನಗಳಲ್ಲಿ ಪ್ರಸಾದ ವಿನಿಯೋಗದಲ್ಲಿ ಸ್ವಲ್ಪ ಸಮಸ್ಯೆಯಾಗಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಕೆಲವು ದೇವಸ್ಥಾನಗಳಲ್ಲಿ ಪ್ರಸಾದ ವಿತರಣೆಗೆ ತೊಂದರೆಯಾಗಿತ್ತು. ಯಾವ ದೇವಸ್ಥಾನದಲ್ಲಿಯೂ ಪ್ರಸಾದ ವಿನಿಯೋಗ, ಅನ್ನಸಂತರ್ಪಣೆಗೆ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲು ಮುಜರಾಯಿ ಇಲಾಖೆಯ ಆಯುಕ್ತರಿಗೆ ಸೂಚನೆ ನೀಡಿದ್ದೇನೆ. ದೇವಸ್ಥಾನದ ಆಡಳಿತ ಮಂಡಳಿಯವರಿಗೂ ಹೇಳಿದ್ದೇನೆ' ಎಂದು ಮಾಹಿತಿ ನೀಡಿದರು.

ದೇವಸ್ಥಾನಗಳಲ್ಲಿ ಭಕ್ತರಿಗೆ ಪ್ರಸಾದ ಸ್ವೀಕರಿಸಿದರೆ ಮಾತ್ರ ಸಮಾಧಾನ ಆಗುತ್ತದೆ. ಯುದ್ಧ ಮುಂದುವರಿದರೆ ಸಮಸ್ಯೆಯು ಮುಂದುವರಿಯಬಹುದು. ಕಟ್ಟಿಗೆ ಒಲೆಯ ಮೊರೆ ಹೋಗಲು ಆಗುವುದಿಲ್ಲ. ಕಡಿಮೆ ಇಂಧನ ಬಳಕೆಯ ಪ್ರಸಾದ ತಯಾರಿಸುವ ಬಗ್ಗೆ ಯಾವುದೇ ತೀರ್ಮಾನವಾಗಿಲ್ಲ ಎಂದು ಹೇಳಿದರು.

ಗೋಬರ್ ಗ್ಯಾಸ್ ಮನೆ ಬಳಕೆಗೆ ಮಾತ್ರ ಸೀಮಿತವಾಗಿದೆ. ಕಟ್ಟಿಗೆ ಬಳಕೆ ನಿಂತಿದ್ದರಿಂದ ಕಾಡು ಉಳಿದಿದೆ. ಜನರು ಗ್ಯಾಸ್, ವಿದ್ಯುತ್‌ನ ಮೊರೆ ಹೋಗಿದ್ದಾರೆ ಎಂದರು.

'ದೇವಸ್ಥಾನಗಳಲ್ಲಿ ಸಮಸ್ಯೆ ಇಲ್ಲ'

'ಸಿಲಿಂಡರ್ ಕೊರತೆ ಇಲ್ಲದಂತೆ ನೋಡಿಕೊಳ್ಳಲಾಗಿದೆ. ಯಾವುದೇ ಸಮಸ್ಯೆ ಉಂಟಾಗಿಲ್ಲ' ಎಂದು ಮುಜರಾಯಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಘಾಟಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಅನ್ನಸಂತರ್ಪಣೆ, ಬನಶಂಕರಿ ದೇವಸ್ಥಾನದಲ್ಲಿ ಪ್ರಸಾದವಾಗಿ ನೀಡುವ ಪೊಂಗಲ್, ಪುಳಿಯೋಗರೆ, ರೈಸ್ ಭಾತ್ ತಯಾರಿಸಲು ಸಮಸ್ಯೆ ಉಂಟಾಗಿತ್ತು. ಇದೇ ರೀತಿ ರಾಜ್ಯದ ಹಲವು ದೇವಸ್ಥಾನಗಳಿಗೆ ಎಲ್‌ಪಿಜಿ ಸಿಲಿಂಡರ್ ಕೊರತೆ ಕಾಡಿತ್ತು.

ನಗರದ 8 ಕಡೆ ಅತ್ಯಾಧುನಿಕ ಸ್ವಾಗತ ಕಮಾನು

ನಿರ್ಮಾಣ ಕಾರ್ಯ ಶೀಘ್ರ ಪೂರೈಸಲು ಅಧಿಕಾರಿಗಳಿಗೆ ಬಿಡಿಎ ಆಯುಕ್ತ ಮಣಿವಣ್ಣನ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸಂಪರ್ಕಿಸುವ ಆರು ರಾಷ್ಟ್ರೀಯ ಹೆದ್ದಾರಿ ಹಾಗೂ ಎರಡು ರಾಜ್ಯ ಹೆದ್ದಾರಿಗಳಲ್ಲಿ ಅತ್ಯಾಧುನಿಕ ಸ್ವಾಗತ ಕಮಾನು ನಿರ್ಮಿಸುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮಣಿವಣ್ಣನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬಿಡಿಎಯ ವಿವಿಧ ಯೋಜನೆಗಳ ಪರಿಶೀಲನಾ ಸಭೆಯನ್ನು ಬುಧವಾರ ನಡೆಸಿದ ಅವರು, ಬಿಡಿಎ ಗಡಿಯಲ್ಲಿ ಸ್ವಾಗತ ಕಮಾನುಗಳನ್ನು ನಿರ್ಮಿಸಬೇಕು. ಸೂಕ್ತ ಜಾಗವನ್ನು ಗುರುತಿಸಿ, ರಸ್ತೆ ವಿಸ್ತರಣೆ ಹಾಗೂ ದೂರದೃಷ್ಟಿಯಿಂದ ಕಮಾನನ್ನು ನಿರ್ಮಿಸಬೇಕು. ನಗರಕ್ಕೆ ಪ್ರವೇಶಿಸುವವರಿಗೆ ಇದೊಂದು ಆಕರ್ಷಕ ಕೇಂದ್ರವನ್ನಾಗಿ ರೂಪಿಸಬೇಕು ಎಂದು ಹೇಳಿದರು.



ಮಣಿವಣ್ಣನ್

ವರ್ತೂರು ಹಾಗೂ ಬೆಳ್ಳಂದೂರು ಕೆರೆ ಹೂಳು ಎತ್ತುವುದು ಹಾಗೂ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಸ್ಥಳೀಯರು ಹಾಗೂ ಐಐಎಸ್‌ಸಿ ವಿಜ್ಞಾನಿಗಳೊಂದಿಗೆ ಮಣಿವಣ್ಣನ್ ಮಾತುಕತೆ ನಡೆಸಿದರು.

ವರ್ತೂರು ಮತ್ತು ಬೆಳ್ಳಂದೂರು ಕೆರೆಗಳ ಪುನಶ್ಚೇತನಕ್ಕೆ ಸಂಬಂಧಿಸಿದ ಯೋಜನೆಯ ಪ್ರಗತಿ, ಹಣಕಾಸಿನ ವೆಚ್ಚ, ತಾಂತ್ರಿಕ ವರದಿಗಳು ಮತ್ತು ಮಾಸಿಕ ಸ್ಥಿತಿಗತಿಗಳನ್ನು ಪ್ರಕಟಿಸಲು ಬಿಡಿಎ ವತಿಯಿಂದ ಒಂದು ಪ್ರತ್ಯೇಕ ವೆಬ್‌ಸೈಟ್ ಅಭಿವೃದ್ಧಿಪಡಿಸಲಾಗುವುದು ಎಂದು ಮಣಿವಣ್ಣನ್ ತಿಳಿಸಿದರು.

ಕೆರೆ ಪುನಶ್ಚೇತನ ಕಾಮಗಾರಿಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಪ್ರತಿ ತಿಂಗಳು ಸ್ಥಿತಿಗತಿ ಪರಿಶೀಲನಾ ಸಭೆ ಗಳನ್ನು ನಡೆಸಲಾಗುವುದು. ಪ್ರತಿ ಎರಡು ತಿಂಗಳಿಗೊಮ್ಮೆ ಸಮಗ್ರ ಪಾಲುದಾರರ ಸಭೆಗಳನ್ನು ನಡೆಸಲಾಗುವುದು. ಏಪ್ರಿಲ್ ಎರಡನೇ ಬುಧವಾರ ಎರಡೂ ಕೆರೆಗಳ ಸ್ಥಳ ಪರಿಶೀಲನೆ ನಡೆಸಲಾಗುವುದು ಎಂದು ಅವರು ಹೇಳಿದರು.

ವರ್ತೂರು ಕೆರೆಯಲ್ಲಿ ಹೂಳೆತ್ತುವ ಕಾಮಗಾರಿಗೆ ಸಂಬಂಧಿಸಿದಂತೆ ಒಂಬತ್ತು ಗುತ್ತಿಗೆದಾರರ ಬಿಲ್‌ಗಳನ್ನು ಪ್ರಕ್ರಿಯೆಗೊಳಿಸಿ ಪಾವತಿಸಲಾಗಿದೆ ಎಂದು ಬಿಡಿಎ ತಿಳಿಸಿದೆ. ತೆಗೆದು ಹಾಕಲಾದ ಹೂಳಿನ ಪ್ರಮಾಣ, ಹೂಳೆತ್ತಿದ ಸ್ಥಳಗಳು ಮತ್ತು ವಿಲೇವಾರಿ ಮಾಡಿದ ಸ್ಥಳಗಳ ವಿವರಗಳನ್ನು ಬಹಿರಂಗಪಡಿಸುವಂತೆ ಸಭೆಯಲ್ಲಿದ್ದ ನಾಗರಿಕ ಪ್ರತಿನಿಧಿ ಜಗದೀಶ್ ರೆಡ್ಡಿ ಕೇಳಿದರು.

ಬಿಡಿಎ ಸುದ್ದಿ

ಬೆಳ್ಳಂದೂರು ಹಾಗೂ ವರ್ತೂರು ಕೆರೆಯ ಸುತ್ತಲೂ ಹಾನಿಯಾಗಿರುವ ಬೇಲಿಯನ್ನು ತಕ್ಷಣವೇ ದುರಸ್ತಿ ಮಾಡಬೇಕು. ಬೇಲಿ ಇಲ್ಲದ ಭಾಗಗಳನ್ನು ಮರು ಸಮೀಕ್ಷೆ ಮಾಡಿ, ಬೇಲಿ ಹಾಕುವ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು.

ಮೇಲ್ವಿಚಾರಣೆ, ನಿರ್ವಹಣೆ ಮತ್ತು ತುರ್ತು ಪ್ರವೇಶಕ್ಕಾಗಿ ಕೆರೆಯ ಸುತ್ತಳತೆಯಲ್ಲಿ ಐದು ಪ್ರವೇಶ ದ್ವಾರಗಳನ್ನು ನಿರ್ವಹಿಸ ಲಾಗುವುದು. ಕೆರೆಗೆ ಕೊಳಚೆ ನೀರು, ಹೂಳು ಮತ್ತು ಕಸ ಸೇರುವುದನ್ನು ತಡೆಯಲು ಪ್ರಸ್ತುತ ಇರುವ ಒಳಹರಿವಿನ ವಿನ್ಯಾಸಗಳನ್ನು ತಾಂತ್ರಿಕವಾಗಿ ಮರು ಪರಿಶೀಲಿಸಲಾಗುವುದು ಎಂದು ಮಣಿವಣ್ಣನ್ ಭರವಸೆ ಅವರು ನೀಡಿದರು.

ಐಐಎಸ್ಸಿಯ ಪ್ರೊ. ಟಿ.ವಿ. ರಾಮಚಂದ್ರ, ನಾಗರಿಕ ಪ್ರತಿನಿಧಿಗಳಾದ ಝುಬಿ ಜಮಾಲ್, ನಿತ್ಯಾ ರಾಮಕೃಷ್ಣನ್, ಎಳಗೋವನ್, ವೆಂಕಟೇಶ್, ಬಿಡಿಎ ಸದಸ್ಯ ಎಂಜಿನಿಯರ್ ಶಾಂತ ರಾಜಣ್ಣ ಉಪಸ್ಥಿತರಿದ್ದರು.

10 ಕ್ರೀಡಾ ಕೇಂದ್ರ

ಬಿಡಿಎ ಪ್ರದೇಶಗಳಲ್ಲಿ 10 ಕ್ರೀಡಾ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆ ಇದ್ದು, ಇದನ್ನು ಕೂಡಲೇ ಅನುಷ್ಠಾನಗೊಳಿಸಬೇಕು. ಇಂದಿರಾನಗರ, ಕೆ.ಆರ್. ಮಾರುಕಟ್ಟೆ, ಮಲ್ಲೇಶ್ವರ ಸೇರಿದಂತೆ ವಿವಿಧೆಡೆ ಇರುವ ಬಿಡಿಎ ಮಾರುಕಟ್ಟೆಗಳನ್ನು ಮೇಲ್ದರ್ಜೆಗೇರಿಸಬೇಕು. ಹೆಬ್ಬಾಳ ಜಂಕ್ಷನ್ ಮೇಲ್ಸೇತುವೆ ಸೌಂದರ್ಯೀಕರಣ ಕಾರ್ಯ ಆರಂಭಿಸಬೇಕು ಎಂದು ಅಧಿಕಾರಿಗಳಿಗೆ ಮಣಿವಣ್ಣನ್ ಸೂಚಿಸಿದರು.

ವಸತಿ ಪ್ರದೇಶಗಳಲ್ಲಿ ರಸ್ತೆ ನಿರ್ಮಾಣ, ಕಂಠೀರವ ಸ್ಟೇಡಿಯಂ ಬಳಿಯ ಅಂಡರ್‌ಪಾಸ್ ಕಾಮಗಾರಿಗಳಿಗೆ ವೇಗ ನೀಡಬೇಕು ಎಂದರು.

ಎಲ್ಲೆಲ್ಲಿ ಸ್ವಾಗತ ಕಮಾನು?

ಮೈಸೂರು ರಸ್ತೆ, ಕನಕಪುರ ರಸ್ತೆ, ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಹಳೇ ಮದ್ರಾಸ್ ರಸ್ತೆ, ಹೊಸೂರು ರಸ್ತೆ ಹಾಗೂ ಬನ್ನೇರುಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ.

‘ರೈತರಿಗೆ ಪರ್ಯಾಯ ನಿವೇಶನ’

ಶಿವರಾಮ ಕಾರಂತ ಬಡಾವಣೆ ಕುರಿತು ಡಿಕೆಶಿ ಹೇಳಿಕೆ

ಬೆಂಗಳೂರು: ‘ಶಿವರಾಮ ಕಾರಂತ ಬಡಾವಣೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಅವರ ಮನವಿಯಂತೆ ಒಂದೇ ಜಾಗದಲ್ಲಿ ಪರ್ಯಾಯ ನಿವೇಶನ ನೀಡುವ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಗುವುದು’ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಿವರಾಮ ಕಾರಂತ ಬಡಾವಣೆಯಲ್ಲಿ ಜಮೀನು ಹಂಚಿಕೆ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ ಬಿಜೆಪಿಯ ಎಸ್.ಆರ್. ವಿಶ್ವನಾಥ್, ‘ಬಿಡಿಎ ವತಿಯಿಂದ ನಿರ್ಮಿಸಿರುವ ಈ ಬಡಾವಣೆಗೆ ಜಮೀನು ನೀಡಿರುವ ಭೂ ಮಾಲೀಕರಿಗೆ ಪರ್ಯಾಯ ನಿವೇಶನಗಳನ್ನು ತ್ವರಿತವಾಗಿ ಹಂಚಿಕೆ ಮಾಡಬೇಕು. ಬಡಾವಣೆಯ ಮುಖ್ಯ ರಸ್ತೆಗಳಿಗೆ ಹೊಂದಿಕೊಂಡಿರುವ ನಿವೇಶನಗಳನ್ನು ಕಾಯ್ದಿರಿಸಿರುವುದರಿಂದ ರೈತರಿಗೆ ಅನ್ಯಾಯವಾಗುತ್ತಿದೆ’ ಎಂದರು. ವಿರೋಧ ಪಕ್ಷದ ನಾಯಕ ಆರ್. ಅಶೋಕ ದನಿಗೂಡಿಸಿದರು.

‘ಬಡಾವಣೆಗಾಗಿ ಭೂಮಿ ಕೊಟ್ಟಿರುವ ರೈತರಿಗೆ ಶೇ 40 ಅಭಿವೃದ್ಧಿ ಹೊಂದಿದ ನಿವೇಶನ ಕೊಡಬೇಕಾಗಿದೆ. ಅವರು ಯಾವುದೇ ಪರಿಹಾರ ತೆಗೆದುಕೊಂಡಿಲ್ಲ. ರೈತರಿಗೆ ನಿವೇಶನ ಹಂಚಿದ ನಂತರ ಸಾರ್ವಜನಿಕರಿಗೆ ನಿವೇಶನ ಕೊಡುವಂತೆ ಹೈಕೋರ್ಟ್ ಹೇಳಿದೆ. ಆದರೆ, ರೈತರಿಗೆ ನಿವೇಶನ ಕೊಟ್ಟಿಲ್ಲ. ಅಲ್ಲದೆ, ಬಡಾವಣೆಯಲ್ಲಿನ 100 ಅಡಿ, 80 ಅಡಿ, 60 ಅಡಿ ಮುಖ್ಯ ರಸ್ತೆಗಳಿಗೆ ಹೊಂದಿಕೊಂಡಿರುವ ನಿವೇಶನಗಳನ್ನು ಕಾಯ್ದಿರಿಸಲಾಗಿದೆ. ಅದನ್ನು ವಾಣಿಜ್ಯ ಉದ್ದೇಶಕ್ಕೆ ಹರಾಜು ಹಾಕಬಾರದು. ಮುಖ್ಯ ರಸ್ತೆಗಳಲ್ಲಿನ ನಿವೇಶನಗಳನ್ನು ರೈತರಿಗೇ ಹಂಚಿಕೆ ಮಾಡಬೇಕು’ ಎಂದು ವಿಶ್ವನಾಥ್ ಮನವಿ ಮಾಡಿದರು.

ಅದಕ್ಕೆ ಉತ್ತರಿಸಿದ ಶಿವಕುಮಾರ್, ‘ಮುಖ್ಯ ರಸ್ತೆಗಳಿಗೆ ಹೊಂದಿಕೊಂಡಿರುವ ನಿವೇಶನವನ್ನು ಎಲ್ಲ ರೈತರಿಗೆ ನೀಡಲು ಆಗುವುದಿಲ್ಲ. ಪ್ರಭಾವ ಇದ್ದವನು ರಸ್ತೆ ಬದಿಯ ನಿವೇಶನ ತೆಗೆದುಕೊಳ್ಳುತ್ತಾನೆ. ಬೇರೆ ರೈತರು ಏನು ಮಾಡಬೇಕು? ಎಲ್ಲರಿಗೂ ರಸ್ತೆ ಬದಿ ನಿವೇಶನ ಕೊಡಲು ಆಗುತ್ತದೆಯೇ. ಹೀಗಾಗಿ ರೈತರ ಜಮೀನಿನಲ್ಲೇ ನಿವೇಶನ ಕೊಡಲು ಮುಂದಾಗಿದ್ದೇವೆ’ ಎಂದು ತಿಳಿಸಿದರು.

ವಾರ್ಷಿಕ ₹ 1000 ಕೋಟಿ ನಷ್ಟ: ‘ಬಡಾವಣೆ ಅಭಿವೃದ್ಧಿಗಾಗಿ ₹ 10 ಸಾವಿರ ಕೋಟಿ ಬಂಡವಾಳ ಹಾಕಿದ್ದೇವೆ. ರೈತರಿಗೆ ಅಭಿವೃದ್ಧಿ ಹೊಂದಿದ ನಿವೇಶನ ನೀಡಲು ಹೈಕೋರ್ಟ್ ಅನುಮತಿ ನೀಡಿದೆ. ಈ ಉದ್ದೇಶಕ್ಕೆ ತಂತ್ರಾಂಶ ಅಭಿವೃದ್ಧಿ ಮಾಡುತ್ತಿದ್ದೇವೆ. ತಂತ್ರಾಂಶದ ಮೂಲಕ ಅರ್ಜಿ ಸ್ವೀಕರಿಸಿ, ರೈತರಿಗೆ ನಿವೇಶನ ವಿತರಣೆ ಮಾಡುತ್ತೇವೆ. ನಿವೇಶನ ಹಂಚಿಕೆ ವಿಳಂಬದಿಂದ ನಮಗೆ ವಾರ್ಷಿಕ ಬಡ್ಡಿ ಪಾವತಿಯಿಂದ ₹ 1000 ಕೋಟಿ ನಷ್ಟ ಆಗುತ್ತಿದೆ’ ಎಂದು ವಿವರಿಸಿದರು.

‘ರೈತರು ಸುಮಾರು 9,583 ಚದರ ಅಡಿ ಅಭಿವೃದ್ಧಿ ಹೊಂದಿದ ಜಮೀನು ಪಡೆಯಲು ಅರ್ಹರಾಗಿದ್ದಾರೆ. ಒಂದೇ ಜಾಗದಲ್ಲಿ ನಿವೇಶನ ಕೊಡಿ, ಬೇರೆ ಬೇರೆ ಕಡೆ ಬಿಡಿ ಬಿಡಿಯಾಗಿ ನಿವೇಶನ ಕೊಡಬೇಡಿ ಎಂದು ರೈತರು ಮನವಿ ಮಾಡಿದ್ದಾರೆ. ಆ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ. ನಾಲ್ಕೈದು ದಿನಗಳಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇನೆ. ಬೆಂಗಳೂರಿನ ಶಾಸಕರ ಜೊತೆಯಲ್ಲೂ ಈ ಬಗ್ಗೆ ಚರ್ಚೆ ಮಾಡುತ್ತೇನೆ’ ಎಂದರು.

ಸುದ್ದಿ 2 ನಿಮಿಷ

ಕರಗ: ದೀಪಾಲಂಕಾರಕ್ಕೆ ₹35 ಲಕ್ಷ

ಬೆಂಗಳೂರು: ಐತಿಹಾಸಿಕ ಬೆಂಗಳೂರು ಕರಗ ಉತ್ಸವ ಸಂದರ್ಭದಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನ, ಜಿಬಿಎ ಪ್ರಧಾನ ಕಚೇರಿ ಹಾಗೂ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲು ₹35 ಲಕ್ಷ ವೆಚ್ಚ ಮಾಡಲು ಬೆಂಗಳೂರು ಕೇಂದ್ರ ನಗರ ಪಾಲಿಕೆ ನಿರ್ಧರಿಸಿದೆ.

ಏಪ್ರಿಲ್ 1ರಂದು ಬೆಂಗಳೂರು ಕರಗ ನಡೆಯಲಿದೆ. ಇದರ ಅಂಗವಾಗಿ, ವಿದ್ಯುತ್ ದೀಪಾಲಂಕಾರ ಮಾಡಲು ನಿರ್ಧರಿಸಲಾಗಿದೆ. ತಿಗಳರಪೇಟೆಯಲ್ಲಿರುವ ಧರ್ಮರಾಯಸ್ವಾಮಿ ದೇವಾಲಯದ ಸುತ್ತಮುತ್ತಲಿನ ಪ್ರದೇಶ, ಸಂಪಂಗಿ ಕೆರೆ ಮತ್ತು ಕರಗ ಸಾಗುವ ಪ್ರದೇಶಗಳಲ್ಲಿ ವಿದ್ಯುತ್ ದೀಪಾಲಂಕಾರಕ್ಕೆ ₹10.14 ಲಕ್ಷ ವೆಚ್ಚ ಮಾಡಲು ಕೇಂದ್ರ ನಗರ ಪಾಲಿಕೆಯ ವಿದ್ಯುತ್ ವಿಭಾಗದ ಕಾರ್ಯಕಾರಿ ಎಂಜಿನಿಯರ್ ಟೆಂಡರ್ ಆಹ್ವಾನಿಸಿದ್ದಾರೆ. ಇದಲ್ಲದೆ, ಜಿಬಿಎ ಪ್ರಧಾನ ಕಚೇರಿ ಹಾಗೂ ಅದರ ಸುತ್ತಮುತ್ತಲಿನ ಮುಖ್ಯ ರಸ್ತೆ, ವೃತ್ತಗಳಲ್ಲಿ ವಿದ್ಯುತ್ ದೀಪಾಲಂಕಾರಕ್ಕಾಗಿ ₹28.92 ಲಕ್ಷ ವೆಚ್ಚದ ಟೆಂಡರ್ ಆಹ್ವಾನಿಸಲಾಗಿದೆ.

ಕರಗ ಉತ್ಸವದಲ್ಲಿ ಅಕ್ರಮ: 2024ರಲ್ಲಿ ನಡೆದ ಕರಗ ಉತ್ಸವಕ್ಕೆ ಬಿಬಿಎಂಪಿ ವತಿಯಿಂದ ₹60 ಲಕ್ಷ ಬಿಡುಗಡೆಯಾಗಿತ್ತು. ಈ ಹಣ ದಲ್ಲಿ ಅಂದಿನ ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರು, ಖಜಾಂಚಿಯವರು ₹22.5 ಲಕ್ಷಗಳ ಅವ್ಯವಹಾರ ನಡೆಸಿದ್ದು, ಅದನ್ನು ಅವರಿಂದ ವಸೂಲಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಕಚೇರಿಯ ಮುಖ್ಯ ಲೆಕ್ಕಾಧಿಕಾರಿಯವರ ಸಮಿತಿ ವರದಿ ನೀಡಿತ್ತು.



ಜಿಲ್ಲಾಧಿಕಾರಿಯವರ ನೇತೃತ್ವ ದಲ್ಲಿ ಧಾರ್ಮಿಕ ದತ್ತಿ ಇಲಾಖೆಯಿಂದಲೇ 2025ರಲ್ಲಿ ಕರಗವನ್ನು ನಿರ್ವಹಿಸಲಾಗಿತ್ತು. ₹38 ಲಕ್ಷ ವೆಚ್ಚದಲ್ಲಿ ಕರಗ ಉತ್ಸವ ಮುಗಿದಿತ್ತು. ಆದರೆ, ಈ ಬಾರಿ ಕರಗ ಉತ್ಸವ ನಡೆಸಲು ₹60 ಲಕ್ಷ ಹಣ ನೀಡುವ ಜೊತೆಗೆ, ಬೆಂಗಳೂರು ಕೇಂದ್ರ ನಗರ ಪಾಲಿಕೆ ₹35 ಲಕ್ಷವನ್ನು ವಿದ್ಯುತ್ ದೀಪಾ ಲಂಕಾರಕ್ಕೆ ವೆಚ್ಚ ಮಾಡಲು ನಿರ್ಧರಿಸಿದೆ.

‘ರಾಜ್ಯ ಸರ್ಕಾರಕ್ಕೆ ಜನತೆಯ ಷೋಕಾಸ್ ನೋಟಿಸ್’

ಬೆಂಗಳೂರು: ‘ಚನ್ನಪಟ್ಟಣ ತಾಲ್ಲೂಕಿನ 5 ಸರ್ಕಾರಿ ಶಾಲೆ ಮುಚ್ಚಿ ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಸೇರಲು ಮಕ್ಕಳಿಗೆ ವರ್ಗಾವಣೆ ಪ್ರಮಾಣ ಪತ್ರ ನೀಡಿ, ಮುಖ್ಯ ಶಿಕ್ಷಕರು, ಶಿಕ್ಷಕರಿಗೆ ಷೋಕಾಸ್ ನೋಟಿಸ್ ನೀಡಿರುವುದು ಸಂವಿಧಾನ ವಿರೋಧಿ ಕ್ರಮ’ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ರಾಜ್ಯ ಸಮಿತಿಯು (ಎಐಎಸ್‌ಇಸಿ) ಸರ್ಕಾರಕ್ಕೆ ‘ಜನತೆಯ ಶೋಕಾಸ್ ನೋಟಿಸ್’ ನೀಡಿದೆ.

ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಿ ಈ ನೋಟಿಸ್ ನೀಡಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು, ಉಪಾಧ್ಯಕ್ಷ ವಿ.ಎನ್. ರಾಜಶೇಖರ್ ತಿಳಿಸಿದ್ದಾರೆ.

‘ಹೊಡಿಕೆ ಹೊಸಹಳ್ಳಿ, ಕನ್ನದೊಡ್ಡಿ, ಅಮ್ಮಳ್ಳಿದೊಡ್ಡಿ, ಸಂತೆಮೊಗೇನಹಳ್ಳಿ, ಸುಣ್ಣಘಟ್ಟ ಶಾಲೆ ಮುಚ್ಚುವ ಭಾಗವಾಗಿ ಶಿಕ್ಷಕರನ್ನು ದಂಡಿಸಲು ಮುಂದಾಗಿರುವ ಕ್ಷೇತ್ರ ಶಿಕ್ಷಣಾಧಿಕಾರಿ ಆದೇಶದಿಂದ ಆಘಾತ ಉಂಟು ಮಾಡಿದೆ.’ ಎಂದು ಟೀಕಿಸಿದ್ದಾರೆ.

‘ಷೋಕಾಸ್ ನೋಟಿಸ್ ಹಿಂಪಡೆದು, ವರ್ಗಾವಣೆ ಪತ್ರ ರದ್ದುಪಡಿಸಬೇಕು. ಮುಖ್ಯಮಂತ್ರಿ ಮಧ್ಯಪ್ರವೇಶಿಸಿ ಮ್ಯಾಗ್ನೇಟ್ ಶಾಲೆ ಆರಂಭಕ್ಕೆ ಎಡಿಬಿಯಿಂದ ಸಾಲ ಪಡೆಯುವುದಿಲ್ಲ ಎಂದು ಘೋಷಿಸಬೇಕು. 62 ಸಾವಿರ ಶಿಕ್ಷಕರ ನೇಮಕ ಆರಂಭಿಸಬೇಕು’ ಎಂದು ಆಗ್ರಹಿಸಿದ್ದಾರೆ.

ರಾಜೇಂದ್ರ ಕಠಾರಿಯಾ ವಿಚಾರ: ನಾರಾಯಣಸ್ವಾಮಿ– ಟಿ.ಡಿ. ರಾಜೇಗೌಡ ಮಾತಿನ ಚಕಮಕಿ

ಸಿಎಲ್‌ಪಿ ಸಭೆ: ಶಾಸಕರಿಬ್ಬರ ಕಿತ್ತಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಠಾರಿಯಾ ವಿಚಾರವಾಗಿ ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಮತ್ತು ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡ ಪರಸ್ಪರ ಕಿತ್ತಾಡಿಕೊಂಡ ಘಟನೆ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ನಡೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ಸಭೆ ನಡೆಯಿತು.

ಕಠಾರಿಯಾ ವಿರುದ್ಧ ಕಿಡಿಕಾರಿದ ನಾರಾಯಣ ಸ್ವಾಮಿ, ‘ಕಂದಾಯ ಇಲಾಖೆಯ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಕ್ಷೇತ್ರದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪತ್ರ ನೀಡಿದರೂ ಕೆಲಸಗಳನ್ನು ಮಾಡಿಕೊಡುತ್ತಿಲ್ಲ. ಅವರನ್ನು ವರ್ಗಾವಣೆ ಮಾಡುವಂತೆ ಈ ಹಿಂದೆಯೇ ನಾನೂ ಸೇರಿದಂತೆ ಹಲವು ಶಾಸಕರು ಪತ್ರ ಬರೆದಿದ್ದೇವೆ. ಆದರೂ ವರ್ಗಾವಣೆ ಮಾಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ನಾರಾಯಣ ಸ್ವಾಮಿ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ರಾಜೇಗೌಡ, ‘ಸಚಿವ ಕೃಷ್ಣ ಬೈರೇಗೌಡರಂತೆ ಕಠಾರಿಯಾ ಅವರೂ ಉತ್ತಮ ಕೆಲಸ ಮಾಡುತ್ತಿದ್ದಾರೆ. ಕಠಾರಿಯಾ ಬಗ್ಗೆ ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ’ ಎಂದಿದ್ದಾರೆ. ಈ ವೇಳೆ ರಾಜೇಗೌಡ ವಿರುದ್ಧ ನಾರಾಯಣ ಸ್ವಾಮಿ ಕೆರಳಿದ್ದಾರೆ. ಇಬ್ಬರ ನಡುವೆ ಮಾತಿನ ಚಕಮಕಿ ನಡೆದು, ಕೊನೆಗೆ ಕೋಪದಿಂದ ಸಭೆಯಿಂದ ನಾರಾಯಣಸ್ವಾಮಿ ಹೊರನಡೆದರು ಎಂದೂ ತಿಳಿದುಬಂದಿದೆ.

ಅನುದಾನಕ್ಕಾಗಿ ಬೇಡಿಕೆ: ಅನುದಾನ ಘೋಷಿಸಿದ್ದರೂ, ಬಿಡುಗಡೆಯಲ್ಲಿ ವಿಳಂಬವಾಗುತ್ತಿದೆ. ಸ್ಥಳೀಯ ಸಂಸ್ಥೆಯ ಚುನಾವಣೆಗಳು ಹತ್ತಿರ ಬರುತ್ತಿದ್ದು, ಅಭಿವೃದ್ಧಿ ಕಾರ್ಯ ಮಾಡದಿದ್ದರೆ ಪಕ್ಷಕ್ಕೆ ಕಷ್ಟವಾಗಲಿದೆ. ಹೀಗಾಗಿ ಮುಖ್ಯಮಂತ್ರಿ ಕಚೇರಿಯಲ್ಲಿ ಲೈಸನಿಂಗ್ ಅಧಿಕಾರಿಯನ್ನು ನೇಮಿಸುವಂತೆ ಶಾಸಕರು ಮನವಿ ಮಾಡಿದರು ಎನ್ನಲಾಗಿದೆ. ತಮಗೆ ಅನುದಾನ ನೀಡುವುದಾಗಿ ಭರವಸೆ ನೀಡಿದ್ದರೂ, ಈವರೆಗೂ ಅನುದಾನ ನೀಡಿಲ್ಲವೆಂದು ಪರಿಷತ್ ಸದಸ್ಯರು ಅಳಲು ತೋಡಿಕೊಂಡರು ಎಂದು ತಿಳಿದುಬಂದಿದೆ.

ಎಸ್‌ಐಆರ್ ಬಗ್ಗೆ ಹದ್ದಿನ ಕಣ್ಣಿಡಿ: ‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ನಿಗಾ ವಹಿಸಬೇಕು. ಅನ್ಯ ರಾಜ್ಯಗಳಲ್ಲಿ ಬಿಜೆಪಿಯು ಎಸ್‌ಐಆರ್‌ನ್ನು ರಾಜಕೀಯ ಸಾಧನವಾಗಿ ಮಾಡಿಕೊಂಡಿದೆ. ಈ ಬಗ್ಗೆ ನಿಗಾವಹಿಸಿ ಮತದಾರರ ಪಟ್ಟಿಯಿಂದ ಅನಗತ್ಯವಾಗಿ ಹೆಸರು ಕೈಬಿಡದಂತೆ ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗೆ ಶಾಸಕರು ಮನವಿ ಮಾಡಿದರು ಎಂದೂ ಗೊತ್ತಾಗಿದೆ.

‘ಕಲಾಪದಲ್ಲಿ ಸಕ್ರಿಯವಾಗಿ ಭಾಗವಹಿಸಿ’

‘ಕೇಂದ್ರ ಸರ್ಕಾರ ತೆರಿಗೆ ಪಾಲಿನಲ್ಲಿ ತಾರತಮ್ಯ ಮಾಡಿದೆ. ಜಿಎಸ್‌ಟಿ ಪರಿಷ್ಕರಣೆಯಿಂದ ರಾಜ್ಯದ ಆದಾಯಕ್ಕೆ ಪೆಟ್ಟು ಬಿದ್ದಿದೆ. ನಿರೀಕ್ಷಿತ ನೆರವು ದೊರೆಯದಿದ್ದರೂ ರಾಜ್ಯದ ಹಣಕಾಸು ವ್ಯವಸ್ಥೆ ಉತ್ತಮವಾಗಿದೆ. ಬಜೆಟ್ ಉತ್ತಮವಾಗಿ ಮೂಡಿಬಂದಿದೆ. ಎಲ್ಲ ಇಲಾಖೆಗಳಿಗೂ ಹಿಂದಿನ ಬಾರಿಗಿಂತ ಹೆಚ್ಚಿನ ಅನುದಾನ ನೀಡಲಾಗಿದೆ. ಉಭಯ ಸದನಗಳಲ್ಲಿ ಸಚಿವರು ಕಡ್ಡಾಯವಾಗಿ ಹಾಜರಿರಬೇಕು. ವಿಧಾನಸಭೆ ಹಾಗೂ ವಿಧಾನ ಪರಿಷತ್ ಸದಸ್ಯರೂ ಕಲಾಪದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಸಚಿವರು, ಶಾಸಕರು ಸದನದಲ್ಲಿ ಇಲ್ಲ ಎನ್ನುವಂತಾಗಬಾರದು’ ಎಂದು ಸಭೆಯಲ್ಲಿ ಮುಖ್ಯಮಂತ್ರಿ ಸೂಚನೆ ನೀಡಿದರು ಎಂದೂ ಗೊತ್ತಾಗಿದೆ.

ಕೆಎಸ್‌ಆರ್‌ಟಿಸಿ ಫೆಡರೇಷನ್: ಜ್ಯೋತಿ ಅಧ್ಯಕ್ಷೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಸ್ಟ್ಯಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್‌ಗೆ ಅಧ್ಯಕ್ಷರನ್ನಾಗಿ ಜ್ಯೋತಿ ಅನಂತಸುಬ್ಬರಾವ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ವಿಜಯಭಾಸ್ಕರ್ ಡಿ.ಎ. ತಿಳಿಸಿದ್ದಾರೆ. ಎಚ್.ವಿ. ಅನಂತ ಸುಬ್ಬರಾವ್ ನಿಧನದಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಆಯ್ಕೆ ನಡೆಯಿತು.

ಕೆಎಸ್‌ಬಿಸಿ: ಮುಗಿದ ಮತದಾನ

ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ (ಕೆಎಸ್‌ಬಿಸಿ) 23 ಸದಸ್ಯ ಸ್ಥಾನಗಳಿಗೆ ಬುಧವಾರ ಬೆಳಿಗ್ಗೆ 9.30ರಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಿತು.

ನಗರದ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಡುವೆ ಮತದಾನ ನಡೆಯಿತು. ಮೆಯೋ ಹಾಲ್, ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಮತ್ತು ಹೈಕೋರ್ಟ್ ವಕೀಲರು ಶಾಂತಿಯುತವಾಗಿ ಮತ ಚಲಾಯಿಸಿದರು. ಕೆಎಸ್‌ಬಿಸಿಯಲ್ಲಿ ಒಟ್ಟು 26 ಸದಸ್ಯ ಸ್ಥಾನಗಳಿದ್ದು 23 ಸ್ಥಾನಕ್ಕೆ ಮತ ಚಲಾವಣೆ ನಡೆಯಿತು.



ನಿಂಬಜಾದೇವಿ ಅಮ್ಮನವರ ಭಕ್ತಿಗೀತೆ ಹಾಡನ್ನು ವಿಜಯ ಮ್ಯೂಸಿಕ್ ಸ್ಕೂಲ್ ಯೂಟ್ಯೂಬ್ ಚಾನೆಲ್ ವತಿಯಿಂದ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಬೆಂಗಳೂರು ದಕ್ಷಿಣ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಬಿಡುಗಡೆ ಮಾಡಿದರು. ಹರೀಶ್ ಕುಮಾರ್ ಎ., ಪ್ರಸನ್ನ, ಹರೀಶ್, ಜಯಲಕ್ಷ್ಮೀ ನಾಗೇಂದ್ರ ಉಪಸ್ಥಿತರಿದ್ದರು.

ಪ್ರಶಸ್ತಿಗೆ ನಾಮನಿರ್ದೇಶನ ಆಹ್ವಾನ

ಬೆಂಗಳೂರು: ಸಾಹಿತಿ, ಪ್ರಾಧ್ಯಾಪಕ ಮತ್ತು ಸಾಂಸ್ಕೃತಿಕ ಸಂಘಟಕ ಸಿಸಿರಾ ಸ್ನೇಹ ಬಳಗವು 2025ನೇ ಸಾಲಿನ ‘ಡಾ.ಸಿಸಿರಾ ಯುವ ಸಾಹಿತಿ’ ಮತ್ತು ‘ಯುವ ಸಂಘಟಕ ಪ್ರಶಸ್ತಿ’ಗೆ ನಾಮನಿರ್ದೇಶನ ಆಹ್ವಾನಿಸಿದೆ.

ಪ್ರಶಸ್ತಿಗೆ ಸಾಧಕರ ಹೆಸರನ್ನು ಸಾರ್ವಜನಿಕರು, ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಶಿಫಾರಸು ಮಾಡಬಹುದಾಗಿದೆ. ತಲಾ ಒಬ್ಬರು ಯುವ ಸಾಹಿತಿ ಮತ್ತು ಸಾಂಸ್ಕೃತಿಕ ಸಂಘಟಕರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈವರೆಗು ಯಾವುದೇ ಪ್ರಶಸ್ತಿಗೆ ಆಯ್ಕೆಯಾಗಿರದ 45 ವರ್ಷದೊಳಗಿನ ಸಾಹಿತಿಗಳು, ಸಂಘಟಕರ ಫೋಟೊ ಸಹಿತ ಕಿರು ಪರಿಚಯವನ್ನು ಇದೇ 20ರೊಳಗೆ ಮೊ.ಸಂಖ್ಯೆ 9535187323 ಅಥವಾ 9449115371ಕ್ಕೆ ಕಳುಹಿಸಬೇಕು. ಏಪ್ರಿಲ್ 19 ರಂದು ಗಾಂಧಿಭವನದಲ್ಲಿ ಆಯೋಜಿಸಿರುವ ಸಮಾರಂಭದಲ್ಲಿ, ಆಯ್ಕೆಯಾದವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಾಂಸ್ಕೃತಿಕ ಮುನ್ನೋಟ

‘ರಾಮ ಶಾಮ ಡ್ರಾಮ’ ನಾಟಕ

ಬೆಂಗಳೂರು: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗ ತಂಡವು ಇದೇ 15ರಂದು ಸಂಜೆ 6 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ‘ರಾಮ ಶಾಮ ಡ್ರಾಮ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ರಾಜೇಂದ್ರ ಕಾರಂತ ಅವರು ಈ ನಾಟಕ ರಚಿಸಿ, ನಿರ್ದೇಶಿಸಿದ್ದಾರೆ. ‘ದೇವರೇ ಗತಿ ಆ್ಯಕ್ಸಿಡೆಂಟ್ ಆ್ಯಂಡ್ ಎಮರ್ಜೆನ್ಸಿ ಸೆಂಟರ್’ನಲ್ಲಿ ಕೆಲಸ ಮಾಡುವ ವೈದ್ಯ ರಾಮ್, ಸಹಾಯಕ ಶಾಮ ಮತ್ತು ಸ್ವಾಗತಕಾರ ಭಾಮ ಹಾಗೂ ಚಿತ್ರ ವಿಚಿತ್ರ ಸಮಸ್ಯೆಗಳನ್ನು ಹೊತ್ತು ಆಸ್ಪತ್ರೆಗೆ ಬರುವ ರೋಗಿಗಳ ನಡುವೆ ನಡೆಯುವ ಹಾಸ್ಯ ಸನ್ನಿವೇಶಗಳೇ ನಾಟಕದ ಕಥಾವಸ್ತು. ಟಿಕೆಟ್‌ಗಳು ಬುಕ್ ಮೈ ಶೋನಲ್ಲಿ ಲಭ್ಯ.

ಸಂಪರ್ಕಕ್ಕೆ: 9945977184 ಅಥವಾ 9916863637




‘ರಾಮ ಶಾಮ ಡ್ರಾಮ’ ನಾಟಕದ ದೃಶ್ಯ

14ಕ್ಕೆ ಸ್ವರ ಸಪ್ತತಿ

ಬೆಂಗಳೂರು: ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ಪಂಡಿತ ಪರಮೇಶ್ವರ ಹೆಗಡೆ ಅವರ 70ನೇ ಜನ್ಮದಿನದ ಪ್ರಯುಕ್ತ ಅವರ ಶಿಷ್ಯರು ಇದೇ 14ರಂದು ಸಂಜೆ 5.30ಕ್ಕೆ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ ‘ಸ್ವರ ಸಪ್ತತಿ’ ಸಂಗೀತ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಈ ಕಾರ್ಯಕ್ರಮದಲ್ಲಿ ಪರಮೇಶ್ವರ ಹೆಗಡೆ ಅವರನ್ನು ಗೌರವಿಸಲಾಗುತ್ತದೆ. ಭಾರತೀಯ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕಿ ಶುಭಾ ಮುದ್ಗಲ್ ಅವರು ಹಿಂದೂಸ್ತಾನಿ ಗಾಯನ ಪ್ರಸ್ತುತಪಡಿಸಲಿದ್ದಾರೆ. ಅನೀಶ್ ಪ್ರಧಾನ್ ಅವರು ತಬಲಾದಲ್ಲಿ, ಸುಧೀರ್ ನಾಯಕ್ ಅವರು ಹಾರ್ಮೋನಿಯಂನಲ್ಲಿ ಸಾಥ್ ನೀಡಲಿದ್ದಾರೆ.



‘ಆದದ್ದೆಲ್ಲಾ ಒಳಿತೇ..?’ ನಾಟಕದ ದೃಶ್ಯ

‘ಆದದ್ದೆಲ್ಲಾ ಒಳಿತೇ..?’ ನಾಟಕ

ಬೆಂಗಳೂರು: ಕ್ರಿಯೇಟಿವ್ ಥಿಯೇಟರ್ ವತಿಯಿಂದ ಇದೇ 14ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ಜೆ.ಪಿ.ನಗರದ ರಂಗಶಂಕರದಲ್ಲಿ ‘ಆದದ್ದೆಲ್ಲಾ ಒಳಿತೇ..?’ ಹವ್ಯಾಸಿ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಮಧ್ಯಮವರ್ಗದ ಗಂಡ–ಹೆಂಡತಿ ನಡುವಿನ ದೈನಂದಿನ ಕಚ್ಚಾಟ, ಕರ್ನಾಟಕದ ಹಳ್ಳಿಯ ಹೆಣ್ಣೊಂದು ಮುಂಬೈಗೆ ಭೇಟಿ ನೀಡಿದಾಗ ಆಗುವ ಅವಾಂತರಗಳು, ಸಂಪ್ರದಾಯಸ್ಥ ಮನೆತನದ ಹುಡುಗಿ ಫ್ರೆಂಚ್ ಹುಡುಗನನ್ನು ಮದುವೆಯಾದಾಗ ಉಂಟಾಗುವ ಪಜೀತಿ ಈ ನಾಟಕದ ಕಥಾ ವಸ್ತುವಾಗಿದೆ.

ಪ್ರಮೋದ್ ಶಿಗ್ಗಾಂವ್ ಅವರು ಈ ನಾಟಕ ನಿರ್ದೇಶಿಸಿದ್ದಾರೆ. ಕಲಾವಿದರಾದ ಲಕ್ಷ್ಮಿ ಚಂದ್ರಶೇಖರ್, ಸುಂದರ್, ರಾಮಕೃಷ್ಣ ಕನ್ನರಪಾಡಿ ಹಾಗೂ ಸೌಮ್ಯ ಗಂಗಟಕರ್ ಅವರು ಅಭಿನಯಿಸಲಿದ್ದಾರೆ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಐದು ನಗರ ಪಾಲಿಕೆಗಳಿಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಏಪ್ರಿಲ್ ಅಂತ್ಯಕ್ಕೆ ಅಭಿವೃದ್ಧಿ ಕಾಮಗಾರಿ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಏಪ್ರಿಲ್ ಅಂತ್ಯಕ್ಕೆ ಪೂರ್ಣಗೊಳಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರು ಸೂಚಿಸಿದರು.

ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ವಾರ್ಡ್ ಅಭಿವೃದ್ಧಿಗಾಗಿ ₹1,000 ಕೋಟಿ ವೆಚ್ಚದಲ್ಲಿ ಹಾಗೂ ವಿಶೇಷ ಮೂಲ ಸೌಕರ್ಯಗಳಿಗೆ ಬಂಡವಾಳ ಬೆಂಬಲ ಯೋಜನೆಯಡಿ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳ ಡಾಂಬರೀಕರಣ ಕಾಮಗಾರಿಗಳಿಗೆ ₹1,241 ಕೋಟಿ ವೆಚ್ಚದಲ್ಲಿ ನಡೆಯುತ್ತಿರುವ ಕಾಮಗಾರಿ ಮತ್ತು ಸುರಕ್ಷಾ-75 ಯೋಜನೆಯಡಿ ಜಂಕ್ಷನ್‌ಗಳ ಅಭಿವೃದ್ಧಿ ಕಾಮಗಾರಿಗಳ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಬುಧವಾರ ಮಾತನಾಡಿದರು.

ಮುಖ್ಯ ಹಾಗೂ ಉಪ ಮುಖ್ಯ ರಸ್ತೆ ಮತ್ತು ವಾರ್ಡ್ ರಸ್ತೆಗಳ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿ ನಗರ ಪಾಲಿಕೆಗಳಲ್ಲಿ ಕೂಡಲೇ ಕಾಮಗಾರಿ ಪ್ರಾರಂಭಿಸಬೇಕು. ಮಳೆಗಾಲಕ್ಕೂ ಮುಂಚಿತವಾಗಿ ಕಾಲುವೆಗಳಲ್ಲಿ ಹೂಳೆತ್ತುವುದರ ಜೊತೆಗೆ ಡಾಂಬರೀಕರಣ ಕಾರ್ಯವನ್ನು ರಾತ್ರಿ-ಹಗಲು ಕೆಲಸ ಮಾಡಿ ಏಪ್ರಿಲ್ ಅಂತ್ಯದೊಳಗಾಗಿ ಪೂರ್ಣಗೊಳಿಸಬೇಕು. ಕಾಮಗಾರಿ ಪ್ರಾರಂಭವಾದ ಬಳಿಕ ಚಿತ್ರಗಳ ಸಮೇತ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸುರಕ್ಷಾ-75 ಯೋಜನೆಯಡಿ ಜಂಕ್ಷನ್ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿ ಯೋಜನೆ ಮತ್ತು ಸಮನ್ವಯ ವಿಭಾಗದ ಮುಖ್ಯ ಎಂಜಿನಿಯರ್ ಅಧೀನದಲ್ಲಿರುವ ನಗರ ಯೋಜಕರೊಂದಿಗೆ ತಪಾಸಣೆ ನಡೆಸಿ ವರದಿ ಸಲ್ಲಿಸಬೇಕು. ಆ ವರದಿ ಆಧಾರದ ಮೇಲೆ ಜಂಕ್ಷನ್‌ಗಳ ಉಸ್ತುವಾರಿ ಅಧಿಕಾರಿಗಳು ಜಂಕ್ಷನ್ ಅಭಿವೃದ್ಧಿ ಕಾಮಗಾರಿ ಬಗ್ಗೆ ಗಮನಹರಿಸಿ ಎಂದರು.

ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಮಾತನಾಡಿ, ‘ಈಗಾಗಲೇ ಬಹುತೇಕ ಕಡೆ ಡಾಂಬರೀಕರಣ ಪ್ರಾರಂಭಿಸಲಾಗಿದೆ. ಉಳಿದ ಎಲ್ಲ ವಿಭಾಗಗಳಲ್ಲಿ ಶೀಘ್ರವಾಗಿ ಕಾಮಗಾರಿಗಳನ್ನು ಕೈಗೆತ್ತಿ ಕೊಂಡು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸುರಕ್ಷಾ ಜಂಕ್ಷನ್‌ಗಳ ಪೈಕಿ ಎರಡು ಕಡೆಗಳಲ್ಲಿ ಕೆಲಸ ಪ್ರಾರಂಭಿಸಲಾಗಿದೆ. ಉಳಿದ ಕಡೆ ವಾರದೊಳಗಾಗಿ ಪ್ರಾರಂಭಿಸದಿದ್ದಲ್ಲಿ ಪ್ರಸ್ತುತ ಗುತ್ತಿಗೆಯನ್ನು ರದ್ದುಪಡಿಸಿ, ಹೊಸದಾಗಿ ಟೆಂಡರ್ ಕರೆದೂ ಕೂಡಲೇ ಕೆಲಸ ಪ್ರಾರಂಭಿಸಲಾಗುವುದು’ ಎಂದು ತಿಳಿಸಿದರು.

ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಮಾತನಾಡಿ, ‘ಜಂಕ್ಷನ್‌ಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಮೆಟ್ರೊ ಕಾಮಗಾರಿಗಳ ಪ್ರಗತಿ ಇರುವ ಕಾರಣ ಕೆಲವೆಡೆ ಪ್ರಾರಂಭಿಸಲು ಸಾಧ್ಯವಾಗಿಲ್ಲ. ಉಳಿದ ಕಡೆಗಳಲ್ಲಿ ಶೀಘ್ರಗತಿಯಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಅಭಿವೃದ್ಧಿ ಹೆಚ್ಚುವರಿ ಆಯುಕ್ತರಾದ ದಿಗ್ವಿಜಯ್ ಬೋಡ್ಕೆ, ಲೋಖಂಡೆ ಸ್ನೇಹಲ್ ಸುಧಾಕರ್, ನವೀನ್ ಕುಮಾರ್, ರಾಜು ಉಪಸ್ಥಿತರಿದ್ದರು.

ಬಾಣಸವಾಡಿ ಕೆರೆ ಅಭಿವೃದ್ಧಿ

ಬಾಣಸವಾಡಿ ಕೆರೆ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಹೇಳಿದರು.

ನಗರ ಪಾಲಿಕೆ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿಯಾಗಿ ಸರ್ವಜ್ಞನಗರ ವಿಭಾಗದ ಬಾಣಸವಾಡಿ ಕೆರೆಯ ಸ್ಥಳ ಪರಿಶೀಲನೆಯನ್ನು ಅವರು ಬುಧವಾರ ನಡೆಸಿದರು.

ಬಾಣಸವಾಡಿ ಕೆರೆಯು ಕಂದಾಯ ಇಲಾಖೆ ಅಧೀನದಲ್ಲಿದ್ದು, ಆಸ್ತಿಯನ್ನು ಸಮರ್ಪಕವಾಗಿ ಸಂರಕ್ಷಿಸುವ ಉದ್ದೇಶದಿಂದ ಬೆಂಗಳೂರು ಉತ್ತರ ನಗರ ಪಾಲಿಕೆಯ ವಶಕ್ಕೆ ಹಸ್ತಾಂತರಿಸುವ ಕುರಿತು ಚರ್ಚೆ ನಡೆಸಿದರು. ಕೆರೆಯ ಆಸ್ತಿ ರಕ್ಷಿಸುವ ನಿಟ್ಟಿನಲ್ಲಿ, ಲಭ್ಯವಿರುವ ದಾಖಲೆಗಳು ಹಾಗೂ ನ್ಯಾಯಾಲಯದಲ್ಲಿ ದಾಖಲಾಗಿರುವ ದೂರುಗಳನ್ನು ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಆಯುಕ್ತರು ಸೂಚನೆ ನೀಡಿದರು.

ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಕಾರ್ಯಪಾಲಕ ಎಂಜಿನಿಯರ್ ಮಹಾದೇವ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಕ್ಷತ್ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಪರವಾನಗಿ ಪಡೆಯದ 7 ಉದ್ದಿಮೆಗಳಿಗೆ ಬೀಗ

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯ ಗೊಟ್ಟಿಗೆರೆ ವಾರ್ಡ್ ಪಿಲ್ಲಗಾನಹಳ್ಳಿ ಮುಖ್ಯರಸ್ತೆಯಲ್ಲಿ ಪರವಾನಗಿ ಪಡೆಯದೆ ನಡೆಸುತ್ತಿದ್ದ ಏಳು ಉದ್ದಿಮೆಗಳಿಗೆ ಬೀಗ ಹಾಕಲಾಗಿದೆ ಎಂದು ಆಯುಕ್ತ ಕೆ.ಎನ್. ರಮೇಶ್ ಹೇಳಿದರು.

ಹಲವು ಉದ್ದಿಮೆಗಳು ಪಾಲಿಕೆಯಿಂದ ಪರವಾನಗಿ ಪಡೆಯದೇ ಅನಧಿಕೃತವಾಗಿ ನಡೆಯುತ್ತಿರುವುದು ಕಂಡುಬಂದಿದೆ.

ಇವುಗಳ ಸಮೀಕ್ಷೆ ನಡೆಸಿ ಸುಮಾರು 145 ಉದ್ದಿಮೆಗಳಿಗೆ ಸೂಚನಾ ಪತ್ರ ಜಾರಿ ಮಾಡ ಲಾಗಿತ್ತು. ಸ್ವಯಂಪ್ರೇರಿತರಾಗಿ ಉದ್ದಿಮೆಯನ್ನು ಮುಚ್ಚಲು ತಿಳಿಸಿದ್ದರೂ ಯಾವುದೇ ಕ್ರಮಕೈಗೊಳ್ಳದ ಮತ್ತು ಸೂಚನಾ ಪತ್ರದಲ್ಲಿ ನೀಡಿದ್ದ ಗಡುವು ಮುಗಿದಿದ್ದರಿಂದ ಗೊಟ್ಟಿಗೆರೆ ವ್ಯಾಪ್ತಿಯಲ್ಲಿ ಏಳು ಉದ್ದಿಮೆಗಳನ್ನು ಪಾಲಿಕೆ ವತಿಯಿಂದ ಬುಧವಾರ ಬೀಗ ಮುದ್ರೆ ಹಾಕಲಾಗಿದೆ ಎಂದರು.

ಗ್ರಾನೈಟ್ ಫ್ಯಾಕ್ಟರಿ / ಗ್ರಾನೈಟ್ ಶೇಖರಣೆ ಗೋಡೌನ್, ಎಫ್.ಎಸ್. ಕೇಟರಿಂಗ್, ಎಸ್.ಕೆ ಮೆಟಲ್ ಫ್ಯಾಬ್ರಿಕೇಟರ್ಸ್, ಬೈಕ್ ಝೋನ್ ಗ್ಯಾರೇಜ್, ಝಡ್.ಎಸ್. ಆಟೋಗ್ಲಾಸ್ ಮತ್ತು ಪ್ಲೈವುಡ್, ಆರ್.ಕೆ.ಸ್ಟೀಲ್ ಟ್ರೇಡರ್ಸ್ ಫ್ಯಾಬ್ರಿಕೇಟರ್ಸ್ ಹಾಗೂ ಪ್ರಿಯದರ್ಶಿನಿ ಎಂಟರ್‌ಪ್ರೈಸಸ್ ಎಂಬ ಉದ್ದಿಮೆಗಳಿಗೆ ಬೀಗ ಹಾಕಲಾಗಿದೆ. ಇದೇ ರೀತಿ ಮುಂದಿನ ದಿನಗಳಲ್ಲಿ ಅನಧಿಕೃತ ಉದ್ದಿಮೆಗಳ ವಿರುದ್ಧ ಬೆಂಗಳೂರು ದಕ್ಷಿಣ ನಗರ ಪಾಲಿಕೆ ವತಿಯಿಂದ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜಲಮಂಡಳಿ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ಜಲಮಂಡಳಿ ವಿವಿಧ ಉಪವಿಭಾಗಗಳಲ್ಲಿ ನೀರಿನ ಅದಾಲತ್ ಮಾರ್ಚ್ 12ರಂದು ನಡೆಯಲಿದೆ. ಉತ್ತರ 2–1 ರ ಉಪವಿಭಾಗದ ಅದಾಲತ್ ಯಲಹಂಕ ನ್ಯೂಟೌನ್, ದಕ್ಷಿಣ 1–1 ಜೆಪಿನಗರ 8ನೇ ಫೇಸ್, ದಕ್ಷಿಣ 2–1 ಜಯನಗರ 4ನೇ ಟಿ ಬ್ಲಾಕ್, ನೈರುತ್ಯ –1 ಚಿಕ್ಕಲಾಲ್‌ಬಾಗ್, ನೈರುತ್ಯ–1 ಬನಗಿರಿನಗರ, ಪೂರ್ವ 1–2 ಎ ನಾರಾಯಣಪುರ, ಪೂರ್ವ 2–2 ಕಸ್ತೂರಿನಗರ, ಆಗ್ನೇಯ–2 ಕೋರಮಂಗಲ 3ನೇ ಬ್ಲಾಕ್, ಪಶ್ಚಿಮ 1–2 ಎಂಸಿ ಲೇ ಔಟ್, ಪಶ್ಚಿಮ 2–2 ನಾಗರಬಾವಿ. ಸಹಾಯವಾಣಿ: 1916.

ಕೊಲೆ: ಸಿಐಡಿ ತನಿಖೆಗೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ತಾಯಿ ಹಾಗೂ ತಮ್ಮನ ಕೊಲೆಯನ್ನು ಮರು ತನಿಖೆಗೆ ವಹಿಸಬೇಕು’ ಎಂದು ಕೋರಿದ್ದ ಮಹಿಳೆಯೊಬ್ಬರ ಮನವಿಗೆ ಓಗೊಟ್ಟಿರುವ ಹೈಕೋರ್ಟ್ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿ ಆದೇಶಿಸಿದೆ.

ಈ ಕುರಿತಂತೆ ಗಿರಿನಗರದ ಎಸ್.ಕೆ.ಲಕ್ಷ್ಮಿ (33) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಅರ್ಜಿದಾರರ ತಾಯಿ ಹಾಗೂ ತಮ್ಮನ ಸಾವಿಗೆ ಕಾರಣರಾದವರನ್ನು ಪತ್ತೆ ಹಚ್ಚಬೇಕಾದರೆ, ಪ್ರಕರಣವನ್ನು ಮೊದಲಿನಿಂದ ತನಿಖೆ ಮಾಡಿದರೆ ಮಾತ್ರ ನ್ಯಾಯ ದೊರಕಲಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಸತ್ಯಾನ್ವೇಷಣೆಯ ದಾರಿಯಲ್ಲಿ ಸಾಗಬೇಕಿದ್ದ ತನಿಖೆ ಅಥವಾ ವಿಚಾರಣೆ ಮಾರ್ಗ ಮಧ್ಯದಲ್ಲೇ ಕುಸಿದು ಬಿದ್ದಿದೆ. ಹಾಗಾಗಿ, ತಾಯಿ ಹಾಗೂ ಮಗನ ಸಾವಿನಲ್ಲಿ ಆಗಿದೆ ಎನ್ನಲಾದ ಅನ್ಯಾಯ ವನ್ನು ಪರಿಹರಿಸಲು ಸೂಕ್ತವಾದ ತನಿಖಾ ಸಂಸ್ಥೆಯ ಅಗತ್ಯವಿದೆ’ ಎಂದು ನ್ಯಾಯಪೀಠ ಹೇಳಿದೆ. ಪ್ರಕರಣದ ಪುನರ್ ತನಿಖೆ ಯನ್ನು ಸಿಐಡಿಗೆ ಹಸ್ತಾಂತರಿಸಿ ಆದೇಶಿ ಸಿರುವ ನ್ಯಾಯಪೀಠ, ‘ಆದೇಶ ಹೊರಬಿದ್ದ ಆರು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಬೇಕು. ಆದೇಶ ದಲ್ಲಿ ಉಲ್ಲೇಖಿಸಲಾಗಿರುವ ಅಜಾಗ ರೂಕತೆಯ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ತನಿಖೆಯನ್ನು ಮುನ್ನಡೆ ಸಬೇಕು’ ಎಂದು ಸಿಐಡಿಗೆ ತಾಕೀತು ಮಾಡಿದೆ. ಅರ್ಜಿದಾರರ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ವಕಾಲತ್ತು ವಹಿಸಿದ್ದರು.

ಪ್ರಕರಣವೇನು?: ‘ಕುಶಾಲನಗರ ಗ್ರಾಮಾಂತರ ಠಾಣೆ ಸರಹದ್ದಿನ ಶಿರಂಗಾಲ ಗ್ರಾಮದ ಪೇಟೆ ಬೀದಿ ಕಾಲೋನಿಯ ನಿವಾಸಿ ಅಕ್ಕಮ್ಮ ಅವರು 2018 ರ ಡಿಸೆಂಬರ್ 12ರಂದು ರಾತ್ರಿ 8.30ರ ಸಮಯದಲ್ಲಿ ಮನೆಯ ಮುಂದೆ ಮೂತ್ರ ವಿಸರ್ಜನೆ ಮಾಡಿ ಗಲೀಜು ಮಾಡಿರುತ್ತಾರೆ ಎಂದು ನೆರೆಮನೆಯ ಕುಬೇರ, ಆಶಾ, ರೇಷ್ಮಾ ಮತ್ತು ಎಸ್.ಆರ್.ನಾಗೇಶ ಅವರು ಕಲ್ಲು ಮತ್ತು ಕುಡುಗೋಲಿನಿಂದ ಹೊಡೆದು ಸಾಯಿಸಿರುತ್ತಾರೆ’ ಎಂದು ಆರೋಪಿಸಿ ಮೃತ ಅಕ್ಕಮ್ಮಳ ಪುತ್ರ ಎಸ್.ಕೆ.ರಘು ಪೊಲೀಸರಿಗೆ ದೂರು ನೀಡಿದ್ದರು. ಕುಶಾಲನಗರ ಪೊಲೀಸರು ಮೂವರೂ ಆರೋಪಿಗಳನ್ನು ಬಂಧಿಸಿದ್ದರು.

ಏತನ್ಮಧ್ಯೆ, ‘ಆರೋಪಿ ನಾಗರಾಜ್ ಸಹೋದರ ಕುಬೇರ ಪೊಲೀಸ್ ಇಲಾಖೆಯಲ್ಲಿದ್ದು, ಅಕ್ಕಮ್ಮ ಅವರ ಕೊಲೆಯನ್ನು ಸ್ವತಃ ಆಕೆಯ ಮಗ ಮತ್ತು ದೂರುದಾರನೂ ಆದ ರಘು ಮಾಡಿರುವುದು’ ಎಂದು ವಿಡಿಯೋ ಒಂದರ ಸಮೇತ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಕುಶಾಲನಗರ ಪೊಲೀಸರು ರಘು ಅವರನ್ನು ಬಂಧಿಸಿ ಉಳಿದ ಮೂವರು ಆರೋಪಿಗಳನ್ನು ತನಿಖೆಯಿಂದ ಕೈಬಿಟ್ಟು, ರಘು ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಬಂಧನಕ್ಕೆ ಒಳಗಾಗಿದ್ದ ರಘು ಹೈಕೋರ್ಟ್‌ನಿಂದ ಜಾಮೀನು ಪಡೆದು ಹೊರಬಂದ ನಂತರ 2021ರ ಫೆಬ್ರುವರಿ 22ರಂದು ಶಿರಂಗಾಲ ಗ್ರಾಮದ ಸಂತೋಷ್ ಬಾರ್ ಪಕ್ಕದಲ್ಲಿ ಒಂದು ಮರದ ಕೆಳಗೆ ಶವವಾಗಿ ಪತ್ತೆಯಾಗಿದ್ದರು.

‘ರಘು ಸಾವು ಅನುಮಾನಾ ಸ್ಪದವಾಗಿದೆ. ಇದಕ್ಕೆ ಕುಬೇರ (37), ಆಶಾ (36), ರೇಷ್ಮಾ (35) ಮತ್ತು ಎಸ್.ಆರ್.ನಾಗೇಶ (42) ಅವರೇ ಕಾರಣ ಎಂಬ ಸಂದಹೇವಿದೆ. ಆದ್ದರಿಂದ, ತನಿಖೆ ನಡೆಸಬೇಕು’ ಎಂದು ಲಕ್ಷ್ಮಿ ಅವರು ನೀಡಿದ್ದ ಮನವಿಗಳನ್ನು ಪೊಲೀಸರು ಪುರಸ್ಕರಿಸಿರಲಿಲ್ಲ. ಅಂತೆಯೇ, ಈ ಸಂಬಂಧ ವಿಚಾರಣಾ ನ್ಯಾಯಲಯಕ್ಕೆ ‘ಬಿ’ ರಿಪೋರ್ಟ್ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಲಕ್ಷ್ಮಿ ಪ್ರಕರಣದ ಪುನರ್ ತನಿಖೆಗೆ ನಿರ್ದೇಶಿಸುವಂತೆ ಕೋರಿ ರಿಟ್ ಅರ್ಜಿ ಸಲ್ಲಿಸಿದ್ದರು.

ಕಲಾಪ ವೀಕ್ಷಣೆ



ವಿಧಾನ ಸಭೆಯ ಕಲಾಪವನ್ನು ವಿದ್ಯಾರ್ಥಿಗಳು ಬುಧವಾರ ವೀಕ್ಷಿಸಿದರು

ಏರಿಕೆಯತ್ತ ಬದ್ಧವೆಚ್ಚದ ದಾಪುಗಾಲು

ಬಂಡವಾಳ ವೆಚ್ಚ ಹಂಚಿಕೆಯ ಅವಕಾಶದ ಮೇಲೆ ಪ್ರಭಾವ
ಮಧ್ಯಮಾವಧಿ ವಿತ್ತೀಯ ಮುನ್ನಂದಾಜಿನಲ್ಲಿ ಉಲ್ಲೇಖ

• ಜಯಸಿಂಹ ಆರ್.

ಬೆಂಗಳೂರು: ವೇತನ, ಪಿಂಚಣಿ ಮತ್ತು ಬಡ್ಡಿ ಪಾವತಿಯಂತಹ ಬದ್ಧವೆಚ್ಚವು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲಿದೆ.

2026–27ನೇ ಸಾಲಿನಲ್ಲಿ ₹1.86 ಲಕ್ಷ ಕೋಟಿಯಷ್ಟಿರುವ ಬದ್ಧವೆಚ್ಚವು, 2029–30ನೇ ಸಾಲಿನಲ್ಲಿ ₹2.44 ಲಕ್ಷ ಕೋಟಿಗೆ ಏರಿಕೆಯಾಗಲಿದೆ.

ಬದ್ಧವೆಚ್ಚದಲ್ಲಿನ ಹೆಚ್ಚಳವು ಬಂಡವಾಳ ವೆಚ್ಚ ಹಂಚಿಕೆಗೆ ಹಣಕಾಸಿನ ಲಭ್ಯತೆಯನ್ನು ಕಡಿಮೆ ಮಾಡುತ್ತದೆ. ಇವುಗಳ ಮಧ್ಯೆ ಸರ್ಕಾರವು ಸಮತೋಲನ ಸಾಧಿಸುವುದು ಅಗತ್ಯ ಎನ್ನುತ್ತದೆ 2026–30ನೇ ಮಧ್ಯಮಾವಧಿ ವಿತ್ತೀಯ ಮುನ್ನಂದಾಜು.

ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮತ್ತು ಅದರ ಪರಿಣಾಮವಾಗಿ ಪಿಂಚಣಿಯಲ್ಲಿನ ಬದಲಾವಣೆಯು ಪ್ರತಿ ಆರ್ಥಿಕ ವರ್ಷದಲ್ಲೂ ಏರಿಕೆಯಾಗುತ್ತಿದೆ. 2026–27ನೇ ಸಾಲಿನಲ್ಲಿ ಸರ್ಕಾರವು ನೇಮಕಾತಿ ಪ್ರಕ್ರಿಯೆ ನಡೆಸುವುದರಿಂದ ಈ ವೆಚ್ಚದಲ್ಲಿ ಇನ್ನಷ್ಟು ಏರಿಕೆ ಆಗಬಹುದು ಎಂಬ ವಿಶ್ಲೇಷಣೆ ಮುನ್ನಂದಾಜಿನಲ್ಲಿದೆ.


ಸಿಬ್ಬಂದಿಯ ಹಿತಾಸಕ್ತಿ ಕಾಪಾಡಲು ಮತ್ತು ಸಾರ್ವಜನಿಕ ಸೇವೆಗಳ ಪರಿಣಾಮಕಾರಿ ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಈ ಎರಡೂ ವೆಚ್ಚಗಳನ್ನು ಹೆಚ್ಚಿಸಬೇಕಾದ ಅನಿವಾರ್ಯ ಇದೆ.

ಇದು ರಾಜ್ಯದ ಹಣಕಾಸು ಸ್ಥಿತಿಯ ಮೇಲೆ ಗಣನೀಯ ಪರಿಣಾಮ ಬೀರುವುದಲ್ಲದೆ, ಬಂಡವಾಳ ವೆಚ್ಚ ಹಂಚಿಕೆಗೆ ವಿತ್ತೀಯ ಅವಕಾಶಗಳನ್ನು ಕಡಿಮೆ ಮಾಡುತ್ತದೆ ಎಂಬುದನ್ನು ಮುನ್ನಂದಾಜಿನಲ್ಲಿ ವಿಶ್ಲೇಷಿಸಲಾಗಿದೆ.

ಜತೆಗೆ, ಅಭಿವೃದ್ಧಿ ಮತ್ತು ಬಂಡವಾಳ ವೆಚ್ಚಗಳಿಗೆ ಸೂಕ್ತ ಆದ್ಯತೆ ನೀಡಬೇಕಾಗುತ್ತದೆ ಎಂದೂ ಹೇಳಿದೆ.

ರಾಜಸ್ವ ವೆಚ್ಚ ಹೆಚ್ಚಳಕ್ಕೂ ಕಾರಣ: ರಾಜ್ಯ ಸರ್ಕಾರದ ರಾಜಸ್ವ ವೆಚ್ಚವೂ ಏರಿಕೆ ಹಾದಿಯಲ್ಲಿದೆ. 2026–27ನೇ ಸಾಲಿನಲ್ಲಿ ₹3.38 ಲಕ್ಷ ಕೋಟಿ ಇರುವ ರಾಜಸ್ವ ವೆಚ್ಚವು, 2029–30ನೇ ಸಾಲಿನ ಅಂತ್ಯದ ಹೊತ್ತಿಗೆ ₹4.23 ಲಕ್ಷ ಕೋಟಿಗೆ ತಲುಪಲಿದೆ.

ಬದ್ಧವೆಚ್ಚದಲ್ಲಿನ ಏರಿಕೆಯೇ ರಾಜಸ್ವ ವೆಚ್ಚದ ಹೆಚ್ಚಳಕ್ಕೆ ಪ್ರಮುಖ ಕಾರಣ. ಇದರ ಜತೆಯಲ್ಲಿ ಸಾಮಾಜಿಕ ಭದ್ರತೆ ಪಿಂಚಣಿ–ಸಹಾಯಧನದಲ್ಲಿನ ಏರಿಕೆಯೂ ಕಾರಣ ಎಂಬುದನ್ನು ಮುನ್ನಂದಾಜಿನಲ್ಲಿನ ದತ್ತಾಂಶಗಳು ಬೊಟ್ಟು ಮಾಡುತ್ತವೆ.



ಗ್ಯಾರಂಟಿ ಯೋಜನೆಗಳ ಮರುವಿನ್ಯಾಸ

ಗ್ಯಾರಂಟಿ ಕಾರ್ಯಕ್ರಮಗಳಂತಹ ಸಹಾಯಧನ ಮತ್ತು ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳನ್ನು ಮರುವಿನ್ಯಾಸ ಮಾಡಬೇಕು ಎಂಬ ಸಲಹೆಯನ್ನು ಮಧ್ಯಮಾವಧಿ ವಿತ್ತೀಯ ಮುನ್ನಂದಾಜು ನೀಡಿದೆ.

ಹಿಂದುಳಿದ ಮತ್ತು ಅಂಚಿನ ಸಮುದಾಯಗಳಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಅತ್ಯಂತ ಅಗತ್ಯವಾದರೂ, ವಿವೇಚನೆಯಿಂದ ಅವುಗಳನ್ನು ವಿತರಣೆ ಮಾಡಬೇಕು. ಸಹಾಯಧನಗಳನ್ನು ನಿಯಮಿತವಾಗಿ ಪರಿಶೀಲಿಸದೇ ಇದ್ದರೆ, ವಿತ್ತೀಯ ಅವಕಾಶಗಳನ್ನು ಅದು ಸಂಕುಚಿತಗೊಳಿಸುತ್ತದೆ. ಹೀಗಾಗಿ ದೀರ್ಘಾವಧಿಯಲ್ಲಿ ಸುಸ್ಥಿರ ಹಣಕಾಸು ಸ್ಥಿತಿ ಕಾಯ್ದುಕೊಳ್ಳುವಂತೆ ಸಹಾಯಧನ ಯೋಜನೆಗಳನ್ನು ಮರುವಿನ್ಯಾಸ ಮಾಡಬೇಕು ಎಂದು ಮುನ್ನಂದಾಜು ಒತ್ತಿ ಹೇಳಿದೆ.

ಚುನಾವಣಾ ಸಂದರ್ಭದಲ್ಲಿ ಇಂತಹ ಹೊಸ ಯೋಜನೆಗಳನ್ನು ಘೋಷಿಸಿದರೆ, ರಾಜ್ಯದ ಆರ್ಥಿಕ ಸ್ಥಿತಿ ಮತ್ತು ಆರ್ಥಿಕ ಶಿಸ್ತು ಕಾಯ್ದುಕೊಳ್ಳುವುದು ಸವಾಲಾಗಬಹುದು ಎಂದು ಮುನ್ನಂದಾಜು ಹೇಳಿದೆ.

₹100 ಕೋಟಿ ಅನುದಾನಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ ನೀಡಲು ಮುಖ್ಯಮಂತ್ರಿಯವರ ಜತೆ ಚರ್ಚಿಸುವುದಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಲ್ಲವ–ಈಡಿಗ ಸಮುದಾಯಕ್ಕೆ ಸೇರಿದ ಶಾಸಕರು ಹೆಚ್ಚಿನ ಅನುದಾನಕ್ಕೆ ಪಟ್ಟು ಹಿಡಿದರು. ಬಿಜೆಪಿಯ ರಾಜೇಶ್ ನಾಯಕ್ ಅವರು ವಿಷಯ ಪ್ರಸ್ತಾಪಿಸಿದರು.

ವಿಷಯ ಪ್ರಸ್ತಾಪಿಸಿದ ರಾಜೇಶ ನಾಯಕ್, 'ನಿಗಮಕ್ಕೆ ಅಧ್ಯಕ್ಷರನ್ನು ನೇಮಿಸಿದ್ದು ಬಿಟ್ಟರೆ ಬೇರೆ ಏನೂ ಆಗಿಲ್ಲ. ನಿಗಮಕ್ಕೆ ಹೆಚ್ಚಿನ ಅನುದಾನ ನೀಡಿ ಚಟುವಟಿಕೆಗಳನ್ನು ಆರಂಭಿಸಬೇಕು' ಎಂದು ಒತ್ತಾಯಿಸಿದರು.

ಬಿಜೆಪಿಯ ವಿ.ಸುನಿಲ್‌ಕುಮಾರ್, 'ನಿಗಮಕ್ಕೆ ಎಂಟು ತಿಂಗಳ ಹಿಂದೆಯೇ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ. ಆದರೆ, ನಿಗಮ ನೋಂದಣಿ ಆಗಿದ್ದು ಜನವರಿಯಲ್ಲಿ. ಬಿಜೆಪಿ ಸರ್ಕಾರ ಇದ್ದಾಗ, ಕೋಶ ಸ್ಥಾಪಿಸಿ ಮೂಲ ಧನ ₹10 ಕೋಟಿ ಇಡಲಾಗಿತ್ತು. ಅದನ್ನೇ ವರ್ಗಾವಣೆ ಮಾಡಿ ಕೊಂಡಿದ್ದೀರಿ. ಕನಿಷ್ಠ ₹100 ಕೋಟಿ ಅನುದಾನ ನೀಡಬೇಕು' ಎಂದು ಒತ್ತಾಯಿಸಿದರು.

ನಾರಾಯಣ ಗುರು ನಿಗಮ

ಕಾಂಗ್ರೆಸ್‌ನ ಬೇಳೂರು ಗೋಪಾಲಕೃಷ್ಣ, 'ಈ ನಿಗಮಕ್ಕೆ ₹500 ಕೋಟಿ ನಿಗದಿ ಮಾಡಬೇಕು' ಎಂದರು.

ಗುರ್ಮೆ ಸುರೇಶ್ ಶೆಟ್ಟಿ, 'ಸೇಂದಿ ಇಳಿಸುವುದನ್ನು ನಿಷೇಧಿಸಿರುವ ಕಾರಣ 1.25 ಲಕ್ಷ ಜನ ವಲಸೆ ಹೋಗಿದ್ದಾರೆ. ಮಲೆನಾಡು–ಕರಾವಳಿ ಭಾಗದಲ್ಲಿ ಸೇಂದಿ ಇಳಿಸಲು ಅವಕಾಶ ಇದ್ದು, ಉಳಿದ ಕಡೆ ಇರುವ ನಿರ್ಬಂಧವನ್ನು ತೆಗೆದು ಹಾಕಬೇಕು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಶಿವರಾಜ್ ತಂಗಡಗಿ, 'ಬಿಜೆಪಿ ಅವಧಿಯಲ್ಲಿ ಕೋಶ ಸ್ಥಾಪಿಸಿ ₹10 ಕೋಟಿ ಇಟ್ಟಿದ್ದು ಬಿಟ್ಟರೆ ಬೇರೆ ಏನೂ ಮಾಡಿಲ್ಲ. ನಾವು ರೂಪುರೇಷೆ ಸಿದ್ಧ ಮಾಡಿ ಅಭಿವೃದ್ಧಿ ನಿಗಮ ಮಾಡಿದ್ದೇವೆ. ₹10 ಕೋಟಿಯನ್ನು ನಿಗಮಕ್ಕೆ ವರ್ಗಾವಣೆ ಮಾಡಿದ್ದೇವೆ. ಹೆಚ್ಚಿನ ಅನುದಾನಕ್ಕೆ ಮುಖ್ಯಮಂತ್ರಿ ಜತೆ ಚರ್ಚಿಸುತ್ತೇನೆ' ಎಂಬ ಭರವಸೆ ನೀಡಿದರು.

'ನಿಗಮಕ್ಕೆ ₹50 ಕೋಟಿಯಿಂದ ₹100 ಕೋಟಿ ಅನುದಾನ ಇಡಬೇಕು ಎಂಬ ಅಪೇಕ್ಷೆ ಇದೆ' ಎಂದೂ ಹೇಳಿದರು.



ಸಿಲಿಂಡರ್ ಕೊರತೆ ಸಮಸ್ಯೆ ಬಿಜೆಪಿ – ಕಾಂಗ್ರೆಸ್ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇರಾನ್–ಇಸ್ರೇಲ್–ಅಮೆರಿಕ ಯುದ್ಧದ ಕಾರಣ ಉಂಟಾಗಿರುವ ಎಲ್‌ಪಿಜಿ ದರ ಏರಿಕೆ ಮತ್ತು ಸಿಲಿಂಡರ್‌ಗಳ ಕೊರತೆ ವಿಚಾರವು ವಿಧಾನಸಭೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ಭಾರಿ ವಾಕ್ಸಮರಕ್ಕೆ ದಾರಿ ಮಾಡಿಕೊಟ್ಟಿತು.

ಕಾಂಗ್ರೆಸ್‌ನ ಎಚ್.ಡಿ.ರಂಗನಾಥ್ ಅವರು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ಉತ್ತರ ನೀಡುವಾಗ, ರಂಗನಾಥ್ ಅವರು, 'ರಾಜ್ಯದಲ್ಲಿ ಗ್ಯಾಸ್ ಸಿಲಿಂಡರ್ ದರ ₹900 ಇದ್ದದ್ದು, ₹1,800 ಆಗಿದೆ. ಇದಕ್ಕೆ ಮೋದಿಯವರೇ ಕಾರಣ, ಅವರ ದುರ್ಬಲ ವಿದೇಶಾಂಗ ನೀತಿ ಮತ್ತು ಕೆಟ್ಟ ಆರ್ಥಿಕ ನೀತಿಗಳೇ ಕಾರಣ' ಎಂದು ಆರೋಪಿಸಿದರು.

ಇದಕ್ಕೆ ತೀವ್ರವಾಗಿ ಆಕ್ಷೇಪಿಸಿದ ಬಿಜೆಪಿ ಸದಸ್ಯರು, 'ಯುದ್ಧದ ಸಮಯದಲ್ಲೂ ಕಾಂಗ್ರೆಸ್ ರಾಜಕೀಯ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ. ಪ್ರತಿ ದಿನ ಎಲ್ಲ ವಿಚಾರದಲ್ಲೂ ಮೋದಿ ಅವರನ್ನು ಟೀಕಿಸದೇ ಇದ್ದರೆ ಇವರಿಗೆ ತಿಂದ ಅನ್ನ ಅರಗುವುದಿಲ್ಲ' ಎಂದು ಕಿಡಿಕಾರಿದರು.

ಆಗ ಮಧ್ಯ ಪ್ರವೇಶಿಸಿದ ಸಚಿವ ಪ್ರಿಯಾಂಕ್ ಖರ್ಗೆ, '75 ದಿನಗಳಿಗೆ ಸಾಕಾಗುವಷ್ಟು ಇಂಧನ ಇದೆ ಎಂದು ಕೇಂದ್ರ ಸರ್ಕಾರ ಫೆಬ್ರುವರಿಯಲ್ಲಿ ಹೇಳಿತ್ತು. ಮಾರ್ಚ್ 6ರಂದು ಮತ್ತೆ ಹೇಳಿಕೆ ನೀಡಿ, ಇಂಧನ ಮತ್ತು ಅನಿಲದ ಕೊರತೆ ಇಲ್ಲ ಎಂದು ಹೇಳಿತ್ತು. ಈಗ ಎಲ್ಲೆಡೆ ಕೊರತೆ ಆಗಿದೆ. ಆರ್ಥಿಕ ನೀತಿ ಏನಾಗಿದೆ? ವಿದೇಶಾಂಗ ನೀತಿ ಏನಾಗಿದೆ? ಕ್ರಿಕೆಟ್‌ನಲ್ಲಿ ಇಂಡಿಯಾ ಟೀಂಗೆ ಅಭಿನಂದನೆ ಹೇಳುವ ಮೋದಿ ಈ ವಿಚಾರದಲ್ಲಿ ಏಕೆ ಮಾತನಾಡುತ್ತಿಲ್ಲ' ಎಂದು ಏರಿದ ಧ್ವನಿಯಲ್ಲಿ ಪ್ರಶ್ನಿಸಿದರು.

ಇದಕ್ಕೆ ತಿರುಗೇಟು ನೀಡಿದ ಬಿಜೆಪಿಯ ವಿ.ಸುನಿಲ್‌ಕುಮಾರ್, 'ಯುದ್ಧದ ಬಿಸಿ ಎಲ್ಲಾ ದೇಶಗಳಿಗೂ ತಟ್ಟಿದೆ. ಆದರೆ, ನೀವು ಈ ವಿಷಯವನ್ನು ರಾಜಕೀಯಕ್ಕೆ ಬಳಸಿಕೊಂಡಿದ್ದು ಅಕ್ಷಮ್ಯ. ರಾಜ್ಯದಲ್ಲಿ ಸರ್ವರ್ ವ್ಯವಸ್ಥೆ ಕುಸಿದುಹೋಗಿದ್ದು, ಐಟಿ ಸಚಿವರಾಗಿ ಅದನ್ನು ಸರಿಪಡಿಸುವ ಯೋಗ್ಯತೆ ನಿಮಗಿಲ್ಲ. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಔಷಧ ಸಿಗುತ್ತಿಲ್ಲ. ಕರಾವಳಿಯಲ್ಲಿ ಮರಳು ಸಿಗುತ್ತಿಲ್ಲ. ಸರ್ಕಾರಿ ನೌಕರರಿಗೆ ಸಂಬಳ ಸಿಗುತ್ತಿಲ್ಲ. ಮೊದಲು ನಿಮ್ಮ ಲೋಪಗಳನ್ನು ಸರಿಪಡಿಸಿಕೊಳ್ಳಿ. ಯುದ್ಧ ನಡೆಯುವಾಗ ಹೇಗೆ ನಡೆದುಕೊಳ್ಳಬಾರದು ಎಂಬುದಕ್ಕೆ ನಿಮ್ಮ ವರ್ತನೆಯೇ ನಿದರ್ಶನ' ಎಂದು ಹರಿಹಾಯ್ದರು. ಇದು ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಗದ್ದಲಕ್ಕೆ ಕಾರಣವಾಯಿತು.

ಎಲ್ಲದಕ್ಕೂ ಮೋದಿಯವರನ್ನೇ ಗುರಿಯಾಗಿಸಿಕೊಂಡು ಮಾತನಾಡುವುದು ಪ್ರಪಂಚದಲ್ಲಿ ಬಂದಿರುವ ಸಮಸ್ಯೆ ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಹೇಳಿದರು.

ಈ ವಾಗ್ವಾದದ ಮಧ್ಯೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ ಆರ್. ಅಶೋಕ ನಡುವೆ ಪರಸ್ಪರ ಮಾತಿನ ಚಕಮಕಿ ನಡೆಯಿತು.

'ಯುದ್ಧದ ಕಾರಣ ದೇಶ ಸಂಕಷ್ಟದಲ್ಲಿರುವಾಗ ಎಲ್ಲರೂ ಸಹಕರಿಸಬೇಕು' ಎಂದು ಸಚಿವ ಕೆ.ಎಚ್.ಮುನಿಯಪ್ಪ ಅವರು ಹೇಳಿದಾಗ, ಬಿಜೆಪಿ ಸದಸ್ಯರು ಮೇಜುಕುಟ್ಟಿ ಹರ್ಷ ವ್ಯಕ್ತಪಡಿಸಿದರು.

ಸಭಾಧ್ಯಕ್ಷ ಯು.ಟಿ.ಖಾದರ್ ಎರಡು ಪಕ್ಷಗಳ ಸದಸ್ಯರ ಮಾತುಗಳಿಗೆ ಕಡಿವಾಣ ಹಾಕಿ ಸಮಾಧಾನಗೊಳಿಸಿ ಕೂರಿಸುವ ಮೂಲಕ ಗದ್ದಲಕ್ಕೆ ತೆರೆ ಎಳೆದರು.

ಸಿ.ಎಂ– ಅಶೋಕ ಜಟಾಪಟಿ

'ಇಂಧನ ಮತ್ತು ಅಡುಗೆ ಅನಿಲ ಪೂರೈಕೆಯಲ್ಲಿ ಕೊರತೆ ಆಗಬಾರದು ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಆದರೆ ಕಾಂಗ್ರೆಸ್ ಸುಮ್ಮನೆ ರಾಜಕೀಯ ಮಾಡುತ್ತಿದೆ. ಹೋಟೆಲ್ ಮಾಲೀಕರು ಮುಷ್ಕರ ನಡೆಸಬೇಕು ಎಂದು ಸಿದ್ದರಾಮಯ್ಯ ಕರೆ ನೀಡಿದ್ದಾರೆ. ಯಾವುದೇ ಮುಖ್ಯಮಂತ್ರಿ ಈ ರೀತಿ ನಡೆದುಕೊಂಡಿರಲಿಲ್ಲ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

ಈ ಮಾತಿನಿಂದ ಕೆರಳಿದ ಸಿದ್ದರಾಮಯ್ಯ, 'ನಾನೂ ಆ ರೀತಿ ಹೇಳಿಯೇ ಇಲ್ಲ. ಹೋಟೆಲ್ ಮಾಲೀಕರು ನನ್ನನ್ನು ಭೇಟಿ ಆದಾಗ ಅವರ ಬೇಡಿಕೆ ಸರಿ ಇದೆ ಎಂದು ಹೇಳಿದ್ದೇನೆಯೇ ಹೊರತು ಮುಷ್ಕರ ಮಾಡುವಂತೆ ಪ್ರಚೋದನೆ ನೀಡಿಲ್ಲ' ಎಂದು ಏರಿದ ಧ್ವನಿಯಲ್ಲಿ ಪ್ರತಿಪಾದಿಸಿದರು.

'ನೀವೇನಾದರೂ ನನ್ನ ಮಾತು ಕೇಳಿದ್ದೀರಾ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. 'ಮಾಧ್ಯಮಗಳಲ್ಲಿ ನೀವು ಹೇಳಿರುವುದು ವರದಿಯಾಗಿದೆ. ಬೇಕಿದ್ದರೆ ಅದರ ಪ್ರತಿಯನ್ನು ಕಳಿಸುತ್ತೇನೆ' ಎಂದು ಅಶೋಕ ಪ್ರತಿಕ್ರಿಯಿಸಿದು. 'ನಾನು ಹೇಳಿಲ್ಲ, ಹೇಳಿಲ್ಲ, ಹೇಳಿಲ್ಲ...' ಎಂದು ಸಿದ್ದರಾಮಯ್ಯ, 'ಹೇಳಿದ್ದೀರಿ, ಹೇಳಿದ್ದೀರಿ, ಹೇಳಿದ್ದೀರಿ...' ಎಂದು ಅಶೋಕ, ಹೀಗೆ ಪದೇ ಪದೇ ಹೇಳಿಕೊಂಡರು.

ಈ ಹಂತದಲ್ಲಿ ಇಬ್ಬರ ಮಧ್ಯೆ ರೋಷಾವೇಶದ ವಾಕ್ಸಮರ ನಡೆಯಿತು.

ಮುಖ್ಯಾಂಶಗಳು

- ದುರ್ಬಲ ವಿದೇಶಾಂಗ ನೀತಿ: ರಂಗನಾಥ್ ಆರೋಪ
- ಯುದ್ಧದ ಬಿಸಿ ಎಲ್ಲರಿಗೂ ತಟ್ಟಿದೆ: ಸುನಿಲ್‌ಕುಮಾರ್

> ಬಿಜೆಪಿ, ಮೋದಿ ವಿರೋಧಿ ಸೆಲ್ ಅಂತ ಮಾಡಿ ಪ್ರಿಯಾಂಕ್ ಅವರನ್ನು ನೇಮಿಸಿ. ಸದಾ ಬಿಜೆಪಿ, ಆರ್‌ಎಸ್‌ಎಸ್, ಮೋದಿ ವಿರುದ್ಧ ಟೀಕೆ ಮಾಡದಿದ್ದರೆ ಅವರಿಗೆ ಸಮಾಧಾನವೇ ಇಲ್ಲ
> **ಎಸ್.ಸುರೇಶ್‌ಕುಮಾರ್,** ಬಿಜೆಪಿ

> ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯಿಂದ ಹೋಟೆಲ್‌ಗಳ ಸಂಕಷ್ಟಕ್ಕೆ ಸಿಲುಕಿವೆ. ಮೋದಿ ಸರ್ಕಾರ ಏನು ಮಾಡುತ್ತಿದೆ.
> **ಎಚ್.ಡಿ.ರಂಗನಾಥ್,** ಕಾಂಗ್ರೆಸ್

> ಕೆಟ್ಟ ವಿದೇಶಾಂಗ ನೀತಿ, ಆರ್ಥಿಕ ನೀತಿಯಿಂದ ದೇಶ ದಿವಾಳಿ ಆಗಿದೆ. ಟ್ರಂಪ್ ತಮ್ಮ ಫ್ರೆಂಡ್ ಅನ್ನುತ್ತಾರೆ. ಮೋದಿ ಈಗ ಎಲ್ಲಿ ಹೋಗಿದ್ದಾರೆ ? ಏಕೆ ಬಾಯಿ ಬಿಡುತ್ತಿಲ್ಲ? ಎಸ್ಮಾ ಏಕೆ ಜಾರಿ ಮಾಡಿದ್ದಾರೆ?
> **ಪ್ರಿಯಾಂಕ್ ಖರ್ಗೆ,** ಸಚಿವ

> ನಾವು ಜನರಿಗಾಗಿ ಸಾಲ ಮಾಡಿ, ಜನರಿಗೆ ಹಣ ನೀಡಿದ್ದೇವೆ. ಮೋದಿ ಅವರು ಯಾರಿಗಾಗಿ ಸಾಲ ಮಾಡಿದ್ದಾರೆ?
> **ಎಂ.ಆರ್.ಸೀತಾರಾಂ,** ಕಾಂಗ್ರೆಸ್ ಸದಸ್ಯ

> ಇಡೀ ಪ್ರಪಂಚವನ್ನು ತಿರುಗಾಡಿ ಬನ್ನಿ. ನಮ್ಮ ದೇಶವನ್ನು ನೋಡುವ ರೀತಿಯೇ ಬದಲಾಗಿದೆ. ಮೋದಿ ಅವರು ಏನು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ
> **ಎನ್.ರವಿಕುಮಾರ್,** ವಿರೋಧ ಪಕ್ಷದ ಮುಖ್ಯ ಸಚೇತಕ

> ಮೋದಿಯನ್ನು ತಾನು ಕುಣಿಸುತ್ತಿದ್ದೇನೆ ಎಂದು ಅಮೆರಿಕದ ಅಧ್ಯಕ್ಷ ಟ್ರಂಪ್ ಹೇಳುತ್ತಲೇ ಇದ್ದಾರೆ. ಮೋದಿ ಅವರನ್ನು ಯಾರು ಹೇಗೆ ಹೊಗಳುತ್ತಿದ್ದಾರೆ ಎಂಬುದನ್ನು ಇಡೀ ಜಗತ್ತು ನೋಡುತ್ತಿದೆ
> **ಬಿ.ಕೆ.ಹರಿಪ್ರಸಾದ್,** ಕಾಂಗ್ರೆಸ್ ಸದಸ್ಯ

'ಪ್ರಧಾನಿಗೆ ಬೈದರೆ ಅನುದಾನ ಬರುತ್ತದೆಯೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ, ಹಣಕಾಸು ಸಚಿವರನ್ನು ಕಾಂಗ್ರೆಸ್‌ನವರು ಬೈಯುತ್ತಿದ್ದರೆ ಮತ್ತು ಅವಮಾನ ಮಾಡುತ್ತಿದ್ದರೆ, ರಾಜ್ಯಕ್ಕೆ ಹಣ ಹೇಗೆ ಬರುತ್ತದೆ' ಎಂದು ವಿಧಾನ ಪರಿಷತ್ತಿನ ಕಲಾಪದಲ್ಲಿ ಬಿಜೆಪಿಯ ಡಿ.ಎಸ್. ಅರುಣ್ ಪ್ರಶ್ನಿಸಿದರು.

ಬುಧವಾರದ ಕಲಾಪದಲ್ಲಿ ಬಜೆಟ್ ಕುರಿತು ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ರಾಜ್ಯವನ್ನು ಸಾಲದ ಸುಳಿಗೆ ಸಿಲುಕಿಸಿದ್ದಾರೆ. ಕೇಂದ್ರ ಹಣ ನೀಡುತ್ತಿಲ್ಲ ಎಂದು ಸುಳ್ಳು ಹೇಳುತ್ತಾರೆ' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಎಂ.ಆರ್. ಸೀತಾರಾಂ, 'ಹಣಕಾಸು ಆಯೋಗ ತೆರಿಗೆ ಪಾಲಿನಲ್ಲಿ ಹಂಚಿಕೆ ಕಡಿಮೆ ಮಾಡಿದೆ. ಕೇಂದ್ರವೂ ವಿವಿಧ ಅನುದಾನಗಳನ್ನು ತಡೆಹಿಡಿದಿದೆ' ಎಂದು ಹೇಳಿದರು.

ಇದರಿಂದ ಸಿಟ್ಟಿಗೆದ್ದ ಅರುಣ್ ಅವರು, 'ಸಿಗಂದೂರು ಸೇತುವೆ ಉದ್ಘಾಟನೆಗೆ ಬಂದಿದ್ದ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಅವಮಾನ ಮಾಡಿ ಕಳುಹಿಸಿದರು. ಹೀಗಿದ್ದಾಗ ರಾಜ್ಯಕ್ಕೆ ಹಣ ಏಕೆ ನೀಡಬೇಕು' ಎಂದು ಪ್ರತಿಪಾದಿಸಿದರು.

ಸೀತಾರಾಂ ಅವರು ಬಜೆಟ್ ಕುರಿತು ಮಾತನಾಡಿ, 'ಸಿದ್ದರಾಮಯ್ಯ ಅವರು ಅಭಿವೃದ್ಧಿಗೆ ಹಣ ನೀಡಿದ್ದಾರೆ. 17 ಬಜೆಟ್‌ಗಳನ್ನು ಮಂಡಿಸಿರುವ ಅವರನ್ನು ಅಭಿನಂದಿಸುವ ಸೌಜನ್ಯವೂ ನಿಮಗಿಲ್ಲ. ಬರಿಯ ಸುಳ್ಳುಗಳನ್ನು ಹೇಳುತ್ತೀರಿ' ಎಂದರು.

'2014ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಅಧಿಕಾರದಿಂದ ಇಳಿಯುವಾಗ ದೇಶದ ಒಟ್ಟು ಸಾಲ ₹55 ಲಕ್ಷ ಕೋಟಿಯಷ್ಟಿತ್ತು. ಸ್ವಾತಂತ್ರ್ಯ ಬಂದಾಗಿನಿಂದ 2014ರವರೆಗೆ ಇದ್ದ ಸಾಲ ₹55 ಲಕ್ಷ ಕೋಟಿ ಮಾತ್ರ. ಮೋದಿ ಅವರು ಪ್ರಧಾನಿ ಆದ 11 ವರ್ಷಗಳಲ್ಲಿ ದೇಶದ ಸಾಲ ₹197 ಲಕ್ಷ ಕೋಟಿಯಷ್ಟಾಗಿದೆ. ಸಾಲದ ಸುಳಿ ಯಾವುದು' ಎಂದು ಪ್ರಶ್ನಿಸಿದರು.

ಪರಿಷತ್ತು ಖಾಲಿ–ಖಾಲಿ ಸಭಾಪತಿ ಹೊರಟ್ಟಿ ಗರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿನ ಬುಧವಾರದ ಕಲಾಪದ ವೇಳೆ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಇದ್ದರು. ಎರಡೂ ಕಡೆಯ ಕುರ್ಚಿಗಳು ಖಾಲಿ ಇರುವುದನ್ನು ಗಮನಿಸಿದ ಸಭಾಪತಿ ಬಸವರಾಜ ಹೊರಟ್ಟಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು.

ಮಧ್ಯಾಹ್ನ 3.15ಕ್ಕೆ ಆರಂಭವಾಗ ಬೇಕಿದ್ದ ಕಲಾಪವು, ಕೋರಂ ಕೊರತೆಯಿಂದ 3.40ಕ್ಕೆ ಆರಂಭವಾಯಿತು. ಕಲಾಪದ ಅಂತ್ಯಕ್ಕೆ ಬೆರಳೆಣಿಕೆಯ ಸದಸ್ಯರಷ್ಟೇ ಸದನದಲ್ಲಿ ಇದ್ದರು.

ಸಭಾನಾಯಕ ಎಸ್.ಎನ್. ಬೋಸರಾಜು, ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರನ್ನು ನಿಲ್ಲಿಸಿದ ಹೊರಟ್ಟಿ ಅವರು, ಸದನ ಯಾರಿಗಾಗಿ ನಡೆಸಬೇಕು ಎಂದು ಪ್ರಶ್ನಿಸಿದರು.

'ಸದಸ್ಯರಿಗೆ ಚರ್ಚೆ ಮತ್ತು ಕಲಾಪದಲ್ಲಿ ಹೊಸತನ್ನು ಕಲಿಯಲು ಅವಕಾಶವಿರುತ್ತದೆ ಎಂಬ ಆಸಕ್ತಿಯೇ ಇಲ್ಲ. ಸದಸ್ಯರು ಕಲಾಪಕ್ಕೆ ಬರುವಂತೆ ನೋಡಿಕೊಳ್ಳುವುದು ನಿಮ್ಮೆಲ್ಲರ ಜವಾಬ್ದಾರಿ' ಎಂದರು.

'ಪ್ರಜಾವಾಣಿ' ವರದಿ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಲ್ಲದ 'ಡಿಜಿಟಲ್ ಅರೆಸ್ಟ್ ಸುಲಿಗೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಮಾರ್ಚ್ 9ರಂದು ಪ್ರಕಟವಾದ ವರದಿಯನ್ನು ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪಿಸಿದ ಕಿಶೋರ್ ಕುಮಾರ್ ಪುತ್ತೂರು, ಆನ್‌ಲೈನ್ ವಂಚನೆ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.


ನಿಲ್ಲದ 'ಡಿಜಿಟಲ್ ಅರೆಸ್ಟ್' ಸುಲಿಗೆ

ಆರ್ಥಿಕ ವಂಚನೆಯ ಪ್ರಕರಣಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕು. ಸೈಬರ್ ಅಪರಾಧ ಠಾಣೆಗಳಲ್ಲಿ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿಯಲ್ಲಿ ದಾಖಲಾದ ಪ್ರಕರಣಗಳನ್ನು ತ್ವರಿತವಾಗಿ ತನಿಖೆ ನಡೆಸಿ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡಬೇಕು. ಸೈಬರ್ ಅಪರಾಧ ಠಾಣೆಗಳಿಗೆ ಅಗತ್ಯ ಸಿಬ್ಬಂದಿಯನ್ನೂ ನೇಮಿಸಬೇಕು ಎಂದು ಕೋರಿದರು.

ವೈಟ್‌ಫೀಲ್ಡ್‌ನ ಇ.ಸಿ.ಸಿ ರಸ್ತೆಯ ಲಕ್ಷ್ಮಿ ಎನ್‌ಕ್ಲೇವ್ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿರುವ 64 ವರ್ಷದ ವೃದ್ಧರೊಬ್ಬರಿಗೆ 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ವಂಚಕರು ಬೆದರಿಸಿ ಲಕ್ಷಾಂತರ ರೂಪಾಯಿ ಸುಲಿಗೆ ಮಾಡಿದ್ದ ಸಂಬಂಧಿಸಿದಂತೆ ಪ್ರಕಟವಾಗಿದ್ದ ವರದಿಯನ್ನು ಕಿಶೋರ್ ಪ್ರಸ್ತಾಪಿಸಿದರು.

'ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 1,655 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ವಂಚನೆ ಪ್ರಕರಣಗಳು ನಡೆದಿದ್ದು, ₹372 ಕೋಟಿಯಷ್ಟು ವಂಚನೆ ನಡೆದಿದೆ. 1,372 ಪ್ರಕರಣಗಳಲ್ಲಿ ಆರೋಪಿಗಳು ಪತ್ತೆ ಆಗಿಲ್ಲ. ₹339 ಕೋಟಿ ಜಪ್ತಿ ಮಾಡಿಕೊಳ್ಳುವುದು ಬಾಕಿಯಿದೆ' ಎಂದು ಕಿಶೋರ್ ಪ್ರಶ್ನೆಗೆ ರಾಜ್ಯ ಸರ್ಕಾರ ಉತ್ತರಿಸಿದೆ.

ಕಳೆದ ಮೂರು ವರ್ಷಗಳಲ್ಲಿ 59,626 ಇತರೆ ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. ಆ ಪೈಕಿ 48,173 ಪ್ರಕರಣಗಳಲ್ಲಿ ಆರೋಪಿಗಳ ಪತ್ತೆಯಾಗಿಲ್ಲ ಎಂದು ಸರ್ಕಾರ ತಿಳಿಸಿದೆ.

ಸಾರಿಗೆ ಇಲಾಖೆ ಬಡ್ತಿಗೆ ನಕಲಿ ದಾಖಲೆ: ಕ್ರಮಕ್ಕೆ ಶರವಣ ಒತ್ತಾಯ

ಪ್ರಜಾವಾಣಿ ವಾರ್ತೆ



ಶರವಣ

ಬೆಂಗಳೂರು: ಸಾರಿಗೆ ಇಲಾಖೆಯ ಲಿಪಿಕ ವರ್ಗದ ಸಿಬ್ಬಂದಿ ಬಡ್ತಿ ಪಡೆಯಲು ನಕಲಿ ಡಿಪ್ಲೊಮಾ ಪ್ರಮಾಣಪತ್ರ ನೀಡಿದ ಆರೋಪಗಳ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಲಾಗುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಪರಿಷತ್‌ನಲ್ಲಿ ಜೆಡಿಎಸ್‌ನ ಟಿ.ಎ.ಶರವಣ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, 'ಅಕ್ರಮದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯೂ ಭಾಗಿಯಾಗಿರುವ ಶಂಕೆ ಇದೆ. ಇದರಿಂದ ನಿವೃತ್ತ ನ್ಯಾಯಾಧೀಶ ನಾರಾಯಣ ಅವರನ್ನು ಈಗಾಗಲೇ ನೇಮಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಶರವಣ ಮಾತನಾಡಿ, 'ಕೆಸಿಎಸ್‌ಆರ್ ನಿಯಮದಂತೆ ನಕಲಿ ಪ್ರಮಾಣಪತ್ರ ನೀಡಿದವರ ಮೇಲೂ ಕ್ರಮವಾಗಬೇಕು. ಮೈಸೂರು, ಬೆಳಗಾವಿಗಳಲ್ಲಿ ಪರೀಕ್ಷೆ ಬರೆದವರು ಕೇವಲ ಒಂದು ಗಂಟೆಯಲ್ಲಿ ಬೆಂಗಳೂರಿಗೆ ಬಂದು ಹೇಗೆ ಮತ್ತೊಂದು ಪರೀಕ್ಷೆ ಬರೆಯಲು ಸಾಧ್ಯ? ಈ ಕುರಿತು ತನಿಖೆಯಾಗಬೇಕು. ಉದ್ಯೋಗವಿಲ್ಲದೆ ಸಾಕಷ್ಟು ಜನರಿಗೆ ತೊಂದರೆಯಾಗಿದೆ. ನೇಮಕಾತಿಗಾಗಿ ಕಾಯುತ್ತಿರುವವರಿಗೆ ನ್ಯಾಯ ಸಿಗಬೇಕು' ಎಂದರು.

ಸಾರಿಗೆ ಇಲಾಖೆಯ ಲಿಪಿಕ ವರ್ಗದವರಿಗೆ 'ಸಿ' ಗ್ರೂಪ್‌ನ ಮೋಟಾರು ವಾಹನ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಬಡ್ತಿ ಪಡೆಯಲು ಡಿಪ್ಲೊಮಾ ಕಡ್ಡಾಯ ಮಾಡಲಾಗಿದೆ. ಇಲಾಖೆಯಲ್ಲಿನ ಶೇ 10ರಷ್ಟು ನೌಕರರಿಗೆ ಅವಕಾಶ ಮಾಡಿಕೊಟ್ಟು 2022ರಲ್ಲಿ ಆದೇಶ ಮಾಡಲಾಯಿತು. ಅವರಲ್ಲಿ ಹಲವರ ಪ್ರಮಾಣಪತ್ರಗಳು ನಕಲಿ ಎನ್ನುವ ಅನುಮಾನವಿದೆ. ಈ ಕುರಿತು ಹಿಂದೆ ಲೋಕಾಯುಕ್ತ ತನಿಖೆಗೆ ನೀಡುವ ಭರವಸೆ ನೀಡಲಾಗಿತ್ತು. ಆದರೆ, ಇಲ್ಲಿವರೆಗೂ ಕ್ರಮ ಆಗಿಲ್ಲ. ಈಗ ಮತ್ತೆ ಪ್ರಶ್ನೆ ಎತ್ತಿದ ನಂತರ ಅಕ್ರಮ ಎಸಗಿದವರಿಗೆ ನೋಟಿಸ್ ನೀಡಲಾಗಿದೆ ಎಂದರು.

ಪ್ರಶ್ನೋತ್ತರ

ವಿಧಾನಸಭೆ

ಅಂಗನವಾಡಿ: 90 ದಿನಗಳಲ್ಲಿ ಖಾಲಿ ಹುದ್ದೆ ಭರ್ತಿ

ಅಂಗನವಾಡಿ ಕೇಂದ್ರಗಳಲ್ಲಿ ಯಾವುದೇ ಹುದ್ದೆ ಖಾಲಿಯಾದ 90 ದಿನಗಳ ಒಳಗಾಗಿ ಭರ್ತಿ ಮಾಡಬೇಕು ಎಂದು ಡಿಸೆಂಬರ್‌ನಲ್ಲೇ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ಮೂಲಕ ನೇಮಕಾತಿ ಪ್ರಕ್ರಿಯೆ ನಡೆಸಲಾಗುವುದು.

ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ
ಪ್ರಶ್ನೆ: ಗುರ್ಮೆ ಸುರೇಶ್ ಶೆಟ್ಟಿ, ಬಿಜೆಪಿ

ಎರಡು ತಿಂಗಳಲ್ಲಿ ಸಹಾಯಧನ

ಮುಂದಿನ ಎರಡು ತಿಂಗಳಲ್ಲಿ 2023–24 ಮತ್ತು 2024–25 ನೇ ಸಾಲಿನ 'ಉದ್ಯೋಗಿನಿ' ಯೋಜನೆಯ ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗುವುದು. ಶಾಸಕರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳ ಆಯ್ಕೆ ಆಗುವುದು ವಿಳಂಬ ಆಗಿರುವುದರಿಂದ ಸಹಾಯಧನ ಪಾವತಿ ತಡವಾಗಿದೆ. ಈ ಸಂಬಂಧ ಸಮಿತಿ ಸಭೆಗಳನ್ನು ತುರ್ತಾಗಿ ನಡೆಸಿ, ಶಾಸಕರನ್ನು ಖುದ್ದಾಗಿ ಭೇಟಿ ಮಾಡಿ ಸಮಿತಿ ಸಭೆಯನ್ನು ನಡೆಸುವಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ
ಪ್ರಶ್ನೆ: ಸಿದ್ದು ಸವದಿ, ಬಿಜೆಪಿ

ಬ್ರಹ್ಮಾವರಕ್ಕೆ ಕೃಷಿ ಕಾಲೇಜು

ಉಡುಪಿ ಜಿಲ್ಲೆ ಬ್ರಹ್ಮಾವರದಲ್ಲಿ ಕೃಷಿ ಕಾಲೇಜು ಆರಂಭಿಸುವ ಬಗ್ಗೆ ತಜ್ಞರ ಸಮಿತಿಯಿಂದ ವರದಿ ಪಡೆದು, ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ
ಪ್ರಶ್ನೆ: ಕಿರಣ್ ಕುಮಾರ್ ಕೊಡ್ಗಿ, ಬಿಜೆಪಿ

ನೀರುಗಂಟಿ, ಬಿಲ್ ಕಲೆಕ್ಟರ್ ನೇರ ನೇಮಕಾತಿ

ನೀರುಗಂಟಿ, ಬಿಲ್ ಕಲೆಕ್ಟರ್ ಹುದ್ದೆಗಳ ನೇರ ನೇಮಕಾತಿಯನ್ನು ಜಿ.ಪಂ.ಗಳಿಂದಲೇ ಮಾಡಿಕೊಳ್ಳಬಹುದು. ಇದಕ್ಕೆ ಪ್ರಸ್ತಾವನೆ ತರುವ ಅಗತ್ಯವಿಲ್ಲ. ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಸೇವಾ ಜ್ಯೇಷ್ಠತೆ ಆಧಾರದ ಮೇಲೆ ವೇತನ ಹೆಚ್ಚಳ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ
ಪ್ರಶ್ನೆ: ರಾಜೇಗೌಡ ಟಿ.ಡಿ, ಕಾಂಗ್ರೆಸ್

ತಾರತಮ್ಯ ಮಾಡಿಲ್ಲ

ಹುಣಸೂರು ಕ್ಷೇತ್ರಕ್ಕೆ ಪ್ರಗತಿ ಕಾಲೋನಿ ಯೋಜನೆ, ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನ್‌ರಾಂ ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಿಲ್ಲ.

ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ
ಪ್ರಶ್ನೆ: ಹರೀಶ್‌ಗೌಡ ಜಿ.ಡಿ, ಜೆಡಿಎಸ್

ಪ್ರಗತಿಪಥ: 999 ರಸ್ತೆ ಅಂತಿಮ

ಪ್ರಗತಿ ಪಥ ಯೋಜನೆಯಡಿ ಎಡಿಬಿ ಅನುಮೋದನೆ ಮೇರೆಗೆ 999 ರಸ್ತೆಗಳನ್ನು ಅಂತಿಮಗೊಳಿಸಲಾಗಿದೆ. ಒಟ್ಟು 1,353 ರಸ್ತೆಗಳನ್ನು ಗುರುತಿಸಲಾಗಿದ್ದು, ಈ ಪೈಕಿ 293 ರಸ್ತೆಗಳು ಜೈವಿಕ ಸೂಕ್ಷ್ಮ ವಲಯ ಮತ್ತು ಸಂರಕ್ಷಿತ ಅರಣ್ಯಗಳ ಮೂಲಕ ಹಾದು ಹೋಗುವ ಕಾರಣ ಹೆಚ್ಚುವರಿ ಪರಿಶೀಲನೆ ಅಗತ್ಯ ಎಂದು ಎಡಿಬಿ ಹೇಳಿದೆ. ಇನ್ನುಳಿದ 61 ರಸ್ತೆಗಳನ್ನು ಬೇರೆ ಇಲಾಖೆಗಳು ಕೈಗೆತ್ತಿಕೊಂಡಿವೆ. ಮಾರ್ಗಸೂಚಿ ಸರಳಗೊಳಿಸಲು ಎಡಿಬಿಯನ್ನು ಕೋರಲಾಗಿದೆ.

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ
ಪ್ರಶ್ನೆ: ಕೆ.ಎಂ.ಶಿವಲಿಂಗೇಗೌಡ, ಕಾಂಗ್ರೆಸ್

ವಿಧಾನಪರಿಷತ್ತು

ಮಾರ್ಗಸೂಚಿ ದರ ಪರಿಷ್ಕರಣೆ: ರೈತರಿಗೇ ಲಾಭ

ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಕಾಲಕಾಲಕ್ಕೆ ಪರಿಷ್ಕರಣೆ ಮಾಡದೇ ಇದ್ದರೆ ಭೂಸ್ವಾಧೀನದ ಸಮಯದಲ್ಲಿ ರೈತರಿಗೆ ಅನ್ಯಾಯವಾಗುತ್ತದೆ. ಕಪ್ಪು ಹಣದ ಚಲಾವಣೆಗೆ ದಾರಿಯಾಗುತ್ತದೆ.

ಭೂಸ್ವಾಧೀನ ಕಾಯ್ದೆ 2013ರ ಅನ್ವಯ ರೈತರಿಗೆ ಪರಿಹಾರ ಮೊತ್ತ ನೀಡುವಾಗ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹಿಂದಿನ ಮೂರು ವರ್ಷಗಳಲ್ಲಿ ಮಾರಾಟವಾದ ನೋಂದಣಿ ದರಗಳಲ್ಲಿ ಅತಿ ಹೆಚ್ಚಿನ ದರದ ಶೇ 50ರಷ್ಟು ವಹಿವಾಟು ಪರಿಗಣಿಸಿ ಸ್ವತ್ತುಗಳ ಭೂಸ್ವಾಧೀನ ಪರಿಹಾರ ನಿಗದಿ ಮಾಡಲಾಗುತ್ತದೆ. ಮಾರ್ಗಸೂಚಿ ದರ ಪರಿಷ್ಕರಣೆ ಮಾಡದೇ ಇದ್ದರೆ ರೈತರಿಗೆ ಒಳ್ಳೆಯ ಪರಿಹಾರ ನೀಡಲು ಸಾಧ್ಯವಾಗದು. ದರ ಪರಿಷ್ಕರಣೆ ಮಾಡದೇ ಇದ್ದರೆ ಕಪ್ಪು ಹಣದ ವಹಿವಾಟಿಗೆ ದಾರಿಯಾಗುತ್ತದೆ. ಉದಾಹರಣೆಗೆ ₹70 ಲಕ್ಷ ಬೆಲೆಗೆ ಖರೀದಿಸಿದ ಜಮೀನನ್ನು ₹20 ಲಕ್ಷಕ್ಕೆ ನೋಂದಣಿ ಮಾಡಿಸುತ್ತಾರೆ.

ಕೃಷ್ಣ ಬೈರೇಗೌಡ, ಕಂದಾಯ ಸಚಿವ
ಪ್ರಶ್ನೆ: ಕೆ.ಎಸ್.ನವೀನ್, ಬಿಜೆಪಿ

ಪಶು ವೈದ್ಯರೂ ಸೇರಿ 6,757 ಹುದ್ದೆಗಳು ಖಾಲಿ

ಇಲಾಖೆಯಲ್ಲಿ ಪಶು ವೈದ್ಯರೂ ಸೇರಿ 6,757 ಹುದ್ದೆಗಳು ಖಾಲಿ ಇವೆ. 400 ಪಶುವೈದ್ಯಾಧಿಕಾರಿಗಳ ಹುದ್ದೆ ಭರ್ತಿಗೆ ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆ ನಡೆಸುತ್ತಿದೆ. ಇನ್ನೂ 400 ಹುದ್ದೆಗಳ ನೇಮಕಾತಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ.

ಕೆ.ವೆಂಕಟೇಶ್, ಪಶು ಸಂಗೋಪನಾ ಸಚಿವ,
ಪ್ರಶ್ನೆ: ಡಿ.ಎಸ್.ಅರುಣ್, ಬಿಜೆಪಿ

ತುಮಕೂರು–ಶಿವಮೊಗ್ಗ ಹೆದ್ದಾರಿ: 2027ಕ್ಕೆ ಪೂರ್ಣ

ತುಮಕೂರು–ಶಿವಮೊಗ್ಗ ಚತುಷ್ಪಥ ರಸ್ತೆ ಹೆದ್ದಾರಿಯ ನಾಲ್ಕು ಹಂತದ ಕಾಮಗಾರಿಗಳು 2027ರ ಮಾರ್ಚ್ ವೇಳೆಗೆ ಪೂರ್ಣಗೊಳ್ಳಲಿವೆ. ಮೊದಲ ಹಂತ ಮುಗಿದಿದೆ. ಎರಡನೇ ಹಂತ ಇದೇ ವರ್ಷದ ಏಪ್ರಿಲ್, ಮೂರನೇ ಹಂತ ಜೂನ್‌ಗೆ ಹಾಗೂ ಕೊನೆಯ ಹಂತ ಮುಂದಿನ ವರ್ಷ ಪೂರ್ಣಗೊಳ್ಳಲಿದೆ.

ಕರಾವಳಿ ಭಾಗದಲ್ಲಿ 15ಕ್ಕೂ ಹೆಚ್ಚು ಸೇತುವೆಗಳು ದುರ್ಬಲವಾಗಿದ್ದು, ಲಘು ವಾಹನಗಳ ಸಂಚಾರಕ್ಕಷ್ಟೇ ಬಳಸಲು ಸೂಚಿಸಲಾಗಿದೆ. ಸೇತುವೆಗಳ ಪುನರ್ ನಿರ್ಮಾಣಕ್ಕೆ ₹516.12 ಕೋಟಿ, ದುರಸ್ತಿಗೆ ₹3.06 ಕೋಟಿ ನೀಡಲಾಗಿದೆ. ಇನ್ನೂ ₹129 ಕೋಟಿ ನೀಡಲಾಗುವುದು.

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ
ಪ್ರಶ್ನೆ: ಬಲ್ಕೀಶ್ ಬಾನು, ಐವನ್ ಡಿಸೋಜ, ಕಾಂಗ್ರೆಸ್

'ಭಾವಿ ಸಿ.ಎಂ ಡಿಕೆಶಿ ಮನಸು ಮಾಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎತ್ತಿನಹೊಳೆ ಕಾಮಗಾರಿಯಿಂದಾಗಿ ನನ್ನ ಕ್ಷೇತ್ರದ (ಬೇಲೂರು) ರಸ್ತೆ ಸಂಪರ್ಕ ಹಾಳಾಗಿದ್ದು, ಭಾವಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಸ್ಯೆಯನ್ನು ನಿವಾರಿಸಲು ಮನಸು ಮಾಡಬೇಕು' ಎಂದು ಬಿಜೆಪಿಯ ಎಚ್.ಕೆ. ಸುರೇಶ್ ಮನವಿ ಮಾಡಿದ ಪ್ರಸಂಗ ನಡೆಯಿತು.

ವಿಧಾನಸಭೆಯಲ್ಲಿ ತಮ್ಮ ಬೇಡಿಕೆ ಮುಂದಿಟ್ಟ ಸುರೇಶ್, '₹500 ಕೋಟಿ ಕೇಳಿದ್ದಕ್ಕೆ ₹50 ಕೋಟಿ ಬರೆದಿದ್ದಾರೆ ಭಾವಿ ಮುಖ್ಯಮಂತ್ರಿಗಳು ನೋಡ್ರಪ್ಪ... ಎಂದು ನಮ್ಮ ಜನರಿಗೆ ಹೇಳ್ತೇನೆ' ಎಂದರು.

ಅದಕ್ಕೆ ಶಿವಕುಮಾರ್, 'ಎತ್ತಿನಹೊಳೆ ಯೋಜನೆಗಾಗಿ ಸಕಲೇಶಪುರ ಮತ್ತು ಬೇಲೂರು ವಿಧಾನಸಭಾ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡಿದ್ದೇವೆ. ಈಗ ರಾಷ್ಟ್ರೀಯ ವನ್ಯಜೀವಿ ಮಂಡಳಿಯು ಎತ್ತಿನಹೊಳೆ ಯೋಜನೆಗೆ ಇದ್ದ ತಡೆಯನ್ನು ನಿವಾರಿಸಿ, ಅರಣ್ಯ ಭೂಮಿ ಬಳಕೆಗೆ ಅನುಮತಿ ನೀಡಿದೆ ಎಂಬ ಮಾಹಿತಿಯಿದೆ. ಈ ಯೋಜನೆಯನ್ನು ಮುಂದುವರಿಸಬೇಕು. ಅದರ ವ್ಯಾಪ್ತಿಯ ಕ್ಷೇತ್ರಗಳ ಸಮಸ್ಯೆಗಳಿಗೂ ಅನುದಾನ ನೀಡಲಾಗುವುದು' ಎಂದು ಭರವಸೆ ನೀಡಿದರು.

ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸೋಲು

ಓಂ ಬಿರ್ಲಾ ಪದಚ್ಯುತಿಗೆ ವಿರೋಧ ಪಕ್ಷಗಳು ಮಂಡಿಸಿದ್ದ ನಿರ್ಣಯ ಲೋಕಸಭೆಯಲ್ಲಿ ಬಿಜೆಪಿ– ಕಾಂಗ್ರೆಸ್ ನಡುವೆ ವಾಕ್ಸಮರ

ನವದೆಹಲಿ (ಪಿಟಿಐ): ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸಲು ಕಾಂಗ್ರೆಸ್ ನೇತೃತ್ವದಲ್ಲಿ ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿದೆ.

ಅವಿಶ್ವಾಸ ನಿರ್ಣಯ ಮಂಡನೆ ಮೇಲಿನ ಚರ್ಚೆಯು ಲೋಕಸಭೆಯಲ್ಲಿ ಸತತ ಎರಡು ದಿನ ಮುಂದುವರಿಯಿತು.

ಗೃಹ ಸಚಿವ ಅಮಿತ್ ಶಾ ಅವರು ಸರ್ಕಾರದ ಪರ ಉತ್ತರ ನೀಡಿದ ಬಳಿಕ ಪ್ರಸ್ತಾವವನ್ನು ಧ್ವನಿ ಮತಕ್ಕೆ ಹಾಕಲಾಯಿತು. ನಿರ್ಣಯಕ್ಕೆ ಸೋಲಾಗಿದೆ ಎಂದು ಬುಧವಾರ ಘೋಷಿಸುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು ಭಾರಿ ಗದ್ದಲ ಎಬ್ಬಿಸಿದರು. ಅಮಿತ್ ಶಾ ಮತ್ತು ಸ್ಪೀಕರ್ ಪೀಠದಲ್ಲಿದ್ದ ಜಗದಾಂಬಿಕಾ ಪಾಲ್ ಅವರು ಕ್ಷಮೆ ಯಾಚಿಸಬೇಕೆಂದು ಒತ್ತಾಯಿಸಿ, ಅವರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಇದಕ್ಕೂ ಮುನ್ನ, 'ಪ್ರತಿಭಟನೆ ನಿಲ್ಲಿಸಿ, ಕುರ್ಚಿಯಲ್ಲಿ ಕುಳಿತುಕೊಂಡರೆ ಮಾತ್ರ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ' ಎಂದು ಜಗದಾಂಬಿಕಾ ಪಾಲ್ ಹೇಳಿದರು. ಆದರೆ, ವಿರೋಧ ಪಕ್ಷದ ಸದಸ್ಯರು ಇದಕ್ಕೆ ಕಿವಿಗೊಡದೆ ಗದ್ದಲ ಮುಂದುವರಿಸಿದರು. ಪಾಲ್ ಅವರು ಪ್ರಸ್ತಾವವನ್ನು ಧ್ವನಿಮತಕ್ಕೆ ಹಾಕಿದರು. ಬಳಿಕ ನಿರ್ಣಯವನ್ನು ಸದನವು ತಿರಸ್ಕರಿಸಿದೆ ಎಂದು ಪ್ರಕಟಿಸಿದರು.

ಅವಿಶ್ವಾಸ ನಿರ್ಣಯ ಮಂಡನೆ ಮೇಲಿನ ಚರ್ಚೆ ನಡೆಯುವಾಗ ಲೋಕಸಭೆ ಕಲಾಪದಲ್ಲಿ ಸದಸ್ಯರ ಸಾಲಿನಲ್ಲಿ ಕುಳಿತು ಭಾಗವಹಿಸುವುದಾಗಿ ಹೇಳಿದ್ದ ಸ್ಪೀಕರ್ ಓಂ ಬಿರ್ಲಾ, ಎರಡೂ ದಿನ ಗೈರಾಗಿದ್ದರು.

'ಪಕ್ಷದ ನಿಯಮದಂತೆ ಸದನ ನಡೆಯುವುದಿಲ್ಲ': 'ಸ್ಪೀಕರ್ ಓಂ ಬಿರ್ಲಾ ಅವರು ಲೋಕಸಭೆಯ ನಿಷ್ಪಕ್ಷಪಾತ ಪಾಲಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪಕ್ಷದ ನಿಯಮದಂತೆ ಸದನ ನಡೆಸಲು ಸಾಧ್ಯವಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

'ಲೋಕಸಭಾ ಸ್ಪೀಕರ್, ಆಡಳಿತ ಮತ್ತು ವಿರೋಧ ಪಕ್ಷ ಎರಡನ್ನೂ ಪ್ರತಿನಿಧಿಸುತ್ತಾರೆ. ಸದನಕ್ಕೆ ತನ್ನದೇ ಆದ ನಿಯಮಗಳಿವೆ, ಒಂದು ಪಕ್ಷದ ನಿಯಮದಂತೆ ಸದನ ನಡೆಯುವುದಿಲ್ಲ' ಎಂದು ಕಾಂಗ್ರೆಸ್ ವಿರುದ್ಧ ಅವರು ಹರಿಹಾಯ್ದರು.

'ಸುಮಾರು ನಾಲ್ಕು ದಶಕಗಳ ನಂತರ ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ. ಇದು ಸಾಮಾನ್ಯ ಘಟನೆಯಲ್ಲ. ವಿರೋಧ ಪಕ್ಷಗಳು ಸ್ಪೀಕರ್ ಅವರ ಬದ್ಧತೆ, ಸಂಸತ್ತಿನ ವಿಶ್ವಾಸಾರ್ಹತೆ ಪ್ರಶ್ನಿಸಿರುವುದು ಸಂಸದೀಯ ರಾಜಕಾರಣದಲ್ಲಿ ದುರದೃಷ್ಟಕರ ಘಟನೆ. ಇದು ದೇಶದ ಪ್ರಜಾಪ್ರಭುತ್ವದ ಘನತೆಯನ್ನೇ ಪ್ರಶ್ನಿಸಿದಂತೆ' ಎಂದು ಅವರು ಹೇಳಿದರು.

ಎಲ್‌ಪಿಜಿ ಗದ್ದಲ: ಬುಧವಾರ ಬೆಳಿಗ್ಗೆ ಕಲಾಪ ಆರಂಭವಾದಾಗ ವಿರೋಧ ಪಕ್ಷಗಳ ಸದಸ್ಯರು ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ ಸೇರಿದಂತೆ ವಿವಿಧ ವಿಷಯಗಳನ್ನು ಪ್ರಸ್ತಾಪಿಸಿ ಗದ್ದಲ ಎಬ್ಬಿಸಿದರು. ಇದರಿಂದ ಕಲಾಪವನ್ನು ಮಧ್ಯಾಹ್ನ 12 ಗಂಟೆಯವರೆಗೆ ಮುಂದೂಡಲಾಯಿತು. 'ಸರ್ಕಾರ ಮೊದಲು ಎಲ್‌ಪಿಜಿ ದರ ಇಳಿಸಲಿ' ಎಂದು ಕಾಂಗ್ರೆಸ್ ಸಂಸದೆ ಶೆಲ್ಜಾ ಕುಮಾರಿ ಒತ್ತಾಯಿಸಿದರು.

'ವಿಪಕ್ಷಗಳ ಸದಸ್ಯರಿಗೆ ಅಭಿವೃದ್ಧಿಯಲ್ಲಿ ಆಸಕ್ತಿ ಇಲ್ಲ' ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ದೂರಿದರು.

'ಪ್ರತಿಭಟನೆ ನಿಲ್ಲಿಸಿ, ಪ್ರಶ್ನೋತ್ತರ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಲಾಗುವುದು' ಎಂದು ಸಭಾಧ್ಯಕ್ಷರ ಪೀಠದಲ್ಲಿದ್ದ ದಿಲೀಪ್ ಸೈಕಾ ಹಲವು ಬಾರಿ ಮನವಿ ಮಾಡಿದರೂ, ವಿರೋಧ ಪಕ್ಷಗಳ ಸದಸ್ಯರು ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಪ್ರತಿಭಟನೆ ಮುಂದುವರಿದಾಗ ಸ್ಪೀಕರ್ ಕಲಾಪವನ್ನು ಮುಂದೂಡಿದರು.

ಸದನ ದೇಶ ಪ್ರತಿನಿಧಿಸುತ್ತದೆ: ರಾಹುಲ್

'ಲೋಕಸಭೆಯಲ್ಲಿ ಮಾತನಾಡಲು ಪದೇ ಪದೇ ಅವಕಾಶ ನಿರಾಕರಿಸಲಾಗುತ್ತಿದೆ. ಸದನವು ಕೇವಲ ಒಂದು ಪಕ್ಷವನ್ನು ಪ್ರತಿನಿಧಿಸುವುದಿಲ್ಲ, ಬದಲಿಗೆ ಇಡೀ ದೇಶವನ್ನು ಪ್ರತಿನಿಧಿಸುತ್ತದೆ' ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ಮಂಡನೆ ಮೇಲಿನ ಚರ್ಚೆಯಲ್ಲಿ ಮಧ್ಯಪ್ರವೇಶಿಸಿದ ರಾಹುಲ್, 'ಪ್ರಧಾನಿ ಮೋದಿ ಅವರು ರಾಜಿ ಮಾಡಿಕೊಂಡಿದ್ದಾರೆ. ಇದರ ಫಲಿತಾಂಶ ಏನಾಗಿದೆ ಎನ್ನುವುದು ಎಲ್ಲರಿಗೂ ತಿಳಿದಿದೆ' ಎಂದರು.

ಸಂಸದೀಯ ಕಾರ್ಯವಿಧಾನಗಳನ್ನು ಉಲ್ಲೇಖಿಸಿದ ಬಿಜೆಪಿಯ ರವಿಶಂಕರ್ ಪ್ರಸಾದ್, 'ವಿಶೇಷವಾಗಿ ರಾಷ್ಟ್ರೀಯ ಭದ್ರತೆ ವಿಷಯ ಬಂದಾಗ ವಿರೋಧ ಪಕ್ಷದ ನಾಯಕ ಸದನದಲ್ಲಿ ಎಚ್ಚರಿಕೆಯಿಂದ ಮಾತುಗಳನ್ನು ಬಳಸಬೇಕು' ಎಂದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ರಾಹುಲ್ ಗಾಂಧಿ, 'ಚರ್ಚೆ ವೇಳೆ ನನ್ನ ಹೆಸರನ್ನೇ ಪದೇ ಪದೇ ಎಳೆದು ತಂದು, ನನ್ನ ವಿರುದ್ಧ ಕೆಟ್ಟ ಪದಗಳನ್ನು ಬಳಸಲಾಗುತ್ತಿದೆ' ಎಂದರು.

'ಸದನದ ಚರ್ಚಾ ವಿಷಯ 'ಪ್ರಜಾಪ್ರಭುತ್ವದ ಕಾರ್ಯವಿಧಾನ ಮತ್ತು ಸ್ಪೀಕರ್'. ಆದರೆ, ಚರ್ಚೆಯಲ್ಲಿ ನನ್ನ ಹೆಸರನ್ನು ಎಳೆದು ತಂದು, ನನ್ನ ವಿರುದ್ಧ ತುಚ್ಛವಾಗಿ ಮಾತನಾಡುತ್ತಿದ್ದಾರೆ. ಸದನವು ಜನರ ಧ್ವನಿಯಾಗಬೇಕು, ಸದನವು ಒಂದು ಪಕ್ಷವನ್ನು ಮಾತ್ರ ಪ್ರತಿನಿಧಿಸಬಾರದು' ಎಂದು ಹೇಳಿದರು.

'ಕೆಲವು ದಿನಗಳ ಹಿಂದೆ, ವಿರೋಧ ಪಕ್ಷದ ನಾಯಕನ ಸದನದಲ್ಲಿ ಮಾತನಾಡಲು ಅವಕಾಶ ನಿರಾಕರಿಸಲಾಯಿತು. ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ಈ ರೀತಿ ನಡೆದಿದೆ. ಪ್ರತಿ ಬಾರಿ ಮಾತನಾಡಲು ಎದ್ದು ನಿಂತಾಗ ನನ್ನನ್ನು ತಡೆಯಲಾಗುತ್ತದೆ. ಕಳೆದ ಬಾರಿ ಪ್ರಧಾನಿ ರಾಜಿ ಮಾಡಿಕೊಂಡಿದ್ದರ ಬಗ್ಗೆ, ಎಪ್‌ಸ್ಟೈನ್ ಫೈಲ್ಸ್ ಬಗ್ಗೆ, ಸೇನೆಯ ಮಾಜಿ ಮುಖ್ಯಸ್ಥ ಎಂ.ಎಂ. ನರವಣೆ ಅವರ 'ಅಪ್ರಕಟಿತ' ಪುಸ್ತಕದ ಬಗ್ಗೆ ಉಲ್ಲೇಖ ಮಾಡಲು ಮುಂದಾದಾಗ ಅವಕಾಶ ನಿರಾಕರಿಸಲಾಯಿತು' ಎಂದರು.

ಪೀಠದಲ್ಲಿದ್ದ ದಿಲೀಪ್ ಸೈಕಾ ಅವರು ರಾಹುಲ್ ಅವರಿಗೆ, ಆರೋಪಗಳಿಗೆ ಸಂಬಂಧಿಸಿದಂತೆ ಉತ್ತರಿಸಲು ಅವಕಾಶ ನೀಡಿದರು.

> ಮುಖಂಡರೊಬ್ಬರ ಸ್ವಪ್ರತಿಷ್ಠೆ ಬೆಂಬಲಿಸಲು ಆಯುಧವಾಗಿ ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ಬಳಕೆಯಾಗಿರುವುದು ನೋವಿನ ವಿಚಾರ
> **ರವಿಶಂಕರ್ ಪ್ರಸಾದ್,** ಬಿಜೆಪಿ ಸಂಸದ

> ಲೋಕಸಭೆಯ ಉಪ ಸಭಾಧ್ಯಕ್ಷರನ್ನು ಆಯ್ಕೆ ಮಾಡುವಲ್ಲಿ ವಿಫಲವಾದ ಸರ್ಕಾರವು ಸಾಂವಿಧಾನಿಕ ನಿರ್ವಾತ ಸೃಷ್ಟಿಸಿದೆ
> **ಗೌರವ್ ಗೊಗೊಯಿ**
> ವಿರೋಧ ಪಕ್ಷದ ಉಪ ನಾಯಕ



ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ಲೋಕಸಭೆಯಲ್ಲಿ ಬುಧವಾರ ಮತಕ್ಕೆ ಹಾಕಿದ ಸಂದರ್ಭದಲ್ಲಿ ಸಚಿವರಾದ ನಿತಿನ್ ಗಡ್ಕರಿ, ಅಮಿತ್ ಶಾ, ರಾಜನಾಥ ಸಿಂಗ್ ಮತ್ತು ಇತರೆ ಸದಸ್ಯರು ಕೈ ಎತ್ತುವ ಮೂಲಕ ವಿರುದ್ಧ ಮತ ಚಲಾಯಿಸಿದರು ಪಿಟಿಐ ಚಿತ್ರ

ವ್ಯತಿರಿಕ್ತ ಹೇಳಿಕೆ: ಸಚಿವ ಕಿರಣ್ ರಿಜಿಜು ವಿರುದ್ಧ ವಾಗ್ದಾಳಿ

ಲೋಕಸಭೆಯಲ್ಲಿ ಮಂಗಳವಾರ ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ಮೇಲಿನ ಚರ್ಚೆಯಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಜವಾಹರಲಾಲ್ ನೆಹರೂ ಅವರ ಬಗ್ಗೆ ವ್ಯತಿರಿಕ್ತ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಬುಧವಾರ ಅವರನ್ನು ತರಾಟೆಗೆ ತೆಗೆದುಕೊಂಡಿದೆ.

1954ರಲ್ಲಿ ವಿರೋಧ ಪಕ್ಷಗಳು ಜಿ.ವಿ ಮಾವಲಂಕರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದಾಗ ನೆಹರೂ ಅವರಿಗೆ ಚರ್ಚೆಗೆ ಕೇವಲ ಒಂದೂವರೆ ಗಂಟೆ ಮಾತ್ರ ನೀಡಲಾಗಿತ್ತು. ನೆಹರೂ ಅವರು ವಿರೋಧ ಪಕ್ಷಗಳಿಗೆ ಹೆಚ್ಚಿನ ಸಮಯ ನೀಡಬೇಕೆಂದು ಒತ್ತಾಯಿಸಿದ್ದರು. ಆದರೆ, ಕಿರಣ್ ರಿಜಿಜು ಅವರು ಇದಕ್ಕೆ ವ್ಯತಿರಿಕ್ತ ಹೇಳಿಕೆ ನಿಡಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಚರ್ಚೆಗೆ ಅವಕಾಶ ಕೊಡಿ: ಮಲ್ಲಿಕಾರ್ಜುನ ಖರ್ಗೆ ಒತ್ತಾಯ

'ಪಶ್ಚಿಮ ಏಷ್ಯಾ ಸಂಘರ್ಷ ಮತ್ತು ಇದರಿಂದ ದೇಶದಲ್ಲಿ ಸೃಷ್ಟಿಯಾಗಿರುವ ತೈಲ, ಅನಿಲ ಬಿಕ್ಕಟ್ಟಿನ ಕುರಿತು ಸದನದಲ್ಲಿ ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ನೀಡಬೇಕು' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು.

'ಮೋದಿ ಸರ್ಕಾರದ ನಕಲಿ ಮೂಲಗಳನ್ನು ಆಧರಿಸಿದ ಭರವಸೆಗಳ ಬದಲಿಗೆ, ದೇಶದ ಜನರು ಸತ್ಯವನ್ನು ತಿಳಿಯಲು ಬಯಸಿದ್ದು, ಅದಕ್ಕೆ ಅರ್ಹರಾಗಿದ್ದಾರೆ. ದೇಶದ ಇಂಧನ ಸುರಕ್ಷತೆ ಖಾತ್ರಿಪಡಿಸುವ ವಿಷಯದಲ್ಲಿ ಬಿಜೆಪಿ ಸರ್ಕಾರದ ಸಂಪೂರ್ಣ ಅಸಮರ್ಥತೆ ಕಾಣುತ್ತದೆ' ಎಂದು ಅವರು ವಾಗ್ದಾಳಿ ನಡೆಸಿದರು.

'ಕೋವಿಡ್ –19 ಬಿಕ್ಕಟ್ಟನ್ನು ಸರ್ಕಾರ ಸಮರ್ಥವಾಗಿ ನಿಭಾಯಿಸದ ಕಾರಣ, ಹೆಚ್ಚಿನ ಸಾವು–ನೋವು ಉಂಟಾಯಿತು. ಈಗ ಪಶ್ಚಿಮ ಏಷ್ಯಾ ಯುದ್ಧದ ಕಾರಣದಿಂದ ಇಂಧನ ಸಂಗ್ರಹದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಸದ್ಯ 74 ದಿನಗಳಿಗೆ ಸಾಕಾಗುವಷ್ಟು ಮಾತ್ರ ತೈಲ ಸಂಗ್ರಹ ದೇಶದಲ್ಲಿದೆ. ಮುನ್ನೆಚ್ಚರಿಕೆ ವಹಿಸದಿದ್ದರೆ, ಆ ನಂತರ ಪರಿಸ್ಥಿತಿ ತೀರಾ ಹದಗೆಡಲಿದೆ' ಎಂದರು.

'ಇಂಧನ ಕೊರತೆಯು ಕೃಷಿ ವಲಯ ಮತ್ತು ರಸಗೊಬ್ಬರ ಪೂರೈಕೆ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಮನೆ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಾಗಿ ಜನರು ಕನಿಷ್ಠ 25 ದಿನ ಕಾಯುವ ಪರಿಸ್ಥಿತಿ ಬಂದಿದೆ' ಎಂದರು.

'ಸಿಇಸಿ' ಪದಚ್ಯುತಿಗೆ ವಿರೋಧ ಪಕ್ಷಗಳ ಸದಸ್ಯರಿಂದ ಸಹಿ ಸಂಗ್ರಹ

ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವ ನಿರ್ಣಯ ಮಂಡಿಸಲು ವಿರೋಧ ಪಕ್ಷಗಳ ಸದಸ್ಯರು ಬುಧವಾರ ಸಹಿ ಸಂಗ್ರಹ ಅಭಿಯಾನ ನಡೆಸಿದರು. ಶೀಘ್ರದಲ್ಲೇ ಸಂಸತ್ತಿನ ಉಭಯ ಸದನಗಳಲ್ಲಿ ನೋಟಿಸ್ ಸಲ್ಲಿಸುವ ಯೋಜನೆಯನ್ನು ಸಂಸದರು ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಲೋಕಸಭೆಯಲ್ಲಿ ನೋಟಿಸ್ ಸಲ್ಲಿಸಲು ಇದುವರೆಗೆ 120 ಸಂಸದರು ಹಾಗೂ ರಾಜ್ಯಸಭೆಯಲ್ಲಿ ನೋಟಿಸ್ ಸಲ್ಲಿಸಲು 60 ಸಂಸದರು ಸಹಿ ಮಾಡಿದ್ದಾರೆ. ಗುರುವಾರ ಅಥವಾ ಶುಕ್ರವಾರ ಸಂಸತ್ತಿನ ಉಭಯ ಸದನಗಳಲ್ಲಿ ನೋಟಿಸ್ ಸಲ್ಲಿಸಲಾಗುವುದು' ಎಂದು ಸಂಸದರೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ನಿಯಮಗಳ ಪ್ರಕಾರ, 'ಸಿಇಸಿ' ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಲೋಕಸಭೆಯಲ್ಲಿ ಮಂಡಿಸಲು ಕನಿಷ್ಠ 100 ಸಂಸದರು ಹಾಗೂ ರಾಜ್ಯಸಭೆಯಲ್ಲಿ 50 ಸಂಸದರು ಸಹಿ ಮಾಡಬೇಕು.

ಸುದ್ದಿ 2 ನಿಮಿಷ


ಆರ್‌ಎಸ್‌ಎಸ್‌ನ 'ಪ್ರತಿನಿಧಿ ಸಭಾ' ಸಮಾವೇಶ ನಾಳೆಯಿಂದ

ಸಮಾಲಖಾ(ಹರಿಯಾಣ)(ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘ-ದ(ಆರ್‌ಎಸ್‌ಎಸ್) ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಉನ್ನತ ಸಮಿತಿ 'ಅಖಿಲ ಭಾರತೀಯ ಪ್ರತಿನಿಧಿ ಸಭಾ'ದ(ಎಬಿಪಿಎಸ್) ಮೂರು ದಿನಗಳ ಸಮಾವೇಶ ಇದೇ 13ರಿಂದ ಹರಿಯಾಣದ ಸಮಾಲಖಾದಲ್ಲಿ ನಡೆಯಲಿದೆ.

ಕಳೆದ ವರ್ಷ ಸಂಘ ಕೈಗೊಂಡಿದ್ದ ಕಾರ್ಯಗಳು ಹಾಗೂ ಭವಿಷ್ಯದ ಯೋಜನೆಗಳ ಕುರಿತು ಈ ಸಮಾವೇಶದಲ್ಲಿ ಚರ್ಚಿಸಲಾಗುತ್ತದೆ ಎಂದು ಸಂಘಟನೆಯ ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನಿಲ್ ಅಂಬೇಕರ್ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

'ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಸೇರಿ ಸಂಘದ ಹಿರಿಯ ನಾಯಕರು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, 32 ಅಂಗಸಂಸ್ಥೆಗಳ ಪದಾಧಿಕಾರಿಗಳು ಈ ಸಮಾವೇಶದಲ್ಲಿ ಪಾಲ್ಗೊಳ್ಳುವರು' ಎಂದು ತಿಳಿಸಿದರು.

'ಪ್ರಸಕ್ತ ವರ್ಷ ಸಂಘದ ಶತಮಾನೋತ್ಸವವೂ ಇರುವ ಕಾರಣ, ಈ ಅಂಗವಾಗಿ ಗೃಹ ಸಂಪರ್ಕ, ಹಿಂದೂ ಸಮ್ಮೇಳನ, ಯುವ ಸಮಾವೇಶಗಳು, ಗಣ್ಯರ ಸಭೆಗಳು ಹಾಗೂ ಸಾಮಾಜಿಕ ಸೌಹಾರ್ದ ಕಾರ್ಯಕ್ರ-ಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾವೇಶದಲ್ಲಿ ಇವುಗಳ ಕುರಿತು ವಿಸ್ತೃತ ಚರ್ಚೆ ನಡೆಸಲಾಗುವುದು' ಎಂದರು.



'ಗೃಹ ಸಂಪರ್ಕ ಕಾರ್ಯಕ್ರಮದಡಿ ಸಂಘವು ದೇಶದ 10 ಕೋಟಿಗೂ ಅಧಿಕ ಮನೆಗಳನ್ನು ಸಂಪರ್ಕಿಸಿ, ತನ್ನ ಕಾರ್ಯಗಳ ಕುರಿತು ವಿವರಿಸಿದೆ' ಎಂದೂ ಅಂಬೇಕರ್ ತಿಳಿಸಿದರು.

ಡಾರ್ವಿನ್ ಲ್ಯಾಬ್ಸ್ ಸಹಸಂಸ್ಥಾಪಕ ಆಯುಷ್ ವರ್ಷ್ನೆ ಬಂಧನ

ನವದೆಹಲಿ (ಪಿಟಿಐ): ₹20 ಸಾವಿರ ಕೋಟಿ ಮೌಲ್ಯದ ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಡಾರ್ವಿನ್ ಲ್ಯಾಬ್ಸ್‌ನ ಸಹ ಸಂಸ್ಥಾಪಕ ಆಯುಷ್ ವರ್ಷ್ನೆ ಅವರನ್ನು ಸಿಬಿಐ ಬುಧವಾರ ಬಂಧಿಸಿದೆ.

'ಆಯುಷ್ ಅವರು ವಿದೇಶಕ್ಕೆ ಪರಾರಿಯಾಗುವ ಸಾಧ್ಯತೆ ಇದ್ದ ಕಾರಣದಿಂದ ಸಿಬಿಐ ಸೋಮವಾರ ಲುಕ್‌ಔಟ್ ನೋಟಿಸ್ ಜಾರಿ ಮಾಡಿತ್ತು. ಮುಂಬೈ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಬಂಧಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಜನರಿಗೆ ವಂಚಿಸಿದ 'ಗೇನ್‌ಬಿಟ್‌ಕಾಯಿನ್' ಸಂಸ್ಥೆಗೆ ಡಿಜಿಟಲ್ ವಿನ್ಯಾಸ ಹಾಗೂ ಮೂಲಸೌಕರ್ಯವನ್ನು ಡಾರ್ವಿನ್ ಲ್ಯಾಬ್ಸ್ ಸಂಸ್ಥೆಯು ಅಭಿವೃದ್ಧಿಪಡಿಸಿತ್ತು. ಗೇನ್ ಕಂಪನಿಯ ಕಾರ್ಯಾಚರಣೆಗೂ ಬೆನ್ನೆಲುಬಾಗಿ ನಿಂತಿದೆ' ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

'ಡಾರ್ವಿನ್ ಲ್ಯಾಬ್ಸ್‌ನ ಸಹ ಸಂಸ್ಥಾಪಕರಾದ ಆಯುಷ್ ವರ್ಷ್ನೆ, ಸಾಹಿಲ್ ಬಗ್ಲಾ ಹಾಗೂ ವಯೋಮಿ ಎಐ ಸಂಸ್ಥೆಯ ಸಂಸ್ಥಾಪಕ ಹಾಗೂ ಮುಖ್ಯ ಹಣಕಾಸು ಅಧಿಕಾರಿ ನಿಕುಂಜ್ ಜೈನ್ ಅವರು 'ಕ್ರಿಪ್ಟೋಕರೆನ್ಸಿ' ಟೋಕನ್ ಹಾಗೂ ಅದರ ಸಂಬಂಧಿತ ಎಆರ್‌ಸಿ–20 ಸ್ಮಾರ್ಟ್‌ನ ವಿನ್ಯಾಸ, ಅಭಿವೃದ್ಧಿಯಲ್ಲಿ ಭಾಗಿಯಾಗಿರುವುದು ತನಿಖೆಯಲ್ಲಿ ಕಂಡುಬಂದಿತ್ತು' ಎಂದು ಸಿಬಿಐ ಪ್ರಕಟಣೆಯಲ್ಲಿ ತಿಳಿಸಿದೆ.

'ಅಮೃತ್ ಭಾರದ್ವಾಜ್ (ಮೃತಪಟ್ಟಿದ್ದಾರೆ) ಹಾಗೂ ಅವರ ಸಹೋದರ ಅಜಯ್ ಭಾರದ್ವಾಜ್ ಅವರು ಪ್ರಕರಣದ ಸೂತ್ರದಾರರಾಗಿದ್ದರು. ಹೂಡಿಕೆ ಮಾಡಿದ ಹಣಕ್ಕೆ 18 ತಿಂಗಳ ಕಾಲ ಮಾಸಿಕ ಶೇಕಡ 10ರಷ್ಟು ಬಡ್ಡಿ ನೀಡುವುದಾಗಿ ಆಮಿಷ ಒಡ್ಡಿ ಆನ್‌ಲೈನ್ ಮೂಲಕ ಜನರಿಂದ ಹೂಡಿಕೆ ಮಾಡಿಸಿಕೊಂಡಿದ್ದರು. ನಂತರ ಈ ಹಣವನ್ನು ದುರುಪಯೋಗಪಡಿಸಿಕೊಂಡಿದ್ದರು' ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಮುಂಬೈ: ಕಳಚಿಬಿದ್ದ ವಿಮಾನದ ಚಕ್ರಗಳು

ಮುಂಬೈ (ಪಿಟಿಐ): ಭಾರತದಿಂದ ತೆರಳಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನವೊಂದು ಥಾಯ್ಲೆಂಡ್‌ನ ಫುಕೆಟ್ ವಿಮಾನ ನಿಲ್ದಾಣದಲ್ಲಿ ಬುಧವಾರ ಭೂಸ್ಪರ್ಶ ಮಾಡುತ್ತಿದ್ದ ವೇಳೆ ಮುಂಭಾಗದ ಚಕ್ರಗಳು ಕಳಚಿಬಿದ್ದ ಕಾರಣ, ವಿಮಾನವು ಜಖಂಗೊಂಡಿದೆ.

'ಹೈದರಾಬಾದ್‌ನಿಂದ ತೆರಳಿದ್ದ ವಿಮಾನದಲ್ಲಿದ್ದ 139 ಜನರು ಸುರಕ್ಷಿತವಾಗಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಮಾನವು ಒಂದು ಗಂಟೆ ರನ್‌ವೇಯಲ್ಲಿಯೇ ಸಿಲುಕಿತ್ತು. ಬಳಿಕ ತೆರವುಗೊಳಿಸಲಾಯಿತು. ವಿಮಾನ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಘಟನೆ ಸಂಬಂಧ ಇಬ್ಬರು ಪೈಲಟ್‌ಗಳನ್ನು ವಜಾಗೊಳಿಸಲಾಗಿದೆ.

ಕನಸಲ್ಲಿ ಕಿರುಕುಳ ಆರೋಪ ಐಎಎಫ್ ಸಿಬ್ಬಂದಿ ಖುಲಾಸೆ

ಕಾನ್ಪುರ (ಉತ್ತರ ಪ್ರದೇಶ) (ಪಿಟಿಐ): ನಾದಿನಿಗೆ ಕಿರುಕುಳ ನೀಡಿದ ಆರೋಪದ ಮೇರೆಗೆ ಪೋಕ್ಸೊ ಪ್ರಕರಣ ಎದುರಿಸುತ್ತಿದ್ದ ಭಾರತೀಯ ವಾಯುಪಡೆಯ (ಐಎಎಫ್) ಸಿಬ್ಬಂದಿಯನ್ನು ಇಲ್ಲಿನ ವಿಶೇಷ ನ್ಯಾಯಾಲಯವು ಖುಲಾಸೆಗೊಳಿಸಿದೆ.

'ಬಾವ ತನಗೆ ಕಿರುಕುಳ ನೀಡಿದ್ದು ಕನಸಿನಲ್ಲಿ' ಎಂದು ದೂರುದಾರೆ ಹೇಳಿದ ಬಳಿಕ ನ್ಯಾಯಪೀಠ ಆರೋಪಿಯನ್ನು ದೋಷಮುಕ್ತ ಎಂದು ಘೋಷಿಸಿದೆ.

2019ರ ಮಾರ್ಚ್ 8ರಂದು ತನ್ನ ಅಕ್ಕನ ಮನೆಯಲ್ಲಿ ತಂಗಿದ್ದ ಸಂದರ್ಭದಲ್ಲಿ ಬಾವ ತನಗೆ ಕಿರುಕುಳ ನೀಡಿದ್ದರೆಂದು ಆರೋಪಿಸಿ 15 ವರ್ಷದ ಬಾಲಕಿ ದೂರು ನೀಡಿದ್ದರು. ದೂರನ್ನು ಆಧರಿಸಿ ಅನುರಾಗ್ ಶುಕ್ಲಾ ವಿರುದ್ಧ ಎಫ್‌ಐಆರ್ ದಾಖಲಿಸಿ, 19 ದಿನ ಜೈಲಿನಲ್ಲಿ ಇರಿಸಲಾಗಿತ್ತು.

ಆದರೆ, ವಿಚಾರಣೆ ಸಂದರ್ಭದಲ್ಲಿ 'ಘಟನೆ ನಡೆದ ದಿನ ತಾನು ಆ್ಯಂಟಿಬಯೋಟಿಕ್ಸ್ ಔಷಧಿ ತೆಗದುಕೊಂಡು, ಅರೆ ಪ್ರಜ್ಞಾವಸ್ಥೆಯಲ್ಲಿದ್ದೆ. ಈ ವೇಳೆ ಶುಕ್ಲಾ ತನ್ನನ್ನು ಎಳೆದಾಡಿ ಕಿರುಕುಳ ನೀಡಿದಂತೆ ಕನಸು ಬಿದ್ದಿತ್ತು. ಹೀಗಾಗಿ ಗಾಬರಿಗೊಂಡು ಕಿರುಚಾಡಿ, ತಪ್ಪು ತಿಳುವಳಿಕೆಯಿಂದ ದೂರು ನೀಡಿದ್ದೆ' ಎಂದು ದೂರುದಾರೆ ಹೇಳಿದ್ದಾರೆ.

ಈ ಹಿಂದೆ ತಾವು ಮಾಡಿದ್ದ ಆರೋಪಗಳನ್ನೂ ಹಿಂಪಡೆದಿದ್ದಾರೆ. ಹೀಗಾಗಿ ನ್ಯಾಯಾಲಯವು ಮಾರ್ಚ್ 7ರಂದು ಶುಕ್ಲಾ ಅವರನ್ನು ಖುಲಾಸೆಗೊಳಿಸಿದೆ.

ದಯಾಮರಣಕ್ಕೆ ಅನುಮತಿ

ಒಂದನೇ ಪುಟದಿಂದ...

ಹರೀಶ್ ಅವರಿಗೆ ನೀಡುತ್ತಿರುವ ಚಿಕಿತ್ಸೆಯ ವಿವರಗಳ ಕುರಿತು ನವದೆಹಲಿಯ ಏಮ್ಸ್‌ನ ತಜ್ಞ ವೈದ್ಯರನ್ನು ಒಳಗೊಂಡ ಎರಡನೇ ವೈದ್ಯಕೀಯ ಮಂಡಳಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಿದ ನ್ಯಾಯಾಲಯವು, 'ಇದು 'ದುಃಖ'ದ ವರದಿ' ಎಂದಿದೆ.

ಪ್ರಾಥಮಿಕ ವೈದ್ಯಕೀಯ ಮಂಡಳಿಯು ರೋಗಿಯ ಆರೋಗ್ಯ ಸ್ಥಿತಿಯನ್ನು ಕೂಲಂಕಷವಾಗಿ ಪರೀಕ್ಷಿಸಿದ ನಂತರ, ಅವರ ಚೇತರಿಕೆಯ ಅವಕಾಶ ಅತ್ಯಲ್ಪ ಎಂದಿತ್ತು. ಎರಡೂ ವರದಿಗಳ ಪ್ರಕಾರ 'ಯುವಕನ ಆರೋಗ್ಯ ಕರುಣಾಜನಕ ಸ್ಥಿತಿಯಲ್ಲಿದೆ' ಎಂಬುದನ್ನು ಡಿ.11ರಂದು ನ್ಯಾಯಾಲಯ ಗಮನಿಸಿದೆ.

ಚಿಕಿತ್ಸೆಯ ಮುಂದುವರಿಕೆಯು ಯಾವುದೇ ಚೇತರಿಕೆಯ ಸಾಧ್ಯತೆ ಇಲ್ಲದೆ, ಜೈವಿಕ ಅಸ್ತಿತ್ವವನ್ನಷ್ಟೇ ದೀರ್ಘ ಕಾಲದವರೆಗೆ ಮುಂದುವರಿಸಿದೆ ಎಂದು ಎರಡೂ ವೈದ್ಯಕೀಯ ಮಂಡಳಿಗಳು ಸರ್ವಾನುಮತದಿಂದ ತೀರ್ಮಾನಿಸಿವೆ.

ಪ್ರಾಥಮಿಕ ಹಾಗೂ ದ್ವಿತೀಯ ಮಂಡಳಿಗಳು ಜೀವರಕ್ಷಕ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳುವುದನ್ನು ಪ್ರಮಾಣೀಕರಿಸಿದಾಗ, ನ್ಯಾಯಾಂಗದ ಮಧ್ಯಸ್ಥಿಕೆಯ ಅಗತ್ಯವಿಲ್ಲ ಎಂದು ಹೇಳಿರುವ ಪೀಠವು, ತಮ್ಮ ಮಗನ ಕುರಿತು ಅಪಾರ ಪ್ರೀತಿ ಮತ್ತು ಕಾಳಜಿ ತೋರಿದ ಹರೀಶ್ ಹೆತ್ತವರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ.

ಅರುಣಾಗೆ ಸಿಕ್ಕಿರಲಿಲ್ಲ ಅವಕಾಶ

ಒಂದನೇ ಪುಟದಿಂದ...

ತಾನು ಕೆಲಸ ಮಾಡುತ್ತಿದ್ದ ಮುಂಬೈನ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯಲ್ಲೇ ವಾರ್ಡ್ ಬಾಯ್‌ನಿಂದ ಘೋರ ಹಲ್ಲೆ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ 42 ವರ್ಷ ಕೋಮಾದಲ್ಲಿದ್ದ ಶುಶ್ರೂಷಕಿ ಅರುಣಾ ಶಾನಭಾಗ್ ಅವರಿಗೆ ಸುಪ್ರೀಂ ಕೋರ್ಟ್ 2011ರಲ್ಲಿ ದಯಾಮರಣ ನಿರಾಕರಿಸಿತ್ತು.

1948ರ ಜೂನ್ ಒಂದರಂದು ಜನಿಸಿದ್ದ ಅರುಣಾ ಅವರು 2015ರ ಮೇ 18ರಂದು ನಿಧನರಾದರು. 1973ರ ನವೆಂಬರ್‌ನಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದರು.

ಅರುಣಾ ಶಾನಭಾಗ್ ಅವರ ಮೂಲ ಊರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹಳದೀಪುರ. ರಾಷ್ಟ್ರೀಯ ಹೆದ್ದಾರಿ–17ರಲ್ಲಿರುವ ಇದನ್ನು ವರಾಹಪುರ ಎಂದು ಕರೆಯಲಾಗುತ್ತಿತ್ತು.

ದಯಾಮರಣಕ್ಕೆ ಅವಕಾಶ ನೀಡುವಂತೆ ಅರುಣಾ ಅವರ ಗೆಳತಿ ಪಿಂಕಿ ವಿರಾನಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಘನತೆಯ ಮರಣ: ಹರೀಶ್ ರಾಣಾ ಕುಟುಂಬ

ಲಖನೌ: 'ಕೃತಕ ಜೀವರಕ್ಷಕ ವ್ಯವಸ್ಥೆಯನ್ನು ಹಿಂತೆಗೆಯಲು ಅವಕಾಶ ನೀಡುವುದರಿಂದ, ದಶಕದಿಂದಲೂ ಅನುಭವಿಸುತ್ತಿರುವ ಸಂಕಟದಿಂದ ಆತನನ್ನು (ಹರೀಶ್) ಮುಕ್ತಗೊಳಿಸಿ ಘನತೆಯ ಮರಣವನ್ನು ದಯಪಾಲಿಸಿದಂತಾಗುತ್ತದೆ' ಎಂದು ಹರೀಶ್ ರಾಣಾ ಅವರ ಕುಟುಂಬವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಮನವಿಯಲ್ಲಿ ತಿಳಿಸಿದೆ.

ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿದ ಕೆಲವೇ ಹೊತ್ತಿನಲ್ಲಿ ಮಾಧ್ಯಮದವರನ್ನು ಒಳಗೊಂಡ ಜನಸಮೂಹವು ರಾಣಾ ಅವರ ಕುಟುಂಬ ವಾಸವಿರುವ ಗಾಜಿಯಾಬಾದ್‌ನ ಬ್ರಹ್ಮ ರಾಜ್ ಎಂಪೈರ್ ಸೊಸೈಟಿಯ ಹೊರಗೆ ಜಮಾಯಿಸಿತ್ತು.

ವಸತಿ ಸಂಕೀರ್ಣದ ಭದ್ರತಾ ಸಿಬ್ಬಂದಿಯು ಹೊರಗಿನ ಯಾರೊಬ್ಬರೂ ಒಳಗೆ ಪ್ರವೇಶಿಸದಂತೆ ತಡೆದರು.

ಹರೀಶ್ ಅವರ ತಂದೆ ಅಶೋಕ್ ರಾಣಾ ಅವರನ್ನು ಸುದ್ದಿಸಂಸ್ಥೆ ಸಂಪರ್ಕಿಸಿದರೂ ಅವರು ಪ್ರತಿಕ್ರಿಯಿಸಲಿಲ್ಲ. ಈ ಪ್ರಕರಣದಲ್ಲಿ ರಾಣಾ ಪರ ವಾದ ಮಂಡಿಸಿದ ವಕೀಲರಾದ ರಶ್ಮಿ ನಂದಕುಮಾರ್ ಅವರು, 'ಕುಟುಂಬದ ಸದಸ್ಯರು ಈ ಬೆಳವಣಿಗೆ ಕುರಿತಂತೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸುವ ಸ್ಥಿತಿಯಲ್ಲಿ ಇಲ್ಲ' ಎಂದು ತಿಳಿಸಿದರು.

ಮಗನ ಚಿಕಿತ್ಸೆಗಾಗಿ ಅಶೋಕ್– ನಿರ್ಮಲಾ ದಂಪತಿ ನವದೆಹಲಿಯಲ್ಲಿದ್ದ ತಮ್ಮ ಮನೆಯನ್ನು ಮಾರಿದ್ದರು ಎಂದು ನೆರೆಹೊರೆಯವರು ಮಾಹಿತಿ ನೀಡಿದರು.

ಫುಟ್‌ಬಾಲ್ ಪ್ರೇಮಿ: 'ಹರೀಶ್ ನಾನು ಒಟ್ಟಿಗೆ ಫುಟ್‌ಬಾಲ್ ಹಾಗೂ ವಿಡಿಯೊ ಗೇಮ್‌ಗಳನ್ನು ಆಡುತ್ತಿದ್ದೆವು' ಎಂದು ಆತನ ಸಹೋದರ ಆಶಿಶ್ ನೆನಪಿಸಿಕೊಂಡರು.

ಎನ್‌ಸಿಇಆರ್‌ಟಿ ಪುಸ್ತಕ ವಿವಾದ; ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ನ್ಯಾಯಪೀಠದ ಸೂಚನೆ

'ವಾರದಲ್ಲಿ ವಿಷಯ ತಜ್ಞರ ಸಮಿತಿ ರಚಿಸಿ'

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಪಠ್ಯಪುಸ್ತಕಗಳಲ್ಲಿನ ಕಾನೂನು ವಿಷಯ ಪರಿಶೀಲಿಸಲು ವಾರದ ಒಳಗಾಗಿ ವಿಷಯ ತಜ್ಞರ ಸಮಿತಿಯನ್ನು ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೂಚನೆ ನೀಡಿದೆ.

'ನ್ಯಾಯಾಂಗದ ಸಾಂಸ್ಥಿಕ ಕಾರ್ಯದಲ್ಲಿ ಆರೋಗ್ಯಕರ ಹಾಗೂ ವಸ್ತುನಿಷ್ಠ ಟೀಕೆಯನ್ನು ತಡೆಯುವ ಉದ್ದೇಶವನ್ನು ಈ ಪ್ರಕರಣದ ಆದೇಶವು ಹೊಂದಿಲ್ಲ' ಎಂದೂ ನ್ಯಾಯಾಲಯವು ಸ್ಪಷ್ಟಪಡಿಸಿದೆ.

ಎನ್‌ಸಿಇಆರ್‌ಟಿ ಪ್ರಕಟಿಸಿದ್ದ 8ನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕದಲ್ಲಿ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಎಂಬ ಅಧ್ಯಾಯದ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ, ವಿವಾದಾತ್ಮಕ ಅಧ್ಯಾಯ ಸೇರಿಸಿದ್ದ ಮೂವರು ತಜ್ಞರ ಸಮಿತಿಯನ್ನು ಮುಂದಿನ ಯಾವುದೇ ಪ್ರಕ್ರಿಯೆಗಳಿಂದ ಹೊರಗಿಡುವಂತೆ ಕೇಂದ್ರ ಸರ್ಕಾರ, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಹಾಗೂ ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಿದೆ.

ವಿವಾದಾಸ್ಪದ ಪಠ್ಯ ರಚನೆ ಸಂದರ್ಭದಲ್ಲಿ ಮೈಕೆಲ್ ಡಾನಿಹೊ ಅವರು ಪಠ್ಯ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರೆ, ಸುಪರ್ಣಾ ದಿವಾಕರ್ ಹಾಗೂ ಅಲೋಕ್‌ಪ್ರಸನ್ನ ಕುಮಾರ್ ಸದಸ್ಯರಾಗಿದ್ದರು.

ಈ ಮೂವರು ತಜ್ಞರನ್ನು ಆದೇಶವನ್ನು ಮಾರ್ಪಡಿಸುವಂತೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು ಎಂದು ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ, ನ್ಯಾಯಮೂರ್ತಿ ವಿಪುಲ್ ಎಂ. ಪಂಚೋಲಿ ಅವರನ್ನು ಒಳಗೊಂಡ ನ್ಯಾಯಪೀಠ ಹೇಳಿದೆ.

'ಕಾನೂನು ವಿಷಯಕ್ಕೆ ಸಂಬಂಧಿಸಿದ ಪಠ್ಯ ರಚನೆಯನ್ನು ನಿವೃತ್ತ ನ್ಯಾಯಮೂರ್ತಿ, ಶಿಕ್ಷಣ ತಜ್ಞರು, ಹಿರಿಯ ವಕೀಲರನ್ನು ಒಳಗೊಂಡು ಸಮಿತಿಯು ಅಂತಿಮಗೊಳಿಸಬೇಕು. ಇದಕ್ಕೆ ಭೋಪಾಲ್‌ನಲ್ಲಿರುವ ರಾಷ್ಟ್ರೀಯ ನ್ಯಾಯಾಂಗ ಅಕಾಡೆಮಿಯ ನೆರವು ಪಡೆದುಕೊಳ್ಳಬೇಕು' ಎಂದು ತಿಳಿಸಿದೆ.

ಎಲ್ಲ ತರಗತಿ ಪಠ್ಯಪುಸ್ತಕ ಪರಿಶೀಲಿಸಲು ನಿರ್ದೇಶನ

ಎಲ್ಲ ತರಗತಿಗಳ ಪಠ್ಯಪುಸ್ತಕಗಳನ್ನು ಪರಿಶೀಲಿಸುವಂತೆ ಎನ್‌ಸಿಆರ್‌ಇಟಿಗೆ ನಿರ್ದೇಶನ ನೀಡಲಾಗಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

'ಎನ್‌ಸಿಆರ್‌ಟಿಯನ್ನು ಆ ರೀತಿ ಮಾಡುವಂತೆ ಕೇಳುವ ಬದಲಾಗಿ, ಕೇಂದ್ರ ಸರ್ಕಾರವೇ ತಜ್ಞರ ಸಮಿತಿಯನ್ನು ರಚಿಸಿದ್ದರೆ ಚೆನ್ನಾಗಿತ್ತು' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯಾ ಬಾಗ್ಚಿ, ವಿಪುಲ್ ಎಂ. ಪಂಚೋಲಿ ಅವರನ್ನು ಒಳಗೊಂಡ ನ್ಯಾಯಪೀಠವು ತಿಳಿಸಿದೆ.

ಈ ವೇಳೆ ಮಧ್ಯಪ್ರವೇಶಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, '8ನೇ ತರಗತಿ ಅಲ್ಲದೇ, ಎಲ್ಲ ತರಗತಿಗಳ ಪಠ್ಯಪುಸ್ತಕಗಳನ್ನು ಪರಿಶೀಲನೆ ನಡೆಸುವಂತೆ ಎನ್‌ಸಿಇಆರ್‌ಟಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಈ ಪಠ್ಯವನ್ನು ತಜ್ಞರ ಸಮಿತಿಯು ಪರಿಶೀಲನೆ ನಡೆಸಲಿದೆ' ಎಂದು ನ್ಯಾಯಪೀಠದ ಗಮನಸೆಳೆದರು.

'ನಾವು ವ್ಯವಸ್ಥಿತ ಬದಲಾವಣೆಗಳನ್ನು ತರುತ್ತಿದ್ದೇವೆ' ಎಂದು ಹೇಳಿದ ಅವರು, 'ಈಗಾಗಲೇ ಆಗಿರುವ ತಪ್ಪಿಗೆ ಎನ್‌ಸಿಇಆರ್‌ಟಿ ನಿರ್ದೇಶಕರು ಬೇಷರತ್ ಕ್ಷಮೆಯಾಚಿಸಿದ್ದಾರೆ' ಎಂದು ತಿಳಿಸಿದರು.

ಕಿಡಿಗೇಡಿತನ– ಆಕ್ಷೇಪ

ಎನ್‌ಸಿಇಆರ್‌ಟಿ ಪುಸ್ತಕದ ಕುರಿತು ಫೆಬ್ರುವರಿ 21ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಕುರಿತು ಸಾಮಾಜಿಕ ಜಾಲತಾಣದಲ್ಲಿ ಕಿಡಿಗೇಡಿತನದ ಅಭಿಪ್ರಾಯ ವ್ಯಕ್ತಪಡಿಸಿದವರ ವಿರುದ್ಧ ಸುಪ್ರೀಂ ಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ.

'ಹಾಲಿ ಸಿಜೆಐ ಅವರನ್ನು ಹೇಗೆ ಎದುರಿಸಬೇಕು ಎಂಬುದನ್ನು ಅರಿತಿರಬೇಕು' ಎಂದು ಈ ವೇಳೆ ತಿಳಿಸಿದ್ದಾರೆ.

'ತೀರ್ಪಿನ ಕುರಿತಂತೆ ಸಮಾಜ ವಿರೋಧಿ ಶಕ್ತಿಗಳು ಬೇಜವಾಬ್ದಾರಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಂತಹ ವೆಬ್‌ಸೈಟ್‌ಗಳನ್ನು ಪತ್ತೆಹಚ್ಚಿ, ಸಮಗ್ರ ಮಾಹಿತಿ ಕಲೆಹಾಕಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ತಿಳಿಸಿದೆ.

ಅಫ್ಗಾನಿಸ್ತಾನದ ಪ್ರಜೆ ಬಂಧನ

ಕೋಲ್ಕತ್ತ (ಪಿಟಿಐ): ಸರಿಯಾದ ದಾಖಲೆಗಳಿಲ್ಲದೆ ಬಾಂಗ್ಲಾದೇಶದ ಮೂಲಕ ಭಾರತ ಪ್ರವೇಶಿಸಿದ ಆರೋಪದಡಿ ಅಫ್ಗಾನಿಸ್ತಾನದ ಪ್ರಜೆಯನ್ನು ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಅಫ್ಗಾನಿಸ್ತಾನದ ನಿಮ್ರೋಜ್ ನಿವಾಸಿ ಅಲ್ಲಾಹಿ ಮುಸಾಫರ್ ಬಂಧಿತ. ಫತೇಪುರ್ ಗಡಿ ಪ್ರದೇಶದ ಮೂಲಕ ಭಾರತ– ಬಾಂಗ್ಲಾದೇಶ ಅಂತರರಾಷ್ಟ್ರೀಯ ಗಡಿ ದಾಟಲು ಸೋಮವಾರ ರಾತ್ರಿ ಪ್ರಯತ್ನಿಸುತ್ತಿದ್ದಾಗ ಗಡಿ ಭದ್ರತಾ ಪಡೆ ಆರೋಪಿಯನ್ನು ವಶಕ್ಕೆ ಪಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿ ಬಳಿ ಯಾವುದೇ ಮಾನ್ಯ ಪ್ರಯಾಣ ದಾಖಲೆಗಳಿರಲಿಲ್ಲ. ಬಿಎಸ್‌ಎಫ್‌ನ ಪ್ರಾಥಮಿಕ ವಿಚಾರಣೆ ಬಳಿಕ, ಹೆಚ್ಚಿನ ತನಿಖೆಗಾಗಿ ಆರೋಪಿಯನ್ನು ನಾದಿಯಾದ ಹನ್ಸ್‌ಖಾಲಿಯ ಪೊಲೀಸ್ ಠಾಣೆಗೆ ಹಸ್ತಾಂತರಿಸಲಾಗಿದೆ. ಆರೋಪಿ ಗಡಿ ಪ್ರವೇಶಿಸಿದ ಕಾರಣ ಮತ್ತು ಗಡಿ ಪ್ರವೇಶಕ್ಕೆ ಯಾರಾದರೂ ಸಹಾಯ ಮಾಡಿದ್ದಾರೆಯೇ ಎಂಬ ಕುರಿತು ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಕೇರಳ: ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಪ್ರಧಾನಿ

'ವಿಪಕ್ಷಗಳು ರಾಜಕೀಯದಾಟ ನಡೆಸುತ್ತಿವೆ'

ಕೊಚ್ಚಿ (ಪಿಟಿಐ): 'ಪಶ್ಚಿಮ ಏಷ್ಯಾದ ಬಿಕ್ಕಟ್ಟನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ರಾಜಕೀಯದಾಟ ನಡೆಸುತ್ತಿವೆ. ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿರುವ ನಮ್ಮ ಜನರ ಸುರಕ್ಷತೆಗೆ ಎಲ್ಲ ಯತ್ನಗಳನ್ನು ಮಾಡಲಾಗುತ್ತಿದೆ. ಕಾಂಗ್ರೆಸ್, ಎಡಪಕ್ಷಗಳು ಹಬ್ಬಿಸುವ 'ವದಂತಿ'ಗಳಿಗೆ ಕಿವಿಗೊಡಬೇಡಿ' ಎಂದು ಪ್ರಧಾನಿ ನರೇಂದ್ರ ಮೋದಿ ಜನರನ್ನು ಆಗ್ರಹಿಸಿದರು.

'ಅಖಿಲ ಕೇರಳ ದೀವರ ಸಭಾ'ದ ಸುವರ್ಣ ಮಹೋತ್ಸವ ಆಚರಣೆ ಕಾರ್ಯಕ್ರಮ ಮತ್ತು ₹10 ಸಾವಿರ ಕೋಟಿಗೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಬುಧವಾರ ಮಾತನಾಡಿದರು. ಎನ್‌ಡಿಎ ರ್‍ಯಾಲಿಯಲ್ಲಿ ಭಾಗವಹಿಸಿದ ಅವರು ಈ ಮೂಲಕ ಚುನಾವಣಾ ಪ್ರಚಾರವನ್ನೂ ಆರಂಭಿಸಿದರು.

'ನಿಮಗೆ ಆತಂಕವಾಗುವುದು ಸಹಜ. ನಿಮ್ಮ ಸಹೋದರ, ಸಹೋದರಿಯರು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಕೊಲ್ಲಿ ರಾಷ್ಟ್ರಗಳಲ್ಲಿದ್ದಾರೆ. ಅಲ್ಲಿನ ಸರ್ಕಾರಗಳು ನಮ್ಮ ಜನರಿಗೆ ರಕ್ಷಣೆ ನೀಡುತ್ತಿವೆ. ಆಹಾರ, ವೈದ್ಯಕೀಯ ಸೇವೆಯೂ ಸೇರಿ ಎಲ್ಲ ರೀತಿಯ ಸಹಕಾರ ನೀಡುತ್ತಿವೆ. ಇದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ' ಎಂದರು.

'ನಮ್ಮ ರಾಯಭಾರ ಕಚೇರಿಗಳು ದಿನವಿಡೀ ಕೆಲಸ ಮಾಡುತ್ತಿವೆ. ಇಂದಿನ ಭಾರತವು ಇತರೆಡೆಗಳಲ್ಲಿ ಸಿಲುಕಿರುವ ನಮ್ಮ ದೇಶದ ಜನರನ್ನು ಕೈಬಿಡುವುದಿಲ್ಲ. ಕೇಂದ್ರ ಸರ್ಕಾರವು ಇವರ ಸುರಕ್ಷತೆಗೆ ಬೇಕಾದ ಎಲ್ಲ ಕಾರ್ಯಗಳನ್ನು ಮಾಡುತ್ತಿದೆ' ಎಂದು ಭರವಸೆ ನೀಡಿದರು.

'ಇಂಥ ಜಾಗತಿಕ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಕಾಂಗ್ರೆಸ್ ಪಕ್ಷವು ರಾಜಕೀಯವಾಡುತ್ತಿದೆ. ಜೊತೆಗೆ, ಆತಂಕವನ್ನು ಇನ್ನಷ್ಟು ಹೆಚ್ಚಿಸುವ ರೀತಿಯಲ್ಲಿ ಅದು ಹೇಳಿಕೆಗಳನ್ನು ನೀಡುತ್ತಾ ಜನರನ್ನು ಸಂಕಷ್ಟಕ್ಕೆ ಈಡುಮಾಡುತ್ತಿದೆ. ಆ ಮೂಲಕ ನನ್ನನ್ನು ಜರಿಯುವುದು ಅವರ ಉದ್ದೇಶ' ಎಂದರು.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಗೈರಾಗಿದ್ದರು.



ಕೊಚ್ಚಿಯಲ್ಲಿ ಪ್ರಧಾನಿ ಮೋದಿ ಅವರು ಬುಧವಾರ ರೋಡ್ ಶೋ ನಡೆಸಿದರು ಪಿಟಿಐ ಚಿತ್ರ

'ದೇಶದ ಅಭಿವೃದ್ಧಿ ಬಗ್ಗೆ ತಿಳಿದಿಲ್ಲ'

ಕಾಂಗ್ರೆಸ್‌ನ ಯುವರಾಜನಿಗೆ ದೇಶದಲ್ಲಿ ಏನಾಗುತ್ತಿದೆ ಎಂಬುದೇ ತಿಳಿದಿಲ್ಲ. ಯಾಕೆಂದರೆ, ದೇಶದ ಯುವಕರು ಮತ್ತು ವಿವಿಧ ಕಂಪನಿಗಳು ಕೇರಳವೂ ಸೇರಿ ವಿವಿಧ ರಾಜ್ಯಗಳಲ್ಲಿ ಡ್ರೋನ್ ತಯಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಅವರಿಗೆ (ರಾಹುಲ್) ಹಲವು ಮಿತಿಗಳಿವೆ. ಆದ್ದರಿಂದ ದೇಶದ ಬೆಳವಣಿಗೆ ಬಗ್ಗೆ ಅವರಿಗೆ ತಿಳಿದಿಲ್ಲ

ನರೇಂದ್ರ ಮೋದಿ, ಪ್ರಧಾನಿ

(ಇತ್ತೀಚೆಗೆ ರಾಹುಲ್ ಗಾಂಧಿ ಅವರು ಕೇರಳಕ್ಕೆ ಭೇಟಿ ನೀಡಿದಾಗ ಡ್ರೋನ್ ತಯಾರಿಕೆಯಲ್ಲಿ ಚೀನಾವು ಮುಂದಿದೆ. ಭಾರತವು ಅದಕ್ಕೆ ಹತ್ತಿರದಲ್ಲಿಯೂ ಇಲ್ಲ ಎಂದಿದ್ದರು. ಇದಕ್ಕೆ ಪ್ರಧಾನಿ ಪ್ರತಿಕ್ರಿಯಿಸಿದರು)

‘ಟಿ.ಸಿ ಕೊಡಿಸದಿದ್ದರೆ ಶಿಸ್ತುಕ್ರಮ’

ಮ್ಯಾಗ್ನೆಟ್ ಯೋಜನೆಯಡಿ ಶಾಲೆಗಳ ವಿಲೀನ; ಪೋಷಕರ ಮನವೊಲಿಸಲು ಸೂಚನೆ

• ಓದೇಶ ಸಕಲೇಶಪುರ

ಚನ್ನಪಟ್ಟಣ (ರಾಮನಗರ): ‘ನಿಮ್ಮ ಶಾಲೆಯ ಮಕ್ಕಳ ವರ್ಗಾವಣೆ ಪತ್ರವನ್ನು (ಟಿ.ಸಿ) ಕೆಪಿಎಸ್ ಶಾಲೆಗೆ ಕೊಡಿಸಿ. ಇಲ್ಲವೇ ಶಿಸ್ತುಕ್ರಮ ಎದುರಿಸಿ...’

ಸರ್ಕಾರದ ಮಹತ್ವಕಾಂಕ್ಷಿ ಮ್ಯಾಗ್ನೆಟ್ ಶಾಲೆ ಯೋಜನೆಯಡಿ ತಾಲ್ಲೂಕಿನ ಹೊಂಗನೂರು ಕೆಪಿಎಸ್ ಶಾಲೆಗೆ ಮಕ್ಕಳ ಟಿ.ಸಿ ಕೊಡಿಸದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ನೀಡಿರುವ ನೋಟಿಸ್‌ನಲ್ಲಿರುವ ಎಚ್ಚರಿಕೆ ಇದು.

ಕಣ್ವ ಫೌಂಡೇಷನ್ ಸಂಸ್ಥೆಯು ಹೊಂಗನೂರಿನಲ್ಲಿ ಅಭಿವೃದ್ಧಿಪಡಿಸಿರುವ ಈ ಶಾಲೆಯನ್ನು ಪ್ರಾಯೋಗಿಕವಾಗಿ ಮ್ಯಾಗ್ನೆಟ್ ಶಾಲೆಯಾಗಿ ಪರಿವರ್ತಿಸಿ ಅನುಷ್ಠಾನಗೊಳಿಸಲು ಶಿಕ್ಷಣ ಇಲಾಖೆ ಮುಂದಾಗಿದೆ.

ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ವಿದ್ಯಾರ್ಥಿಗಳ ಪೋಷಕರು ಹಾಗೂ ಸ್ಥಳೀಯರು, ‘ಮಕ್ಕಳನ್ನು ಈ ಶಾಲೆಗೆ ಕಳಿಸಿ, ನಮ್ಮೂರಿನ ಶಾಲೆ ಮುಚ್ಚಲು ಬಿಡುವುದಿಲ್ಲ’ ಎಂದು ಪಟ್ಟು ಹಿಡಿದಿದ್ದಾರೆ. ಇದಕ್ಕೆ ಎಐಡಿಎಸ್‌ಒ, ಎಸ್‌ಡಿಎಂಸಿ ಸಮನ್ವಯ ವೇದಿಕೆ, ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಸಹ ದನಿಗೂಡಿಸಿ ಇಲಾಖೆ ನಿರ್ಧಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿವೆ.

> **ಶತಮಾನದ ಇತಿಹಾಸವಿರುವ ನಮ್ಮ ಶಾಲೆಯಲ್ಲಿ 30 ಮಕ್ಕಳಿದ್ದಾರೆ. ಇತ್ತೀಚೆಗೆ ಶಾಲೆಗೆ ಬಣ್ಣ ಬಳಿಯಲಾಗಿದೆ. ಪಕ್ಕದೂರಲ್ಲಿ ದೊಡ್ಡ ಶಾಲೆ ಕಟ್ಟಿಸಿದ ಮಾತ್ರಕ್ಕೆ ನಮ್ಮೂರ ಶಾಲೆ ಮುಚ್ಚಿಸಲು ಇವರ್‍ಯಾರು?**
> **ಗೀತಾ,** ಅಧ್ಯಕ್ಷೆ, ಎಸ್‌ಡಿಎಂಸಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹೊಡಿಕೆಹೊಸಹಳ್ಳಿ

> **ಬಡವರ ಮಕ್ಕಳು ಓದುವ ಶಾಲೆಗಳನ್ನು ಮುಚ್ಚಿಸಲೇಬೇಕು ಎಂಬ ಹಠಮಾರಿ ಧೋರಣೆ ಯಾಕೆ? ಶಿಕ್ಷಣದ ಹಕ್ಕು ಕಸಿಯುವ ಈ ಯೋಜನೆಯನ್ನು ಕೂಡಲೇ ರದ್ದುಪಡಿಸಬೇಕು**
> **ಅಪೂರ್ವ ಸಿ.ಎಂ,** ರಾಜ್ಯ ಉಪಾಧ್ಯಕ್ಷೆ, ಎಐಡಿಎಸ್‌ಒ



ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ವಿರೋಧಿಸಿ ಚನ್ನಪಟ್ಟಣ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಎದುರು ಎಐಡಿಎಸ್‌ಒ, ರೈತ ಸಂಘ ಹಾಗೂ ಎಸ್‌ಡಿಎಂಸಿ ಸಮನ್ವಯ ವೇದಿಕೆ ನೇತೃತ್ವದಲ್ಲಿ ಪೋಷಕರು ಪ್ರತಿಭಟನೆ ನಡೆಸಿ, ಬಿಇಒ ರಾಮಲಿಂಗಯ್ಯ ಅವರಿಗೆ ಮನವಿ ಸಲ್ಲಿಸಿದರು

ನೋಟಿಸ್‌ನಲ್ಲಿ ಏನಿದೆ?: ಎಲ್ಲಾ ಶಾಲೆಗಳ ವಿದ್ಯಾರ್ಥಿಗಳನ್ನು ಕೆಪಿಎಸ್ ಶಾಲೆಗೆ ಸೇರಿಸಿ ವಿಲೀನಗೊಳಿಸಲು ಕ್ರಮ ವಹಿಸಬೇಕು. ಈ ಕುರಿತು, ಕಾರಣ ಕೇಳಿ ನೋಟಿಸ್ ಕೊಟ್ಟಿದ್ದರೂ ಯಾವುದೇ ಕ್ರಮವಹಿಸಿಲ್ಲ. ಮಾರ್ಚ್ 11ರೊಳಗೆ ಪೋಷಕರ ಮನವೊಲಿಸಿ ಮಕ್ಕಳ ಟಿ.ಸಿ.ಗಳನ್ನು ಕೊಡಿಸಬೇಕು ಎಂದು ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

ತಪ್ಪಿದ್ದಲ್ಲಿ ಯಾವುದೇ ತಿಳಿವಳಿಕೆ ಪತ್ರ ನೀಡದೆ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಹೊಡಿಕೆ ಹೊಸಹಳ್ಳಿ, ಕನ್ನಿದೊಡ್ಡಿ, ಅಮ್ಮಳ್ಳಿದೊಡ್ಡಿ, ಸಂತೆ ಮೊಗೇನಹಳ್ಳಿ ಹಾಗೂ ಸುಣ್ಣಘಟ್ಟ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರಿಗೆ ಎಚ್ಚರಿಕೆ ನೀಡಿದ್ದಾರೆ.

ಯೋಜನೆಯಡಿ ಈಗಾಗಲೇ 2 ವಿದ್ಯಾರ್ಥಿಗಳಿದ್ದ ಸಂತೆಮೊಗೇನಹಳ್ಳಿ ದೊಡ್ಡಿ ಹಾಗೂ 5 ಮಕ್ಕಳಿದ್ದ ಚನ್ನಂಕೇಗೌಡನದೊಡ್ಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ವಿಲೀನಗೊಳಿಸಲಾಗಿದೆ. ಈ ಕುರಿತು ಪ್ರತಿಕ್ರಿಯೆ ಪಡೆಯಲು ಚನ್ನಪಟ್ಟಣ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಇಲಾಖೆ ಉಪ ನಿರ್ದೇಶಕರಿಗೆ ‘ಪ್ರಜಾವಾಣಿ’ ಕರೆ ಮಾಡಿದಾಗ ಸ್ವೀಕರಿಸಲಿಲ್ಲ.

ಪೋಷಕರು ಒಪ್ಪದೆ ಹೇಗೆ ಕೊಡೋದು?

‘ಮಕ್ಕಳಿಗೆ ಟಿ.ಸಿ ಕೊಟ್ಟು ಕೆಪಿಎಸ್ ಶಾಲೆಗೆ ಸೇರಿಸಿ ಎಂದು ಇಲಾಖೆಯಿಂದ ಒತ್ತಡ ಹೆಚ್ಚಾಗಿದೆ. ನಮ್ಮ ಮಕ್ಕಳು ಇಲ್ಲೇ ಓದಲಿ ಎಂದು ಪೋಷಕರು ಹೇಳುತ್ತಿದ್ದಾರೆ. ಅವರು ಒಪ್ಪದೆ ಟಿ.ಸಿ ಕೊಡಲು ಹೇಗೆ ಸಾಧ್ಯ?’ ಎಂದು ವಿಲೀನಕ್ಕೆ ಗುರುತಿಸಿರುವ ಶಾಲೆಗಳ ಕೆಲ ಶಿಕ್ಷಕರು ‘ಪ್ರಜಾವಾಣಿ’ ಜೊತೆ ಅಳಲು ತೋಡಿಕೊಂಡರು.

‘ಸುಧಾ’ ಯುಗಾದಿ ವಿಶೇಷಾಂಕ 2026 ಪ್ರಬಂಧ ಸ್ಪರ್ಧೆ ಫಲಿತಾಂಶ

ವಾಸುದೇವ ಶರ್ಮಾ, ಸಂದೇಶ್ ನಾಯ್ಕ್, ಇಂದಿರಾ ಮೋಟೆಬೆನ್ನೂರಗೆ ಬಹುಮಾನ

ಪ್ರಜಾವಾಣಿ ವಾರ್ತೆ


ವಾಸುದೇವ ಶರ್ಮಾ


ಸಂದೇಶ್ ನಾಯ್ಕ್


ಇಂದಿರಾ ಮೋಟೆಬೆನ್ನೂರ

ಬೆಂಗಳೂರು: ‘ಸುಧಾ’ ವಾರಪತ್ರಿಕೆಯು ನಡೆಸಿದ 2026ರ ‘ಯುಗಾದಿ ವಿಶೇಷಾಂಕ ಪ್ರಬಂಧ ಸ್ಪರ್ಧೆ’ಯಲ್ಲಿ ವಾಸುದೇವ ಶರ್ಮಾ ಎನ್.ವಿ. ಅವರ ‘ಒಂದೊಂದು ದೀಣಿಗೂ ಒಂದೊಂದು ಕುತೂಹಲ’ ಪ್ರಬಂಧಕ್ಕೆ ಪ್ರಥಮ ಬಹುಮಾನ ಲಭಿಸಿದೆ.

ಸಂದೇಶ್ ಎಚ್. ನಾಯ್ಕ್ ಅವರ ‘ಅಲ್ಪ ಕಿರಿಯ ಅಳ-ಅಗಲ’ ಪ್ರಬಂಧಕ್ಕೆ ದ್ವಿತೀಯ ಬಹುಮಾನ ಹಾಗೂ ಇಂದಿರಾ ಮೋಟೆಬೆನ್ನೂರ ಅವರ ‘ಒಲೆಯೋ ಜೀವ ಸೆಲೆಯೋ’ ಪ್ರಬಂಧ ತೃತೀಯ ಬಹುಮಾನಕ್ಕೆ ಆಯ್ಕೆಯಾಗಿವೆ.

ಬಹುಮಾನಿತ ಪ್ರಬಂಧಗಳಿಗೆ ಕ್ರಮವಾಗಿ ₹20,000, ₹15,000 ಹಾಗೂ ₹10,000 ದೊರೆಯಲಿದೆ. ಈ ಪ್ರಬಂಧಗಳು ‘ಸುಧಾ ಯುಗಾದಿ ವಿಶೇಷಾಂಕ’ದಲ್ಲಿ ಪ್ರಕಟಗೊಂಡಿವೆ.

ಪಿ. ಪ್ರಸನ್ನ (ನಾಯಿ ಒಂದು ಭಾವ ಹಲವು), ಪಾಪುಗುರು (ಲ್ಯಾಪ್‌ಟಾಪ್ ಖರೀದಿಸಿದ ಫಜೀತಿ), ದಾದಾಪೀರ್ ಜೈಮನ್ (ಭಾಷೆ ಎಂಬ ಭಾವಲೋಕದ ದಾರಿ), ಸುಧಾಕರ ದೇವಾಡಿಗ ಬಿ. (ಸಾವಧಾನವೂ ಅವಸರದ ಬೆನ್ನೇರಿದಾಗ), ಡಾ.ಸಂತೋಷ ಗೋವರ್ಧನ (ತನ್ನ ಬಣ್ಣಬೇಕು) ಪ್ರಬಂಧಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ. ಇವುಗಳನ್ನು ‘ಸುಧಾ’ ವಾರ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ಬಾರಿ 300ಕ್ಕೂ ಅಧಿಕ ಪ್ರಬಂಧಗಳು ಸ್ಪರ್ಧೆಗೆ ಬಂದಿದ್ದವು.

ಲೇಖಕರಾದ ಸಂಧ್ಯಾ ಹೊನಗುಂಟಿಕರ್ ಮತ್ತು ಕಲೀಂ ಉಲ್ಲಾ ಈ ಬಾರಿಯ ಪ್ರಬಂಧ ಸ್ಪರ್ಧೆಯ ತೀರ್ಪುಗಾರರಾಗಿದ್ದರು.

ಒಳ ಮೀಸಲಾತಿ: ಸಂಪೂರ್ಣ ಬಂದ್

ಪ್ರಜಾವಾಣಿ ವಾರ್ತೆ

ರಾಯಚೂರು: ಒಳ ಮೀಸಲಾತಿ ಅನ್ವಯ 56 ಸಾವಿರ ಹುದ್ದೆಗಳ ಭರ್ತಿ ಮಾಡಬೇಕು ಹಾಗೂ ಒಳ ಮೀಸಲಾತಿ ಸಮರ್ಪಕ ಅನುಷ್ಠಾನಕ್ಕೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ಕರೆ ನೀಡಿದ್ದ ರಾಯಚೂರು ಬಂದ್‌ಗೆ ಬುಧವಾರ ಉತ್ತಮ ಪ್ರತಿಕ್ರಿಯೆ ದೊರೆಯಿತು.

ಮಾದಿಗ ಸಮುದಾಯದವರು ನಗರದ ನಾಲ್ಕೂ ದಿಕ್ಕುಗಳಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಹಳೆ ಬಾರುಕೋಲು ಒಳ ಮೀಸಲಾತಿಗೆ ಒತ್ತಾಯಿಸಿ ಘೋಷಣೆಗಳನ್ನು ಕೂಗುತ್ತ ನಗರದ ಕೇಂದ್ರ ಸ್ಥಾನದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ವೃತ್ತಕ್ಕೆ ಬಂದು ಸಮಾವೇಶಗೊಂಡರು.

ಪ್ರತಿಭಟನಕಾರರ ಒಂದು ತಂಡ ಆರ್‌ಟಿಒ ವೃತ್ತದ ಬಳಿ ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರ ಪ್ರತಿಕೃತಿ ದಹನ ಮಾಡಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರತಿಕೃತಿ ದಹನ ಮಾಡಲು ಪ್ರಯತ್ನಿಸಿದಾಗ ಪೊಲೀಸರು ತಡೆದರು.

ಬಂದ್‌ನಿಂದಾಗಿ ನಗರದ ಎಲ್ಲ ಶಾಲಾ–ಕಾಲೇಜುಗಳು, ವಾಣಿಜ್ಯ ಮಳಿಗೆಗಳು, ಪೆಟ್ರೋಲ್ ಬಂಕ್‌ಗಳು ಹಾಗೂ ಬ್ಯಾಂಕ್‌ಗಳು ಮುಚ್ಚಿದ್ದವು. ವ್ಯಾಪಾರ ವಹಿವಾಟು ಸಂಪೂರ್ಣ ಸ್ಥಗಿತಗೊಂಡಿತ್ತು. ಕೇಂದ್ರ ಬಸ್ ನಿಲ್ದಾಣ ಹಾಗೂ ನಗರ ಸಾರಿಗೆ ಬಸ್ ನಿಲ್ದಾಣಕ್ಕೆ ಬಸ್‌ಗಳು ಬರಲಿಲ್ಲ. ಹೀಗಾಗಿ ಪ್ರಯಾಣಿಕರು ತೊಂದರೆ ಅನುಭವಿಸಿದರು.


ರಾಯಚೂರು ಬಂದ್ ಪ್ರಯುಕ್ತ ಮಂತ್ರಾಲಯ ರಸ್ತೆಯಲ್ಲಿರುವ ವಾಣಿಜ್ಯ ಮಳಿಗೆಗಳು ಮುಚ್ಚಿದ್ದವು. ಪ್ರಮುಖ ರಸ್ತೆ ಜನರಿಲ್ಲದೆ ಬಿಕೋ ಎನ್ನುತ್ತಿತ್ತು

ವಿರೂಪಾಕ್ಷಿ ಹಾಗೂ ನರಸಪ್ಪ ದಂಡೋರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಜಿಲ್ಲಾಧಿಕಾರಿ ನಿತೀಶ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಅವರು ಡಾ.ಅಂಬೇಡ್ಕರ್ ವೃತ್ತಕ್ಕೆ ಬಂದು ಪ್ರತಿಭಟನಾಕಾರರಿಂದ ಮನವಿಪತ್ರ ಸ್ವೀಕರಿಸಿದರು. ನಗರದ ಪ್ರಮುಖ ವೃತ್ತಗಳಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ದ.ಕ.: 37 ಡಿಗ್ರಿ ಸೆಲ್ಸಿಯಸ್ ತಾಪಮಾನ



ಮಂಗಳೂರು: ರಾಜ್ಯದ ಕರಾವಳಿ ಪ್ರದೇಶದಲ್ಲಿ ತಾಪಮಾನ ಹೆಚ್ಚುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬುಧವಾರ 37 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ರಾಜ್ಯದಲ್ಲಿ ದಾಖಲಾಗಿರುವ ಗರಿಷ್ಠ ತಾಪಮಾನ ಇದು.

ಉತ್ತರ ಕನ್ನಡದಲ್ಲಿ 36.6, ಬೀದರ್‌ನಲ್ಲಿ ಗರಿಷ್ಠ 36.3, ರಾಯಚೂರಿನಲ್ಲಿ 36.1, ಉಡುಪಿಯಲ್ಲಿ 35.8, ಚಿಕ್ಕಮಗಳೂರಿನಲ್ಲಿ 34.5 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾ.12ರಂದು ಶಾಖದ ಅಲೆ ಹೆಚ್ಚುವ ಸಾಧ್ಯತೆ ಇದ್ದು, ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. ಬಿಸಿಲಿನ ವೇಳೆ ಮನೆಯಿಂದ ಹೊರಹೋಗುವುದನ್ನು ತಪ್ಪಿಸಿ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಲಕ್ಕುಂಡಿ ಉತ್ಖನನ ಮುಕ್ತಾಯ

ಪ್ರಜಾವಾಣಿ ವಾರ್ತೆ

ಗದಗ: ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ 47 ದಿನಗಳಿಂದ ನಡೆದಿದ್ದ ಉತ್ಖನನ ಕಾರ್ಯ ಬುಧವಾರ ಮುಕ್ತಾಯಗೊಂಡಿತು.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಮೈಸೂರು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಂಯುಕ್ತ ಆಶ್ರಯದಲ್ಲಿ ಉತ್ಖನನ ಕಾರ್ಯ ನಡೆದಿತ್ತು.

ಬುಧವಾರ ಸಂಜೆ ಪುರಾತತ್ವ ಇಲಾಖೆಯ ನಿಯಮದಂತೆ 14 ಅಡಿ ಆಳ ತೆಗೆದ ಉತ್ಖನನ ಸ್ಥಳವನ್ನು ಪ್ಲಾಸ್ಟಿಕ್ ತಾಡಪತ್ರಿ ಹಾಕಿ, ಉತ್ಖನನದ ವೇಳೆ ತೆಗೆದ ಮಣ್ಣನ್ನೇ ಹಾಕಿ ಮುಚ್ಚುವ ಕಾರ್ಯ ಕೈಗೊಳ್ಳಲಾಯಿತು.

‘10X10 ಮೀಟರ್ ಜಾಗದಲ್ಲಿ 4 ಬಾಕ್ಸ್‌ಗಳನ್ನು ರಚಿಸಿ, 30 ರಿಂದ 35 ಕಾರ್ಮಿಕರು 47 ದಿನ ಉತ್ಖನನ ಕಾರ್ಯದಲ್ಲಿ ಪಾಲ್ಗೊಂಡಿದ್ದರು. 50ಕ್ಕೂ ಹೆಚ್ಚು ಪ್ರಾಚ್ಯ ಅವಶೇಷಗಳು ಸಿಕ್ಕವು. ಇತಿಹಾಸ ತಜ್ಞರ ಸ್ಥಳ ಪರಿಶೀಲನೆ ಬಳಿಕ ಉತ್ಖನನಕ್ಕೆ ಪೂರ್ಣ ವಿರಾಮ ಹಾಕಲಾಗಿದೆ’ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದರು.


ಲಕ್ಕುಂಡಿಯಲ್ಲಿ ಬುಧವಾರ ಉತ್ಖನನ ಕಾರ್ಯವನ್ನು ಪ್ಲಾಸ್ಟಿಕ್ ತಾಡಪತ್ರಿ, ಮಣ್ಣು ಹಾಕಿ ಮುಕ್ತಾಯಗೊಳಿಸಲಾಯಿತು

‘ಮಾರ್ಚ್ 30ರಂದು ನಡೆಯುವ ವೀರಭದ್ರೇಶ್ವರ ಜಾತ್ರೆಯ ಧಾರ್ಮಿಕ ಕಾರ್ಯಗಳಿಗೆ ಅನುಕೂಲ ಮಾಡಿಕೊಡಲು ಉತ್ಖನನ ಮಾಡಿದ ಸ್ಥಳ ಮುಚ್ಚಲಾಗುತ್ತಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಅನುಮತಿಯೊಂದಿಗೆ ಗ್ರಾಮದ ಇತರೆ ಸ್ಥಳದಲ್ಲಿ ಉತ್ಖನನ ಮಾಡುವ ಉದ್ದೇಶವಿದೆ’ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಶಿಸ್ತು ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಪಾಟೀಲ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಗದ ಕಾರಣ ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಲಿಂಗರಾಜ ಪಾಟೀಲ ಅವರು ರಾಜೀನಾಮೆ ನೀಡಿದ್ದಾರೆ.

‘ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತನಾಗಿ 37 ವರ್ಷಗಳಿಂದ ದುಡಿದಿದ್ದೇನೆ. ಆದರೂ ಟಿಕೆಟ್ ತಪ್ಪಿಸಲಾಗಿದೆ’ ಎಂದು ಬಿಜೆಪಿ ಮುಖಂಡ ಲಿಂಗರಾಜ ಪಾಟೀಲ ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ಆರೋಪಿಸಿದರು.

‘ವಿಧಾನ ಪರಿಷತ್, ರಾಜ್ಯಸಭೆ ಚುನಾವಣೆ ಸೇರಿ ಐದು ಬಾರಿ ನನಗೆ ಟಿಕೆಟ್ ತಪ್ಪಿದೆ. ಪ್ರಾಮಾಣಿಕ ಮತ್ತು ನಿಷ್ಠಾವಂತ ಕಾರ್ಯಕರ್ತರು ಪಕ್ಷಕ್ಕೆ ಬೇಡ ಎಂಬ ಸ್ಥಿತಿ ಇದೆ. ಇದು ಅನ್ಯಾಯ’ ಎಂದು ಹೇಳಿ ಭಾವುಕರಾದರು.



> **ಚುನಾವಣೆಯಲ್ಲಿ ಸ್ಪರ್ಧಿಸಲು ಎಸ್.ವಿ.ಸಂಕನೂರ ಬದಲು ನನಗೆ ಟಿಕೆಟ್ ನೀಡಬೇಕು. ಎಂಟು ದಿನಗಳಲ್ಲಿ ವರಿಷ್ಠರು ಈ ಬಗ್ಗೆ ತೀರ್ಮಾನಿಸದಿದ್ದರೆ, ನಾನು ಮುಂದಿನ ನಿರ್ಧಾರ ಪ್ರಕಟಿಸುವೆ**
> **ಲಿಂಗರಾಜ ಪಾಟೀಲ,** ಬಿಜೆಪಿ ಮುಖಂಡ

‘ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿಲ್ಲದ ಎಸ್.ವಿ. ಸಂಕನೂರ ಅವರಿಗೆ ವಯಸ್ಸಾಗಿದೆ. ಆದರೂ ಅವರಿಗೆ ಟಿಕೆಟ್ ನೀಡಲಾಗಿದೆ. ಕಷ್ಟಪಟ್ಟು ಪಕ್ಷ ಕಟ್ಟಿದ ಸಾಮಾನ್ಯ ಕಾರ್ಯಕರ್ತರನ್ನು ಕಡೆಗಣಿಸಲಾಗುತ್ತಿದೆ’ ಎಂದರು.

ನಿಧನ ವಾರ್ತೆ

ಕೆ.ಜೆ. ಕುಮಾರ್



ಮೈಸೂರು: ಇಲ್ಲಿನ ಯಾದವಗಿರಿಯ ನಿವಾಸಿಯಾಗಿದ್ದ ಪತ್ರಕರ್ತ ಕೆ.ಜೆ. ಕುಮಾರ್ (74) ಹೃದಯಾಘಾತದಿಂದ ಬುಧವಾರ ನಿಧನರಾದರು.


ಅವರಿಗೆ ಪತ್ನಿ, ಪುತ್ರಿ, ಸಹೋದರಿ ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಪ್ರಕಾಶ್ ಇದ್ದಾರೆ.

ಎದೆನೋವು ಕಾಣಿಸಿಕೊಂಡಿದ್ದರಿಂದ ಅವರನ್ನು ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆಗೆ ಕರೆತರಲಾಗಿತ್ತು. ಗುರುವಾರ (ಮಾರ್ಚ್ 12) ಬೆಳಿಗ್ಗೆ 8ಕ್ಕೆ ಯಾದವಗಿರಿಯ ಎ.ರಾಮಣ್ಣ ವೃತ್ತದಲ್ಲಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಪರಿಚಯ: ಉಡುಪಿಯ ಕೊರಂಗ್ರಪಾಡಿಯವರಾದ ಅವರು ಹಲವು ದಶಕಗಳಿಂದ ಮೈಸೂರಿನ ಪ್ರಮುಖ ಪತ್ರಿಕಾ ವಿತರಕರಾಗಿದ್ದರು, ಪತ್ರಕರ್ತರಾಗಿಯೂ ಕೆಲಸ ಮಾಡಿದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಒಂದೇ ಒಂದು ಒಳ್ಳೆಯದಿದೆ, ಅದು ಜ್ಞಾನ. ಒಂದೇ ಒಂದು ಕೆಟ್ಟದಿದೆ, ಅದೇ ಅಜ್ಞಾನ.

–ಸಾಕ್ರಟಿಸ್

ಸಂಪಾದಕೀಯ

ಜನಜೀವನದ ಮೇಲೆ ಯುದ್ಧದ ಬಿಸಿ ಇಂಧನ ಮಿತವ್ಯಯ ವಿವೇಕದ ನಡೆ

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಹೇರಿರುವ ಯುದ್ಧವು ನಿರೀಕ್ಷೆಯಂತೆ ಭಾರತೀಯರ ಮೇಲೆ ಪರಿಣಾಮ ಬೀರಲು ಆರಂಭಿಸಿದೆ. ಇಂಧನ ಪೂರೈಕೆಯಲ್ಲಿ ಅಡಚಣೆಯುಂಟಾಗಿದೆ ಹಾಗೂ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿದೆ. ಷೇರುಪೇಟೆಯಲ್ಲೂ ನಿರಂತರ ಕುಸಿತ ಕಾಣಿಸುತ್ತಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 119.50 ಡಾಲರ್‌ಗೆ ಜಿಗಿದು, ನಂತರ ಇಳಿಕೆಯಾಗಿದ್ದರೂ, ಅದು ಯಾವುದೇ ಸಮಯದಲ್ಲಿ ತೀವ್ರ ಏರಿಕೆಯನ್ನು ದಾಖಲಿಸಬಹುದಾಗಿದೆ. ಇರಾನ್ ಮೇಲೆ ನಡೆಯುತ್ತಿರುವ ನಿರಂತರ ದಾಳಿಗಳು, ಟೆಹರಾನ್ ನಡೆಸುತ್ತಿರುವ ಪ್ರತೀಕಾರದ ದಾಳಿಗಳು, ಹೊರ್ಮುಜ್ ಜಲಸಂಧಿಯಲ್ಲಿನ ಉಸಿರುಗಟ್ಟಿಸುವ ಪರಿಸ್ಥಿತಿ, ಇವೆಲ್ಲದರ ಜೊತೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳು ಪರಿಸ್ಥಿತಿಯನ್ನು ಹೆಚ್ಚು ಸಂಕೀರ್ಣಗೊಳಿಸುತ್ತಿವೆ; ತೈಲ ಮತ್ತು ಅಡುಗೆ ಅನಿಲದ ಸರಬರಾಜು ವಿಶ್ವದಾದ್ಯಂತ ಅಸ್ತವ್ಯಸ್ತವಾಗಿದೆ. ಜಾಗತಿಕವಾಗಿ ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಸುಮಾರು ಐದನೇ ಒಂದರಷ್ಟು ಪ್ರಮಾಣದ ಸರಬರಾಜು ಹೊರ್ಮುಜ್ ಜಲಸಂಧಿಯ ಮೂಲಕವೇ ಆಗಬೇಕಾಗಿದೆ. ಬದಲಾದ ಸಂದರ್ಭದಲ್ಲಿ ಸರಬರಾಜಿನಲ್ಲಿ ಉಂಟಾಗಿರುವ ವ್ಯತ್ಯಯ ತೈಲ ಮತ್ತು ಅಡುಗೆ ಅನಿಲದ ಬೆಲೆ ಏರಿಕೆಗೆ ಕಾರಣವಾಗಿದೆ. ಭಾರತವು ತನಗೆ ಅಗತ್ಯವಾದ ಇಂಧನದಲ್ಲಿ ಶೇ 80ರಷ್ಟನ್ನು ವಿಶ್ವ ಮಾರುಕಟ್ಟೆಯಿಂದ ಪಡೆಯುತ್ತದೆ. ನೈಸರ್ಗಿಕ ಅನಿಲದ ಅರ್ಧದಷ್ಟು ಭಾಗ ಹಾಗೂ ಶೇ 60ರಷ್ಟು ಎಲ್‌ಪಿಜಿಯನ್ನು ಗಲ್ಫ್ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತದೆ.




ಗಲ್ಫ್ ಯುದ್ಧದ ಝಳ ಭಾರತಕ್ಕೂ ತಾಕುತ್ತಿದೆ. ಅಡುಗೆ ಅನಿಲವೂ ಸೇರಿದಂತೆ ಇಂಧನ ಬಳಕೆಯಲ್ಲಿ ಮಿತವ್ಯಯ ಸಾಧಿಸುವುದು ಬಿಕ್ಕಟ್ಟನ್ನು ಸಹನೀಯಗೊಳಿಸಲು ನೆರವಾಗಬಹುದು.

ಅಡುಗೆ ಅನಿಲದ ಕೊರತೆ ಇಲ್ಲ ಎಂದು ಕೇಂದ್ರ ಸರ್ಕಾರ ಮೊದಲು ಹೇಳಿಕೊಂಡಿದ್ದರೂ, ಬಿಕ್ಕಟ್ಟು ಮನೆ ಮನೆಗೆ ತಲಪಿದೆ. ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ತೀವ್ರ ವ್ಯತ್ಯಯ ಉಂಟಾಗಿದೆ. ಹೋಟೆಲುಗಳು, ರೆಸ್ಟೋರೆಂಟ್‌ಗಳು ಮಾತ್ರವಲ್ಲದೆ ರಸ್ತೆ ಬದಿಯಲ್ಲಿ ಆಹಾರ ಪದಾರ್ಥಗಳ ವಹಿವಾಟು ನಡೆಸುವವರು ಕೂಡ ತಮ್ಮ ಕಾರ್ಯಾಚರಣೆಯನ್ನು ಸದ್ಯದಲ್ಲೇ ಸ್ಥಗಿತಗೊಳಿಸುವುದಾಗಿ ಇಲ್ಲವೇ ಮಿತಗೊಳಿಸುವುದಾಗಿ ಹೇಳುತ್ತಿದ್ದಾರೆ. ಅಡುಗೆ ಉದ್ಯಮದವರು, ಕಾರ್ಮಿಕರು, ಮಾರಾಟಗಾರರು ಮತ್ತು ವಿತರಣಾ ಸಿಬ್ಬಂದಿ ಸೇರಿದಂತೆ ಹೆಚ್ಚಿನ ಸಂಖ್ಯೆಯ ಜನರ ಜೀವನೋಪಾಯವು ತೊಂದರೆಗೆ ಸಿಲುಕಿದೆ ಹಾಗೂ ದೊಡ್ಡ ಸಂಖ್ಯೆಯ ಗ್ರಾಹಕರು ಅನನುಕೂಲಕ್ಕೆ ಒಳಗಾಗಿದ್ದಾರೆ. ಬಿಕ್ಕಟ್ಟು ಇದೇ ರೀತಿ ಮುಂದುವರಿದರೆ ಆತಿಥ್ಯ ಉದ್ಯಮದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಮಾರುಕಟ್ಟೆಯಲ್ಲಿ ಇರುವ ಆತಂಕದ ಪರಿಸ್ಥಿತಿಯು ಹೆಚ್ಚಿನ ಬೇಡಿಕೆಗಳಿಗೆ ಹಾಗೂ ವಿತರಣೆಯಲ್ಲಿನ ವಿಳಂಬಕ್ಕೆ ಕಾರಣವಾಗಿದೆ. ಇಂತಹ ಬಿಕ್ಕಟ್ಟುಗಳು ಯಾವಾಗಲೂ ತಮ್ಮನ್ನು ತಾವು ಪೋಷಿಸಿಕೊಳ್ಳುವುದರಿಂದ, ಆತಂಕದ ಸ್ಥಿತಿ ಮುಂದುವರಿಯುವ ಸಾಧ್ಯತೆಯಿದೆ. ಕೆಲವು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ಸಮೀಪದಲ್ಲಿರುವುದರಿಂದ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಸದ್ಯಕ್ಕೆ ಹೆಚ್ಚಾಗದೆ ಇರುವ ಸಾಧ್ಯತೆಯೂ ಇದೆ. ಆದರೆ, ಈ ಬಿಕ್ಕಟ್ಟು ಆಮದು ಹಾಗೂ ಹಣದುಬ್ಬರದ ಏರಿಕೆಯ ಮೇಲೆ ಪರಿಣಾಮ ಬೀರುತ್ತದೆ.

ಎಲ್‌ಪಿಜಿ, ಸಿಎನ್‌ಜಿ ಮತ್ತು ಪಿಎನ್‌ಜಿ ಉತ್ಪಾದಕರಿಗೆ ಅಗತ್ಯವಿರುವ ನೈಸರ್ಗಿಕ ಅನಿಲವನ್ನು ಒದಗಿಸಿದ ನಂತರ ಇತರ ವಲಯಗಳಿಗೆ ಪೂರೈಕೆ ಮಾಡಲು ನಿರ್ಧರಿಸುವ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ನಂತರದ ಆದ್ಯತೆ ರಸಗೊಬ್ಬರ ತಯಾರಿಕಾ ವಲಯಕ್ಕೆ ನೀಡಲಾಗಿದ್ದು, ಆ ವಲಯದ ಶೇ 70ರಷ್ಟು ಬೇಡಿಕೆ ಪೂರೈಸಲು ಅವಕಾಶ ಕಲ್ಪಿಸಲಾಗಿದೆ. ನಂತರದ ಆದ್ಯತೆಯಲ್ಲಿ ಚಹಾ ಕೈಗಾರಿಕೆಗಳು, ತಯಾರಿಕಾ ವಲಯ ಮತ್ತು ಕೈಗಾರಿಕಾ ಗ್ರಾಹಕರನ್ನು ಗುರ್ತಿಸಲಾಗಿದೆ. ಅನಿಲದ ಉತ್ಪಾದನೆಯನ್ನು ಹೆಚ್ಚಿಸುವಂತೆ ಸಂಸ್ಕರಣಾಗಾರಗಳಿಗೆ ಸರ್ಕಾರ ಸೂಚಿಸಿದ್ದು, ಪರಿಸ್ಥಿತಿಯನ್ನು ನಿರ್ವಹಿಸಲು ಮೇಲ್ವಿಚಾರಣಾ ಸಮಿತಿ ರಚಿಸಿದೆ. ಗೃಹಬಳಕೆ ಇಂಧನದ ಅಗತ್ಯಗಳನ್ನು ಪೂರೈಸುವುದಕ್ಕೆ ಮೊದಲ ಆದ್ಯತೆ ಎನ್ನುವುದನ್ನು ಸ್ಪಷ್ಟಪಡಿಸುವ ಮೂಲಕ, ಸದ್ಯದ ಮಟ್ಟಿಗಾದರೂ ನಾಗರಿಕರು ಬಿಕ್ಕಟ್ಟಿನಿಂದ ತಳಮಳಗೊಳ್ಳದಂತೆ ನೋಡಿಕೊಳ್ಳುವ ಪ್ರಯತ್ನವನ್ನು ಸರ್ಕಾರ ನಡೆಸಿದೆ. ಹೆಚ್ಚಿನ ಮನೆಗಳಲ್ಲಿ ಎಲ್‌ಪಿಜಿ ಅಗತ್ಯ ವಸ್ತುವಾಗಿದ್ದು, ಅದರ ಸರಬರಾಜಿನಲ್ಲಿ ಉಂಟಾಗುವ ಕೊರತೆಯು ರಾಜಕೀಯ ಪರಿಣಾಮ ಬೀರುವ ಸಾಧ್ಯತೆಯಿದೆ. ಹಾಗಾಗಿಯೇ ಅಗತ್ಯ ವಸ್ತುಗಳ ಕಾಯ್ದೆಯನ್ನು ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಯುದ್ಧ ಜಾರಿಯಲ್ಲಿ ಇರುವವರೆಗೂ ಕೊರತೆ ಪರಿಸ್ಥಿತಿ ಮುಂದುವರಿಯುವುದರಿಂದ, ಅಡುಗೆ ಅನಿಲ ಮತ್ತು ಇತರ ಇಂಧನಗಳ ಬಳಕೆಯಲ್ಲಿ ನಾಗರಿಕರು ಮಿತವ್ಯಯ ಸಾಧಿಸುವುದು ವಿವೇಕದ ನಡೆಯಾಗಿದೆ.

ಯುದ್ಧಕಾಲೇ ತಂತ್ರಕ್ರಾಂತಿ ಸ್ಮರಣ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

> ಯುದ್ಧಕಾಲದ ಎಲ್ಲ ಕ್ರೌರ್ಯಗಳ ಆಚೆ ವಿಕ್ಷಿಪ್ತ ಸತ್ಯವೊಂದಿದೆ. ಅಳಿದುಳಿದವರ ಬದುಕನ್ನು ಸುಖಮಯ ಮಾಡುವ ಎಷ್ಟೊಂದು ತಾಂತ್ರಿಕ ವರದಾನಗಳು ಯುದ್ಧದಿಂದಾಗಿಯೇ ಸಮಾಜಕ್ಕೆ ಸಿಗುತ್ತವೆ. ರಕ್ಷಣೆಗೆ ವ್ಯಯಿಸುವ ಮೊತ್ತದ ತುಸುಪಾಲನ್ನು ತಂತ್ರಜ್ಞಾನದತ್ತ ತಿರುಗಿಸಿದರೆ ಯುದ್ಧವೇ ಹತ್ತಿರಕ್ಕೆ ಬಾರದಂಥ ಭದ್ರ ಸಮಾಜವನ್ನು ಕಟ್ಟಿಕೊಳ್ಳಲು ಸಾಧ್ಯವಿದೆ.

ಚರಿತ್ರೆಯ ಈ ಚಮತ್ಕಾರಿಕ ಸಾಮ್ಯವನ್ನು ನೀವು ಗಮನಿಸಿದಿರಾ? ಇರಾನ್ ಪಕ್ಕದ ಹೊರ್ಮುಜ್ ಸಂಧಿಯಲ್ಲಿ ಸಂಚಾರ ದಿಗ್ಬಂಧನ ಆಗಿದ್ದರಿಂದ ಕಚ್ಚಾತೈಲ ತುಂಬಿಕೊಂಡ ಹಡಗುಗಳ ಭರ್ಜರಿ ದಟ್ಟಣೆ ಅಲ್ಲಿ ನೆರೆದಿದೆ. ಏಕೆಂದರೆ ಎರಡು ಬಣಗಳು ಅಲ್ಲಿ ಯುದ್ಧಕ್ಕೆ ನಿಂತಿವೆ. ಸುಮಾರು ಮೂರು ಕೋಟಿ ವರ್ಷಗಳ ಹಿಂದೆಯೂ ಇಲ್ಲಿ ಹೀಗೇ ಆಗಿತ್ತು! ಎರಡು ಭೂಖಂಡಗಳು ಇಲ್ಲೇ ಭಾರೀ ತಿಕ್ಕಾಟ ನಡೆಸಿದ್ದವು. ಅರೇಬಿಯನ್ ಭೂಚಿಪ್ಪು ಅಲ್ಲಿದ್ದ ಯುರೋಪಿಯನ್ ಭೂಖಂಡವನ್ನು ಒತ್ತತೊಡಗಿತ್ತು. ನೆಲದಾಳದಲ್ಲಿ ಎಲ್ಲೆಲ್ಲೋ ಚದುರಿದ್ದ ತೈಲಶಿಲೆಗಳು ಆ ಘರ್ಷಣೆಯಲ್ಲಿ ಪರಸ್ಪರ ಒತ್ತಿಕೊಂಡು ಒಂದೇ ಕಡೆ ಮಡುಗಟ್ಟಿ ತೈಲ ನಿಕ್ಷೇಪಗಳಾಗಿವೆ.

ಸಾಮ್ಯ-ವೈಷಮ್ಯ ಅಷ್ಟಕ್ಕೇ ನಿಲ್ಲುವುದಿಲ್ಲ. ಭೂಖಂಡಗಳ ತಿಕ್ಕಾಟ, ಘರ್ಷಣೆಯಿಂದಾಗಿಯೇ ನಮಗಿಂದು ತೈಲದ ರೂಪದಲ್ಲಿ ಏನೆಲ್ಲ ಅತ್ಯಾಧುನಿಕ ಸೌಲಭ್ಯಗಳು ಸಿಕ್ಕಿವೆ ನಿಜ ತಾನೆ? ಹಾಗೆಯೇ ಯುದ್ಧ ಮತ್ತು ಯುದ್ಧ ಸಿದ್ಧತೆಗಳಿಂದಾಗಿಯೇ ಇಂದು ಸುಖಮಯ ಬದುಕಿಗೆ ಬೇಕಾದ ಏನೆಲ್ಲ ಸೌಲಭ್ಯಗಳೂ ಮನುಜಕುಲಕ್ಕೆ ದಕ್ಕಿವೆ. ಮಹಾಯುದ್ಧದ ಕಾಲದಿಂದಲೂ ಇದಕ್ಕೆ ಬೇಕಷ್ಟು ಉದಾಹರಣೆಗಳು ಸಿಗುತ್ತವೆ. ಮೊದಲೆಲ್ಲ ಯೋಧರು ಗುಂಡೇಟಿಗಿಂತ ಹೆಚ್ಚಾಗಿ ಗಾಯದಿಂದಾಗಿಯೇ ಪ್ರಾಣ ಬಿಡುತ್ತಿದ್ದರು. ಪೆನಿಸಿಲಿನ್ ಶೋಧವಾಗಿದ್ದೇ ತಡ, ಯುದ್ಧದ ಗಾಯಾಳುಗಳ ಜೀವ ಉಳಿಸಲೆಂದು ಭಾರೀ ಪ್ರಮಾಣದಲ್ಲಿ ಅದರ ಉತ್ಪಾದನೆ ಪ್ರಾರಂಭವಾಯಿತು. ಈಗ ಅದೇ ಆಂಟಿಬಯಾಟಿಕ್‌ಗಳು ಕೋಟಿಗಟ್ಟಲೆ ಜನರ ಜೀವವನ್ನು ಉಳಿಸುತ್ತಿವೆ. ಮೂಳೆ ಮುರಿದರೆ, ಅಂಗಾಂಗ ಊನವಾದರೆ ಈಗೇನೋ ಟೈಟಾನಿಯಂ ಲೋಹದ ಹಗುರ ಚಕ್ಕೆಗಳನ್ನು ಜೋಡಿಸಲಾಗುತ್ತದೆ. ಅದೂ ಮೊದಲು ಗಾಯಾಳು ಯೋಧರಿಗೆಂದೇ ರೂಪುಗೊಂಡ ಸಾಧನವಾಗಿತ್ತು.

ರಡಾರ್, ಜೆಟ್ ಎಂಜಿನ್, ಉಪಗ್ರಹ, ಇಂಟರ್‌ನೆಟ್ ಇವೆಲ್ಲವೂ ಈ ಮೊದಲು ಯುದ್ಧಕ್ಕಾಗಿಯೇ ಬಳಕೆಗೆ ಬಂದವು. ಏಕೆಂದರೆ ಯುದ್ಧ ಹೊಸ್ತಿಲಲ್ಲಿದೆ ಎಂದಾಗ ದೇಶಗಳು ತಮ್ಮೆಲ್ಲ ವಿಜ್ಞಾನ, ತಂತ್ರಜ್ಞಾನ, ದ್ರವ್ಯ (ಹಣಕಾಸು) ಬಲಗಳನ್ನು ಕ್ರೋಡೀಕರಿಸಿ ನಿಲ್ಲುತ್ತವೆ. ಹಿಟ್ಲರನನ್ನು ಮಣಿಸಲೆಂದು ಅಮೆರಿಕ 'ಮ್ಯಾನ್‌ಹಟ್ಟನ್ ಯೋಜನೆ' ಹಾಕಿ, ಈ ಮೂರನ್ನೂ ಗುಡ್ಡೆ ಹಾಕಿ ಮೂರೇ ವರ್ಷಗಳಲ್ಲಿ ಪರಮಾಣು ಬಾಂಬ್ ತಯಾರಿಸಿತು. ಇಂದು ಸೇಂಗಾ, ಆಲೂಗೆಡ್ಡೆಗಳ ಮೇಲೆ ವಿಕಿರಣದ 'ದಾಳಿ' ನಡೆಸಿ ಅವು ಹಾಳಾಗದಂತೆ, ಅವಕ್ಕೆ ಹುಳಬೀಳದಂತೆ ಮಾಡಿ ದೀರ್ಘ ಕಾಲ ದಾಸ್ತಾನು ಇಡುತ್ತಿದ್ದೇವೆ. ದಾಳಿಗೆ ಬರುವ ಯುದ್ಧ ವಿಮಾನಗಳನ್ನು ದೂರದಿಂದಲೇ ಗುರುತಿಸಲೆಂದು ರಡಾರ್ ರೂಪುಗೊಂಡಿತು. ಇಂದು ರಡಾರ್ ಎಲ್ಲೆಲ್ಲ ಬಳಕೆಗೆ ಬಂದಿವೆ ನೋಡಿ: ಆಹಾರೋತ್ಪಾದನೆಗೆ ಅಗತ್ಯವಾದ ಹವಾ ಮುನ್ಸೂಚನೆಗೆ ಡಾಪ್ಲರ್ ರಡಾರ್ ಬೇಕು. ವಿಮಾನಗಳ ಸುರಕ್ಷಿತ ಏರಿಳಿತಕ್ಕೆ ರಡಾರ್ ಬೇಕೇ ಬೇಕು. ಬಂದರುಗಳಲ್ಲಿ, ಮುಖ್ಯ ರಸ್ತೆಗಳಲ್ಲಿ ಸಂಚಾರ ದಟ್ಟಣೆಯ ನಿಯಂತ್ರಣಕ್ಕೆ ರಡಾರ್ ಬೇಕು.

ಇನ್ನು ಬಾಹ್ಯಾಕಾಶ ಉಪಗ್ರಹಗಳ ಕತೆ: ಮಹಾಯುದ್ಧಗಳು ಮುಗಿದು ಶೀತಲ ಸಮರ ಆರಂಭವಾದಾಗ ಸೋವಿಯತ್ ರಷ್ಯ 'ಸ್ಪುಟ್ನಿಕ್1' ಹೆಸರಿನ ಡಬ್ಬಿಯನ್ನು ಬಾಹ್ಯಾಕಾಶಕ್ಕೆ ಏರಿಸಿ, ಭೂಮಿಗೆ ರೌಂಡ್ ಹೊಡೆಸಿತು. ಅದರ ಬೀಪ್ ಬೀಪ್ ಸದ್ದು ಅಮೆರಿಕದಲ್ಲಿ ಕೋಲಾಹಲ ಎಬ್ಬಿಸಿತು. ಬಾಂಬ್ ದಾಳಿಗೇ ಅದನ್ನು ಹಾರಿಸಲಾಯಿತು ಎಂದು ದಿಗಿಲೆದ್ದು ಅಮೆರಿಕವೂ ರಾಕೆಟ್ ಮತ್ತು ಉಪಗ್ರಹಗಳ ನಿರ್ಮಾಣಕ್ಕೆ ತೋಳೇರಿಸಿತು. ನಂತರದ ಕತೆ ನಮಗೆಲ್ಲ ಗೊತ್ತೇ ಇದೆ. ಇಂದು ಬಾಹ್ಯಾಕಾಶದಲ್ಲಿ ಉಪಗ್ರಹಗಳು ಇಲ್ಲದಿದ್ದರೆ ನಮಗೆ ದಾರಿ ಕಾಣುವುದಿಲ್ಲ; ಬದುಕೇ ದಿಕ್ಕೆಡುತ್ತದೆ. ಇಂಟರ್‌ನೆಟ್ ಕೂಡ ಮಿಲಿಟರಿ ಉದ್ದೇಶಕ್ಕೇ ರೂಪುಗೊಂಡಿದ್ದು. ಶೆಲ್ ದಾಳಿ ನಡೆದು ಕಂಪ್ಯೂಟರ್ ನಾಶವಾದರೆ ಅದರಲ್ಲಿನ ಮಾಹಿತಿಗಳೆಲ್ಲ ಏಕಕಾಲದಲ್ಲಿ ಬೇರೆ ಬೇರೆ ಕಂಪ್ಯೂಟರ್‌ಗಳಲ್ಲಿ ನುಸುಳುವಂತೆ ಮಾಡಲು ಅಮೆರಿಕದಲ್ಲಿ ಅರ್ಪಾನೆಟ್ ಎಂಬ ಜಾಲ ರೂಪುಗೊಂಡಿತು. ಅದರದ್ದೇ ವಿಕಸಿತ ರೂಪ ಈಗ ನಮ್ಮೆಲ್ಲರ ಕಿಸೆಗಳಲ್ಲೂ ವಾಚ್‌ಗಳಲ್ಲೂ ನುಸುಳಿದೆ.

ಡ್ರೋನ್‌ಗಳ ಕತೆಗೆ ಆಮೇಲೆ ಬರೋಣ. ಮಹಾಭಾರತದ ದ್ರೋಣ ಪರ್ವದಲ್ಲಿ ಬರುವ ಅದೆಷ್ಟೊಂದು ಕಲ್ಪಿತ ಅಸ್ತ್ರಶಸ್ತ್ರಗಳು ಈಗಿನ ಯುದ್ಧಗಳಿಗಾಗಿ ಸಾಕಾರಗೊಂಡು ನಮ್ಮ ಬದುಕಿಗೆ ವರದಾನವೂ ಆಗಿವೆ. ದ್ರೋಣನ ಹತ್ಯೆಯ ಸುದ್ದಿ ಕೇಳಿ ಅವನ ಮಗ ಅಶ್ವತ್ಥಾಮ ಕೋಪಾವಿಷ್ಟನಾಗಿ ನಾರಾಯಣಾಸ್ತ್ರವನ್ನು ಪಾಂಡವರ ಮೇಲೆ ಪ್ರಯೋಗ ಮಾಡಿದನಲ್ಲ? ಆ ಅಸ್ತ್ರದ ವಿಶೇಷ ಏನೆಂದರೆ, ಶರಣಾಗತರಾದವರ ಎದುರು ಅದು ನಿಷ್ಕ್ರಿಯವಾಗುತ್ತದೆ. ಕೃಷ್ಣನ ಸಲಹೆಯ ಪ್ರಕಾರ ಪಾಂಡವರು ಹಾಗೇ ಮಾಡಿ ಬಚಾವಾದರೆಂದು ವ್ಯಾಸರು ಕತೆ ಕಟ್ಟಿದ್ದಾರೆ. ಇಸ್ರೇಲಿನ 'ಐರನ್ ಡೋಮ್' ಎಂಬ ಮೂರು ಪದರಗಳ ಅಗೋಚರ ಕವಚದ ಒಂದು ಪದರ ಈ ಕತೆಗೆ ಸರಿಯಾಗಿ ಹೊಂದುತ್ತದೆ. ಇಸ್ರೇಲಿನತ್ತ ದಾಳಿಗೆ ಯಾವುದೇ ಕ್ಷಿಪಣಿ ಇರಾನ್‌ನಿಂದ ಹೊರಟರೂ ಅದರ ಸಾಗು ಮಾರ್ಗವನ್ನು ಇಸ್ರೇಲಿನ ಶಸ್ತ್ರಸಜ್ಜಿತ ರಡಾರ್ ಕೂತಲ್ಲೇ ಲೆಕ್ಕ ಹಾಕುತ್ತದೆ. ಬರುತ್ತಿರುವ ಕ್ಷಿಪಣಿ ಸಮುದ್ರಕ್ಕೊ ಮರಳು ದಿನ್ನೆಗೊ ಬೀಳುತ್ತಿದೆ- ಯಾನೆ ಶರಣಾಗುತ್ತಿದೆ- ಎಂದು ಗೊತ್ತಾದರೆ, ಇಸ್ರೇಲೀ ರಡಾರ್ ತಟಸ್ಥ (ಪ್ರಾಯಶಃ ನಗುತ್ತ) ಕೂತಿರುತ್ತದೆ. ಗುರಿ ತಪ್ಪಿದ ಕ್ಷಿಪಣಿಯನ್ನು ಢಮ್ಮೆನಿಸಿ ಯಾಕೆ ತನ್ನ ಶಸ್ತ್ರ ವ್ಯರ್ಥ ಮಾಡಿಕೊಳ್ಳಬೇಕು? ಆದರೆ ಐರನ್ ಡೋಮ್ ಬಗ್ಗೆ ಚೀನೀಯರಿಂದ ಮಾಹಿತಿ ಪಡೆದಿದ್ದ ಇರಾನ್ ತನ್ನ ಕ್ಷಿಪಣಿಗಳಿಗೆ ಕೃತಕ ಬುದ್ಧಿಮತ್ತೆಯ ಚೀನಿ ಚಿಪ್‌ಗಳನ್ನು ಜೋಡಿಸಿತ್ತು. ಇಸ್ರೇಲ್ ಕಡೆ ಹೋಗುವ ಬದಲು ಅವು ಜೋರ್ಡಾನ್ ಮತ್ತು ಯುಎಇಗಳ ನೀರಿನ ಸ್ಥಾವರಗಳ ಮೇಲೆ ಎಳ್ಳಷ್ಟೂ ಗುರಿ ತಪ್ಪದಂತೆ (ಸರ್ಜಿಕಲ್) ದಾಳಿ ನಡೆಸಿದವು. ಕುಡಿಯಲು ನೀರಿಲ್ಲದಿದ್ದರೆ ತೈಲನಿಧಿ ಎಷ್ಟಿದ್ದರೇನು? ಅಂದಹಾಗೆ, ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಅಮೆರಿಕನ್ ಜಲಾಂತರ್ಗಾಮಿ ನೌಕೆಗಳಲ್ಲಿ ಬ್ಯಾಟರಿಗಳ ಮತ್ತು ಸಿಬ್ಬಂದಿಯ ಬಾಯಾರಿಕೆ ನೀಗಲೆಂದೇ ಉಪ್ಪುನೀರಿನ ಶುದ್ಧೀಕರಣ (ಡಿ-ಸಲೈನೇಶನ್) ತಂತ್ರಜ್ಞಾನ ರೂಪುಗೊಂಡಿತ್ತು.

ಈ ಶತಮಾನದ ಯುದ್ಧದಲ್ಲಿ ಡ್ರೋನ್‌ಗಳ ಪಾತ್ರ ಎಷ್ಟೆಂಬುದಕ್ಕೆ ಅದೆಷ್ಟೊ ರಂಜನೀಯ ಕತೆಗಳಿವೆ. ಇರಾನಿಯರ ಅಗ್ಗದ, (ಮೋಟರ್ ಬೈಕ್ ಎಂಜಿನ್‌ಗಳನ್ನು ಜೋಡಿಸಿದ) 'ಶಾಹೆದ್-136' ಹೆಸರಿನ ಡ್ರೋನ್‌ಗಳು ಪುಂಖಾನುಪುಂಖ ಹಾರಿ ಅಮೆರಿಕದ ಭಾರೀ ವೆಚ್ಚದ ಹೈಟೆಕ್ ಶಸ್ತ್ರಾಗಾರಗಳ ಮೇಲೆ ಎರಗುತ್ತಿವೆ ತಾನೆ? ರಷ್ಯಾಕ್ಕೂ ಈ ಶಾಹೆದ್‌ಗಳನ್ನು ಇರಾನ್ ರಫ್ತು ಮಾಡುತ್ತಿತ್ತು. ರಷ್ಯಾ ಅವನ್ನು ಉಕ್ರೇನ್ ಮೇಲಿನ ದಾಳಿಗೆ ಬಳಸುತ್ತಿತ್ತು. ಹಾಗೆ ನೆಲಕ್ಕೆ ಬಿದ್ದ ಶಾಹೆದ್ ಒಂದನ್ನು ಅಮೆರಿಕ ಹೊತ್ತೊಯ್ದು ಕಳಚಿ ನೋಡಿ, ಅದರದೇ ಪಡಿಯಚ್ಚಿನ 'ಎಫ್‌ಎಲ್‌ಎಮ್ 136' ಡ್ರೋನ್‌ಗಳನ್ನು ಈಗ ಇರಾನ್ ಮೇಲೆ ಛೂ ಬಿಡುತ್ತಿದೆ. ಅದಕ್ಕೆ ಅದೇ ಮುಖಾಮುಖಿ! ಈಗಂತೂ ಡ್ರೋನ್‌ಗಳು ಎಷ್ಟೊಂದು ಬಲಿಷ್ಠ ಆಗಿವೆಯೆಂದರೆ, ಉಕ್ರೇನಿನಲ್ಲಿ ಗಾಯಾಳುಗಳನ್ನು ಹೊತ್ತೊಯ್ಯಲೂ 'ಫ್ಲೈಕಾರ್ಟ್ 100' ಡ್ರೋನ್‌ಗಳನ್ನು ಪ್ರಾಯೋಗಿಕವಾಗಿ ಬಳಸಲಾಗುತ್ತಿದೆ ಎಂದು ಈ ವಾರದ ನ್ಯೂಸೈಂಟಿಸ್ಟ್ ಪತ್ರಿಕೆ ವರದಿ ಮಾಡಿದೆ. ಅಂಥ ಡ್ರೋನ್‌ಗಳು ಇಂದಲ್ಲ ನಾಳೆ ನಮ್ಮ ನಗರಗಳಿಗೂ ಬರುತ್ತವೆ. ಆದರೆ ಅದರ ಇನ್ನೊಂದು ಮುಖವನ್ನೂ ಆಸ್ಟ್ರೇಲಿಯಾದ ಡ್ರೋನ್‌ಸೆಕ್ ಗುಪ್ತಚರ ಕಂಪನಿ ತೋರಿಸಿದೆ. ಭಯೋತ್ಪಾತಕಿಗಳನ್ನು ರಹಸ್ಯತಾಣಕ್ಕೆ ಎತ್ತೊಯ್ದು ಬಿಡಲು ಪಾಕಿಸ್ತಾನದ ಲಷ್ಕರೆ ತೊಯಿಬಾ ಈಗಾಗಲೇ ಅಂಥವನ್ನು ಪ್ರಾಯೋಗಿಕವಾಗಿ ಬಳಸುತ್ತಿದೆಯಂತೆ. ಅವರಿಗೇನು, ಸಾವು ಅಂದರೆ ಸ್ವರ್ಗ ತಾನೆ? ಯಾರಿಗೆ ಗೊತ್ತು ಪಹಲ್ಗಾಮ್ ದಾಳಿಕೋರರು ಹಾಗೇ ಬಂದಿಳಿದರೊ ಏನು ಕತೆಯೊ. ನಿಲ್ಲಿ, ಅಂತಹ ದಾಳಿಕೋರರನ್ನು ಲೇಸರ್ ಕಿರಣಗಳನ್ನು ಬಿಟ್ಟು ಅತ್ಯಲ್ಪ ವೆಚ್ಚದಲ್ಲೇ ಅವರನ್ನು ಡ್ರೋನ್ ಸಮೇತ ಸುಟ್ಟು ಹಾಕುವ ವ್ಯವಸ್ಥೆ ಇಸ್ರೇಲ್ ಬಳಿ ಇದೆ. ಇದನ್ನೇ ಇನ್ನಷ್ಟು ವಿಕಾಸಗೊಳಿಸಿದರೆ ಬಾಹ್ಯಾಕಾಶದ ಕಸದ ತಿಪ್ಪೆಗಳನ್ನೂ ಭಸ್ಮ ಮಾಡಬಹುದು.

ನೆಲದ ಮೇಲಿನ ಕಸದ ತಿಪ್ಪೆಗೆ ಏನು ಮಾಡೋಣ? ಯುದ್ಧರಂಗದಲ್ಲಿ ಅದಕ್ಕೂ ಉಪಾಯ ಹುಡುಕೋಣವೆ? ಈ ಪ್ರಶ್ನೆ ಎತ್ತಿಕೊಳ್ಳುತ್ತಲೇ ಚರಿತ್ರೆ ಮರುಕಳಿಸುತ್ತಿರುವ ಕೊನೆಯ ಉದಾಹರಣೆಗೆ ಬರುತ್ತೇನೆ: ತೈಲ ದಿಗ್ಬಂಧನದ ಬಿಸಿ ಈಗ ಬೆಂಗಳೂರಿನ ಹೋಟೆಲ್, ಹಾಸ್ಟೆಲ್‌ಗಳಿಗೆ ತಟ್ಟುತ್ತಿದೆ ತಾನೆ? 80ರ ದಶಕದ ಆರಂಭದಲ್ಲಿ ಇರಾನಿಯನ್ ಯುವಕರು ಭಾರೀ ಸಂಖ್ಯೆಯಲ್ಲಿ ಇಲ್ಲಿನ ವೃತ್ತಿಪರ ಕಾಲೇಜುಗಳಿಗೆ ಲಗ್ಗೆ ಹಾಕಿದ್ದರು. ಝಣಝಣ ರೊಕ್ಕ ಹಿಡಿದಿದ್ದ ಅವರಿಂದಾಗಿಯೇ ಬೆಂಗಳೂರಿನಲ್ಲಿ ಹಾಸ್ಟೆಲ್, ಹೋಟೆಲ್, ಖಾಸಗಿ ರೂಮ್ ಬಾಡಿಗೆ ಎಲ್ಲ ಹೆಚ್ಚಾದುವೆಂದು ಇಲ್ಲಿನ ಸಾಮಾನ್ಯ ಜನ ದೂರುತ್ತಿದ್ದರು. ಈಗ ಯಾರನ್ನು ದೂರೋಣ?

ನಮ್ಮವರನ್ನೇ ದೂರಬೇಕು. ಭಾರತದ ಎಲ್ಲ ಮಹಾನಗರಗಳ ಆಚೆ ಭಾರೀ ಪ್ರಮಾಣದ ತ್ಯಾಜ್ಯಗಳ ಗುಡ್ಡೆ ಸೃಷ್ಟಿಯಾಗುತ್ತಿದೆ. ಅಡುಗೆಗೆ ಬಳಸಬಹುದಾದ ಮೀಥೇನ್ ಅಲ್ಲಿಂದ ವ್ಯರ್ಥ ಮೇಲಕ್ಕೇರಿ ಭೂಮಿಯ ತಾಪವನ್ನು ಹೆಚ್ಚಿಸುತ್ತಿವೆ. ಅಂಥ ತ್ಯಾಜ್ಯದಿಂದಲೇ ಶಾಂಘೈ, ಮನಿಲಾ, ಪ್ಯಾರಿಸ್, ಇಸ್ತಂಬೂಲ್‌ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಜೈವಿಕ ಸಿಎನ್‌ಜಿ ಮತ್ತು ಜಲಜನಕವೂ ಉತ್ಪಾದನೆಯಾಗುತ್ತಿದೆ. ನಮ್ಮಲ್ಲಿ ಇಂದೋರ್ ಬಿಟ್ಟರೆ ಬೇರೆಲ್ಲೂ ಮಾದರಿ ಇಲ್ಲ. ಈಗಲಾದರೂ ಇತ್ತ ಚಿತ್ತ ಹರಿಸಿರೆಂದು ಅಧಿಕಾರಸ್ಥರನ್ನು ಕೇಳೋಣವೆಂದರೆ, ಯುದ್ಧಕಾಲೇ ಶಸ್ತ್ರಾಭ್ಯಾಸ ಆಗುತ್ತದೆ. ಬೇರೇನು ಮಾಡೋಣ? 2014ರಲ್ಲಿ ಉಕ್ರೇನಿನ ವಿಟಾಲಿ ದುರಾವ್ಸ್ಕಿ ಎಂಬ ಭ್ರಷ್ಟ ಸಂಸದನನ್ನು ಕೀವ್ ನಗರದ ಜನರು ಅಕ್ಷರಶಃ ಎತ್ತಿ ಕಸದ ಲಾರಿಗೆ ಬಿಸಾಕಿದ್ದರು. ಅಂಥ ಘಟನೆ ಇಲ್ಲೇನಾದರೂ ನಡೆದಿದ್ದೇ ಆದರೆ ಅದೂ ಇತಿಹಾಸದ ಪುನರಾವರ್ತನೆಯೇ ಆದೀತು, ಬೇಡ ಬಿಡಿ.



ವಾಚಕರ ವಾಣಿ

ಭೂಸ್ವಾಧೀನದ ಭೂತ: ರೈತರ ಸಂಕಟ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ಬೆಳವಂಗಲ ಹೋಬಳಿಯ ಬಳಿ ಎರಡು ಸಾವಿರ ಎಕರೆಯಷ್ಟು ಕೃಷಿ ಭೂಮಿಯ ಸ್ವಾಧೀನಕ್ಕೆ ಕೆಐಎಡಿಬಿ ಮುಂದಾಗಿದೆ. ಈಗಾಗಲೇ, ಈ ಭಾಗದ ದಾಬಸ್‌ಪೇಟೆ, ಬಾಶೆಟ್ಟಿಹಳ್ಳಿಯಲ್ಲಿ ಕೈಗಾರಿಕಾ ಪ್ರದೇಶಗಳಿವೆ. 'ಕ್ವಿನ್ ಸಿಟಿ' ಯೋಜನೆಯೂ ಚಾಲ್ತಿಯಲ್ಲಿದೆ. ಅಭಿವೃದ್ಧಿ ಹೆಸರಿನಲ್ಲಿ ಸಾವಿರಾರು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಬೆಂಗಳೂರು ಸುತ್ತಮುತ್ತ ಜನದಟ್ಟಣೆ, ವಾಹನ ದಟ್ಟಣೆ, ಮಾಲಿನ್ಯ ಹೆಚ್ಚುತ್ತಿದೆ. ಕಡಿಮೆ ಕೈಗಾರಿಕೆಗಳಿರುವ ಜಿಲ್ಲೆಗಳಲ್ಲಿ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಇದರಿಂದ ಬೆಂಗಳೂರಿನ ಸುತ್ತಮುತ್ತ ಕೈಗಾರಿಕೆಗಳು ಕೇಂದ್ರೀಕೃತವಾಗುವುದು ತಪ್ಪಲಿದೆ.

ಮಧು ಬೈಲಪ್ಪ, ದೊಡ್ಡಬಳ್ಳಾಪುರ

ಮಕ್ಕಳ ಗ್ರಾಮಸಭೆಯ ಆಶಯ ಈಡೇರಿತೆ?

ಮಕ್ಕಳ ಹಕ್ಕುಗಳ ಗ್ರಾಮಸಭೆಯನ್ನು ಕಡ್ಡಾಯವಾಗಿ ನಡೆಸಬೇಕೆಂದು ರಾಜ್ಯ ಸರ್ಕಾರವು ಕಾಯ್ದೆ ರೂಪಿಸಿದೆ. ಆದರೆ, ಕೆಲವೆಡೆ ಹೆಸರಿಗಷ್ಟೆ ಗ್ರಾಮಸಭೆಗಳು ನಡೆಯುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಇದರ ಬಗ್ಗೆ ಜಾಗೃತಿ ಇಲ್ಲದಂತಾಗಿದೆ. ಮಕ್ಕಳ ಹಕ್ಕುಗಳ ಗ್ರಾಮಸಭೆ ಎಂದರೆ ಮಕ್ಕಳೇ ತಮ್ಮ ಸಮಸ್ಯೆಗಳನ್ನು ಮಂಡಿಸಿ ಪರಿಹಾರ ಕಂಡುಕೊಳ್ಳುವ ವ್ಯವಸ್ಥೆಯಾಗಿದೆ. ಊರಿನ ಹಿರಿಯರು ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳು ಇದಕ್ಕೆ ಬೆಂಬಲವಾಗಿರಬೇಕು. ಸಭೆ ನಡೆಸದಿರುವುದು ಮಕ್ಕಳ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಲಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಮಕ್ಕಳ ಧ್ವನಿ ಮೊಟಕುಗೊಳ್ಳದಂತೆ ಎಚ್ಚರವಹಿಸಬೇಕು.

ನಾಗಾರ್ಜುನ ಹೊಸಮನಿ, ಕಲಬುರಗಿ

ಶಾಲೆ ವಿಲೀನ: ಮೂಲಭೂತ ಹಕ್ಕಿಗೆ ಧಕ್ಕೆ

'ಶಾಲೆಗಳ ವಿಲೀನ: ಟಿಸಿ ನೀಡಲು ಸೂಚನೆ' ಸುದ್ದಿ (ಪ್ರ.ವಾ., ಮಾ. 11) ಓದಿ ಬೇಸರವಾಯಿತು. ಸಂತೇಮೊಗೇನಹಳ್ಳಿ ಸುಮಾರು ಆರುನೂರು ಮನೆಗಳಿರುವ ಗ್ರಾಮ. ಎರಡು ಸಾವಿರಕ್ಕೂ ಹೆಚ್ಚು ಜನಸಂಖ್ಯೆಯಿದೆ. ಈ ಗ್ರಾಮದ ಪ್ರಾಥಮಿಕ ಶಾಲೆಯನ್ನೂ ಕೆಪಿಎಸ್ ಮ್ಯಾಗ್ನೆಟಿಕ್ ಶಾಲಾ ಯೋಜನೆಯಡಿ ವಿಲೀನಗೊಳಿಸಲಾಗಿದೆ (ನಾನು ಇದೇ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ತಹಶೀಲ್ದಾರ್ ಆಗಿ ನಿವೃತ್ತಿ ಹೊಂದಿದ್ದೇನೆ). ಸಂವಿಧಾನದ ವಿಧಿ 21(ಎ) ಅನ್ವಯ ಉಚಿತ ಮತ್ತು ಕಡ್ಡಾಯ ಶಿಕ್ಷಣವು ಮೂಲಭೂತ ಹಕ್ಕಾಗಿದೆ (6ರಿಂದ 14ರ ವಯಸ್ಸಿನ ಮಕ್ಕಳಿಗೆ). ಸರ್ಕಾರದ ನಡೆಯು ಶಿಕ್ಷಣದ ಹಕ್ಕಿನ ಉಲ್ಲಂಘನೆಯಾಗಲಿದೆ. ಗ್ರಾಮದಲ್ಲಿಯೇ ಪ್ರಾಥಮಿಕ ಶಾಲೆ ಮುಂದುವರಿಸುವ ಬಗ್ಗೆ ಶಿಕ್ಷಣ ಇಲಾಖೆಯು ಮರುಪರಿಶೀಲಿಸಬೇಕಿದೆ.

ಎಚ್. ದೊಡ್ಡಮಾರಯ್ಯ, ಬೆಂಗಳೂರು

ಹಾಡುಗಳಲ್ಲಿ ದ್ವಂದ್ವಾರ್ಥ: ಕಡಿವಾಣ ಹಾಕಿ

ಉತ್ತರ ಕರ್ನಾಟಕ ಭಾಗದ ಮೂಲ ಜನಪದ ಹಾಡುಗಳಿಗೆ ತನ್ನದೇ ಆದ ಹಿರಿಮೆ ಇದೆ. ಈ ನೆಲದಲ್ಲಿ ಜನಿಸಿದ ಪಂಪ, ರನ್ನ, ಪೊನ್ನ, ಕುಮಾರವ್ಯಾಸ, ಕನಕದಾಸ, ಬಸವಣ್ಣನಂತಹ ಮಹನೀಯರು ಕನ್ನಡ ಸಾಹಿತ್ಯಕ್ಕೆ ಅನುಪಮ ಕೊಡುಗೆ ನೀಡಿದ್ದಾರೆ. ಆದರೆ, ಈ ಭಾಗದ ಕೆಲವು ಜಿಲ್ಲೆಗಳಲ್ಲಿ ಅಶ್ಲೀಲ ಹಾಗೂ ದ್ವಂದ್ವಾರ್ಥದ ಸಾಹಿತ್ಯ ರಚಿಸಿ, ಆ ಹಾಡಿಗೆ ಸಂಗೀತ ಸಂಯೋಜಿಸಿ ಹಾಡುವ ಖಯಾಲಿ ಹೆಚ್ಚುತ್ತಿದೆ. ಟ್ರ್ಯಾಕ್ಟರ್‌ಗಳಲ್ಲಿ ಧ್ವನಿವರ್ಧಕ ಬಳಸಿ ಈ ಹಾಡುಗಳನ್ನು ಹಾಕಲಾಗುತ್ತಿದೆ. ಕರ್ಕಶ ಶಬ್ದದಿಂದ ಶಾಲಾ-ಕಾಲೇಜುಗಳಲ್ಲಿ ಬೋಧನೆಗೂ ತೊಂದರೆಯಾಗುತ್ತಿದೆ. ಮತ್ತೊಂದೆಡೆ ಮೂಲ ಜನಪದ ಹಾಡುಗಳ ಆಶಯಕ್ಕೂ ಧಕ್ಕೆಯಾಗುತ್ತಿದೆ. ಸಾರ್ವಜನಿಕರು ಮುಜುಗರ ಪಡುವಂತಾಗಿದೆ. ಈ ಹಾಡುಗಳ ರಚನೆಗೆ ಸರ್ಕಾರ ಕಡಿವಾಣ ಹಾಕಬೇಕಿದೆ.

ನಟರಾಜ ಕುಂಬಾರ, ವಿಜಯಪುರ

ಬಾಹ್ಯ ಶುಚಿಗಿಂತ 'ಅಂತರಂಗ ಶುದ್ಧಿ' ಮುಖ್ಯ

ಗೌರಿಬಿದನೂರು ತಾಲ್ಲೂಕಿನ ಉಚ್ಚೋದನಹಳ್ಳಿಯಲ್ಲಿ ದೇಗುಲ ಪ್ರವೇಶಿಸಲು ಪರಿಶಿಷ್ಟ ಜಾತಿಯವರಿಗೆ ನಿರಾಕರಿಸಿರುವ ಸುದ್ದಿ ಓದಿ ದುಃಖವಾಯಿತು. ದೇಗುಲ ಪ್ರವೇಶ ಮಾಡಿದೊಡನೆಯೇ ದೇವರು ಪ್ರತ್ಯಕ್ಷವಾಗಿ ಬೇಡಿದ ವರ ನೀಡುತ್ತಾನೆ ಎಂಬ ನಂಬಿಕೆಯಿಂದಾಗಲಿ, ಗರ್ಭಗುಡಿಯಲ್ಲೇ ದೇವರಿದ್ದಾನೆ ಎಂಬ ಭರವಸೆಯಿಂದಾಗಲಿ ಅಥವಾ ಎಲ್ಲಾ ಅನಿಷ್ಟಗಳು ತೊಲಗಿ ಸಮಾನತೆ ಬರುತ್ತದೆ ಎನ್ನುವ ಆಶಯದಿಂದಾಗಲಿ ಯಾರೊಬ್ಬರು ದೇವಾಲಯ ಪ್ರವೇಶಿಸುವುದಿಲ್ಲ. ಮಾನಸಿಕ ನೆಮ್ಮದಿಗಾಗಿ ದೇಗುಲಕ್ಕೆ ಹೋಗುವುದು ವಾಡಿಕೆ. ಕೃತಕ ಬುದ್ಧಿಮತ್ತೆ ಯುಗದಲ್ಲೂ ಜಾತಿಯ ಹೆಸರಿನಲ್ಲಿ ದೇವಾಲಯದ ಪ್ರವೇಶ ನಿರಾಕರಿಸುವುದು ಅಮಾನವೀಯ. ಸಂವಿಧಾನವು ಎಲ್ಲರಿಗೂ ಸಮಾನತೆಯ ಹಕ್ಕು ನೀಡಿದೆ. 'ಮಲವ ತೊಳೆಯ ಬಲ್ಲರಲ್ಲದೆ ಮನವ ತೊಳೆಯಬಲ್ಲರೆ' ಎಂದು ಪುರಂದರ ದಾಸರು ಹೇಳಿದ್ದಾರೆ. ಈ ಮಾತಿನ ಸದಾಶಯ ಜನರಿಗೆ ಅರ್ಥವಾಗಬೇಕಿದೆ.

ಮಂಜುನಾಥ ಟಿ.ಎಸ್., ತರುವೆ

ವಸತಿಶಾಲೆ ನಿಯಂತ್ರಣ: ನಿಯಮ ರೂಪಿಸಿ

ಬಳ್ಳಾರಿಯ ಖಾಸಗಿ ವಸತಿಶಾಲೆಯೊಂದರಲ್ಲಿ ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿಗಳ ಮೇಲೆ ಹಲ್ಲೆ ನಡೆಸಿರುವುದು ವರದಿಯಾಗಿದೆ. ಆ ಘಟನೆಯಲ್ಲಿ ಒಬ್ಬ ವಿದ್ಯಾರ್ಥಿ ಮೃತಪಟ್ಟಿದ್ದರೆ ಇನ್ನಿತರರು ಗಾಯಗೊಂಡಿದ್ದಾರೆ. ಈ ಅವಘಡದಿಂದ ನಾವೆಲ್ಲರೂ ಪಾಠ ಕಲಿಯಬೇಕಾಗಿದೆ. ವಸತಿಶಾಲೆಗೆ ಮಕ್ಕಳನ್ನು ದಾಖಲಾತಿ ಮಾಡಿಸಲು ಮುಂದಾಗುವ ಪೋಷಕರು ತಮ್ಮ ಮಕ್ಕಳಿಗೆ ಅದು ಇಷ್ಟವೇ ಎಂಬುದನ್ನು ಅರಿಯಬೇಕು. ಪ್ರತಿಷ್ಠೆಗಾಗಿ ವಸತಿಶಾಲೆಗಳತ್ತ ಮುಖ ಮಾಡಬಾರದು. ಶಾಲೆಗೆ ದಾಖಲಾತಿ ಮಾಡಿಕೊಳ್ಳುವ ಮೊದಲು ಮನಃಶಾಸ್ತ್ರಜ್ಞರಿಂದ ವಿದ್ಯಾರ್ಥಿಗಳ ಆಪ್ತಸಮಾಲೋಚನೆ ನಡೆಸಬೇಕು. ಆ ಬಳಿಕವೇ ಶಾಲೆಗೆ ದಾಖಲಿಸಬೇಕು. ಖಾಸಗಿ ವಸತಿಶಾಲೆಗಳ ನಿಯಂತ್ರಣಕ್ಕೆ ಸರ್ಕಾರ ಸ್ಪಷ್ಟ ನಿಯಮಾವಳಿ ರೂಪಿಸಬೇಕಿದೆ.

ಆಶಾ ಅಪ್ರಮೇಯ, ದಾವಣಗೆರೆ

ಜಾಲತಾಣ

ಮೊಬೈಲ್ ನಿರಾಕರಣೆ ಸರಿ



ಮಕ್ಕಳಲ್ಲಿ ಕೊಲೆ ಮಾಡುವಷ್ಟು ದುರಾಲೋಚನೆ ಬರುತ್ತಿರುವುದು ಈ ಕಾಲದ ದುರಂತವೇ ಸರಿ. ಸದ್ಯದ ದೃಶ್ಯ ಮಾಧ್ಯಮಗಳು, ಮೊಬೈಲ್ – ಎಲ್ಲವೂ ಎಳೆಯರನ್ನು ಅಂತಹ ಮನಃಸ್ಥಿತಿಗೆ ದೂಡುವುದಕ್ಕೆ ಕಾರಣವಾಗಿರುತ್ತವೆ. ಆ ನಿಟ್ಟಿನಿಂದ ಮಕ್ಕಳಿಗೆ ಮೊಬೈಲ್ ನಿರಾಕರಿಸುವ ಸರ್ಕಾರದ ನಿಲುವು ಸ್ವಾಗತಾರ್ಹವಾಗಿದೆ.

ವಸುಧೇಂದ್ರ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಯುದ್ಧ ಆರಂಭವಾಗುವ ಒಂದು ದಿನ ಮೊದಲು ಪ್ರಧಾನಿ ನರೇಂದ್ರ ಮೋದಿಯವರು, ಇಸ್ರೇಲ್ ಪ್ರಧಾನಿ ನೇತನ್ಯಾಹು ಪರವಾಗಿ ನಿಂತರು; ಆ ಮೂಲಕ ಇರಾನ್ ಅನ್ನು ಭಾರತದ ಶತ್ರುವಾಗಿ ಮಾಡಿದ್ದಾರೆ.

ಅರವಿಂದ ಕೇಜ್ರಿವಾಲ್, ಮಾಜಿ ಮುಖ್ಯಮಂತ್ರಿ, ದೆಹಲಿ

25 ವರ್ಷಗಳ ಹಿಂದೆ

ಸೋಮವಾರ, 12-3-2001

• ಗೋಪಿಚಂದ್‌ಗೆ ಬ್ಯಾಡ್ಮಿಂಟನ್ ಕಿರೀಟ

ಬರ್ಮಿಂಗ್‌ಹ್ಯಾಮ್, ಮಾರ್ಚ್ 11– ಭಾರತದ ಪುಲ್ಲೇಲ ಗೋಪಿಚಂದ್ ಪ್ರತಿಷ್ಠಿತ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಕಿರೀಟವನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಎರಡು ದಶಕಗಳ ಹಿಂದೆ ಬೆಂಗಳೂರಿನ ಪ್ರಕಾಶ್ ಪಡುಕೋಣೆಯವರು ಈ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಎನಿಸಿದ್ದರು. ಆ ನಂತರ ಈಗ ಪ್ರಕಾಶ್ ಮಾರ್ಗದರ್ಶನದಲ್ಲಿಯೇ ಅರಳಿದ ಗೋಪಿಚಂದ್ ಈ ಪ್ರಶಸ್ತಿಯನ್ನು ಭಾರತಕ್ಕೆ ಮರಳಿ ತಂದಿದ್ದಾರೆ.

ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಒಲಿಂಪಿಕ್ ಚಾಂಪಿಯನ್ ಕ್ವೆನ್ಸಿಂಗ್ ಮತ್ತು ಸೆಮಿಫೈನಲ್‌ನಲ್ಲಿ ವಿಶ್ವ ಅಗ್ರಕ್ರಮಾಂಕದ ಪೀಟರ್ ಗಾಡೆಯವರನ್ನು ಸೋಲಿಸಿದ್ದ ಗೋಪಿಚಂದ್ ಅವರು, ಇಂದು ಫೈನಲ್‌ನಲ್ಲಿ ಚೀನಾದ ಚೆನ್‌ಹಾಂಗ್ ಅವರನ್ನು 15-12, 15-6ರಿಂದ ಮಣಿಸಿದರು.

• ಹರಭಜನ್ ಹ್ಯಾಟ್ರಿಕ್

ಕೋಲ್ಕತ್ತ, ಮಾರ್ಚ್ 11– ಭಾರತದ ಯುವ ಆಫ್‌ಸ್ಪಿನ್ ಬೌಲರ್ ಹರಭಜನ್ ಸಿಂಗ್ ಅವರು, ಆಸ್ಟ್ರೇಲಿಯಾ ವಿರುದ್ಧದ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ದಿನದ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಹ್ಯಾಟ್ರಿಕ್ ಸಾಧಿಸಿದ ಮೊದಲ ಭಾರತೀಯ ಎನ್ನುವ ಗೌರವ ಸಂದಿದೆ.

75 ವರ್ಷಗಳ ಹಿಂದೆ

ಸೋಮವಾರ, 12-3-1951

• ಸಂಸ್ಥಾನದಲ್ಲಿ ಸ್ತ್ರೀಯರಿಗಿಂತ ಪುರುಷರದೇ ಸಂಖ್ಯೆ ಹೆಚ್ಚು

ಬೆಂಗಳೂರು, ಮಾರ್ಚ್ 11– ಮೈಸೂರು ಸಂಸ್ಥಾನದಲ್ಲಿ ಸ್ತ್ರೀಯರ ಸಂಖ್ಯಾ ಪ್ರಮಾಣ ಪುರುಷರಿಗಿಂತ ಮತ್ತಷ್ಟು ಇಳಿದಿದೆ ಎಂಬುದಾಗಿ 1951ರ ಜನಗಣತಿಯಿಂದ ವ್ಯಕ್ತವಾಗುತ್ತಿದೆ.

ಈ ಶತಮಾನದ ಆದಿಯಲ್ಲಿ ಪ್ರತಿ ಸಾವಿರ ಪುರುಷರಿಗೆ 980 ಮಂದಿಯಂತೆ ಸ್ತ್ರೀಯರಿದ್ದರು. ಕಳೆದ 50 ವರ್ಷಗಳಲ್ಲಿ ಅನುಪಾತ ಕ್ರಮಕ್ರಮವಾಗಿ ಇಳಿಯುತ್ತ, ಪ್ರಸಕ್ತ ಜನಗಣತಿಯ ಕಾಲಕ್ಕೆ 945ಕ್ಕೆ ತಗ್ಗಿದೆ ಎಂಬುದಾಗಿ ಮೈಸೂರು ಸಂಸ್ಥಾನದ ಸೆನ್ಸಸ್ ಕಮಿಷನರ್ ಆದ ಜೆ.ಬಿ. ಮಲ್ಲಾರಾಧ್ಯರವರು ಇಂದು ನುಡಿದರು.

ಚುರುಮುರಿ



ಡೈರೆಕ್ಟ್ ಕನೆಕ್ಷನ್!

• ಗುರು ಪಿ.ಎಸ್.

'ಗ್ಯಾಸ್ ಸಿಲಿಂಡರ್ ಖಾಲಿ ಆಗಿದೆ. ಹೋಟೆಲ್‌ನಿಂದಲೂ ಏನೂ ತಂದು ಕೊಡ್ತಿಲ್ಲ ನೀವು' ಎಂದು ಹೆಂಡತಿಯ ಸುಪ್ರಭಾತ ಶುರುವಾಯಿತು.

'ಯುದ್ಧ ನಡೀತಿರೋದ್ರಿಂದ ಇಡೀ ದೇಶದಲ್ಲೇ ಯಾರಿಗೂ ಗ್ಯಾಸ್ ಸಿಗ್ತಿಲ್ಲಮ್ಮ' ಸಿಟ್ಟಿನಲ್ಲೇ ಹೇಳಿದೆ.

'ಆಯ್ತು, ಈಗ ಏನ್ ಅಡುಗೆ ಮಾಡಿ ಹಾಕ್ಲಿ ಹೇಳಿ...'

'ಬೇಯಿಸದೇ ಇರೋ ಅಡುಗೆ ಏನಾದರೂ ಮಾಡಿಕೊಡು. ಇಂತಹ ಸಂದರ್ಭದಲ್ಲಿ ದೇಶಕ್ಕಾಗಿ ಇಷ್ಟು ಮಾಡದಿದ್ರೆ ಹೇಗೆ' ಮಾತಲ್ಲಿ ವ್ಯಂಗ್ಯ ಇಣುಕಿತು.

'ನಿಂಬೆಹಣ್ಣು, ಮೆಣಸಿನಕಾಯಿ, ಈರುಳ್ಳಿ, ಟೊಮೆಟೊ ನೀರಿನಲ್ಲಿ ತೊಳೆದುಕೊಡ್ತೀನಿ, ಹಂಗಂಗೆ ನುಂಗಿ' ಎಂದು ಮುಖಕ್ಕೆ ತಿವಿದಳು.

'ಸರಿ ಬಿಡು, ನಮ್ ಆಫೀಸ್ ಕ್ಯಾಂಟೀನ್‌ನಲ್ಲೇ ಊಟ ಮಾಡ್ತೀನಿ' ಎಂದು ಹೊರಬಂದು ನೋಡಿದರೆ, ಬೈಕ್‌ನಲ್ಲಿ ಪೆಟ್ರೋಲ್ ಖಾಲಿಯಾಗಿತ್ತು. 'ಅಯ್ಯೋ, ಈ ಯುದ್ಧದಿಂದಾಗಿ ಪೆಟ್ರೋಲ್ ಕೂಡ ಸಿಗ್ತಿಲ್ಲ. ಆಫೀಸ್‌ಗೆ ಹೇಗೆ ಹೋಗ್ಲಿ' ಎಂದೆ.

'ನಡೆದುಕೊಂಡೇ ಹೋಗಿ. ದೇಶಕ್ಕಾಗಿ ಅಷ್ಟೂ ಮಾಡೋಕಾಗಲ್ವ' ತಿರುಗೇಟು ಕೊಟ್ಟಳು.

'ದೇಶದಲ್ಲಿ ಏನಾದರಾಗಲಿ, ನಮ್ ರಾಜ್ಯದಲ್ಲಿ ಯಾರಿಗೂ ತೊಂದರೆಯಾಗದಂಗೆ ನಮ್ಮಣ್ಣ ನೋಡ್ಕೊತಾರೆ' ಎಂದೆ.

'ಯಾರಪ್ಪ ಅದು, ನಿಮ್ಮಣ್ಣ?'

'ನಮ್ ಶಿವಣ್ಣ, ಈಗ ನಮ್ ಪಕ್ಷದ ಅಧ್ಯಕ್ಷ ಆಗಿ ಆರು ವರ್ಷ ಮುಗಿದಿದೆ. ಅವರ ಕೆಪಾಸಿಟಿಗೆ ಸಿಗಬೇಕಾಗಿರೋ ಸ್ಥಾನ ಸಿಕ್ಕರೆ ಮುಂದೆ ಕಥೇನೆ ಬೇರೆ ಇರುತ್ತೆ' ಎಂದೆ.

ಮರು ವಾರ. ಹೆಂಡತಿ ಫೋನ್ ಮಾಡಿದಳು. 'ರೀ, ಮನೆಗೆ ಎರಡೆರಡು ಗ್ಯಾಸ್ ಸಿಲಿಂಡರ್ ತಂದು ಕೊಟ್ರು ರೀ. ಪೆಟ್ರೋಲ್ ಬಂಕ್‌ಗಳಲ್ಲಿಯೂ ಆಯಿಲ್ ತುಂಬಿರೋ ಲಾರಿಗಳು ಬಂದು ನಿಂತಿವೆ. ಏನ್ರೀ ಮ್ಯಾಜಿಕ್ ಇದು?' ಖುಷಿಯಿಂದ ಕೇಳಿದಳು.

'ಎಲ್ಲ ನಮ್ಮಣ್ಣ ಮಾಡಿಸಿರೋದು. ಡೈರೆಕ್ಟ್ ಬೆಂಗಳೂರಿಗೆ ಕತಾರ್‌ನಿಂದ ಗ್ಯಾಸ್ ಪೈಪ್‌ಲೈನ್, ಹೊರ್ಮುಜ್ ಜಲಸಂಧಿಯಿಂದ ತೈಲ ಪೈಪ್‌ಲೈನ್ ಕನೆಕ್ಷನ್ ಕೊಡಿಸಿದ್ದಾರೆ'.

'ವಾವ್, ಈ ದಿಢೀರ್ ಬೆಳವಣಿಗೆಗೆ ಏನು ಕಾರಣ..?'

'ಏನಿಲ್ಲ, ನಿಮ್ಮಣ್ಣನ ಸಿಎಂ ಮಾಡಬೇಕಂದ್ರೆ ನಿಮ್ ರಾಜ್ಯಕ್ಕೆ ಪೆಟ್ರೋಲು, ಗ್ಯಾಸು ಸಿಗೋ ಹಂಗೆ ಮಾಡಿ ಅಂತ ಹೈಕಮಾಂಡ್‌ನವರು ಹೇಳಿದ್ರಂತೆ!'.

ಸಂಗತ

ಯುದ್ಧದ ಆಟ–ಚಟ; ಮನುಕುಲಕ್ಕೆ ನರಳಾಟ

ದೇಶವೊಂದರ ಸಾಂಸ್ಕೃತಿಕ–ಧಾರ್ಮಿಕ ಮಹತ್ವ ಅರಿಯದವರು ಹೇರಿರುವ ಯುದ್ಧ ಇಡೀ ಜಗತ್ತನ್ನು ಆರ್ಥಿಕ ಸಂಕಷ್ಟ ಹಾಗೂ ಮಾನವೀಯ ಬಿಕ್ಕಟ್ಟಿಗೆ ದೂಡುತ್ತಿದೆ.

• ವಿಂಗ್ ಕಮಾಂಡರ್ ರಾಜೀವ್ ಕೋಡಿಹಳ್ಳಿ

• ಸೋಮೇಶ್ವರ ಆರ್. ಗುರುಮಠ

ಜಗತ್ತಿಗೆಲ್ಲ ನೀತಿಪಾಠ ಬೋಧಿಸುತ್ತಾ ತಾನೇ ದುರ್ನೀತಿಗಳನ್ನು ಅನುಸರಿಸುವ ರಾಷ್ಟ್ರವೊಂದು ಈ ಜಗತ್ತಿನಲ್ಲಿದ್ದರೆ ಅದು ಅಮೆರಿಕ. ಇರಾನ್ ಮೇಲಿನ ಅಮೆರಿಕ-ಇಸ್ರೇಲ್ ಆಕ್ರಮಣವನ್ನು ದೇಶಗಳ ನಡುವಿನ ಯುದ್ಧವೆಂದು ಮಾತ್ರವಲ್ಲದೆ, ಅದನ್ನೊಂದು 'ಯುದ್ಧ ಅಪರಾಧ'ವನ್ನಾಗಿ ನೋಡಬೇಕು.

ಯುದ್ಧಪೂರ್ವದಲ್ಲಿ, ಫೆಬ್ರುವರಿ ತಿಂಗಳ ಮಧ್ಯಭಾಗದಿಂದಲೂ ಹಲವು ಸುದ್ದಿಮೂಲಗಳಿಂದ ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆ ಯಶಸ್ವಿಯಾಗುವತ್ತ ಸಾಗುತ್ತಿದೆಯೆಂದು ಜಗತ್ತಿಗೆ ಬಿಂಬಿಸಲಾಗಿತ್ತು. ಆ ಮಾತುಕತೆಯ ಷರತ್ತುಗಳು ಹೀಗಿದ್ದವು:

ಇರಾನ್ ತನ್ನೆಲ್ಲಾ ಯುರೇನಿಯಂ ಪುಷ್ಟೀಕರಣ ಪ್ರಕ್ರಿಯೆಯನ್ನು ಶಾಶ್ವತವಾಗಿ ನಿಲ್ಲಿಸಬೇಕು ಮತ್ತು ಈಗಾಗಲೇ ತನ್ನ ಬಳಿ ಇರುವ ಯುರೇನಿಯಂನ ಸಂಪೂರ್ಣ ದಾಸ್ತಾನನ್ನು ದೇಶದಿಂದ ಹೊರಕ್ಕೆ ವರ್ಗಾಯಿಸಬೇಕು. ತನ್ನ ಬಳಿ ಇರುವ ಎಲ್ಲಾ ದೂರಗಾಮಿ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಕ್ರೂಸ್ ಕ್ಷಿಪಣಿ ಉತ್ಪಾದನಾ ಯೋಜನೆಗಳನ್ನು ಸ್ಥಗಿತಗೊಳಿಸಬೇಕು ಮತ್ತು ಅವುಗಳನ್ನು ನಾಶಪಡಿಸಬೇಕು. ಹಿಜ್ಬುಲ್ಲಾ, ಹುಥಿಗಳು ಮತ್ತು ಇರಾಕ್‌ನಲ್ಲಿರುವ ಇತರ ಸಶಸ್ತ್ರ ಗುಂಪುಗಳಿಗೆ ನೀಡುತ್ತಿರುವ ಎಲ್ಲಾ ರೀತಿಯ ಮಿಲಿಟರಿ, ಹಣಕಾಸು ಮತ್ತು ತಾಂತ್ರಿಕ ಬೆಂಬಲವನ್ನು ಇರಾನ್ ತಕ್ಷಣವೇ ನಿಲ್ಲಿಸಬೇಕು. ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಗೆ ಇರಾನ್‌ನಲ್ಲಿನ ಯಾವುದೇ ಮಿಲಿಟರಿ ಅಥವಾ ಪರಮಾಣು ಕೇಂದ್ರಗಳನ್ನು ಮುಕ್ತವಾಗಿ ತಪಾಸಣೆ ನಡೆಸಲು ಅವಕಾಶ ನೀಡಬೇಕು.



ಇದೀಗ ಭಾರತದ ಪ್ರಜೆಯಾಗಿ ಯೋಚಿಸಿ. ಮೇಲಿನ ನಿಯಮಗಳನ್ನು ಮುಂದೊಂದು ದಿನ ಅಮೆರಿಕ ನಮಗೆ ವಿಧಿಸಿದಲ್ಲಿ ನಾವು ಒಪ್ಪುತ್ತೇವೆಯೆ? ಖಂಡಿತಾ ಇಲ್ಲ. ಏಕೆಂದರೆ ಈ ನಿಯಮಗಳು ನೇರವಾಗಿ ರಾಷ್ಟ್ರದ ಸಾರ್ವಭೌಮತೆಗೆ ಧಕ್ಕೆ ಉಂಟುಮಾಡುತ್ತವೆ.

ವಿಶ್ವಸಂಸ್ಥೆಯ ನಿಯಮಾವಳಿಗಳ ಪ್ರಕಾರ, ಒಂದು ದೇಶದ ಮೇಲೆ ಯುದ್ಧ ಸಾರುವುದು ಅಥವಾ ದಾಳಿ ಮಾಡುವುದು ಎರಡು ಸಂದರ್ಭಗಳಲ್ಲಿ ಮಾತ್ರ ಕಾನೂನುಬದ್ಧವಾಗಿರುತ್ತದೆ. ಮೊದಲನೆಯದಾಗಿ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಸ್ಪಷ್ಟವಾಗಿ ಅನುಮೋದನೆ ನೀಡಿ ನಿರ್ಬಂಧಗಳನ್ನು ವಿಧಿಸಿರಬೇಕು. ಎರಡನೆಯದಾಗಿ, ವಿಶ್ವಸಂಸ್ಥೆಯ ಚಾರ್ಟರ್‌ನ ಆರ್ಟಿಕಲ್ 51ರ ಅಡಿಯಲ್ಲಿ, ಒಂದು ದೇಶವು ಮೊದಲೇ ದಾಳಿ ಮಾಡಿದ್ದರೆ ಮಾತ್ರ ದಾಳಿಗೆ ಒಳಗಾದ ದೇಶ ಆತ್ಮರಕ್ಷಣೆಗಾಗಿ ಮರುದಾಳಿ ಮಾಡಬಹುದು. ಈ ಎರಡರಲ್ಲಿ ಯಾವುದೂ ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ನಡೆಸಿದ ದಾಳಿಗೆ ಕಾರಣವಾಗಿ ಹೊಂದುವುದಿಲ್ಲ. ಅಮೆರಿಕ ಮತ್ತು ಇಸ್ರೇಲ್ ಯಾವುದೇ ನೇರ ಪ್ರಚೋದನೆ ಇಲ್ಲದೆ ದಾಳಿ ನಡೆಸಿರುವುದರಿಂದ, ಇದು ಅಂತರರಾಷ್ಟ್ರೀಯ ಕಾನೂನುಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಮತ್ತು ಇರಾನಿನ ಸಾರ್ವಭೌಮತೆಯ ಮೇಲೆ ನಡೆಸಿದ ಅತಿಕ್ರಮಣವಾಗಿದೆ.

1979ರ ಇಸ್ಲಾಮಿಕ್ ಕ್ರಾಂತಿಗಿಂತ ಮುಂಚೆ ಇರಾನ್‌ನಲ್ಲಿ ಇದ್ದಂತಹ 'ಪಾಶ್ಚಾತ್ಯ ಪರ' ಆಡಳಿತವನ್ನು ತರುವ ದೂರಗಾಮಿ ರಾಜಕೀಯ ಯೋಜನೆ ಯುದ್ಧದ ಹಿಂದಿದೆ. ಪಶ್ಚಿಮ ಏಷ್ಯಾದಲ್ಲಿ ಇರಾನ್ ಸುಮಾರು 9 ಕೋಟಿ ಜನಸಂಖ್ಯೆ ಹೊಂದಿರುವ ಬಲಿಷ್ಠ ರಾಷ್ಟ್ರವಾಗಿದ್ದು, ಜಗತ್ತಿನ ಶೇ 20ರಷ್ಟು ನೈಸರ್ಗಿಕ ಅನಿಲ ಮತ್ತು ಅಪಾರ ಪ್ರಮಾಣದ ಜಿಂಕ್ ಸಂಪನ್ಮೂಲವನ್ನು ಹೊಂದಿದೆ. ಇಸ್ರೇಲ್ ತನ್ನ ಅಸ್ತಿತ್ವಕ್ಕೆ ಇರಾನ್ ಬೆದರಿಕೆ ಎಂದು ಭಾವಿಸುವುದರಿಂದ, ಅಂತರರಾಷ್ಟ್ರೀಯವಾಗಿ ಇರಾನ್ ಅನ್ನು ಏಕಾಂಗಿ ಮಾಡಲು ಪ್ರಯತ್ನಿಸುತ್ತಿದೆ. ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಹಿಡಿತ ಮತ್ತು ಪಶ್ಚಿಮ ಏಷ್ಯಾದಲ್ಲಿ ಇಸ್ರೇಲ್‌ನ ಆಧಿಪತ್ಯ ಸ್ಥಾಪಿಸುವುದು ಮಾತ್ರವೇ ಈ ಯುದ್ಧದ ಹಿಂದಿರುವ ಪ್ರಮುಖ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿ ಆಗಿದೆಯೆ ಹೊರತು ಜನಸಾಮಾನ್ಯರ ತವಕ ತಲ್ಲಣಗಳಲ್ಲ.

ಈ ಹಿಂದೆ ಇರಾನ್-ಇರಾಕ್ ಯುದ್ಧದ ಸಮಯದಲ್ಲಿ ಸದ್ದಾಂ ಹುಸೇನ್‌ಗೆ ಅಮೆರಿಕ ಎಲ್ಲಾ ರೀತಿಯ ಶಸ್ತ್ರಾಸ್ತ್ರಗಳನ್ನು ನೀಡಿದರೂ, ಇರಾನ್ ಶರಣಾಗಲಿಲ್ಲ. ಪಶ್ಚಿಮದ ಸಂಸ್ಕೃತಿಯಲ್ಲಿ ನಾಯಕನ ಸ್ಥಾನದಲ್ಲಿರುವ ವ್ಯಕ್ತಿ ಮರಣ ಹೊಂದಿದರೆ ಆ ಸಮಾಜದ ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಾಯ ಮುಗಿಯಿತೆಂದೇ ಭಾವಿಸಲಾಗುತ್ತದೆ. ಆದರೆ, ಪೂರ್ವದ ಸಮಾಜದಲ್ಲಿ, ವಿಶೇಷವಾಗಿ ಇರಾನಿನಲ್ಲಿ, ಒಬ್ಬ ಆಧ್ಯಾತ್ಮಿಕ ಮತ್ತು ರಾಜಕೀಯ ನಾಯಕ ಹುತಾತ್ಮನಾದಾಗ ನೂರಾರು ಹೊಸ ಹೋರಾಟಗಾರರು ಹುಟ್ಟಿಕೊಳ್ಳುತ್ತಾರೆ. ಅಮೆರಿಕವನ್ನು 'ವೆಸ್ಟರ್ನ್ ಸೈತಾನ್' ಎಂದು ಕರೆಯಲಾಗುವ ಈ ಹೊತ್ತಿನಲ್ಲಿ, ತನ್ನ ನಾಯಕನನ್ನು ಕಳೆದುಕೊಂಡ ಇರಾನ್ ಈಗ 'ಕರ್ಬಲಾ' ಮಾದರಿಯ ಹೋರಾಟಕ್ಕೆ ಸಜ್ಜಾಗುತ್ತಿರುವಂತೆ ತೋರುತ್ತಿದೆ. ಪ್ರಸ್ತುತ ಸಂಘರ್ಷವು ಬರೀ ಭೂಭಾಗಕ್ಕಾಗಿ ನಡೆಯುತ್ತಿಲ್ಲ; ಗಾಯಗೊಂಡಿರುವ ಇರಾನಿಯನ್ನರ ಪಾಲಿಗಿದು ಅಸ್ತಿತ್ವ ಮತ್ತು ಧಾರ್ಮಿಕ ಅಸ್ಮಿತೆಯ ಯುದ್ಧವಾಗಿ ಮಾರ್ಪಟ್ಟಿರುವಂತಿದೆ.


ಇಸ್ರೇಲ್ ಮತ್ತು ಅಮೆರಿಕದ ಮಿಲಿಟರಿ ಕ್ರಮವು ಇಡೀ ಜಗತ್ತನ್ನು ಅನಿಶ್ಚಿತತೆಯ ಕತ್ತಲೆಗೆ ದೂಡುವ ಒಂದು ತಪ್ಪು ನಿರ್ಧಾರ. ಇರಾನ್‌ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಳವನ್ನು ಅರಿಯದೆ ನಡೆಸಿದ ದಾಳಿಯು ಜಾಗತಿಕವಾಗಿ ಗಂಭೀರ ಪರಿಣಾಮಗಳನ್ನು ಬೀರುತ್ತಿದೆ. ಹೀಗೆಯೇ ಮುಂದುವರಿದರೆ ಈ ಯುದ್ಧವು ಜಗತ್ತನ್ನು ಆರ್ಥಿಕ ವಿನಾಶ ಮತ್ತು ಮಾನವೀಯ ಬಿಕ್ಕಟ್ಟಿನ ಕತ್ತಲೆಗೆ ದೂಡುವುದರಲ್ಲಿ ಅನುಮಾನವೇ ಇಲ್ಲ.

ಇಸ್ರೇಲ್ ಮತ್ತು ಅಮೆರಿಕದ ಹಟಮಾರಿ ಧೋರಣೆಯು ಬರೀ ಒಂದು ದೇಶದ ಮೇಲಿನ ದಾಳಿಯಷ್ಟೇ ಆಗಿರದೆ, ಇಡೀ ವಿಶ್ವದ ಸ್ಥಿರತೆಯ ಮೇಲೆ ಮಾಡಿದ ಪ್ರಹಾರವಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಎಲ್‌ಪಿಜಿ ಚಿಂತೆ ಹೆಚ್ಚಿಸಿದ ಕೊರತೆ

1.88 ಕೋಟಿ ರಾಜ್ಯದಲ್ಲಿರುವ ಗೃಹಬಳಕೆಯ ಎಲ್‌ಪಿಜಿ ಸಂಪರ್ಕ | **5,000 ಟನ್** ಮನೆ ಬಳಕೆಯ ಎಲ್‌ಪಿಜಿಗೆ ಪ್ರತಿ ದಿನದ ಅಂದಾಜು ಬೇಡಿಕೆ | **3.50 ಲಕ್ಷ** ಪ್ರತಿ ದಿನ ಅಗತ್ಯವಿರುವ ದಿನಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳು | **1,080 ಟನ್** ವಾಣಿಜ್ಯ ಬಳಕೆಯ ಎಲ್‌ಪಿಜಿ ಪ್ರತಿ ದಿನದ ಬೇಡಿಕೆ | **50 ಸಾವಿರ** ಪ್ರತಿ ದಿನ ಅಗತ್ಯವಿರುವ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು



ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಬಿಸಿ ಕರ್ನಾಟಕದ ಮೂಲೆಮೂಲೆಗೂ ತಾಕಿದೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಗೆ ಹೆಚ್ಚು ತೊಂದರೆ ಉಂಟಾಗಿಲ್ಲ. ಆದರೆ, ಜನರು ಆತಂಕದಿಂದ ಸಿಲಿಂಡರ್ ಬುಕ್ ಮಾಡುತ್ತಿರುವುದರಿಂದ ದಿಢೀರ್ ಬೇಡಿಕೆ ಹೆಚ್ಚಾಗಿದೆ. ಕೆಲವೆಡೆ ಪೂರೈಕೆ ತಡವಾಗುತ್ತಿದೆ. ಅನಿಲ ವಿತರಣಾ ಏಜೆನ್ಸಿಗಳಿಗೆ ಬರುವ ಕರೆಗಳು, ಜನರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ.

ಆದರೆ, ರಾಜ್ಯದ ಬಹುತೇಕ ಭಾಗಗಳಲ್ಲಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಬಹುತೇಕ ಸ್ಥಗಿತಗೊಂಡಿದೆ. ಇದರ ಮೊದಲ ಹೊಡೆತ ಹೋಟೆಲ್ ಉದ್ಯಮದ ಮೇಲೆ ಬಿದ್ದಿದ್ದು, ಕೆಲವು ಹೋಟೆಲ್‌ಗಳು ಮುಚ್ಚಿವೆ. ಕೆಲವು ಹೋಟೆಲ್‌ಗಳಲ್ಲಿ ದೋಸೆಯಂಥ ಹೆಚ್ಚು ಅನಿಲ ಬೇಡುವ ತಿಂಡಿ, ಆಹಾರ ಪದಾರ್ಥಗಳನ್ನು ಕೈಬಿಡಲಾಗಿದೆ. ಕೆಲವು ಹೋಟೆಲ್‌ಗಳಲ್ಲಿ ವಿದ್ಯುತ್, ಕಟ್ಟಿಗೆ ಒಲೆಗಳಂಥ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಆದರೆ, ಅದಕ್ಕೂ ಹಲವು ರೀತಿಯ ಸಮಸ್ಯೆಗಳಿವೆ. ನಗರಗಳಲ್ಲಿರುವ ಪಿ.ಜಿ.ಗಳು, ವಸತಿ ನಿಲಯಗಳು, ಕೇಟರಿಂಗ್ ವ್ಯವಸ್ಥೆಗೂ ಅಡ್ಡಿ ಉಂಟಾಗಿದೆ. ಆದರೆ, ಶಾಲೆಗಳ ಬಿಸಿಯೂಟ ಯೋಜನೆಗೆ ಬಹುತೇಕ ಸಮಸ್ಯೆ ಆಗಿಲ್ಲ. ಇನ್ನು ಒಂದೆರಡು ದಿನದಲ್ಲಿ ಅನಿಲ ಪೂರೈಕೆ ಸಮಸ್ಯೆ ಬಗೆಹರಿಯದಿದ್ದರೆ, ಈ ಎಲ್ಲ ವಲಯಗಳಲ್ಲಿಯೂ ಪರಿಸ್ಥಿತಿ ಹದಗೆಡಲಿದೆ.

ಪಿ.ಜಿ., ಹಾಸ್ಟೆಲ್‌ಗಳಿಗೆ ತಟ್ಟಿದ ಬಿಸಿ


ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತವಾಗಿರುವ ಕಾರಣ ರಾಜಧಾನಿ ಬೆಂಗಳೂರಿನ ಹೋಟೆಲ್‌ಗಳು, ಪೇಯಿಂಗ್ ಗೆಸ್ಟ್ (ಪಿ.ಜಿ), ಶಾಲೆಗಳು, ವಸತಿ ನಿಲಯಗಳಲ್ಲಿ ಸಮಸ್ಯೆ ಆಗಿದೆ.

ಹೋಟೆಲ್ ಮಾಲೀಕರು ಅನಿಲ ಹೆಚ್ಚು ಬಳಕೆಯಾಗುವ ಆಹಾರ ಪದಾರ್ಥಗಳಾದ ಉದ್ದಿನ ವಡೆ, ಬಜ್ಜಿ, ಪಕೋಡ, ಪೂರಿ ಮತ್ತು ಗೋಬಿ ಮಂಚೂರಿಯಂತಹ ತಿಂಡಿಗಳನ್ನು ತಯಾರಿಸದಿರಲು ನಿರ್ಧರಿಸಿದ್ದಾರೆ. ಈ ಬಗ್ಗೆ ಹೋಟೆಲ್‌ಗಳಲ್ಲಿ ಫಲಕಗಳನ್ನು ಅಳವಡಿಕೆ ಮಾಡಿದ್ದಾರೆ.

ಹೆಚ್ಚು ಅನಿಲ ಬಳಕೆಯಾಗುವ ಚಪಾತಿ ಹಾಗೂ ದೋಸೆಗಳ ಬದಲು ಅಕ್ಕಿಯಿಂದ ತಯಾರಿಸಿದ ಪುಲಾವ್, ಚಿತ್ರಾನ್ನ, ಬಿಸಿ ಬೇಳೆಬಾತ್ ಸೇರಿದಂತೆ ತಿಂಡಿ-ತಿನಿಸುಗಳ ಜೊತೆಗೆ ತರಕಾರಿ, ಕಾಳುಗಳನ್ನು ವಿತರಿಸುವ ಕುರಿತು ಚಿಂತನೆ ನಡೆಸಲಾಗುತ್ತಿದೆ ಎಂದು ಪಿಜಿ ಮಾಲೀಕರ ಸಂಘ ತಿಳಿಸಿದೆ.

ಹೆಚ್ಚಿದ ಆತಂಕ

ಧಾರವಾಡ, ವಿಜಯನಗರ, ಬಾಗಲಕೋಟೆ, ಬಳ್ಳಾರಿ, ಉತ್ತರ ಕನ್ನಡ, ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಗೃಹ ಮತ್ತು ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಪೂರೈಕೆಯಲ್ಲಿ ಸದ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ವ್ಯತ್ಯಯವಾಗಿಲ್ಲ. ಆದರೆ, ಬೆಳಗಾವಿ ಜಿಲ್ಲೆಯಲ್ಲಿ ಬುಧವಾರದಿಂದ ಗೃಹ ಹಾಗೂ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆ ಸ್ಥಗಿತಗೊಂಡಿದೆ.



ಬೆಂಗಳೂರಿನ ಹೋಟೆಲೊಂದರಲ್ಲಿ ಬುಧವಾರ 'ಇವತ್ತು ಕಾಫಿ ಮಾತ್ರ ಲಭ್ಯ' ಎಂಬ ಫಲಕ ಹಾಕಲಾಗಿತ್ತು

ಧಾರವಾಡ ಜಿಲ್ಲೆಯ ಕೆಲವೆಡೆ ಬೇಡಿಕೆಗೆ ತಕ್ಕಷ್ಟು ಸಿಲಿಂಡರ್ ಪೂರೈಕೆಯಾಗುತ್ತಿಲ್ಲ. ಹೋಟೆಲ್ ಮುಚ್ಚುವುದು ಅನಿವಾರ್ಯ ಎಂದು ಧಾರವಾಡ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಮಹೇಶ ಎಂ.ಶೆಟ್ಟಿ ತಿಳಿಸಿದರು.

ಬಾಗಲಕೋಟೆ ಜಿಲ್ಲೆಯಲ್ಲಿ ಗೃಹಬಳಕೆ ಹಾಗೂ ವಾಣಿಜ್ಯ ಸಿಲಿಂಡರ್‌ಗಳು ಕಡಿಮೆ ಪ್ರಮಾಣದಲ್ಲಿ ಬರುತ್ತಿವೆ. 'ಬೆಲೆ ಹೆಚ್ಚಳದ ಆತಂಕ ಹಾಗೂ ಸಿಲಿಂಡರ್ ಕೊರತೆ ಕಾರಣದಿಂದ ಜನರು ಈಗಾಗಲೇ ಸಿಲಿಂಡರ್ ಸಂಗ್ರಹಿಸಿ ಇಡತೊಡಗಿದ್ದಾರೆ. ಇದರಿಂದ ಒತ್ತಡ ಹೆಚ್ಚಾಗಿದೆ' ಎಂದು ಗ್ಯಾಸ್ ಏಜೆನ್ಸಿಯ ಸಿಬ್ಬಂದಿಯೊಬ್ಬರು ತಿಳಿಸಿದರು.

ವಿಜಯಪುರ ಜಿಲ್ಲೆಯಲ್ಲಿ ಸದ್ಯ ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ಸಮಸ್ಯೆಯಾಗಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗೃಹ ಬಳಕೆ ಸಿಲಿಂಡರ್‌ಗೆ ಕೊರತೆ ಇಲ್ಲ ಎಂದು ಗ್ಯಾಸ್ ಏಜೆನ್ಸಿಗಳು ಹೇಳುತ್ತಿವೆ.

ಗದಗ ಜಿಲ್ಲೆಯಲ್ಲಿ ಗೃಹಬಳಕೆ ಸಿಲಿಂಡರ್ ಪೂರೈಕೆಯಲ್ಲಿ ಕೊರತೆ ಆಗಿಲ್ಲ. ಆದರೆ, ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಸಮಸ್ಯೆ ಉಂಟಾಗಿದೆ. ಹಾವೇರಿ ಜಿಲ್ಲೆಯಲ್ಲಿ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಇದ್ದಿಲು ಹೆಚ್ಚು ಮಾರಾಟ: ಬೆಳಗಾವಿಯಲ್ಲಿ ಬುಧವಾರದಿಂದ ಗೃಹ ಬಳಕೆ ಹಾಗೂ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆ ನಿಲ್ಲಿಸಲಾಗಿದೆ.

ಬೆಳಗಾವಿಯಲ್ಲಿ ನಾಲ್ಕು ಕಡೆ ಇದ್ದಿಲು ಮಾರಾಟದ ಅಂಗಡಿಗಳಿವೆ. ಎರಡು ದಿನಗಳಿಂದ ಬಹುಪಾಲು ಇದ್ದಿಲು ಏಕಾಏಕಿ ಮಾರಾಟವಾಗಿದೆ.



ಮಂಗಳೂರಿನಲ್ಲಿ ಸಿಬ್ಬಂದಿ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ವಿತರಿಸಿದರು

ಆತಂಕದ 'ಅಡುಗೆ'

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಹೋಟೆಲ್‌ಗಳಲ್ಲಿ ಬುಧವಾರ 'ಅಡುಗೆ' ಆತಂಕದಲ್ಲೇ ಸಾಗಿತು. ಮಂಗಳೂರಿನ 'ಹೋಟೆಲ್ ಶಿವಾಭಾಗ್'ನಲ್ಲಿ ದೋಸೆ ಸಿದ್ಧಪಡಿಸುವುದನ್ನು ಬುಧವಾರ ನಿಲ್ಲಿಸಲಾಗಿದೆ. ಗುರುವಾರದಿಂದ ಊಟ ಸಿಗುವುದು ಕಷ್ಟ ಎಂದು ಮಾಲೀಕ ಪ್ರಕಾಶ್ ನಾಯಕ್ ತಿಳಿಸಿದರು.

ಉಡುಪಿಯಲ್ಲಿ ದೊಡ್ಡ ಹೋಟೆಲ್‌ಗಿಂತಲೂ ಫಾಸ್ಟ್ ಫುಡ್ ಸೆಂಟರ್, ಸಣ್ಣ ಹೋಟೆಲ್ ನಡೆಸುವವರಿಗೆ ಹೆಚ್ಚು ತೊಂದರೆಯಾಗಿದೆ. ಗ್ರಾಮೀಣ ಪ್ರದೇಶಗಳ ಹೆಚ್ಚಿನ ಹೋಟೆಲ್‌ಗಳಲ್ಲಿ ಕಟ್ಟಿಗೆ ಒಲೆಯ ವ್ಯವಸ್ಥೆಯೂ ಇದೆ. ನಗರದ ಹೋಟೆಲ್‌ಗಳಲ್ಲಿ ಇಂತಹ ವ್ಯವಸ್ಥೆ ಅಳವಡಿಸಿಕೊಳ್ಳಲು ಜಾಗ ಲಭ್ಯ ಇಲ್ಲ ಎಂದು ಹೋಟೆಲ್ ಸಿಬ್ಬಂದಿಯೊಬ್ಬರು ಹೇಳಿದರು.

ಚಿಕ್ಕಮಗಳೂರಿನಲ್ಲಿ 'ವಿಷ್ಣು ಡೆಲಿಕೆಸಿ' ಮತ್ತು 'ತಾಜ್ ಹೋಟೆಲ್' ಬಾಗಿಲು ಬುಧವಾರ ಮುಚ್ಚಿವೆ.

ಸೌದೆ ಒಲೆಯಲ್ಲಿ 'ಬಿಸಿಯೂಟ'

ಚಾಮರಾಜನಗರ ಜಿಲ್ಲೆಯ ಕಾಗಲವಾಡಿ ಗ್ರಾಮದ ಟಿ.ಎಸ್.ಸುಬ್ಬಣ್ಣ ಪ್ರೌಢಶಾಲೆಯಲ್ಲಿ ಸೌದೆ ಬಳಸಿ ಬಿಸಿಯೂಟ ತಯಾರಿಸಲಾಗುತ್ತಿದೆ. 'ಮೂರು ದಿನಗಳ ಹಿಂದೆಯೇ ಬುಕ್ ಮಾಡಿದ್ದರೂ ಪೂರೈಕೆಯಾಗದಿರುವುದರಿಂದ ಸೌದೆ ಖರೀದಿಸಿ ಅಡುಗೆ ಮಾಡಲಾಗುತ್ತಿದೆ' ಎಂದು ಸಿಬ್ಬಂದಿಯೊಬ್ಬರು ತಿಳಿಸಿದ್ದಾರೆ.

ಮುಗಿಬಿದ್ದ ಜನ

ಕೋಲಾರ ಜಿಲ್ಲೆಯಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವ ಬೆನ್ನಲೇ ಆತಂಕಗೊಂಡಿರುವ ಸಾರ್ವಜನಿಕರು, ಗೃಹ ಬಳಕೆ ಸಿಲಿಂಡರ್ ಪಡೆಯಲು ಮುಗಿಬಿದ್ದಿದ್ದಾರೆ.

ಗೃಹ ಬಳಕೆ ಸಿಲಿಂಡರ್‌ನಲ್ಲಿ ಸದ್ಯಕ್ಕೆ ಯಾವುದೇ ವ್ಯತ್ಯಯ ಉಂಟಾಗಿಲ್ಲ. ಆದರೆ, ಜನರು ಗಾಬರಿಗೊಂಡಿದ್ದು, ಕಾಲುಭಾಗ ಸಿಲಿಂಡರ್ ತುಂಬಿದ್ದರೂ ಹೊಸತು ಖರೀದಿಸಲು ಬುಕ್ ಮಾಡುತ್ತಿದ್ದಾರೆ. ಹೊಸ ನಿಯಮಗಳ ಜಾರಿಯಿಂದ ಗೊಂದಲಕ್ಕೆ ಒಳಗಾಗಿದ್ದಾರೆ.

ಸೌದೆ ಒಲೆ ಬಳಕೆ

ಮಧ್ಯ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಗೃಹಬಳಕೆ ಅಡುಗೆ ಅನಿಲದ ಕೊರತೆ ತಕ್ಷಣಕ್ಕೆ ಕಂಡುಬಂದಿಲ್ಲ. ಆದರೆ, ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಕೊರತೆ ಉಂಟಾಗಿರುವ ಕಾರಣ ಹೋಟೆಲ್‌ಗಳ ಮಾಲೀಕರು ಸೌದೆ ಒಲೆಗಳ ಮೊರೆ ಹೋಗಿದ್ದಾರೆ.

'ವಿತರಕರಿಂದ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದೆ. ಮಂಗಳವಾರದಿಂದಲೇ ಸೌದೆ ಒಲೆಗಳಲ್ಲೇ ಅಡುಗೆ ಮಾಡುತ್ತಿದ್ದೇವೆ' ಎಂದು ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ತಿಳಿಸಿದರು.

ಗ್ರಾಹಕರು ಸಹಕರಿಸಬೇಕು

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತವಾಗಿರುವ ಕಾರಣ ಹೋಟೆಲ್ ಉದ್ಯಮಕ್ಕೆ ಹೊಡೆತ ಬಿದ್ದಿದೆ. ಈಗಾಗಲೇ ನಗರದ ಕೆಲ ಹೋಟೆಲ್‌ಗಳು ಬಾಗಿಲು ಮುಚ್ಚಿವೆ. ಕೆಲ ಹೋಟೆಲ್‌ಗಳಲ್ಲಿ ಮೆನುಗಳನ್ನು ಬದಲಾವಣೆ ಮಾಡಿಕೊಳ್ಳಲಾಗಿದ್ದು, ಗ್ರಾಹಕರು ಸಹಕರಿಸಬೇಕು

ಪಿ.ಸಿ.ರಾವ್,
ಬೆಂಗಳೂರು ಹೋಟೆಲ್‌ಗಳ ಸಂಘದ ಗೌರವ ಅಧ್ಯಕ್ಷ

ವಿದ್ಯುತ್ ಸ್ಟೌ ಬಳಕೆಗೆ ಸೂಚನೆ

ಬೆಂಗಳೂರಿನಲ್ಲಿ ಸುಮಾರು 15 ಸಾವಿರದಷ್ಟು ಪಿ.ಜಿಗಳಿದ್ದು, 8 ಲಕ್ಷದಿಂದ 10 ಲಕ್ಷ ಮಂದಿ ಪಿ.ಜಿಗಳಲ್ಲಿ ವಾಸ ಮಾಡುತ್ತಿದ್ದಾರೆ. ನಮ್ಮ ಗ್ರಾಹಕರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಮೂರು ಹೊತ್ತಿನ ಊಟ ನೀಡುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಇದ್ದರೂ ಪರ್ಯಾಯವಾಗಿ ಎಲೆಕ್ಟ್ರಿಕ್ ಇಂಡಕ್ಷನ್ ಸ್ಟೌ ಬಳಕೆ ಮಾಡುವಂತೆ ನಗರದ ಎಲ್ಲ ಪಿ.ಜಿಗಳಿಗೆ ಸೂಚನೆ ನೀಡಲಾಗಿದೆ

ಅರುಣ್‌ಕುಮಾರ್,
ಬೆಂಗಳೂರು ಪಿ.ಜಿ. ಮಾಲೀಕರ ಸಂಘದ ಅಧ್ಯಕ್ಷ

ಹೋಟೆಲ್ ಬಂದ್

ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ತುಮಕೂರು ಜಿಲ್ಲೆಗಳಲ್ಲೂ ವಾಣಿಜ್ಯ ಬಳಕೆ ಸಿಲಿಂಡರ್ ಸಿಗದೆ ಸಮಸ್ಯೆಯಾಗಿದೆ. ತುಮಕೂರಿನಲ್ಲಿ ಕೆಲವು ಹೋಟೆಲ್‌ಗಳು ಬುಧವಾರವೇ ಮುಚ್ಚಿದ್ದವು. ಚಿಕ್ಕಬಳ್ಳಾಪುರದಲ್ಲಿ ಇನ್ನೆರಡು ದಿನಗಳಲ್ಲಿ ಸಿಲಿಂಡರ್ ಪೂರೈಕೆಯಾಗದಿದ್ದರೆ ಹೋಟೆಲ್‌ಗಳು ಮುಚ್ಚುವುದು ಖಚಿತ ಎಂದು ಮಾಲೀಕರು ಹೇಳುತ್ತಿದ್ದಾರೆ.

ರಾಮನಗರದಲ್ಲಿ ಹೋಟೆಲ್ ಉದ್ಯಮ ಹಾಗೂ ಬೀದಿ ಬದಿ ತಿನಿಸು ವ್ಯಾಪಾರವು ಬಂದ್ ಆಗುವ ಸ್ಥಿತಿಗೆ ತಲುಪಿದೆ. ಮತ್ತೊಂದೆಡೆ ಗೃಹ ಬಳಕೆಯ ಅನಿಲ ಸಿಲಿಂಡರ್‌ಗಳನ್ನು ಸಕಾಲದಲ್ಲಿ ಪೂರೈಕೆ ವಿಳಂಬವಾಗಿದ್ದು, ಗ್ರಾಹಕರು ಸಿಲಿಂಡರ್‌ಗಾಗಿ ಕಾಯುವ ಸ್ಥಿತಿ ಬಂದಿದೆ.

ಕೈಗಾರಿಕೆಗಳಿಗೂ ತೊಂದರೆ

ಮೈಸೂರು ಭಾಗದ ಜಿಲ್ಲೆಗಳಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆಯಲ್ಲಿ ಸಂಪೂರ್ಣ ವ್ಯತ್ಯಯವಾಗಿದೆ. ಕೈಗಾರಿಕೆಗಳು ಹಾಗೂ ಆತಿಥ್ಯ ವಲಯದ ಉದ್ಯಮಕ್ಕೆ ಸಂಕಷ್ಟ ಬಂದೊದಗಿದೆ. ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಸದ್ಯ ಸಿಗುತ್ತಿವೆ. ಆದರೂ, ಜನರು ಆತಂಕಗೊಂಡಿದ್ದಾರೆ.

ವೆಲ್ಡಿಂಗ್, ಟಂಗ್‌ಸ್ಟನ್ ವೈರ್ ಕಾರ್ಖಾನೆಗಳು ಸೇರಿ ಕೈಗಾರಿಕೆಗಳಿಗೆ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಅನಿವಾರ್ಯ. ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿಯೇ 30ಕ್ಕೂ ಹೆಚ್ಚು ಕಾರ್ಖಾನೆಗಳು, ಮೇಟಗಳ್ಳಿ ವಸಾಹತುವಿನಲ್ಲಿ 15–20 ಕಾರ್ಖಾನೆಗಳಿದ್ದು, ಸದ್ಯದ ಪರಿಸ್ಥಿತಿಯು ಪ್ರತಿಕೂಲ ಪರಿಣಾಮ ಬೀರಲಿದೆ.



ದಾವಣಗೆರೆಯ ಪಿ.ಬಿ ರಸ್ತೆಯಲ್ಲಿನ ಅಪೂರ್ವ ಹೋಟೆಲ್‌ನಲ್ಲಿ ಸಿದ್ಧವಾಗುತ್ತಿರುವ ಸೌದೆ ಒಲೆ

ಕೇಟರಿಂಗ್ ಸೇವೆಗೆ ಹೊಡೆತ

ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿರುವುದು ಶುಭ ಸಮಾರಂಭಗಳ ಮೇಲೆ ಪರಿಣಾಮ ಬೀರಲು ಆರಂಭಿಸಿದೆ. ಭೋಜನಕ್ಕೆ ಅಡುಗೆ ಮಾಡುವವರು ಈಗ ಎಲ್‌ಪಿಜಿಯನ್ನೇ ಅವಲಂಬಿಸಿದ್ದಾರೆ. ಕೇಟರಿಂಗ್ ಸೇವೆಗಳನ್ನು ನೀಡುವವರು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಂಪರ್ಕ ಹೊಂದಿದ್ದು, ಪೂರೈಕೆಯಲ್ಲಿ ಸಮರ್ಪಕವಾಗಿ ಇಲ್ಲದಿರುವುದರಿಂದ ಅವರ ಕೆಲಸಗಳ ಮೇಲೆ ಪರಿಣಾಮ ಬೀರಿದೆ.

'ಈಗ ಪರೀಕ್ಷಾ ಸಮಯ ಆಗಿರುವುದರಿಂದ ಕೆಲಸ ಸ್ವಲ್ಪ ಕಡಿಮೆ ಇದೆ. ಏಪ್ರಿಲ್, ಮೇ ತಿಂಗಳಲ್ಲಿ ಹೆಚ್ಚು ಶುಭ ಸಮಾರಂಭಗಳು ಇರುತ್ತವೆ. ಸಿಲಿಂಡರ್ ಸಿಗದಿದ್ದರೆ ಅಡುಗೆ ವ್ಯವಸ್ಥೆ ಕಷ್ಟ. ಸದ್ಯ ನಾಲ್ಕು ಸಿಲಿಂಡರ್ ನನ್ನ ಬಳಿ ಇವೆ. ಬುಕ್ ಮಾಡುವುದಕ್ಕೆ ಆಗುತ್ತಿಲ್ಲ. 10–15 ದಿನಗಳಲ್ಲಿ ಸರಿಯಾಗಬಹುದು ಎಂದು ಏಜೆನ್ಸಿಯವರು ಹೇಳುತ್ತಿದ್ದಾರೆ. ಆದರೆ, ಹೊಸ ಕೆಲಸಗಳನ್ನು ಒಪ್ಪಿಕೊಳ್ಳುವುದೋ ಬೇಡವೋ ಎಂಬ ಗೊಂದಲದಲ್ಲಿದ್ದೇನೆ' ಎಂದು ಬೆಂಗಳೂರಿನ ಅಂಜನಾಪುರದ ಸರಳಿ ಕ್ಯಾಟರಿಂಗ್ ಸರ್ವಿಸ್‌ನ ಕೃಷ್ಣಪ್ರಶಾಂತ್ ಹೇಳುತ್ತಾರೆ.

ಬೆಟ್ಟದಲ್ಲಿ 15 ದಿನದ ದಾಸ್ತಾನು

ಚಾಮುಂಡಿ ಬೆಟ್ಟದಲ್ಲಿ ನಿತ್ಯ 3 ಸಾವಿರಕ್ಕೂ ಹೆಚ್ಚು ಮಂದಿ ಪ್ರಸಾದ ಸ್ವೀಕರಿಸುತ್ತಿದ್ದಾರೆ. '15 ದಿನಕ್ಕೆ ಆಗುವಷ್ಟು ವಾಣಿಜ್ಯ ಸಿಲಿಂಡರ್‌ಗಳಿದ್ದು, ಕೊರತೆ ಎದುರಾದರೆ ಸೌದೆ ಒಲೆ ಬಳಸಿ ಅಡುಗೆ ಮಾಡಲಾಗುವುದು' ಎಂದು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪಾ ತಿಳಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಕೊರತೆಯಾಗಿಲ್ಲ. 'ನಿತ್ಯ ದಾಸೋಹ ಹಾಗೂ ಲಡ್ಡು ಪ್ರಸಾದ ತಯಾರಿಕೆಗೆ 15 ಸಿಲಿಂಡರ್‌ಗಳ ಅಗತ್ಯವಿದ್ದು, 10 ದಿನಗಳಿಗೆ ದಾಸ್ತಾನಿದೆ' ಎಂದು ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು ತಿಳಿಸಿದರು.



ಕೊಪ್ಪಳ ಜಿಲ್ಲೆಯ ಹೊಸಪೇಟೆ ರಸ್ತೆಯಲ್ಲಿ ಆಟೊಗಳ ಗ್ಯಾಸ್ ಬಂಕ್ ಎದುರು ಹಾಕಿರುವ ಬ್ಯಾನರ್

ಎಲ್‌ಪಿಜಿ ಪರಿಣಾಮಕಾರಿ ಬಳಕೆ ಹೇಗೆ?

ಮನೆಗಳಲ್ಲಿ ಎಲ್‌ಪಿಜಿ ಸಿಲಿಂಡರ್ ಪರಿಣಾಮಕಾರಿ ಬಳಕೆಗೆ ಕೆಲವು ಸಲಹೆಗಳು ಇಲ್ಲಿವೆ...



- ನೀರು, ಆಹಾರ ಪದಾರ್ಥಗಳನ್ನು ಅತಿಯಾಗಿ ಕುದಿಸುವುದನ್ನು ನಿಲ್ಲಿಸಬಹುದು
- ಕಡಿಮೆ ಅವಧಿಯಲ್ಲಿ ಬೇಯುವ ತರಕಾರಿ, ಬೇಳೆ ಕಾಳುಗಳನ್ನು ಬಳಸಿ ಅಡುಗೆ ಮಾಡುವುದಕ್ಕೆ ಒತ್ತು ಕೊಡಬಹುದು
- ಅಕ್ಕಿ, ಬೇಳೆ, ತರಕಾರಿ, ಮಾಂಸ ಸೇರಿ ಆಹಾರ ವಸ್ತುಗಳನ್ನು ಬೇಯಿಸಲು ಕುಕ್ಕರ್ ಬಳಸುವುದು ಉತ್ತಮ
- ಕುಕ್ಕರ್‌ನಲ್ಲಿ ಸಪರೇಟರ್ (ಎರಡು ಮೂರು ಹಂತಗಳಿರುವ ಪಾತ್ರೆ) ಬಳಸಿಕೊಂಡು ಅನ್ನ, ತರಕಾರಿ ಅಥವಾ ಇತರ ಆಹಾರ ವಸ್ತುಗಳನ್ನು ಬೇಯಿಸುವುದರಿಂದ ಬೇರೆ ಬೇರೆ ಪಾತ್ರೆಗಳಲ್ಲಿ ಪ್ರತ್ಯೇಕವಾಗಿ ಬೇಯಿಸುವುದನ್ನು ತಪ್ಪಿಸಬಹುದು
- ದೀರ್ಘಾವಧಿ ಬೆಂಕಿ ಅಗತ್ಯವಿರುವ (ದೋಸೆ, ಚಪಾತಿ, ಹಬೆಯಲ್ಲಿ ಬೇಯುವ ಇತರ ತಿಂಡಿಗಳು) ಅಡುಗೆ ಮಾಡುವುದನ್ನು ತಾತ್ಕಾಲಿಕವಾಗಿ ಮುಂದೂಡಬಹುದು
- ಆಹಾರ ಪದಾರ್ಥಗಳನ್ನು ಬೇಯಿಸಿದ ನಂತರ ಸ್ಟೌ ಆರಿಸಲು ಮರೆಯದಿರಿ. ಯಾವುದೋ ಯೋಚನೆಯಲ್ಲಿ ಸ್ಟೌ ಆರಿಸಲು ಮರೆತು ಹೋಗುವ ಅಭ್ಯಾಸ ಕೆಲವರಿಗೆ ಇರುತ್ತದೆ
- ಅವಕಾಶ ಸಿಕ್ಕಾಗಲೆಲ್ಲಾ ಚಟ್ನಿ, ಸಲಾಡ್‌ಗಳು ಸೇರಿದಂತೆ ಹಸಿ ತರಕಾರಿಗಳಿಂದ ಮಾಡಬಹುದಾದ ಅಡುಗೆ ಪದಾರ್ಥಗಳನ್ನು ಮಾಡುವುದು ಎಲ್‌ಪಿಜಿ ಬಳಕೆ ಮೇಲಿನ ಒತ್ತಡವನ್ನು ಸ್ವಲ್ಪ ಕಡಿಮೆ ಮಾಡಬಹುದು
- ಇಂಡಕ್ಷನ್ ಸ್ಟೌ, ಇನ್‌ಫ್ರಾರೆಡ್ ಸ್ಟೌಗಳನ್ನು ಪರ್ಯಾಯವಾಗಿ ಬಳಸಬಹುದು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕೈಗಳಿಗೆ ಕೋಳ ತೊಡಿಸಿದ ವ್ಯಕ್ತಿಯೊಬ್ಬನ ಚಿತ್ರವನ್ನು ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು ಹಂಚಿಕೊಳ್ಳುತ್ತಿದ್ದಾರೆ. ನಿತಿನ್ ಮೋಹನ್ ಎನ್ನುವ ಭಾರತೀಯ ಪ್ರಜೆಯು ಟೆಲಿಕಮ್ಯುನಿಕೇಷನ್ ಎಂಜಿನಿಯರ್ ಆಗಿದ್ದು, ಇರಾನ್‌ನ ರಹಸ್ಯ ಮಾಹಿತಿಯನ್ನೊಳಗೊಂಡ ಚಿತ್ರಗಳು, ವಿಡಿಯೊಗಳು, ದತ್ತಾಂಶವನ್ನು ಅವರು ಇಸ್ರೇಲ್‌ನ ಗುಪ್ತಚರ ಸಂಸ್ಥೆಯಾದ ಮೊಸ್ಸಾದ್‌ಗೆ ರವಾನಿಸುತ್ತಿದ್ದರು. ಅವರನ್ನು ಬಹರೇನ್‌ನಲ್ಲಿ ಬಂಧಿಸಲಾಗಿದ್ದು, ಆಂತರಿಕ ಭದ್ರತಾ ಸಚಿವಾಲಯವು ಬಂಧನವನ್ನು ಖಚಿತಪಡಿಸಿದೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ, ನಿತಿನ್ ಮೋಹನ್ ಅವರನ್ನು ಬಂಧಿಸಿರುವ ಬಗ್ಗೆ ಯಾವುದೇ ನಂಬಲರ್ಹ ವರದಿ ಪ್ರಕಟವಾಗಿಲ್ಲ ಎನ್ನುವುದು ಕಂಡಿತು. ಇರಾನ್‌ನ ಆಂತರಿಕ ಭದ್ರತಾ ಸಚಿವಾಲಯದ ವೆಬ್‌ಸೈಟ್‌ನಲ್ಲಿಯೂ ಈ ಬಗ್ಗೆ ಯಾವುದೇ ಪ್ರಕಟಣೆ ಕಾಣಲಿಲ್ಲ. ಆದರೆ, ಬಹರೇನ್ ಮತ್ತು ಭಾರತ ಸರ್ಕಾರಗಳು ಇದು ಸುಳ್ಳು ಸುದ್ದಿ ಎಂದು ಸ್ಪಷ್ಟೀಕರಣ ನೀಡಿರುವ ಪ್ರಕಟಣೆಗಳು ಸಿಕ್ಕವು. ಗೂಗಲ್ ಲೆನ್ಸ್ ಬಳಸಿ ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಇಂಥದ್ದೇ ಚಿತ್ರ 2026ರ ಫೆಬ್ರುವರಿ 16ರಂದು ಸಚಿವಾಲಯದ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪ್ರಕಟವಾಗಿರುವುದು ಕಂಡಿತು. ಎರಡೂ ಚಿತ್ರಗಳಲ್ಲಿ ಹಿನ್ನೆಲೆ, ಲೋಗೊ ಒಂದೇ ರೀತಿ ಇದ್ದರೂ ವ್ಯಕ್ತಿಯ ಚಿತ್ರದಲ್ಲಿ ವ್ಯತ್ಯಾಸಗಳು ಕಂಡುಬಂದವು. ಹೈವ್ ಮಾಡರೇಷನ್ ಮತ್ತು ಟ್ರೂಥ್‌ಸ್ಕ್ಯಾನ್ ಮೂಲಕ ಚಿತ್ರವನ್ನು ಪರಿಶೀಲಿಸಿದಾಗ, ಅದು ಎಐ ನಿರ್ಮಿತ ಇರಬಹುದು ಎನ್ನುವ ಫಲಿತಾಂಶ ಸಿಕ್ಕಿತು ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6341


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮನಸ್ಸಿನಲ್ಲಿ ಪೂರ್ವದಲ್ಲೇ ಮಾಡಿಕೊಂಡ ಅಭಿಪ್ರಾಯ! (4)
3.ನಡುವೆ ಉಲ್ಲಾ ಹಾರಿ ಹೋಗಲಾಡಿಸುವಿಕೆ! (4)
5.ಕೆಸರಲ್ಲಿರುವವರ ಎಕ್ಕಡ! (2)
7.ಕರ ಮುಂದಿಟ್ಟರೆ ಜ್ಞಾನೇಂದ್ರಿಯಗಳ ಕಾಣುತ್ತದೆಯೇ? (3)
8.ಮಾವನ ಮರ್ಯಾದೆ (2)
10.ಪರವಶನಾಗಿದ್ದಾಗಲೇ ಕಾಣಿಸಿದ ಹಣ (2)
11.ಕರುವಿನೊಳಗಿರುವ ಬೆನ್ನೆಲುಬು (3)
13.ಮಸೂರ ಹಿಡಿದರೆ ವೃಕ್ಷ ಕಾಣುತ್ತದೆಯಲ್ಲಾ! (2)
15.ಮಧುರವಾದ ಧ್ವನಿಯಿದು (4)
16.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)

ಮೇಲಿಂದ ಕೆಳಕ್ಕೆ

1.ಒದಗಿಸುವಿಕೆಗೊಂದು ಪರ್ಯಾಯ ಪದ (3)
2.ಆಜ್ಞಾನುಸಾರ ಕೆಲಸ ಮಾಡುವವನು (3)
3.ಪಣ ಒಡ್ಡಿ ಆರಂಭಿಸಿರುವ ಪ್ರವಾಸ (3)
4.ರಸ ಒಸರುವ ಜಿಹ್ವೆ (3)
6.ರಜ ಬಂದಾಗ ಆಚರಿಸಿದ ಬೆಳ್ಳಿ ಹಬ್ಬ (5)
8.ಮಾಮನಲ್ಲಿ ಅಳಿವು ಕಾಣಿಸುತ್ತಿದೆಯಲ್ಲಾ! (5)
10.ನೂರರ ಗುಂಪು (3)
11.ಪೆದ್ದ ಇಲ್ಲಿದ್ದಾನೆ (3)
12.ರಕ್ತವನ್ನು ಹೀಗೂ ಹೇಳುವರು (3)
14.ರಸದಲ್ಲಿ ವೇಗ! (3)



6340ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿಣಿತ 3.ಅವಿರತ
5.ಗುಣಕಥನ 7.ಶಿರಸ್ಸು
9.ಮರಣ 11.ಪ್ರತಾಪ
13.ವಿಚಾರವಂತ 15.ಮಹನೀಯ
16.ನವಸುಮ

ಮೇಲಿಂದ ಕೆಳಕ್ಕೆ:
1.ಪರದೇಶಿ 2.ತರಗು
4.ರದನ 6.ಕಲ್ಯಾಣ 8.ರಶ್ಮಿ
9.ಮತ್ಸರ 10.ರೇತಾ
12.ಪರಂಧಾಮ 13.ವಿಗ್ರಹ
14.ತಲ್ಲೀನ

ಸುಡೊಕು 6725

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		5		8		4		
	8		7		5		1	9
7		1		6		2		
							3	2
3	6		5		7	8		
		8					4	7
		7		5		1		
5			9		8		2	4
2		3	6				8	

6724ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ನುಡಿ ಬೆಳಗು



ಪಿ.ಚಂದ್ರಿಕಾ

ದಾಂಪತ್ಯದ ವ್ಯಾಖ್ಯೆ

ಒಬ್ಬ ಪರಮಹಂಸರ ಹತ್ತಿರ ಬಂದು, 'ಸ್ವಾಮಿ, ನಾನು ಜೀವನದಲ್ಲಿ ನೊಂದಿದ್ದೇನೆ. ಬಡತನ; ಹೆಂಡತಿ, ಮಕ್ಕಳ ಕಾಟ ತಡೆಯಲಾಗುತ್ತಿಲ್ಲ. ಸಾವು ಇಲ್ಲವೇ ಸನ್ಯಾಸ ಎರಡೇ ದಾರಿ. ಸಾಯುವುದಕ್ಕೆ ಭಯ. ಅದಕ್ಕೆ ಸನ್ಯಾಸ ತೆಗೆದುಕೊಳ್ಳಬೇಕೆಂದಿರುವೆ' ಎಂದ. ಅವನ ಮಾತನ್ನು ಕೇಳಿ ಪರಮಹಂಸರು ನಕ್ಕು, 'ಇದಕ್ಕೆ ನಿನ್ನ ಹೆಂಡತಿ ಮಕ್ಕಳು ಒಪ್ಪುವುದಾದರೆ ನನ್ನ ಅಭ್ಯಂತರ ಏನೂ ಇಲ್ಲ. ಅವರನ್ನು ಕರೆದು ತಾ' ಎಂದರು.

ವ್ಯಕ್ತಿ ಮಾರನೆಯ ದಿನವೇ ತನ್ನ ಹೆಂಡತಿ ಮಕ್ಕಳೊಂದಿಗೆ ಬಂದ. ಮಕ್ಕಳು ಸಣ್ಣವು. ಒಂದಕ್ಕೆ ಹಸಿವಾದರೆ ಇನ್ನೊಂದಕ್ಕೆ ನೀರಡಿಕೆ. ನಡುವೆ ಅಮಾಯಕಳಾಗಿ ಹೆಂಡತಿ ನಿಂತಿದ್ದಾಳೆ. ಪರಮಹಂಸರಿಗೆ ನಿಜಕ್ಕೂ ಸಂಕಟ ಎನ್ನಿಸಿತು. ಇದಕ್ಕೆಲ್ಲಾ ಪರಿಹಾರವನ್ನು ನೀಡಬೇಕು ಎಂದು ತೀರ್ಮಾನಿಸಿ, 'ಅಮ್ಮಾ, ನಿನ್ನ ಗಂಡ ಸನ್ಯಾಸವನ್ನು ಸ್ವೀಕರಿಸುತ್ತಾನಂತೆ ನಿನ್ನ ಒಪ್ಪಿಗೆ ಇದೆಯಾ?' ಎನ್ನುತ್ತಾರೆ. 'ಇಷ್ಟು ವರ್ಷ ಸಂಸಾರ ಮಾಡಿ ಮಕ್ಕಳನ್ನು ಕೊಟ್ಟು ನನ್ನನ್ನು ಒಂಟಿಯಾಗಿಸಿ ಹೋಗುತ್ತೇನೆ ಎಂದರೆ ಹೇಗೆ? ಮದುವೆಯಾಗುವಾಗಲೇ ನಾನು ಸನ್ಯಾಸ ಸ್ವೀಕರಿಸುತ್ತೇನೆ ಎಂದಿದ್ದರೆ ನಮ್ಮ ತವರಿನವರು ಮದುವೆಯನ್ನೇ ಮಾಡಿಕೊಡುತ್ತಿರಲಿಲ್ಲ' ಎಂದಳು ಹೆಂಡತಿ. ಕೋಪದಿಂದ ವ್ಯಕ್ತಿ 'ಗಂಡನ ಮಾತನ್ನು ತೆಗೆದುಹಾಕುವವಳು ಪತಿವ್ರತೆಯಲ್ಲ' ಎನ್ನುತ್ತಾನೆ. ಅವನನ್ನು ತಡೆಯುತ್ತಾ ಪರಮಹಂಸರು, 'ನೀನು ಈಕೆಯನ್ನು ಬಯ್ಯುವ ಮೊದಲು ನೀನು ಸರಿಯಾದ ಗಂಡ ಆಗಿದ್ದೀಯಾ ಎನ್ನುವುದನ್ನು ಹೇಳು. ಮದುವೆಯಾಗುವಾಗ ಅವಳಿಗೆ ಕೊಟ್ಟ ಮಾತನ್ನು ನಡೆಸಿದ್ದೀಯಾ ಯೋಚಿಸು' ಎನ್ನುತ್ತಾರೆ.

'ನಾನು ಗಂಡಸು. ಇವಳಿಗೆ ಹೇಳಿ ನಿರ್ಧರಿಸಬೇಕೆಂದಿಲ್ಲ. ನೀವೇ ಈ ಎಲ್ಲಾ ಗೊಂದಲಕ್ಕೂ ಮೂಲ. ಸುಮ್ಮನೆ ಸನ್ಯಾಸವನ್ನು ಕೊಟ್ಟುಬಿಟ್ಟಿದ್ದರೆ ಆಗುತ್ತಿರಲಿಲ್ಲವೇ?' ಎನ್ನುತ್ತಾನೆ. ಪರಮಹಂಸರು, 'ಕೊಡುತ್ತಿದ್ದೆ. ಸನ್ಯಾಸಿ ದೀಕ್ಷೆ ಕೊಡುವವನಿಗೂ ಒಂದು ಜವಾಬ್ದಾರಿ ಇರುತ್ತದೆ. ನೀನು ಇವಳಿಗೆ ಕೊಟ್ಟ ಮಾತನ್ನು ತಪ್ಪಿಸಿ ಕಷ್ಟಗಳನ್ನು ಮಕ್ಕಳ ಜೊತೆಗೆ ಬಿಟ್ಟು ಹೊರಟುಬಿಟ್ಟರೆ ಹೇಗೆ? ಜೊತೆಯಲ್ಲಿರುವೆ ಎನ್ನುವ ಭರವಸೆಯನ್ನು ಈಡೇರಿಸದೆ ಹೋದರೆ ಯಾವ ದೈವವೂ ನಿನ್ನನ್ನು ಕ್ಷಮಿಸುವುದಿಲ್ಲ. ಇವರನ್ನು ಕಣ್ಣೀರಿಗೆ ತಳ್ಳಿ, ಹಸಿವಿಂದ ನರಳುವಂತೆ ಮಾಡಿ ನೀನು ಸನ್ಯಾಸಿಯಾಗಿ ಏನನ್ನು ಸಾಧಿಸುವೆ?' ಎನ್ನುತ್ತಾರೆ.

ವ್ಯಕ್ತಿಯು ಕೋಪದಿಂದ, 'ಹಾಗಾದರೆ ವೈಫಲ್ಯಗಳ ಮಧ್ಯೆ ನಾನು ಜೀವಂತ ಶವವಾಗಿ ಉಳಿಯಬೇಕೆ?' ಎನ್ನುತ್ತಾನೆ. 'ನೀನು ವೈಫಲ್ಯಗಳ ಕಾರಣಕ್ಕೆ ಸನ್ಯಾಸ ತೆಗೆದುಕೊಳ್ಳುತ್ತಿರುವೆ ಅಲ್ಲವೇ? ಸನ್ಯಾಸ ಎಂದರೆ ಹಣ, ಮನೆ, ಹೆಂಡತಿ, ಮಕ್ಕಳನ್ನು ಬಿಟ್ಟುಹೋಗುವುದು ಎಂದಲ್ಲ. ಆಸೆಯನ್ನು ಕಿತ್ತೊಗೆಯುವುದು ಎಂದು. ಅಭಾವ ವೈರಾಗ್ಯವು ಸನ್ಯಾಸಕ್ಕೆ ದಾರಿಯಾಗಬಾರದು. ಸನ್ಯಾಸಿಗೆ ಔದಾರ್ಯ ಮುಖ್ಯ. ಅದಕ್ಕಾಗಿ ಸನ್ಯಾಸಿಯಾದ ನಾನೂ ನನ್ನ ಹೆಂಡತಿಯನ್ನು ಒಪ್ಪಿಸಿ ಜೊತೆಯಲ್ಲೇ ಇಟ್ಟುಕೊಂಡಿರುವೆ. ನೀನೂ ಅಷ್ಟೇ. ಕಾಮದಿಂದಲೇ ಆದ ದಾಂಪತ್ಯ ಜೀವನವನ್ನು ಅದರಿಂದ ಮೇಲೆತ್ತಿ ದಿವ್ಯಪ್ರೇಮದ ಕಡೆಗೆ ಹಾಯುವಂತೆ ನೋಡಿಕೋ. ಬರುವ ಕಷ್ಟಗಳಿಗೆ ಜೊತೆಯಾಗಿ ಈಕೆಯನ್ನೂ ಜೋಡೆತ್ತಿನಂತೆ ಕರೆದೊಯ್ಯಿ. ಈಕೆಯ ವಿಶ್ವಾಸವನ್ನು ಗಳಿಸು. ಇವತ್ತು ಬಂದ ಕಷ್ಟ ನಾಳೆಗೆ ಖಂಡಿತಾ ಇರುವುದಿಲ್ಲ. ಆದರೆ, ಒಮ್ಮೆ ತೆಗೆದುಕೊಂಡ ಸನ್ಯಾಸ ಬೇಡ ಎಂದರೆ ಸಂಸಾರಕ್ಕೆ ವಾಪಸ್ ಬರಲಿಕ್ಕಾಗಲ್ಲ' ಎಂದು ಅವನನ್ನು ಹೆಂಡತಿಯ ಜೊತೆ ಕಳಿಸಿದರಂತೆ.

ದಾಂಪತ್ಯಕ್ಕೆ ಇದಕ್ಕಿಂತ ವ್ಯಾಖ್ಯೆ ಬೇಕೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

12 ಮಾರ್ಚ್ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ನವಮಿ ಅಹೋರಾತ್ರ ನಕ್ಷತ್ರ: ಮೂಲ ಗಂ. 24-44 ಯೋಗ: ಸಿದ್ಧಿ (ಆಸ್ರಿಕ್) ಗಂ. 9-59 ಕರಣ: ತೈತಿಲ ಗಂ 17-28 ಕುಂಭ ಮಾಸದ 28 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-43 ಸೂರ್ಯಾಸ್ತ : 06-37, ಮುಸ್ಲಿಂ ದಿನಾಂಕ : 22 ರಂಜಾನ್, ಅದೃಷ್ಟ ಸಂಖ್ಯೆ : 5, 1

ಮೇಷ: ಯೋಚನೆ ಖರ್ಚಿಗೆ ದಾರಿಯಾದರೂ, ಅದರ ಫಲದಿಂದ ಸಂತೋಷವಿರುವುದು. ಆರೋಗ್ಯ ಸಧೃಢವಾಗಿ ಇರುವುದು. ವೃತ್ತಿಯಲ್ಲಿ ದಾಖಲೆ ತೋರಿಸಿ ಉತ್ತರಿಸುವ ಜಯ ಪ್ರಾಪ್ತಿ.

ವೃಷಭ: ಜೀವನದಲ್ಲಿದ್ದ ನಿರುತ್ಸಾಹ ದೂರ ಮಾಡಿಕೊಂಡು ಅವಕಾಶಗಳನ್ನು ನಿಮ್ಮದಾಗಿಸಿಕೊಳ್ಳಿರಿ. ಹಣ್ಣು ಹೂವಿನ ಮಾರಾಟಗಾರರಿಗೆ ಸಾಧಾರಣದ ಮಾರಾಟ. ಆಧ್ಯಾತ್ಮಿಕ ಮಾತುಕತೆಗಳಲ್ಲಿ ತೊಡಗುವಿರಿ.

ಮಿಥುನ: ತರಬೇತಿ ಹೊಂದಿದ ಮರದ ಕೆತ್ತನೆಯ ಕುಶಲಕರ್ಮಿಗಳಿಗೆ ಆದಾಯ ಮತ್ತು ಬೇಡಿಕೆ ಹೆಚ್ಚಲಿದೆ. ನಿವೃತ್ತಿ ಜೀವನದಲ್ಲಿ ನೆಲೆ ಕಂಡ ಸಂತೃಪ್ತಿ ಭಾವ ಮೂಡಲಿದೆ. ಸಿಬ್ಬಂದಿ ವರ್ಗದವರಿಂದ ಸಹಕಾರ ನಿರೀಕ್ಷಿಸಬೇಡಿ.

ಕರ್ಕಾಟಕ: ಮನೆಯಲ್ಲಿ ಕುಟುಂಬಸ್ಥರೆಲ್ಲಾ ಒಂದಾಗುವಂಥ ಸನ್ನಿವೇಶಗಳಿವೆ. ವಿದೇಶಿ ಸಂಸ್ಥೆಯೊಂದಿಗೆ ವ್ಯವಹಾರಿಕ ಒಪ್ಪಂದ ಮಾಡಿಕೊಳ್ಳಲು ಸೂಕ್ತ ದಿನ. ಮನಸ್ಸು ಉಲ್ಲಾಸಿತಗೊಂಡಿರುವುದು.

ಸಿಂಹ: ವಾಹನದ ಅಥವಾ ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿ ಹಣವ್ಯಯಕ್ಕೆ ಕಾರಣವಾಗುತ್ತದೆ. ಧನ ಸಂಪಾದನೆಯಿಂದ ಆತ್ಮಸ್ಥೈರ್ಯ ವೃದ್ಧಿ. ಮಾತಾ-ಪಿತೃಗಳಿಂದ ಆಸೆಗಳಿಗೆ ಪ್ರೋತ್ಸಾಹ ದೊರೆಯುತ್ತದೆ.

ಕನ್ಯಾ: ಉದಾರ ಮನೋಭಾವನೆಯ ಚಿಂತನೆಯಿಂದ ಅನುಕೂಲ ಆಗುತ್ತದೆ. ಬರಬೇಕಾದ ಹಣ ಕೈ ಸೇರಲು ಯತ್ನ ಅಗತ್ಯ. ಕಲಿಕೆಯಲ್ಲಿ ಸೋಮಾರಿತನದಿಂದ ಹಿಂದುಳಿಯುವಿರಿ.

ತುಲಾ: ಕಾರ್ಖಾನೆ ವೃತ್ತಿಯವರಿಗೆ ಲಾಭ ಇಲ್ಲವಾದರೂ, ದೈನಂದಿನ ನೆಮ್ಮದಿಗಾಗಲಿ, ಸಂತೋಷಕ್ಕಾಗಲಿ ತೊಂದರೆ ಇರಲಾರದು. ವಿದೇಶ ಪ್ರವಾಸಕ್ಕೆ ಸಂಬಂಧಿಸಿದಂತೆ ಸಂತಸಕರ ಬೆಳವಣಿಗೆಗಳು ಕಂಡುಬರಲಿವೆ.

ವೃಶ್ಚಿಕ: ಕಚೇರಿ ಕೆಲಸಗಳನ್ನು ಸಮರ್ಪಣಾ ಭಾವನೆಯಿಂದ ನಿರ್ವಹಿಸಿ. ಮನಸ್ಸಿಗೆ ಮುದ ತರುವ ಸಂಗತಿಗಳು ಜರುಗಲಿವೆ. ಹಣಕಾಸಿನ ಪರಿಸ್ಥಿತಿಗಳು ಸುಧಾರಿಸುವುದು.


ಧನು: ಅವಕಾಶಗಳು ಅರಸಿ ಬರಲಿವೆ. ವಿವೇಚನೆಯಿಂದ ಉಪಯೋಗಿಸಿಕೊಂಡಲ್ಲಿ ಅನುಕೂಲವಾಗಲಿದೆ. ಕೆಲಸವನ್ನು ಹುಡುಕುತ್ತಿರುವವರಿಗೆ ಉದ್ಯೋಗ ದೊರೆಯುವ ಸಾಧ್ಯತೆ.

ಮಕರ: ವ್ಯವಹಾರದಲ್ಲಿ ನಿಮ್ಮೊಡನೆ ಕೈ ಜೋಡಿಸಿದ್ದ ದಾಯಾದಿ ವರ್ಗದವರಿಂದ ಅಸೂಯೆಯ ಮಾತುಗಳಲ್ಲದೇ ತೊಂದರೆಗಳೂ ಆಗಬಹುದು. ಉನ್ನತ ಅಧಿಕಾರಿಗಳ ಸಂಪರ್ಕದಿಂದ ಕೆಲಸಗಳಿಗೆ ಪುಷ್ಟಿ.


ಕುಂಭ: ಅಧಿಕಾರಿಗಳ ಜತೆ ಸರಿ ಸಮಯದಲ್ಲಿ ಮುಕ್ತ ಚರ್ಚೆ ಮಾಡಿದಲ್ಲಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆದುಕೊಳ್ಳಬಹುದು. ವೈದ್ಯ ವೃತ್ತಿಯವರಿಗೆ ಹೊಸ ಅನುಭವದ ಜೊತೆಯಲ್ಲಿ ಲಾಭದ ದಿನ.

ಮೀನ: ರೇಷ್ಮೆ ವಸ್ತುಗಳ ತಯಾರಕರಿಗೆ, ಮಾರಾಟಗಾರರಿಗೆ ವ್ಯಾಪಾರವಾಗುವುದು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಪರಿಶ್ರಮಕ್ಕೆ ತಕ್ಕಂತೆ ಯಶಸ್ಸು ಸಾಧಿಸಲು ಕಷ್ಟವಾಗುವುದು. ಮನೋಕಾಮನೆಗಳು ಪೂರ್ಣಗೊಂಡಾವು.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,261
ಇಂದಿನ ಅಂತ್ಯ: 23,866
ದಿನದ ಕನಿಷ್ಠ: 23,834
394

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹470
12 ಕ್ಕೆ ₹72
ಮೈಸೂರು: 100 ಕ್ಕೆ ₹470

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹211
ಆರ್‌ಎಸ್‌ಎಸ್-5 ₹204
ಗುಡ್ ಲಾಟ್ ₹189

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹411-785
ದ್ವಿತಳಿ (ಬಿ.ವಿ) ₹366-890

ಮುದ್ರೆಮನೆ ಕಾಫಿ
ಎಪಿ ₹23200
ಎಸಿ ₹13300
ಆರ್‌ಪಿ ₹18700
ಆರ್‌ಸಿ ₹10000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1710 (1710)
ಸೋಯಾ (ರಿಫೈನ್ಡ್) ₹1430 (1400)
ಸೂರ್ಯಕಾಂತಿ (ರಿಫೈನ್ಡ್) ₹1710 (1670)
ಪಾಮೋಲಿನ್ ₹1410 (1420)

ಕಾಫಿ ವಲಯ ಸಂಕಷ್ಟಕ್ಕೆ

ಕೆ.ಎಸ್.ಗಿರೀಶ

ಮಡಿಕೇರಿ: ಅಮೆರಿಕ– ಇರಾನ್ ನಡುವಿನ ಯುದ್ಧದ ಬಿಸಿ ಇದೀಗ ಕಾಫಿ ಉದ್ಯಮಕ್ಕೂ ತಟ್ಟಲಾರಂಭಿಸಿದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆ ಹಾಗೂ ಪಶ್ಚಿಮ ಏಷ್ಯಾ ದೇಶಗಳಿಗೆ ಕಾಫಿ ರಫ್ತುನಲ್ಲಿ ವ್ಯತ್ಯಯವಾಗಿರುವುದು ಕಾಫಿ ವಲಯವನ್ನು ಸಂಕಷ್ಟಕ್ಕೆ ದೂಡಿವೆ.

ಕಾಫಿ ಹಾಗೂ ಅದನ್ನು ಅವಲಂಬಿಸಿರುವ ಕೈಗಾರಿಕೋದ್ಯಮವು ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನೇ ಅವಲಂಬಿಸಿದೆ. ಕಾಫಿ ರೋಸ್ಟಿಂಗ್ ಮಾಡಲು ಅನಿಲ ಸಿಲಿಂಡರ್‌ಗಳು ಅತ್ಯಗತ್ಯ. ಸದ್ಯ ಕೈಗಾರಿಕೆಗಳು ದಾಸ್ತಾನಿರುವ ಸಿಲಿಂಡರ್‌ಗಳನ್ನು ಬಳಸುತ್ತಿವೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ಸಿಗದಿದ್ದರೆ ಕಾಫಿ ಪುಡಿ ತಯಾರಿಕೆ ಸ್ಥಗಿತಗೊಳ್ಳಲಿದೆ.

‘ಹಡಗುಗಳ ಮೂಲಕ ಕಾಫಿ ಸಾಗಾಟದಲ್ಲಿ ವ್ಯತ್ಯಯ ಉಂಟಾಗಲಾರಂಭಿಸಿದೆ. ರಫ್ತಾಗುವ ಕಾಫಿ ಪ್ರಮಾಣವೂ ಕಡಿಮೆಯಾಗುವ ಸಾಧ್ಯತೆ ಇದೆ’ ಎಂದು ಉದ್ಯಮಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ಹಡಗು ಸಂಚಾರದ ಮೇಲೆ ಕಾಫಿ ಉದ್ಯಮ ಬಹುಪಾಲು ಅವಲಂಬಿತವಾಗಿದೆ. ಈ ಎರಡಕ್ಕೂ ವ್ಯತ್ಯಯವಾಗಿರುವುದರಿಂದ ಸಹಜವಾಗಿಯೆ ಕಾಫಿ ಮೇಲೆ ಪರಿಣಾಮ ಬೀರಲಿದೆ’ ಎಂದು ಕಾಫಿ ಮಂಡಳಿ ಅಧ್ಯಕ್ಷ ದಿನೇಶ್ ಪ್ರತಿಕ್ರಿಯಿಸಿದರು.

ಅಡಿಕೆ ಧಾರಣೆ

ಮಾರುಕಟ್ಟೆ	ವಿಧ	ದರ
ಕುಮಟಾ	ಬೆಟ್ಟೆ	38109-46229
ಕುಮಟಾ	ಚಾಲಿ	46899-49299
ಕುಮಟಾ	ಚಿಪ್ಪು	28969-36699
ಕುಮಟಾ	ಕೋಕ	15869-33339
ಕುಮಟಾ	ಫ್ಯಾಕ್ಟರಿ	10569-28629
ಕುಮಟಾ	ಹೊಸಚಾಲಿ	40999-47119
ಪುತ್ತೂರು	ಕೋಕ	20000-35000
ಪುತ್ತೂರು	ಹೊಸತು	26000-46500
ಪುತ್ತೂರು	ಹಳತು	50000-53000
ಶಿವಮೊಗ್ಗ	ಸರಕು	51600-80340
ಶಿವಮೊಗ್ಗ	ಬೆಟ್ಟೆ	51232-63099
ಶಿವಮೊಗ್ಗ	ರಾಶಿ	44199-55299
ಶಿವಮೊಗ್ಗ	ಗೊರಬಲು	19040-38211
ಸಿದ್ದಾಪುರ	ಬಿಳಿಗೋಟು	27699-36599
ಸಿದ್ದಾಪುರ	ಚಾಲಿ	41319-47099
ಸಿದ್ದಾಪುರ	ಕೋಕ	23500-34399
ಸಿದ್ದಾಪುರ	ಕೆಂಪುಗೋಟು	28099-33609
ಸಿದ್ದಾಪುರ	ರಾಶಿ	48899-53099
ಸಿದ್ದಾಪುರ	ತಟ್ಟಬೆಟ್ಟೆ	36289-40899
ಶಿರಸಿ	ಬೆಟ್ಟೆ	40108-51699
ಶಿರಸಿ	ಬಿಳಿಗೋಟು	28099-42199
ಶಿರಸಿ	ಚಾಲಿ	42299-48099
ಶಿರಸಿ	ಕೆಂಪುಗೋಟು	26811-38698
ಶಿರಸಿ	ರಾಶಿ	50018-53699

‘ಎಲ್‌ಪಿಜಿ ಸಿಗುತ್ತದೆ, ಭೀತಿ ಬೇಡ’

ಎಂದಿನಂತೆ ಎರಡೂವರೆ ದಿನಗಳಲ್ಲಿ ಎಲ್‌ಪಿಜಿ ಸಿಲಿಂಡರ್ ಪೂರೈಕೆ: ಕೇಂದ್ರ



ಮುಖ್ಯಾಂಶಗಳು

- ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ವ್ಯವಸ್ಥೆಗೆ ಧಕ್ಕೆ ಆಗಿಲ್ಲ
- ಸರ್ಕಾರದ ಕ್ರಮಗಳಿಂದ ಎಲ್‌ಪಿಜಿ ಉತ್ಪಾದನೆಯಲ್ಲಿ ಶೇ 25ರಷ್ಟು ಹೆಚ್ಚಳ
- ಹೊರ್ಮುಜ್ ಜಲಸಂಧಿ ಬಳಸದ ಮೂಲಗಳಿಂದ ಕಚ್ಚಾ ತೈಲ ಆಮದು

ನವದೆಹಲಿ (ಪಿಟಿಐ): ಜನರು ಭೀತಿಗೆ ಒಳಗಾಗಿ ಎಲ್‌ಪಿಜಿ ಸಿಲಿಂಡರ್ ಖರೀದಿಸಲು ಮುಂದಾಗುವ ಅಗತ್ಯವಿಲ್ಲ, ಎಂದಿನಂತೆ ಎರಡೂವರೆ ದಿನಗಳಲ್ಲಿ ಎಲ್‌ಪಿಜಿ ಸಿಲಿಂಡರ್ ಪೂರೈಸುವ ಕೆಲಸ ನಡೆದಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮ ಹೇಳಿದ್ದಾರೆ.

ಭಾರತಕ್ಕೆ ಕಚ್ಚಾ ತೈಲ ಪೂರೈಕೆ ಮಾಡುವ ವ್ಯವಸ್ಥೆಗೆ ಧಕ್ಕೆ ಆಗಿಲ್ಲ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಕಚ್ಚಾ ತೈಲವನ್ನು ಹೊರ್ಮುಜ್ ಜಲಸಂಧಿ ಬಳಸದ ಮೂಲಗಳಿಂದ ತರಿಸಿಕೊಳ್ಳಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಸರ್ಕಾರ ಕೈಗೊಂಡ ಕ್ರಮಗಳ ಪರಿಣಾಮವಾಗಿ ಎಲ್‌ಪಿಜಿ ಉತ್ಪಾದನೆಯಲ್ಲಿ ಶೇ 25ರಷ್ಟು ಹೆಚ್ಚಳ ಆಗಿದೆ ಎಂದು ಸಚಿವಾಲಯ ಹೇಳಿದೆ.

‘ತಪ್ಪು ಮಾಹಿತಿಯ ಕಾರಣದಿಂದಾಗಿ ಕೆಲವರು ಭೀತಿಗೆ ಒಳಗಾಗಿ ಎಲ್‌ಪಿಜಿ ಸಿಲಿಂಡರ್ ಖರೀದಿಗೆ ಮುಂದಾಗಿದ್ದಾರೆ ಎಂಬುದು ಗೊತ್ತಾಗಿದೆ. ಆದರೆ ಗ್ರಾಹಕರು ಭೀತಿಗೆ ಒಳಗಾಗಿ ಸಿಲಿಂಡರ್ ಬುಕ್ ಮಾಡಬೇಕಾದ ಪರಿಸ್ಥಿತಿ ಇಲ್ಲ’ ಎಂದು ಸುಜಾತಾ ಅವರು ಹೇಳಿದ್ದಾರೆ.

ಎಲ್‌ಪಿಜಿ ಸಿಲಿಂಡರ್ ಅಕ್ರಮ ಸಂಗ್ರಹ ಹಾಗೂ ಅವುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿದೆ ಎಂದು ಸಚಿವಾಲಯವು ತಿಳಿಸಿದೆ. ಭಾರತವು ಸರಿಸುಮಾರು 40 ದೇಶಗಳಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ.

‘ನಮಗೆ ಪ್ರತಿದಿನ 55 ಲಕ್ಷ ಬ್ಯಾರಲ್ ಕಚ್ಚಾ ತೈಲ ಬೇಕು. ವಿವಿಧ ಮೂಲಗಳಿಂದ ನಾವು ಇಂದು ಪಡೆದಿರುವ ಕಚ್ಚಾ ತೈಲವು, ಇದೇ ಅವಧಿಯಲ್ಲಿ ಹೊರ್ಮುಜ್ ಜಲಸಂಧಿಯ ಮೂಲಕ ಬರಬಹುದಾಗಿದ್ದ ಕಚ್ಚಾ ತೈಲದ ಪ್ರಮಾಣಕ್ಕಿಂತ ಹೆಚ್ಚಿದೆ’ ಎಂದು ಕೂಡ ಸುಜಾತಾ ಅವರು ಮಾಹಿತಿ ನೀಡಿದ್ದಾರೆ.

ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಬೇರೆ ಬೇರೆ ಕಡೆಗಳಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿವೆ. ಹೀಗಾಗಿ, ಈಗ ಶೇ 70ರಷ್ಟು ಕಚ್ಚಾ ತೈಲ ಆಮದಿಗೆ ಹೊರ್ಮುಜ್ ಜಲಸಂಧಿಯನ್ನು ಬಳಸಬೇಕಾದ ಅಗತ್ಯ ಇಲ್ಲ ಎಂದು ಅವರು ತಿಳಿಸಿದ್ದಾರೆ.

ಎಲ್‌ಎನ್‌ಜಿ ಹೊತ್ತ ಎರಡು ಹಡಗುಗಳು ಕೆಲವೇ ದಿನಗಳಲ್ಲಿ ಭಾರತ ತಲುಪಲಿವೆ, ಆಗ ದೇಶದಲ್ಲಿ ಇಂಧನ ಪೂರೈಕೆಯು ಇನ್ನಷ್ಟು ಸುಧಾರಿಸಲಿದೆ ಎಂದು ಹೇಳಿದ್ದಾರೆ.

ಅಮೆರಿಕದಲ್ಲಿ ನಿರ್ಮಿತವಾಗಲಿದೆ ಬೃಹತ್ ತೈಲ ಸಂಸ್ಕರಣಾ ಘಟಕ

ತೈಲ ಸಂಸ್ಕರಣೆ: ರಿಲಯನ್ಸ್ ಹೂಡಿಕೆ



ಮುಕೇಶ್ ಅಂಬಾನಿ

ವಾಷಿಂಗ್ಟನ್/ ನವದೆಹಲಿ (ಪಿಟಿಐ): ‘50 ವರ್ಷಗಳ ಬಳಿಕ ಅಮೆರಿಕದಲ್ಲಿ ಹೊಸ ತೈಲ ಸಂಸ್ಕರಣಾ ಘಟಕ ನಿರ್ಮಾಣಗೊಳ್ಳಲಿದ್ದು, ಭಾರತದ ಉದ್ಯಮಿ ಮುಕೇಶ್ ಅಂಬಾನಿ ಅವರು ಪಾಲುದಾರಿಕೆ ಹೊಂದಲಿದ್ದಾರೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

‘ಅಮೆರಿಕದ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡದು’ ಎಂದು ಈ ವೇಳೆ ತಿಳಿಸಿದ್ದಾರೆ.

ಅಮೆರಿಕದ ಟೆಕ್ಸಾಸ್ ರಾಜ್ಯದ ಬ್ರೌನ್ಸ್‌ವಿಲ್ಲೆಯಲ್ಲಿ ಈ ಘಟಕ ನಿರ್ಮಾಣವಾಗಲಿದ್ದು, ಅಮೆರಿಕದ ಶೆಲ್ ಆಯಿಲ್ ನಿರ್ವಹಣಾ ವ್ಯವಸ್ಥೆಯ ರೀತಿಯಲ್ಲಿ ವಿನ್ಯಾಸ ಮಾಡಲಾಗುವುದು ಎಂದು ಈ ಯೋಜನೆಯನ್ನು ಪ್ರಾಯೋಗಿಕವಾಗಿ ನಿರ್ವಹಿಸುತ್ತಿರುವ ಅಮೆರಿಕ ಫಸ್ಟ್ ರಿಫೈನಿಂಗ್ (ಎಎಫ್‌ಆರ್) ತಿಳಿಸಿದೆ.

ಇಲ್ಲಿ ತಯಾರಾಗುವ ತೈಲವನ್ನು 20 ವರ್ಷಗಳ ಅವಧಿಗೆ ಖರೀದಿಸಲು ಸಹಿ ಹಾಕಲಾಗಿದ್ದು, ಈ ವರ್ಷದ ಎರಡನೇ ಅವಧಿಯಲ್ಲಿ ಶಿಲಾನ್ಯಾಸ ನಡೆಸಲು ನಿರ್ಧರಿಸಲಾಗಿದೆ.

‘ರಿಲಯನ್ಸ್ ಪಾಲುದಾರಿಕೆಯಲ್ಲಿ ಈ ಯೋಜನೆಯು ಆರಂಭಗೊಳ್ಳಲಿದೆ. 300 ಬಿಲಿಯನ್ ಡಾಲರ್ ಹೂಡಿಕೆಯ ಐತಿಹಾಸಿಕ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. 10 ಅಂಕಿಯ ಮೌಲ್ಯ ಹೊಂದಿರುವ ಜಾಗತಿಕ ಸಂಸ್ಥೆಯೊಂದರಿಂದ 9 ಅಂಕಿಯ ಹೂಡಿಕೆ ಆಗಲಿದೆ’ ಎಂದು ಡೊನಾಲ್ಡ್ ಟ್ರಂಪ್ ಅವರು ‘ಟ್ರೂತ್ ಸೋಷಿಯಲ್’ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ಒಪ್ಪಂದದ ಕುರಿತಂತೆ ರಿಲಯನ್ಸ್ ಸಂಸ್ಥೆಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ರಿಲಯನ್ಸ್ ಸಂಸ್ಥೆಯು ಗುಜರಾತ್‌ನ ಜಾಮನಗರದಲ್ಲಿ ವಿಶ್ವದ ಅತಿ ದೊಡ್ಡ ತೈಲ ಸಂಸ್ಕರಣಾ ಘಟಕವನ್ನು ಹೊಂದಿದೆ. ಇಲ್ಲಿ ದಿನವೊಂದಕ್ಕೆ 12.40 ಲಕ್ಷ ಬ್ಯಾರಲ್‌ಗಳಷ್ಟು ತೈಲ ಸಂಸ್ಕರಣೆ ಮಾಡಲಾಗುತ್ತಿದೆ. ಇದೀಗ ಅಮೆರಿಕದಲ್ಲಿ ಬೃಹತ್ ತೈಲ ಸಂಸ್ಕರಣಾ ಘಟಕದ ನಿರ್ಮಾಣಕ್ಕೆ ಕೈಹಾಕಿದೆ.

ಒಂದೊಮ್ಮೆ ಈ ಘಟಕವು ಪೂರ್ಣಗೊಂಡರೆ, 1977ರಲ್ಲಿ ಲೂಸಿಯಾನದ ಮ್ಯಾರಾಥಾನ್ ಗ್ಯಾರಿವಿಲ್ಲೆಯಲ್ಲಿ ನಿರ್ಮಿತವಾಗಿದ್ದ ಅತಿ ದೊಡ್ಡ ತೈಲ ಸಂಸ್ಕರಣಾ ನಂತರದಲ್ಲಿ ತಲೆ ಎತ್ತಲಿರುವ ಬೃಹತ್ ಘಟಕ ಎಂಬ ಹೆಗ್ಗಳಿಕೆಗೂ ಪಾತ್ರವಾಗಲಿದೆ. ಯೋಜನೆ ಮುಗಿಯುವ ಅವಧಿಯ ಬಗ್ಗೆ ಟ್ರಂಪ್ ಅಥವಾ ಎಎಫ್‌ಆರ್ ಸಂಸ್ಥೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಉದ್ಯಮ ತಜ್ಞರ ಪ್ರಕಾರ, ಈ ಯೋಜನೆ ಪೂರ್ಣಗೊಳಿಸಲು 4ರಿಂದ 5 ಬಿಲಿಯನ್ ಡಾಲರ್ ವೆಚ್ಚವಾಗಲಿದೆ ಎಂದು ಊಹಿಸಲಾಗಿದೆ.

ಅಮೆರಿಕವು ಪ್ರಸಕ್ತ 132 ತೈಲ ಸಂಸ್ಕರಣಾ ಘಟಕಗಳನ್ನು ಹೊಂದಿದ್ದು, ದಿನವೊಂದಕ್ಕೆ 18.4 ಮಿಲಿಯನ್ ಬ್ಯಾರೆಲ್‌ಗಳನ್ನು ಸಂಸ್ಕರಣೆ ಮಾಡುವ ಸಾಮರ್ಥ್ಯ ಹೊಂದಿದೆ ಎಂದು ಅಮೆರಿಕದ ಇಂಧನ ಆಡಳಿತ ವಿಭಾಗವು ತಿಳಿಸಿದೆ. ಈಗಿರುವ ಬಹುತೇಕ ಘಟಕಗಳು ದಶಕಗಳ ಹಿಂದೆ ನಿರ್ಮಿಸಿದ್ದು, ನಿರ್ವಹಣಾ ವೆಚ್ಚವೂ ದುಬಾರಿಯಾಗಿದೆ.

ಮುಂಬೈ ಧಾರಣೆ (ಶೇಂಗಾ)

11-03-2026

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1720 (1720)
ಒಂದು ವಾರದ ಡೆಲಿವರಿ	1715 (1715)
ಪಾಮ್ ವಾರದ ಡೆಲಿವರಿ	1408 (1418)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1570)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,59,500 (1,60,800)
ಬೆಳ್ಳಿ ಕೆ.ಜಿಗೆ	2,63,000 (2,73,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ನಾವಿಕರ ಮೃತದೇಹ ಹಸ್ತಾಂತರಕ್ಕೆ ಆದೇಶ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ಇರಾನ್ ಹಡಗಿನ ಮೇಲೆ ಅಮೆರಿಕ ನಡೆಸಿದ ದಾಳಿಯಲ್ಲಿ ಮೃತಪಟ್ಟ 84 ನಾವಿಕರ ಮೃತದೇಹಗಳನ್ನು ಇರಾನ್ ರಾಯಭಾರ ಕಚೇರಿಗೆ ಹಸ್ತಾಂತರಿಸುವಂತೆ ಶ್ರೀಲಂಕಾದ ನ್ಯಾಯಾಲಯ ಬುಧವಾರ ಆದೇಶಿಸಿದೆ.

ಗಾಲೆ ಮುಖ್ಯ ಮ್ಯಾಜಿಸ್ಟ್ರೇಟ್ ಸಮೀರಾ ದೊಡಂಗೊಡ ಅವರು, ಇರಾನ್ ರಾಯಭಾರ ಕಚೇರಿಗೆ ಶವಗಳನ್ನು ಹಸ್ತಾಂತರಿಸಬೇಕು ಎಂದು ಆಸ್ಪತ್ರೆಯ ನಿರ್ದೇಶಕರಿಗೆ ಆದೇಶಿಸಿದ್ದಾರೆ.

ಗಾಲೆ ಬಂದರು ಪೊಲೀಸರ ಮನವಿ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ. ಪ್ರಸ್ತುತ, ಮೃತದೇಹಗಳನ್ನು ಗಾಲೆ ರಾಷ್ಟ್ರೀಯ ಆಸ್ಪತ್ರೆಯ ಎರಡು ಶವ ಸಂರಕ್ಷಣಾ ಶೈತ್ಯಾಗಾರಗಳಲ್ಲಿ ಇಡಲಾಗಿದೆ. ಗಾಲೆಯಲ್ಲಿ ಅಮೆರಿಕದ ಜಲಾಂತರ್ಗಾಮಿ ದಾಳಿಯಿಂದ ಇರಾನಿನ ಯುದ್ಧನೌಕೆ ‘ಐರೀಸ್ ಡೆನಾ’ ಮುಳುಗಿತ್ತು. ಅದರಲ್ಲಿದ್ದ ಇರಾನಿನ 84 ನಾವಿಕರ ಮೃತದೇಹವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಶ್ರೀಲಂಕಾ ಕಳೆದ ಬುಧವಾರ ತಿಳಿಸಿತ್ತು.

‘ಕರಡಿ ಹಿಡಿತ’ದಿಂದ ಪಾರಾಗದ ಷೇರುಪೇಟೆ

ಮುಂಬೈ (ಪಿಟಿಐ): ಮಂಗಳವಾರ ಒಂದು ದಿನದ ಮಟ್ಟಿಗೆ ಧನಾತ್ಮಕ ವಹಿವಾಟು ದಾಖಲಿಸಿದ್ದ ಸೆನ್ಸೆಕ್ಸ್ ಮತ್ತು ನಿಫ್ಟಿ ಬುಧವಾರದ ವಹಿವಾಟಿನಲ್ಲಿ ಮತ್ತೆ ತೀವ್ರ ಕುಸಿತ ಕಂಡವು. ಪಶ್ಚಿಮ ಏಷ್ಯಾದಲ್ಲಿನ ಸಮರವು ಹೂಡಿಕೆದಾರರನ್ನು ಭೀತಿಗೆ ನೂಕಿದೆ.

ಬುಧವಾರದ ವಹಿವಾಟಿನಲ್ಲಿ ದೇಶದ ಹೂಡಿಕೆದಾರರ ಸಂಪತ್ತಿನ ಮೌಲ್ಯ ಒಟ್ಟು ₹5.14 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ.

ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಹೆಚ್ಚಿನ ಗಮನ ನೀಡಿರುವುದು, ಬ್ಯಾಂಕಿಂಗ್ ವಲಯದ ಬ್ಲೂಚಿಪ್ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದುದು ಕೂಡ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರ 1,342 ಅಂಶ ಕುಸಿದೆ. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 394 ಅಂಶ ಇಳಿಕೆ ಕಂಡಿದೆ.

‘ಪಶ್ಚಿಮ ಏಷ್ಯಾದಲ್ಲಿನ ಸಮರವು ಅಸ್ಥಿರತೆಯನ್ನು ಹೆಚ್ಚು ಮಾಡಿದೆ. ಕಚ್ಚಾ ತೈಲದ ಪೂರೈಕೆಯಲ್ಲಿ ಆಗಬಹುದಾದ ಸಮಸ್ಯೆ, ಹಣದುಬ್ಬರ ಹೆಚ್ಚಳದ ಭೀತಿ, ಆರ್ಥಿಕ ಬೆಳವಣಿಗೆಯ ಮೇಲೆ ಆಗಬಹುದಾದ ಪರಿಣಾಮವು ಹೂಡಿಕೆದಾರರ ಮೇಲೆ ಪ್ರಭಾವ ಬೀರಿವೆ’ ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 5.76ರಷ್ಟು ಏರಿಕೆ ಕಂಡು ಬ್ಯಾರಲ್ ಒಂದಕ್ಕೆ 92.86 ಅಮೆರಿಕನ್ ಡಾಲರ್‌ಗೆ ತಲುಪಿದೆ.

‘ಹೊರ್ಮುಜ್ ಮುಚ್ಚಿದರೆ ಏಷ್ಯಾ ದೇಶಗಳಿಗೇ ಹೆಚ್ಚು ಹೊಡೆತ’

ವಿಶ್ವ ಸಂಸ್ಥೆ (ಪಿಟಿಐ): ‘ಒಂದು ವೇಳೆ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದರೆ ಆಹಾರ ಪದಾರ್ಥಗಳು, ಜೀವನ ನಿರ್ವಹಣಾ ವೆಚ್ಚವು ಏರಿಕೆಯಾಗಲಿದೆ. ಜೊತೆಗೆ, ಇಂಧನ ಪೂರೈಕೆಗೆ ಸಂಬಂಧಿಸಿ ಏಷ್ಯಾದ ದೇಶಗಳೇ ಹೆಚ್ಚಿನ ಸಂಕಷ್ಟಕ್ಕೆ ಒಳಗಾಗುತ್ತವೆ’ ಎಂದು ವ್ಯಾಪಾರ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿಶ್ವ ಸಂಸ್ಥೆಯ ಅಂಗಸಂಸ್ಥೆಯು ಎನ್‌ಸಿಟಿಎಡಿ ಎಚ್ಚರಿಕೆ ನೀಡಿದೆ.

ಜಲಸಂಧಿ ಮುಚ್ಚುವುದರಿಂದ ಜಗತ್ತಿನ ವ್ಯಾಪಾರ ಮತ್ತು ಅಭಿವೃದ್ಧಿಯ ಮೇಲಾಗುವ ಪರಿಣಾಮಗಳ ಕುರಿತು ಯುಎನ್‌ಸಿಟಿಎಡಿ ಮಂಗಳವಾರ ವರದಿ ಬಿಡುಗಡೆ ಮಾಡಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರ ವಕ್ತಾರ ಸ್ಟೀಫನ್ ಡುಜಾರಿಕ್ ಅವರು ಇದೇ ದಿನ ಮಾಧ್ಯಮಗೋಷ್ಠಿ ನಡೆಸಿ ವರದಿಯನ್ನು ವಿವರಿಸಿದರು.

‘ಪರಿಣಾಮಗಳು ದೀರ್ಘಾವಧಿಯದ್ದಾಗಿರುತ್ತವೆ. ತೈಲ ಬೆಲೆ ಏರಿಕೆಯಾದರೆ, ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗುತ್ತದೆ. ಅಡುಗೆ ಅನಿಲ ಬೆಲೆ ಏರಿಕೆಯಾದರೆ, ರಸಗೊಬ್ಬರಗಳ ಬೆಲೆಯೂ ಏರಿಕೆಯಾಗುತ್ತದೆ’ ಎಂದು ಹೇಳಿದರು.

‘ಏಷ್ಯಾದ ದೇಶಗಳು ಮಾತ್ರವಲ್ಲ ಇಡೀ ಜಗತ್ತಿನ ಪೂರೈಕೆ ಸರಪಳಿ ಮೇಲೆಯೇ ತೀವ್ರ ಪರಿಣಾಮ ಉಂಟಾಗಲಿದೆ. ಸರಕು ಸಾಗಾಟ ದರ, ಹಡಗಿನಲ್ಲಿ ಬಳಸುವ ಇಂಧನ ಮತ್ತು ವಿಮೆ ಕಂತುಗಳು ಅಲ್ಲದೆ ಇಂಧನ, ರಸಗೊಬ್ಬರ ಮತ್ತು ಸಂಚಾರದ ವೆಚ್ಚ ಏರಿಯಾದರೆ, ಜನರ ಜೀವನ ನಿರ್ವಹಣಾ ವೆಚ್ಚ ಅಧಿಕವಾಗಲಿದೆ. ಇದರಿಂದ ಸಮಾಜದ ದುರ್ಬಲ ಜನರು ಹೆಚ್ಚು ಸಂಕಷ್ಟಕ್ಕೆ ಒಳಗಾಗುತ್ತಾರೆ’ ಎಂದರು.

‘ಯುದ್ಧ ಶೀಘ್ರ ಅಂತ್ಯ’

ವಾಷಿಂಗ್ಟನ್ (ಎಎಫ್‌ಪಿ): ಇರಾನ್ ಮೇಲೆ ನಡೆಸುತ್ತಿರುವ ಯುದ್ಧವು ಶೀಘ್ರವೇ ಕೊನೆಗೊಳ್ಳುವ ಸಾಧ್ಯತೆಯಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ತಿಳಿಸಿದ್ದಾರೆ.

‘ನಾವು ಅಲ್ಲಿ ಗುರಿಯಿಡಲು ಇನ್ನೇನೂ ಉಳಿದಿಲ್ಲ. ಹೀಗಾಗಿ ಯುದ್ಧವು ಶೀಘ್ರದಲ್ಲಿಯೇ ಮುಕ್ತಾಯವಾಗಲಿದೆ’ ಎಂದು ಅವರು ‘ಆ್ಯಕ್ಸಿಯಸ್’ ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

‘ನಾನು ಯುದ್ಧವನ್ನು ಕೊನೆಗೊಳಿಸಬೇಕು ಎಂದು ಬಯಸಿದರೆ, ಅದು ಯಾವಾಗ ಬೇಕಾದರೂ ಕೊನೆಗೊಳ್ಳುತ್ತದೆ’ ಎಂದು ಅವರು ಪುನರುಚ್ಚರಿಸಿದ್ದಾರೆ.

ಸುಡಾನ್: ಡ್ರೋನ್ ದಾಳಿ, 17 ಸಾವು

ಕೈರೊ (ಎಪಿ): ದಕ್ಷಿಣ ಸುಡಾನ್‌ನಲ್ಲಿ ಶಾಲೆ ಮತ್ತು ಆರೋಗ್ಯಕೇಂದ್ರವೊಂದರ ಮೇಲೆ ಬುಧವಾರ ನಡೆದ ಡ್ರೋನ್ ದಾಳಿಯಲ್ಲಿ ಹಲವು ಬಾಲಕಿಯರು ಸೇರಿದಂತೆ 17 ಮಂದಿ ಮೃತಪಟ್ಟಿದ್ದಾರೆ.

ದಾಳಿ ಮಾಡಿದ ಕ್ಷಿಪಣಿಗಳು ಸುಡಾನ್ ಸೇನಾ ಪಡೆಗೆ ಸೇರಿದ್ದು ಎಂಬ ಬಗ್ಗೆ ಶಂಕೆ ವ್ಯಕ್ತವಾಗಿದೆ. ಘಟನೆಯಲ್ಲಿ 10 ಮಂದಿ ಗಾಯಗೊಂಡಿದ್ದಾರೆ.

ಸುದ್ದಿ 2 ನಿಮಿಷ

ಗರಿಷ್ಠ ಮಟ್ಟದಲ್ಲಿ ಎಲ್‌ಪಿಜಿ ಉತ್ಪಾದನೆ: ರಿಲಯನ್ಸ್

ಬೆಂಗಳೂರು: ಗುಜರಾತ್‌ನ ಜಾಮ್‌ನಗರದಲ್ಲಿ ಇರುವ ತನ್ನ ತೈಲ ಸಂಸ್ಕರಣಾ ಘಟಕ ಮತ್ತು ಪೆಟ್ರೊರಾಸಾಯನಿಕಗಳ ಘಟಕದಲ್ಲಿ ಎಲ್‌ಪಿಜಿ ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ತರಲು ರಿಲಯನ್ಸ್ ಇಂಡಸ್ಟ್ರೀಸ್ ಮುಂದಾಗಿದೆ.

ಜಾಮ್‌ನಗರದಲ್ಲಿ ಇರುವುದು ಜಗತ್ತಿನ ಅತಿದೊಡ್ಡ ತೈಲ ಸಂಸ್ಕರಣಾ ಘಟಕವಾಗಿದೆ. ಕೆಜಿ–ಡಿ6 ಬ್ಲಾಕ್‌ನಲ್ಲಿ ಉತ್ಪಾದನೆಯಾಗುವ ನೈಸರ್ಗಿಕ ಅನಿಲವನ್ನು ದೇಶದ ಆದ್ಯತಾ ವಲಯಗಳಿಗೆ ಸರಬರಾಜು ಮಾಡಲಾಗುವುದು ಎಂದು ಕಂಪನಿಯು ಪ್ರಕಟಣೆಯಲ್ಲಿ ಬುಧವಾರ ತಿಳಿಸಿದೆ.

ಎಲ್‌ಪಿಜಿ, ಸಿಎನ್‌ಜಿ, ಕೊಳವೆ ಮೂಲಕ ಮನೆಗಳಿಗೆ ರವಾನಿಸುವ ಅಡುಗೆ ಅನಿಲ (ಪಿಎನ್‌ಜಿ) ಆದ್ಯತಾ ವಲಯಗಳು ಎಂದು ಕೇಂದ್ರ ಸರ್ಕಾರ ಸೋಮವಾರ ಹೊರಡಿಸಿರುವ ಅಧಿಸೂಚನೆಯಲ್ಲಿ ಹೇಳಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆಯಲ್ಲಿ ಏರಿಳಿತವಿದ್ದರೂ, ದೇಶದ ಕುಟುಂಬಗಳಿಗೆ ಅಡೆಚಣೆಯಿಲ್ಲದೆ ಇಂಧನ ಪೂರೈಕೆ ಮಾಡುವುದು ತನ್ನ ಪ್ರಮುಖ ಗುರಿ ಆಗಿದೆ ಎಂದು ರಿಲಯನ್ಸ್ ಪ್ರಕಟಣೆಯಲ್ಲಿ ತಿಳಿಸಿದೆ.

ರಾಷ್ಟ್ರೀಯ ಇಂಧನ ನೀತಿ ಮತ್ತು ಸರ್ಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ದೇಶದ ಇಂಧನ ಭದ್ರತೆಗೆ ಮೊದಲ ಆದ್ಯತೆ ನೀಡುವುದಾಗಿ ಕಂಪನಿ ತಿಳಿಸಿದೆ.

Reliance

ಪಿಎಂ–ಕಿಸಾನ್ ಕೆವೈಸಿ ಪೂರ್ಣಗೊಳಿಸಲು ಸೂಚನೆ

ನವದೆಹಲಿ (ಪಿಟಿಐ): ರೈತರು ಪಿಎಂ–ಕಿಸಾನ್ ಪೋರ್ಟಲ್‌ನಲ್ಲಿರುವ ತಮ್ಮ ವಿವರಗಳನ್ನು ಪರಿಶೀಲಿಸಬೇಕು, ಇ–ಕೆವೈಸಿ ಕೆಲಸಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ. ಪಿಎಂ–ಕಿಸಾನ್ ಯೋಜನೆಯ 22ನೆಯ ಕಂತಿನ ಹಣವನ್ನು ಕೇಂದ್ರ ಸರ್ಕಾರವು ಶುಕ್ರವಾರ ಬಿಡುಗಡೆ ಮಾಡಲಿದೆ.

ಅಸ್ಸಾಂನ ಗುವಾಹಟಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪಿಎಂ–ಕಿಸಾನ್ ಯೋಜನೆಯ ಮೊತ್ತವನ್ನು 9.32 ಕೋಟಿ ರೈತರಿಗೆ ವರ್ಗಾವಣೆ ಮಾಡಲಿದ್ದಾರೆ.

‘ಅಗತ್ಯ ಕಂಡುಬಂದರೆ ಇ–ಕೆವೈಸಿ ಕೆಲಸವನ್ನು ಆದಷ್ಟು ಬೇಗ ಪೂರ್ಣಗೊಳಿಸಿ. ಆಗ, 22ನೆಯ ಕಂತಿನ ಹಣವು ರೈತರ ಖಾತೆಗೆ ಸರಿಯಾದ ಸಮಯಕ್ಕೆ ಜಮಾ ಆಗುತ್ತದೆ’ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಹೇಳಿದ್ದಾರೆ.

ಅರ್ಹರಿಗೆ ನೆರವು ಒದಗಿಸುವ ಉದ್ದೇಶದಿಂದ ‘ನಿಮ್ಮ ಸ್ಥಿತಿ ತಿಳಿಯಿರಿ’ (Know Your Status–KYS) ಸೌಲಭ್ಯವನ್ನು ಪೋರ್ಟಲ್‌ನಲ್ಲಿ ನೀಡಲಾಗಿದೆ. ಇದರ ಮೂಲಕ ಪಾವತಿ ಸ್ಥಿತಿ, ಅರ್ಹತೆ, ಆಧಾರ್ ಜೋಡಣೆ ಮತ್ತು ಇ–ಕೆವೈಸಿ ಸ್ಥಿತಿಯನ್ನು ತಿಳಿಯಬಹುದು.

ರೈತರು ಇ–ಕೆವೈಸಿ ಪ್ರಕ್ರಿಯೆಯನ್ನು ಮನೆಗಳಿಂದಲೇ ಪೂರ್ಣಗೊಳಿಸಲು ಅವಕಾಶ ಕಲ್ಪಿಸುವ ಆ್ಯಪ್ ಒಂದನ್ನು ಕೂಡ ಕೇಂದ್ರವು ಬಿಡುಗಡೆ ಮಾಡಿದೆ.

‘ತೈಲ ಖರೀದಿಸಬೇಡಿ ಎಂಬ ಸೂಚನೆ ಪಾಲಿಸಿದ ಭಾರತ’



ಕೆರೋಲಿನ್ ಲೀವಿಟ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ‘ಇರಾನ್ ಜೊತೆಗಿನ ಸಂಘರ್ಷದ ಕಾರಣ ಇಂಧನ ಪೂರೈಕೆಯು ಸುಗಮವಾಗಬೇಕು ಎಂಬುದು ನಮ್ಮ ಉದ್ದೇಶ. ರಷ್ಯಾದಿಂದ ತೈಲ ಖರೀದಿಸಬೇಡಿ ಎಂದು ಭಾರತಕ್ಕೆ ನಾವು ಹೇಳಿದ್ದೆವು. ಅದನ್ನು ಅವರು ಪಾಲಿಸಿದ್ದರು. ಆದ್ದರಿಂದಲೇ ಅದಕ್ಕೆ ನಾವು ರಷ್ಯಾದಿಂದ ತೈಲ ಖರೀದಿಸಲು ಅನುಮತಿ ನೀಡಿದ್ದೇವೆ’ ಎಂದು ಶ್ವೇತಭವನ ಹೇಳಿದೆ.

ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೋಲಿನ್ ಲೀವಿಟ್ ಮಂಗಳವಾರ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ‘ರಷ್ಯಾದ ತೈಲ ತುಂಬಿದ ಹಡಗುಗಳು ಈಗಾಗಲೇ ಸಮುದ್ರದಲ್ಲಿರುವುದರಿಂದ ಈ ತೈಲವನ್ನು ಪಡೆದುಕೊಳ್ಳಲು ಭಾರತದಲ್ಲಿರುವ ನಮ್ಮ ಮಿತ್ರರಿಗೆ ತಾತ್ಕಾಲಿಕವಾದ ಅನುಮತಿ ನೀಡಿದ್ದೇವೆ. ಈ ತೈಲವನ್ನು ಭಾರತವು ಸ್ವೀಕರಿಸುವುದರಿಂದ ರಷ್ಯಾಕ್ಕೂ ಭಾರಿ ಹಣಕಾಸಿನ ಲಾಭ ಆಗದು’ ಎಂದರು.

‘ಹೊರ್ಮುಜ್ ಜಲಸಂಧಿಯ ಮೂಲಕ ತೈಲ ಸಾಗಣೆ ಆಗದಿರುವುದರಿಂದ ತೈಲ ದರದಲ್ಲಿ ಏರಿಕೆಯಾಗಿದೆ. ಈ ಎಲ್ಲವನ್ನೂ ನಿರ್ವಹಿಸಲು ನಾವು ಭಾರತಕ್ಕೆ ಅಲ್ಪಾವಧಿ ಅವಕಾಶ ನೀಡಿದ್ದೇವೆ. ತೈಲ ತುಂಬಿದ ಹಡಗುಗಳು ರಷ್ಯಾದಿಂದ ಈಗಾಗಲೇ ಹೊರಟು ಸಮುದ್ರದಲ್ಲಿ ಹಾಗೆಯೇ ನಿಂತಿವೆ. ಚೀನಾ ಇವುಗಳನ್ನು ದಾಸ್ತಾನು ಮಾಡಿಕೊಳ್ಳುತ್ತದೆ. ಆದ್ದರಿಂದ, ನಿಮ್ಮ ತೈಲ ಸಂಸ್ಕರಣಾ ಘಟಕಗಳಿಗೆ ಇವನ್ನು ತುಂಬಿಕೊಳ್ಳಿ ಎಂದು ನಮ್ಮ ಸ್ನೇಹಿತ ಭಾರತಕ್ಕೆ ಹೇಳಿದ್ದೇವೆ’ ಎಂದು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಮೋದಿಗೆ ಶರಣಾಗತಿ ಪ್ರಮಾಣಪತ್ರ; ಕಾಂಗ್ರೆಸ್ ಕಿಡಿ

ನವದೆಹಲಿ (ಪಿಟಿಐ): ‘ರಷ್ಯಾದಿಂದ ಕಚ್ಚಾತೈಲ ಖರೀದಿಸಲು ಭಾರತಕ್ಕೆ ತಾತ್ಕಾಲಿಕ ಅನುಮತಿ ನೀಡಲಾಗಿದೆ’ ಎಂಬ ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕೆರೋಲಿನ್ ಲೀವಿಟ್ ಹೇಳಿಕೆ ಬೆನ್ನಲ್ಲೇ, ಬಿಜೆಪಿ ನೇತೃತ್ವದ ಕೇಂದ್ರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.


‘ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಬಳಿಕ ಟ್ರಂಪ್ ಅವರ ಮಾಧ್ಯಮ ಕಾರ್ಯದರ್ಶಿ ಅವರಿಂದ ಪ್ರಧಾನಿ ನರೇಂದ್ರ ಮೋದಿ ಅವರು ಶರಣಾಗತಿ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆರೋಪಿಸಿದ್ದಾರೆ.

‘ಅಮೆರಿಕದ ಸೂಚನೆಯಂತೆ, ರಷ್ಯಾದಿಂದ ಕಚ್ಚಾತೈಲ ಖರೀದಿಸುವುದಿಲ್ಲ’ ಎಂದು ಮೋದಿ ಸರ್ಕಾರ ತಿಳಿಸಿತ್ತು. ಇದಕ್ಕೆ ಪ್ರತಿಯಾಗಿ ಸದ್ಯ ರಷ್ಯಾದಿಂದ 30 ದಿನಗಳ ಅವಧಿಗೆ ಕಚ್ಚಾತೈಲ ಖರೀದಿಸಲು ಅನುಮತಿ ನೀಡಲಾಗಿದೆ ಎಂದು ಲೀವಿಟ್ ಅವರು ಮಾಧ್ಯಮಗಳಿಗೆ ನೀಡಿದ ಹೇಳಿಕೆಯನ್ನು ಕಾಂಗ್ರೆಸ್ ‘ಎಕ್ಸ್’ನಲ್ಲಿ ಹಂಚಿಕೊಂಡಿದೆ.

‘ರಷ್ಯಾದಿಂದ ಕಚ್ಚಾತೈಲ ಖರೀದಿಸಲು ಅಮೆರಿಕ ಅನುಮತಿ ನೀಡಿದೆ ಎಂದು ಲೀವಿಟ್ ಹೇಳಿಕೆ ನೀಡಿದ್ದಾರೆ. ಮತ್ತೊಮ್ಮೆ ಓದಿ... ಅನುಮತಿಸಲಾಗಿದೆ ಎಂದು ಅವರೇ ಸ್ಪಷ್ಟಪಡಿಸಿದ್ದಾರೆ. ದೇಶದ ಸಾರ್ವಭೌಮತೆ ಹಾಗೂ ಘನತೆಗೆ ಮಾಡಿದ ಅವಮಾನವನ್ನು ಭಾರತ ಸರ್ಕಾರ ಏಕೆ ಆಕ್ಷೇಪಿಸುತ್ತಿಲ್ಲ?’ ಎಂದು ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷ • ಹೆಚ್ಚುತ್ತಿರುವ ಸಾವು–ನೋವು

ಮೊಜ್ತಬಾಗೆ ಗಾಯ: ಇರಾನ್ ಜನರಲ್ಲಿ ಆತಂಕ



ಮೊಜ್ತಬಾ ಖಮೇನಿ

ದುಬೈ (ಎಪಿ): ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಹತರಾದ ಇಸ್ರೇಲ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಸ್ಥಾನಕ್ಕೆ ನೇಮಿಸಲಾಗಿರುವ ಮೊಜ್ತಬಾ ಖಮೇನಿ (56) ಅವರೂ ಗಾಯಗೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಯುದ್ಧದ ಆರಂಭದಲ್ಲಿಯೇ ಮೊಜ್ತಬಾ ಅವರ ಕೈ, ಕಾಲು ಮತ್ತು ತೋಳಿಗೆ ಗಾಯಗಳಾಗಿವೆ ಎಂದು ಇಸ್ರೇಲ್‌ನ ಗುಪ್ತಚರ ಮೂಲಗಳು ತಿಳಿಸಿವೆ. ಈ ಕುರಿತ ಹೇಳಿಕೆಗಳು ಅವರ ಆರೋಗ್ಯದ ಬಗ್ಗೆ ಇರಾನ್ ಜನರಲ್ಲಿ ಆತಂಕ ಮೂಡಿಸಿದೆ.

‘ಮೊಜ್ತಬಾ ಗಾಯಗೊಂಡಿದ್ದಾರೆ ಎಂಬ ಸುದ್ದಿ ಗೊತ್ತಾಯಿತು. ಅವರ ಸಂಪರ್ಕದಲ್ಲಿದ್ದ ಸ್ನೇಹಿತರನ್ನು ಈ ಕುರಿತು ಕೇಳಿದೆ. ಅವರು ದೇವರಿಗೆ ಧನ್ಯವಾದಗಳು, ಮೊಜ್ತಬಾ ಆರೋಗ್ಯವಾಗಿದ್ದಾರೆ ಎಂದು ತಿಳಿಸಿದ್ದಾರೆ. ಹೀಗಾಗಿ ಯಾವುದೇ ಸಮಸ್ಯೆಯಿಲ್ಲ’ ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಟೆಲಿಗ್ರಾಮ್ ಆ್ಯಪ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಆದರೆ ಈ ಬಗ್ಗೆ ಅವರು ಹೆಚ್ಚಿನ ಮಾಹಿತಿ ನೀಡಿಲ್ಲ.

ಲೆಬನಾನ್ ಮೇಲೆ ಇಸ್ರೇಲ್ ದಾಳಿ: ಲೆಬನಾನ್ ಮಧ್ಯ ಬೈರೂತ್‌ನ ಜನನಿಬಿಡ ಪ್ರದೇಶದ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ. ಇದರಿಂದ ಒಂದು ಕಟ್ಟಡ ಧ್ವಂಸಗೊಂಡಿದೆ. ಅಲ್ಲದೆ ದಕ್ಷಿಣ ಮತ್ತು ಪೂರ್ವ ಲೆಬನಾನ್ ಮೇಲೆ ಅದು ನಡೆಸಿದ ದಾಳಿಯಲ್ಲಿ ರೆಡ್‌ಕ್ರಾಸ್‌ನ ಕಾರ್ಯಕರ್ತರೊಬ್ಬರು ಸೇರಿದಂತೆ 14 ಜನರು ಮೃತಪಟ್ಟಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷದ ಆರಂಭವಾದಾಗಿನಿಂದ ಲೆಬನಾನ್‌ನಲ್ಲಿ 500ಕ್ಕೂ ಹೆಚ್ಚು ಜನರು ಅಸುನೀಗಿದ್ದಾರೆ.

ಕೊಲ್ಲಿ ದೇಶಗಳ ವಿರುದ್ಧ ಇರಾನ್ ದಾಳಿ: ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳ ಮೇಲೆ ಇರಾನ್ ಬುಧವಾರವೂ ದಾಳಿ ಮುಂದುವರಿಸಿದೆ. ಇಸ್ರೇಲ್‌ನ ಟೆಲ್ ಅವೀವ್ ಮತ್ತು ಇತರೆಡೆಗಳಲ್ಲಿ ಸೈರನ್‌ಗಳು ಮೊಳಗಿವೆ. ಆದರೆ ಸಾವು, ನೋವುಗಳ ಬಗ್ಗೆ ತಕ್ಷಣದ ವರದಿಗಳಿಲ್ಲ.

ಅಮೆರಿಕ ಮತ್ತು ಸೌದಿ ನಿರ್ವಹಿಸುತ್ತಿರುವ ಪ್ರಿನ್ಸ್ ಸುಲ್ತಾನ್ ವಾಯು ನೆಲೆ ಮೇಲೆ ಇರಾನ್ ಹಾರಿಸಿದ ಆರು ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಯಶಸ್ವಿಯಾಗಿ ತಡೆಯಲಾಗಿದೆ ಎಂದು ಸೌದಿ ಅರೇಬಿಯಾದ ರಕ್ಷಣಾ ಸಚಿವಾಲಯ ಬುಧವಾರ ಹೇಳಿದೆ. ಕತಾರ್, ಒಮಾನ್, ಬಹರೇನ್ ಮತ್ತು ಯುಎಇಗಳು ಇರಾನಿನ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಹೊಡೆದುರುಳಿಸುವಲ್ಲಿ ಮಗ್ನವಾಗಿವೆ.

ಸಾವು, ನೋವು– ಅಂಕಿಅಂಶ: ಸಂಘರ್ಷ ಆರಂಭ ಆದಾಗಿನಿಂದ ಇರಾನ್‌ನಲ್ಲಿ 1300ಕ್ಕೂ ಜನರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ 500ಕ್ಕೂ ಹೆಚ್ಚು ಮತ್ತು ಇಸ್ರೇಲ್‌ನಲ್ಲಿ 12 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಅಮೆರಿಕ ಪಡೆಗಳು 5,000ಕ್ಕೂ ಹೆಚ್ಚು ಗುರಿಗಳನ್ನು ಹೊಡೆದುರುಳಿಸಿವೆ. ಯುದ್ಧದಲ್ಲಿ ಸುಮಾರು 140 ಯೋಧರು ಗಾಯಗೊಂಡಿದ್ದರು, ಅವರಲ್ಲಿ 108 ಮಂದಿ ಕರ್ತವ್ಯಕ್ಕೆ ಮರಳಿದ್ದಾರೆ ಎಂದು ಪೆಂಟಗನ್ ಹೇಳಿದೆ. ಈ ಯುದ್ಧದಲ್ಲಿ ಇಲ್ಲಿಯವರೆಗೆ ಅಮೆರಿಕದ ಏಳು ಯೋಧರು ಮೃತಪಟ್ಟಿದ್ದು, ಎಂಟು ಮಂದಿ ತೀವ್ರಗಾಯಗೊಂಡಿದ್ದಾರೆ ಎಂದು ಅದು ತಿಳಿಸಿದೆ.

ಸಂಘರ್ಷದಲ್ಲಿ ಸಾವು, ನೋವು ಹೆಚ್ಚಾದಂತೆ ವಿದೇಶಿಗರು ಈ ಪ್ರದೇಶವನ್ನು ತೊರೆಯುತ್ತಿದ್ದಾರೆ. ಇಲ್ಲಿಯವರೆಗೆ 45,000ಕ್ಕೂ ಹೆಚ್ಚು ಬ್ರಿಟನ್ ಪ್ರಜೆಗಳು ಮತ್ತು 40,000ಕ್ಕೂ ಹೆಚ್ಚು ಅಮೆರಿಕನ್ನರು ಈ ಪ್ರದೇಶದಿಂದ ಹೊರ ಹೋಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎ.30ಕ್ಕೆ 'KD' ಖಚಿತ



ರೀಷ್ಮಾ ನಾಣಯ್ಯ, ಧ್ರುವ ಸರ್ಜಾ

ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ ಆರನೇ ಸಿನಿಮಾ 'KD–ದಿ ಡೆವಿಲ್' ಎ.30ರಂದು ಬಿಡುಗಡೆಯಾಗುವುದು ಖಚಿತವಾಗಿದೆ.

ಕೆವಿಎನ್ ನಿರ್ಮಾಣ ಸಂಸ್ಥೆಯ 'ಜನನಾಯಗನ್' ಹಾಗೂ 'ಟಾಕ್ಸಿಕ್' ಸಿನಿಮಾಗಳು ಮುಂದೂಡಿಕೆಯಾದ ಬೆನ್ನಲ್ಲೇ, ಅದೇ ಸಂಸ್ಥೆ ನಿರ್ಮಿಸಿರುವ 'KD' ಸಿನಿಮಾ ಏನಾಗಲಿದೆ ಎನ್ನುವ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಯಾಗಿತ್ತು. ಈ ಸಂದರ್ಭದಲ್ಲೇ ಹೊಸ ಹಾಡೊಂದನ್ನು ಬಿಡುಗಡೆ ಮಾಡುವ ಬಗ್ಗೆ ಚಿತ್ರತಂಡ ಘೋಷಿಸಿದೆ. ಸಿನಿಮಾದ ನಾಲ್ಕನೇ ಹಾಡು ಮಾರ್ಚ್ 14ರಂದು ಬಿಡುಗಡೆಯಾಗಲಿದೆ. ಈ ಕುರಿತ ಪೋಸ್ಟರ್‌ನಲ್ಲಿ ಸಿನಿಮಾ ಎ.30 ರಂದು ಬಿಡುಗಡೆ ಆಗಲಿದೆ ಎನ್ನುವುದನ್ನೂ ಉಲ್ಲೇಖಿಸಲಾಗಿದೆ.

2022ರ ಏಪ್ರಿಲ್‌ನಲ್ಲಿ ಮುಹೂರ್ತ ನಡೆಸಿದ್ದ ಚಿತ್ರತಂಡ ಅದೇ ವರ್ಷದ ಅಕ್ಟೋಬರ್‌ನಲ್ಲಿ ಸಿನಿಮಾದ ಶೀರ್ಷಿಕೆ ಘೋಷಿಸಿ, ಚಿತ್ರೀಕರಣ ಆರಂಭಿಸಿತ್ತು. ಹಂತ ಹಂತವಾಗಿ ತಾರಾಗಣವನ್ನು ಪರಿಚಯಿಸಿದ್ದ ಚಿತ್ರತಂಡ ಬಳಿಕ 'ಶಿವ ಶಿವ', 'ಸೆಟ್ ಆಗಲ್ಲ' ಹಾಗೂ 'ಅಣ್ತಮ್ಮ ಜೋಡೆತ್ತು ಕಣೋ' ಹಾಡನ್ನು ಬಿಡುಗಡೆಗೊಳಿಸಿತ್ತು. 2025ರ ಜುಲೈನಲ್ಲಿ ಟೀಸರ್ ಬಿಡುಗಡೆಗೊಳಿಸಿದ್ದ ಚಿತ್ರತಂಡ ಕಳೆದ ಅಕ್ಟೋಬರ್‌ನಲ್ಲೇ ಬಿಡುಗಡೆಯ ಯೋಜನೆ ಹಾಕಿಕೊಂಡಿತ್ತು. ಈ ಕುರಿತು ನಿರ್ಮಾಣ ಸಂಸ್ಥೆಯ ಕೆ.ವೆಂಕಟ್ ನಾರಾಯಣ್ ಕೂಡಾ ಘೋಷಣೆ ಮಾಡಿದ್ದರು. ಬಳಿಕ ಸಿನಿಮಾ ಮುಂದೂಡಿಕೆಯಾಗಿತ್ತು.


'ಏಕ್ ಲವ್ ಯಾ' ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದೆ. 70-75ರ ದಶಕದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರದಲ್ಲಿದೆ. 'KD' ಎಂದರೆ ಕಾಳಿದಾಸ. ಚಿತ್ರದಲ್ಲಿ ರೀಷ್ಮಾ ನಾಣಯ್ಯ ನಾಯಕಿಯಾಗಿ ನಟಿಸಿದ್ದಾರೆ. ಬಾಲಿವುಡ್‌ನ ಸಂಜಯ್‌ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್, ನೋರಾ ಫತೇಹಿ ತಾರಾಬಳಗದಲ್ಲಿದ್ದಾರೆ.

ಏಜೆಂಟ್ ಕಾವೇರಿ ಆದ ಅದಿತಿ ಬಾಲನ್

ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ '666 ಆಪರೇಷನ್ ಡ್ರೀಮ್ ಥಿಯೇಟರ್' ಚಿತ್ರದಲ್ಲಿ ಬಹುಭಾಷಾ ನಟಿ ಅದಿತಿ ಬಾಲನ್ 'ಏಜೆಂಟ್ ಕಾವೇರಿ'ಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಅವರ ಪಾತ್ರದ ಪೋಸ್ಟರ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದೆ. 'ಅರುವಿ', 'ಕುಟ್ಟಿ ಸ್ಟೋರಿ', 'ಕೋಲ್ಡ್ ಕೇಸ್', 'ಸರಿಪೋದಾ ಸನಿವಾರಂ' ಹೀಗೆ ತಮಿಳು, ತೆಲುಗು ಹಾಗೂ ಮಲಯಾಳ ಸಿನಿಮಾಗಳಲ್ಲಿ ನಟಿಸಿರುವ ಅದಿತಿ ಇಲ್ಲಿ ಕೈಯಲ್ಲಿ ಗನ್ ಹಿಡಿದು ಕಾಣಿಸಿಕೊಂಡಿದ್ದಾರೆ.

ಧನಂಜಯ ಹಾಗೂ ಶಿವರಾಜ್‌ಕುಮಾರ್ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ಪ್ರಿಯಾಂಕಾ ಮೋಹನ್ ನಟಿಸಿದ್ದಾರೆ. 'ಶಂಕರ್' ಎನ್ನುವ ಪಾತ್ರದಲ್ಲಿ ಧನಂಜಯ, 'ಏಜೆಂಟ್ ಪ್ರಕಾಶ್' ಆಗಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳಲಿದ್ದಾರೆ. ಸಿನಿಮಾದಲ್ಲಿ 70ರ ದಶಕದ ಕಥೆಯಿದೆ. ವೈಶಾಖ್ ಜೆ ಗೌಡ ಅವರ ವೈಶಾಖ್ ಜೆ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಸಿನಿಮಾ ನಿರ್ಮಾಣವಾಗುತ್ತಿದ್ದು, ರೆಟ್ರೋ ಶೈಲಿಯಲ್ಲಿ ಈ ಸಿನಿಮಾವಿದೆ. ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ ಮತ್ತು ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ ಚಿತ್ರಕ್ಕಿದೆ. ಕನ್ನಡ ಮತ್ತು ತೆಲುಗಿನಲ್ಲಿ ಈ ಸಿನಿಮಾ ತೆರೆಕಾಣಲಿದೆ.



ಅದಿತಿ ಬಾಲನ್



ಪ್ರಭಾಸ್

ಮಲಯಾಳ ನಿರ್ದೇಶಕನ ಜತೆ ಪ್ರಭಾಸ್ ಸಿನಿಮಾ?

ಬೆಟ್ಟದ ಮೇಲೊಬ್ಬ ಪಾತಕಿ. ಆತ ಚಿತ್ರದ ನಾಯಕ ಮತ್ತು ಖಳನಾಯಕ ಎರಡೂ ಹೌದು. ಆತನನ್ನು ಕಾಯುವ ಒಂದಷ್ಟು ನಾಯಿಗಳು...ಇತ್ತೀಚೆಗಷ್ಟೇ ಬಹಳ ಅಪರೂಪದ ಪರಿಕಲ್ಪನೆಯ 'ಇಕೊ' ಎಂಬ ಮಲಯಾಳ ಸಿನಿಮಾ ಮಾಡಿ ಜನಮನ್ನಣೆ ಗಳಿಸಿದವರು ನಿರ್ದೇಶಕ ದಿಂಜಿತ್ ಅಯ್ಯತಾನ್. ಇವರ ಜತೆ ತೆಲುಗು ನಟ ಪ್ರಭಾಸ್ ಕೈಜೋಡಿಸಲಿದ್ದಾರೆ ಎಂಬ ವದಂತಿ ದಟ್ಟವಾಗಿದೆ. ಇತ್ತೀಚೆಗಷ್ಟೇ ದಿಂಜಿತ್ ಮತ್ತು ಪ್ರಭಾಸ್ ಭೇಟಿಯಾಗಿದ್ದೇ ಇದಕ್ಕೆ ಕಾರಣ.

'ಕಿಷ್ಕಿಂದ ಕಾಂಡಂ' ಸಿನಿಮಾ ಮೂಲಕ ಗಮನ ಸೆಳೆದು, 'ಇಕೊ' ಚಿತ್ರವನ್ನು ಗೆಲುವಿನ ದಡ ಮುಟ್ಟಿಸಿದ ದಿಂಜಿತ್ ಅಯ್ಯತಾನ್ ಸದ್ಯಕ್ಕೆ ಮಲಯಾಳದಲ್ಲಿ ಬೇಡಿಕೆಯ ನಿರ್ದೇಶಕ. ಅವರು ಪ್ರಭಾಸ್‌ಗಾಗಿಯೇ ಕಥೆ ಮಾಡಿದ್ದು, ಅದನ್ನು ಕನ್ನಡದ ಹೊಂಬಾಳೆ ಫಿಲ್ಮ್ಸ್ ನಿರ್ಮಾಣ ಮಾಡಲಿದೆ ಎಂಬ ಸುದ್ದಿಯಿದೆ.

ಪ್ರಭಾಸ್ ಜತೆ 'ಸಲಾರ್' ಚಿತ್ರ ಮಾಡಿದ್ದ ಹೊಂಬಾಳೆ ಫಿಲ್ಮ್ಸ್, ಈ ನಾಯಕನ ಜತೆ ಒಟ್ಟು ಮೂರು ಸಿನಿಮಾಗಳ ನಿರ್ಮಾಣಕ್ಕೆ ಸಹಿ ಹಾಕಿದೆ ಎನ್ನಲಾಗಿದೆ. 'ಸಲಾರ್' ಬಳಿಕ ಪ್ರಭಾಸ್, ಪ್ರಶಾಂತ್ ನೀಲ್ ಜೋಡಿಯಾಗಿ ಮತ್ತೊಂದು ಸಿನಿಮಾ ಮಾಡುತ್ತಾರೆ ಎಂಬ ಸುದ್ದಿ ಇತ್ತು. ಆದರೆ ಆ ಸಿನಿಮಾ ಸೆಟ್ಟೇರಲಿಲ್ಲ. ಹೀಗಾಗಿ ದಿಂಜಿತ್ ಅಯ್ಯತಾನ್ ಜತೆ ಕೈಜೋಡಿಸಿ ಪ್ರಭಾಸ್‌ಗೆ ಸಿನಿಮಾ ಮಾಡಲು ಮುಂದಾಗಿದೆ ಎಂದು ತೆಲುಗು ಮಾಧ್ಯಮಗಳು ವರದಿ ಮಾಡಿವೆ.

ಪ್ರಭಾಸ್‌ಗೆ ಬಹುದೊಡ್ಡ ಅಭಿಮಾನಿ ವರ್ಗವಿರುವುದು ಮಾಸ್, ಆ್ಯಕ್ಷನ್ ಸಿನಿಮಾಗಳಿಗೆ. ದಿಂಜಿತ್ ಹೊಡಿ,ಬಡಿ ಅಬ್ಬರವಿಲ್ಲದ ಗಟ್ಟಿಯಾದ ಕಥೆಯ ಸಿನಿಮಾಗಳನ್ನು ಮಾಡಿಕೊಂಡು ಬಂದವರು. ಹೀಗಾಗಿ ಇವರಿಬ್ಬರ ಜೋಡಿ ಸಿನಿಮಾ ಕುತೂಹಲ ಮೂಡಿಸಿದೆ.



ಎ.3ರಂದು 'ಅಪರಿಚಿತೆ' ತೆರೆಗೆ

ಗೀತಪ್ರಿಯ, ಶ್ರೀನಾಥ್ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ನಟಿಸಿರುವ 'ಅಪರಿಚಿತೆ' ಚಿತ್ರ ಎ.3ರಂದು ತೆರೆಗೆ ಬರಲಿದೆ. ವಿಶ್ವನಾಥ ನಿರ್ದೇಶನದ ಚಿತ್ರಕ್ಕೆ ಅಮರ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಸುರೇಶ್‌ಕುಮಾರ್ ಬಂಡವಾಳ ಹೂಡಿದ್ದಾರೆ.

'ಸಾಮಾಜಿಕ ಕಳಕಳಿ, ಸಂದೇಶ ಹೊಂದಿರುವ ಚಿತ್ರವಿದು. ಹೆಣ್ಣುಭ್ರೂಣ ಹತ್ಯೆ ಕುರಿತು ನೈಜ ಘಟನೆ ಆಧಾರಿತ ಕಥೆಯನ್ನು ಹೊಂದಿದೆ. ಇಂದಿಗೂ ನಮ್ಮ ಸಮಾಜದಲ್ಲಿ ಹೆಣ್ಣು ಎಂಬ ಕಾರಣಕ್ಕೆ ಭ್ರೂಣವನ್ನೇ ಹತ್ಯೆ ಮಾಡುವವರಿದ್ದಾರೆ. ಅಂಥವರ ವಿರುದ್ಧ ಸಿಡಿದೇಳುವ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಶ್ರೀನಾಥ್ ಮತ್ತು ಅವರ ಪುತ್ರ ರೋಹಿತ್ ಹಲವು ವರ್ಷಗಳ ಬಳಿಕ ಮತ್ತೆ ಒಟ್ಟಾಗಿ ಕಾಣಿಸಿಕೊಂಡಿದ್ದಾರೆ. ಈ ಹಿಂದೆ ನಮ್ಮ ನಿರ್ಮಾಣ ಸಂಸ್ಥೆಯಿಂದ 'ತಾಯವ್ವ' ಚಿತ್ರ ಮಾಡಿದ್ದೆವು. ಸೂಲಗಿತ್ತಿ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಅದೇ ರೀತಿ ಈ ಚಿತ್ರಕ್ಕೂ ಪ್ರೇಕ್ಷಕರಿಂದ ಮೆಚ್ಚುಗೆ ದೊರೆಯಲಿದೆ ಎಂಬ ವಿಶ್ವಾಸವಿದೆ. ವ್ಯಾಪಾರದ ಉದ್ದೇಶದಿಂದ ಈ ಸಿನಿಮಾ ಮಾಡಿಲ್ಲ. ಸಮಾಜಕ್ಕೊಂದು ಉತ್ತಮ ಸಂದೇಶ ನೀಡಬೇಕೆಂಬ ಗುರಿಯೊಂದಿಗೆ ಸಿನಿಮಾ ಸಿದ್ಧಗೊಂಡಿದೆ' ಎನ್ನುತ್ತಾರೆ ಗೀತಪ್ರಿಯ.

ಎಂ.ಪಿ ಫಿಲ್ಮ್ಸ್ ಮೂಲಕ ವಿತರಕ ಕೆ.ಮುನೀಂದ್ರ ಚಿತ್ರ ಬಿಡುಗಡೆ ಮಾಡುತ್ತಿದ್ದಾರೆ. ಸಿಂಧು ಲೋಕನಾಥ್, ಆರ್.ಜೆ.ನಿಖಿತಾ, ಶ್ರೀನಾಥ್ ಅವರ ಪುತ್ರ ರೋಹಿತ್ ಪ್ರಮುಖ ಪಾತ್ರದಲ್ಲಿದ್ದಾರೆ. ಅನಿಲ್ ಸಂಗೀತ, ಶಂಕರ್ ಛಾಯಾಚಿತ್ರಗ್ರಹಣ, ಮಂಜುನಾಥ್ ಶಿರಸಿ ಸಂಕಲನ ಚಿತ್ರಕ್ಕಿದೆ.

ಸೆಮಿಫೈನಲ್‌ಗೆ ಭಾರತ ವನಿತೆಯರು

ವಿಶ್ವಕಪ್ ಹಾಕಿ ಕ್ವಾಲಿಫೈಯರ್ಸ್ ನವನೀತ್ ಕೌರ್ ಹ್ಯಾಟ್ರಿಕ್ ಗೋಲು

ಹೈದರಾಬಾದ್ (ಪಿಟಿಐ): ನವನೀತ್ ಕೌರ್ ಅವರ ಹ್ಯಾಟ್ರಿಕ್ ನೆರವಿನಿಂದ ಭಾರತ ತಂಡವು ಮಹಿಳಾ ಹಾಕಿ ವಿಶ್ವಕಪ್ ಕ್ವಾಲಿಫೈಯರ್ಸ್ ಬಿ ಗುಂಪಿನ ಲೀಗ್ ಪಂದ್ಯದಲ್ಲಿ ಬುಧವಾರ ವೇಲ್ಸ್ ತಂಡವನ್ನು 4-1 ಗೋಲುಗಳಿಂದ ಸುಲಭವಾಗಿ ಸೋಲಿಸಿತು.

ಜಿಎಂಸಿ ಬಾಲಯೋಗಿ ಹಾಕಿ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಕೌರ್ ಅವರು 29ನೇ, 34ನೇ ಮತ್ತು 55ನೇ ನಿಮಿಷ ಗೋಲುಗಳನ್ನು ಗಳಿಸಿದರು. ಕೊನೆಯ ಗೋಲನ್ನು ಅವರು ಪೆನಾಲ್ಟಿ ಸ್ಟ್ರೋಕ್ ಪರಿವರ್ತಿಸಿ ಗಳಿಸಿದರು. ಏಳನೇ ನಿಮಿಷ ಸಾಕ್ಷಿ ರಾಣಾ ತಂಡಕ್ಕೆ ಮುನ್ನಡೆ ಒದಗಿಸಿದ್ದರು.

ಬೆಟ್ಸನ್ ಥಾಮಸ್ ಅವರು ವೇಲ್ಸ್ ತಂಡದ ಏಕೈಕ ಗೋಲನ್ನು (39ನೇ ನಿಮಿಷ) ಗಳಿಸಿದರು.

ಭಾರತ ಮೊದಲ ತಂಡವಾಗಿ ಸೆಮಿಫೈನಲ್ ತಲುಪಿತು ಮಾತ್ರವಲ್ಲ, ಗುಂಪಿನಲ್ಲಿ ಅಗ್ರಸ್ಥಾನವನ್ನು ಖಚಿತ ಪಡಿಸಿಕೊಂಡಿತು. ಆತಿಥೇಯ ತಂಡವು ಶುಕ್ರವಾರ ನಡೆಯುವ ಸೆಮಿಫೈನಲ್‌ನಲ್ಲಿ ಇಟಲಿ ತಂಡವನ್ನು ಎದುರಿಸಲಿದೆ.

ಭಾರತ ಮೊದಲ ಕ್ವಾರ್ಟರ್‌ನಲ್ಲಿ ವೇಗದ ಆಟದೊಡನೆ ಎದುರಾಳಿಯ ರಕ್ಷಣಾ ಕೋಟೆಯೊಳಗೆ ನುಗ್ಗಿ ನಿರಂತರ ಒತ್ತಡ ಹೇರಿತು. ಏಳನೇ ನಿಮಿಷ ಇಂಥ ಒಂದು ದಾಳಿಯಲ್ಲಿ ಸಲೀಮಾ ಟೇಟೆ ಅವರು ಬಲಭಾಗದಿಂದ ಚೆಂಡನ್ನು ಮುನ್ನಡೆಸಿಕೊಂಡು ಸಾಕ್ಷಿ ಅವರಿಗೆ ಚೆಂಡನ್ನು ತಲುಪಿಸಿದರು. ಅವರು ವೃತ್ತದ ತುದಿಯಿಂದ ರಿವರ್ಸ್ ಹಿಟ್ ಮೂಲಕ ಚೆಂಡನ್ನು ಗುರಿಮುಟ್ಟಿಸಿದರು.

ಉಳಿದ ಮೂರು ಕ್ವಾರ್ಟರ್‌ಗಳಲ್ಲೂ ಭಾರತ ತಂಡದ ಆಟಗಾರ್ತಿಯರು ಎದುರಾಳಿಗಳ ಮೇಲೆ ಒತ್ತಡ ಹೇರಿದರು. ಕೊನೆಯ ಕ್ವಾರ್ಟರ್‌ನಲ್ಲಿ ವೇಲ್ಸ್ ತಂಡವು ಹಿನ್ನಡೆ ತಗ್ಗಿಸುವ ಅವಕಾಶ ಪಡೆದಿತ್ತು. ಆದರೆ 50ನೇ ನಿಮಿಷ ಪೆನಾಲ್ಟಿ ಸ್ಟ್ರೋಕ್‌ನಲ್ಲಿ ವೇಲ್ಸ್ ನಾಯಕಿ ಎಲಿಜಬೆತ್ ಬಿಂಘಮ್ ಅವರು ಆ ಯತ್ನದಲ್ಲಿ ಗುರಿ ತಪ್ಪಿದರು.



ಹ್ಯಾಟ್ರಿಕ್ ಗೋಲು ದಾಖಲಿಸಿದ ನವನೀತ್ ಕೌರ್ ಹಾಕಿ ಇಂಡಿಯಾ ಚಿತ್ರ

ಸ್ಕಾಟ್ಲೆಂಡ್ ಸೆಮಿಗೆ: ದಿನದ ಮತ್ತೊಂದು ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡವು 3-1ರಿಂದ ಉರುಗ್ವೆ ತಂಡವನ್ನು ಮಣಿಸಿತು. 7 ಅಂಕ ಸಂಪಾದಿಸಿದ ಸ್ಕಾಟ್ಲೆಂಡ್ ತಂಡವು ಬಿ ಗುಂಪಿನಲ್ಲಿ ಎರಡನೇ ಸ್ಥಾನದೊಂದಿಗೆ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ವಿಶ್ವಕಪ್: ಇರಾನ್ ಪಾಲ್ಗೊಳ್ಳುವಿಕೆ ಸ್ವಾಗತಿಸಿದ ಟ್ರಂಪ್

ಲುಸಾನ್ (ಎಎಫ್‌ಪಿ): ಇರಾನ್ ಮೇಲೆ ಪ್ರಸ್ತುತ ಅಮೆರಿಕ ಯುದ್ಧ ನಡೆಸುತ್ತಿದೆ. ಆದರೆ ಈ ಯುದ್ಧದ ಹೊರತಾಗಿಯೂ, ಉತ್ತರ ಅಮೆರಿಕದಲ್ಲಿ ನಡೆಯಲಿರುವ ಮುಂದಿನ ವಿಶ್ವಕಪ್‌ಗೆ ಇರಾನ್ ಪಾಲ್ಗೊಳ್ಳುವಿಕೆಯನ್ನು 'ಸ್ವಾಗತಿಸುವುದಾಗಿ' ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ್ದಾರೆ.

ಅಧ್ಯಕ್ಷರ ಹೇಳಿಕೆಯನ್ನು ಶ್ವೇತಭವನ ಬುಧವಾರ ಖಚಿತಪಡಿಸಿದೆ. ಫಿಫಾ ಮುಖ್ಯಸ್ಥ ಗಿಯಾನಿ ಇನ್ಫ್ಯಾಂಟಿನೊ ಅವರು ಮಂಗಳವಾರ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಟ್ರಂಪ್ ಹೇಳಿಕೆಯನ್ನು ದಾಖಲಿಸಿದ್ದರು.

ವಿಶ್ವಕಪ್ ಸಿದ್ಧತೆಗೆ ಸಂಬಂಧಿಸಿ ಈಚೆಗೆ ಟ್ರಂಪ್ ಸಹ ಭಾಗಿಯಾಗಿದ್ದ ಸಭೆಯಲ್ಲಿ ಇರಾನ್‌ನಲ್ಲಿ ಯುದ್ಧದ ಪರಿಸ್ಥಿತಿಯ ಬಗ್ಗೆ ಇನ್ಫ್ಯಾಂಟಿನೊ ಗಮನ ಸೆಳೆದಿದ್ದರು. ಆದರೆ ಈ ವೇಳೆ, ಅಮೆರಿಕದಲ್ಲಿ ನಡೆಯುವ ವಿಶ್ವಕಪ್‌ನಲ್ಲಿ ಇರಾನ್ ತಂಡವನ್ನು ಸ್ವಾಗತಿಸುವುದಾಗಿ ಟ್ರಂಪ್ ಪುನರುಚ್ಚರಿಸಿದ್ದರು ಎಂದು ಇನ್ಫ್ಯಾಂಟಿನೊ ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದರು. ವಿಶ್ವಕಪ್ ಟೂರ್ನಿ ಜೂನ್ 11 ರಿಂದ ನಡೆಯಲಿದೆ.

ಏಕದಿನ ಸರಣಿ: ಬಾಂಗ್ಲಾದೇಶಕ್ಕೆ 1–0 ಮುನ್ನಡೆ

ನಹೀದ್ ದಾಳಿಗೆ ಕುಸಿದ ಪಾಕ್

ಢಾಕಾ (ಎಪಿ): ವೇಗದ ಬೌಲರ್ ನಹೀದ್ ರಾಣಾ ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿ ಐದು ವಿಕೆಟ್ ಗೊಂಚಲು ಪಡೆದರು. ಅವರ ದಾಳಿಯ ನೆರವಿನಿಂದ ಬಾಂಗ್ಲಾದೇಶ ತಂಡವು ಬುಧವಾರ ಮೊದಲ ಏಕದಿನ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಎಂಟು ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು.

ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಆತಿಥೇಯ ತಂಡವು 1-0 ಮುನ್ನಡೆ ಸಾಧಿಸಿತು. ಇನ್ನೆರಡು ಪಂದ್ಯಗಳು ಇದೇ ಕ್ರೀಡಾಂಗಣದಲ್ಲಿ ಇದೇ 13 ಮತ್ತು 15ರಂದು ನಡೆಯಲಿವೆ.

ಟಾಸ್ ಗೆದ್ದ ಬಾಂಗ್ಲಾ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ನಹೀದ್ (24ಕ್ಕೆ 5) ಮತ್ತು ನಾಯಕ ಮೆಹಿದಿ ಹಸನ್ ಮಿರಾಜ್ (29ಕ್ಕೆ 3) ಅವರು ಪರಿಣಾಮಕಾರಿ ದಾಳಿ ಸಂಘಟಿಸಿ, ಪಾಕ್ ತಂಡವನ್ನು 30.4 ಓವರ್‌ಗಳಲ್ಲಿ 114 ರನ್‌ಗಳಿಗೆ ಉರುಳಿಸಿದರು. ಆರಂಭಿಕ ಆಟಗಾರ ಸಾಹಿಬ್‌ಝಾದಾ ಫರ್ಹಾನ್ (27) ಮತ್ತು ಫಹೀಂ ಅಶ್ರಫ್ (37) ಹೊರತುಪಡಿಸಿ ಉಳಿದವರು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಇದು ಏಕದಿನ ಕ್ರಿಕೆಟ್‌ನಲ್ಲಿ ಬಾಂಗ್ಲಾ ವಿರುದ್ಧ ಪಾಕಿಸ್ತಾನದ ಅತಿ ಕಡಿಮೆ ಮೊತ್ತ. 1999ರ ವಿಶ್ವಕಪ್‌ನಲ್ಲಿ 161 ಗಳಿಸಿದ್ದು, ಈವರೆಗಿನ ಕಡಿಮೆ ಮೊತ್ತವಾಗಿತ್ತು. ಆ ಪಂದ್ಯವನ್ನು ಪಾಕ್ 62 ರನ್‌ಗಳಿಂದ ಸೋತಿತ್ತು.

ಗುರಿ ಬೆನ್ನಟ್ಟಿದ ಆತಿಥೇಯ ತಂಡವು ಆರಂಭಿಕ ಬ್ಯಾಟರ್ ತಾಂಜಿದ್ ಹಸನ್ (ಔಟಾಗದೇ 67; 42ಎ, 4x7, 6x5) ಅವರ ಅರ್ಧಶತಕದ ನೆರವಿನಿಂದ ಕೇವಲ 15.1 ಓವರ್‌ಗಳಲ್ಲಿ 2 ವಿಕೆಟ್‌ಗೆ 115 ರನ್ ಪೇರಿಸಿ ಸಂಭ್ರಮಿಸಿತು.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ನಿರಾಶಾದಾಯಕ ಪ್ರದರ್ಶನದ ಬಳಿಕ ಪಾಕ್ ತಂಡದಿಂದ ಸೈಮ್ ಅಯೂಬ್ ಮತ್ತು ಬಾಬರ್ ಆಜಂ ಅವರನ್ನು ಕೈಬಿಟ್ಟು ನಾಲ್ವರು ಹೊಸ ಮುಖಗಳಿಗೆ ಅವಕಾಶ ನೀಡಲಾಗಿತ್ತು. ಆದರೆ, ಅವರು ಚೊಚ್ಚಲ ಏಕದಿನ ಪಂದ್ಯದಲ್ಲಿ ನಿರಾಸೆ ಮೂಡಿಸಿದರು.



ವಿಕೆಟ್ ಪಡೆದ ಸಂಭ್ರಮದಲ್ಲಿ ನಹೀದ್ ರಾಣಾ –ಎಕ್ಸ್ ಚಿತ್ರ

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ: 30.4 ಓವರ್‌ಗಳಲ್ಲಿ 114 (ಸಾಹಿಬ್‌ಝಾದಾ ಫರ್ಹಾನ್ 27, ಫಹೀಂ ಅಶ್ರಫ್ 37; ಮೆಹಿದಿ ಹಸನ್ ಮಿರಾಜ್ 29ಕ್ಕೆ 3, ನಹೀದ್ ರಾಣಾ 24ಕ್ಕೆ 5). ಬಾಂಗ್ಲಾದೇಶ: 15.1 ಓವರ್‌ಗಳಲ್ಲಿ 2ಕ್ಕೆ 115 (ತಾಂಜಿದ್ ಹಸನ್ ಔಟಾಗದೇ 67, ನಜ್ಮುಲ್ ಹುಸೇನ್ ಶಾಂತೊ 27). ಪಂದ್ಯದ ಆಟಗಾರ: ನಹೀದ್ ರಾಣಾ



ಯುಕಿ ಭಾಂಬ್ರಿ

ಟೆನಿಸ್: ಕ್ವಾರ್ಟರ್‌ಗೆ ಯುಕಿ ಭಾಂಬ್ರಿ–ಗೊರಾನ್ಸನ್

ಇಂಡಿಯನ್ ವೆಲ್ಸ್: ಭಾರತದ ಅಗ್ರ ಡಬಲ್ಸ್ ಆಟಗಾರ ಯುಕಿ ಭಾಂಬ್ರಿ ಮತ್ತು ಸ್ವೀಡನ್‌ನ ಅವರ ಜೊತೆಗಾರ ಗೊರಾನ್ ಗೊರಾನ್ಸನ್ ಅವರು ಇಂಡಿಯನ್ ವೆಲ್ಸ್ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಕ್ವಾರ್ಟರ್‌ಫೈನಲ್‌ಗೇರಿದರು.

ಇಂಡೊ–ಸ್ವೀಡನ್ ಜೋಡಿ ಮಂಗಳವಾರ ನಡೆದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಯಿರಿ ಲೆಹಕಾ (ಝೆಕ್ ರಿಪಬ್ಲಿಕ್)– ಸ್ಯಾಂಡರ್ ಅರೆಂಡ್ಸ್ (ನೆದರ್ಲೆಂಡ್ಸ್) ಜೋಡಿಯನ್ನು 6-4, 6-4 ರಿಂದ ಮಣಿಸಿತು.

ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿದ್ದ ಭಾಂಬ್ರಿ– ಗೊರಾನ್ಸನ್ ಜೋಡಿ ಒಮ್ಮೆಯೂ ಸರ್ವ್ ಕಳೆದುಕೊಳ್ಳಲಿಲ್ಲ. ಎದುರಾಳಿ ಜೋಡಿಯ ಸರ್ವ್‌ಗಳನ್ನು ಎರಡು ಬಾರಿ ಬ್ರೇಕ್ ಮಾಡಿತು. ಎಟಿಪಿ ಮಾಸ್ಟರ್ಸ್ 1000 ದರ್ಜೆಯ ಈ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಭಾಂಬ್ರಿ–ಗೊರಾನ್ಸನ್ ಜೋಡಿ, ಆಸ್ಟ್ರಿಯಾದ ಅಲೆಕ್ಸಾಂಡರ್ ಅರ್ಲರ್– ಇಟಲಿಯ ಆ್ಯಂಡ್ರಿಯಾ ವಾವಸೊರಿ ಜೋಡಿಯನ್ನು ಎದುರಿಸಲಿದೆ. ಅರ್ಲರ್–ವಾವಸೋರಿ ಜೋಡಿ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 6-3, 7-6 (3) ರಿಂದ ಅರ್ಜೆಂಟೀನಾದ ಮ್ಯಾಕ್ಸಿಮೊ ಗೊನ್ಸಾಲ್ವೆಝ್ – ಆ್ಯಂಡರ್ಸ್ ಮೊಲ್ಟೇನಿ ಜೋಡಿಯನ್ನು ಹಿಮ್ಮೆಟ್ಟಿಸಿತು.

ಸ್ವಿಸ್ ಓಪನ್ ಬ್ಯಾಡ್ಮಿಂಟನ್: ಆಯುಷ್, ತನ್ವಿಗೆ ನಿರಾಸೆ


ಲೋಹ್‌ಗೆ ಕಿರಣ್ ಜಾರ್ಜ್ ಆಘಾತ

ಬಾಸೆಲ್ (ಪಿಟಿಐ): ಆಯುಷ್ ಶೆಟ್ಟಿ ಮತ್ತು ತನ್ವಿ ಶರ್ಮಾ ಅವರನ್ನು ಒಳಗೊಂಡಂತೆ ಭಾರತದ ಹೆಚ್ಚಿನ ಷಟ್ಲರ್‌ಗಳು ಬುಧವಾರ ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಆದರೆ ಶ್ರೇಯಾಂಕರಹಿತ ಆಟಗಾರ ಕಿರಣ್ ಜಾರ್ಜ್ ನೇರ ಆಟಗಳಿಂದ ಮೂರನೇ ಶ್ರೇಯಾಂಕದ ಲೋಹ್ ಕೀನ್ ಯಿವ್ ಅವರಿಗೆ ಆಘಾತ ನೀಡಿದರು.

41 ನಿಮಿಷ ನಡೆದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಕಿರಣ್ 23-21, 21-19 ರಿಂದ ಸಿಂಗಪುರದ ಆಟಗಾರನನ್ನು ಸೋಲಿಸಿದರು. ಲೋಹ್ ಅವರು ವಿಶ್ವ ಕ್ರಮಾಂಕದಲ್ಲಿ 11ನೇ ಸ್ಥಾನದಲ್ಲಿದ್ದಾರೆ.

ಅಮೆರಿಕ ಓಪನ್ ಮಾಜಿ ಚಾಂಪಿಯನ್ ಆಯುಷ್ ಶೆಟ್ಟಿ ಅವರು 18-21, 19-21 ರಲ್ಲಿ ಕೆನಡಾದ ಬ್ರಯನ್ ಯಾಂಗ್ ಅವರಿಗೆ ಮಣಿದರು. ಯಾಂಗ್ ಈ ಗೆಲುವಿನೊಡನೆ ಪ್ರಿಕ್ವಾರ್ಟರ್ ಫೈನಲ್ ತಲುಪಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ತೈವಾನ್‌ನ ಚಿಯು ಪಿನ್–ಚಿಯಾನ್ 21-14, 21-14 ರಿಂದ ಉನ್ನತಿ ಹೂಡಾ ಅವರನ್ನು ನೇರ ಆಟಗಳಲ್ಲಿ ಮಣಿಸಿ 16ರ ಸುತ್ತಿಗೆ ಮುನ್ನಡೆದರು.



ಕಿರಣ್ ಜಾರ್ಜ್

ಅಗ್ರ ಶ್ರೇಯಾಂಕದ ಪುತ್ರಿ ಕುಸುಮ ವಾರ್ದನಿ ಅವರು 21-11, 21-10 ರಿಂದ ಭಾರತದ ತನ್ವಿ ಶರ್ಮಾ ಅವರನ್ನು ಸುಲಭವಾಗಿ ಸೋಲಿಸಿದರು. ಇಂಡೋನೇಷ್ಯಾ ಆಟಗಾರ್ತಿ ಕೇವಲ ಅರ್ಧಗಂಟೆಯಲ್ಲಿ ಪಂದ್ಯ ಗೆದ್ದರು.

ಈ ಹಿನ್ನಡೆಗಳ ಮಧ್ಯೆಯೇ 2023ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಎಚ್.ಎಸ್.ಪ್ರಣಯ್, ಜಪಾನ್‌ನ ಕೋಕಿ ವತಾನಬೆ ಅವರಿಗೆ ವಾಕ್ ಓವರ್ ನೀಡಿದರು.

ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಕಪೂರ್– ರುತ್ವಿಕಾ ಶಿವಾನಿ ಜೋಡಿ, ಐದನೇ ಶ್ರೇಯಾಂಕದ ರುತ್ತನಪಕ್ ಔಪ್ತಾಂಗ್– ಜೆನಿಚಾ ಸುದ್‌ಜೈಪ್ರಪಾರತ್ (ಥಾಯ್ಲೆಂಡ್) ಅವರಿಗೆ 19-21, 14-21 ರಲ್ಲಿ ಮಣಿಯಿತು.

ಮಂಗಳವಾರ ರಾತ್ರಿ ನಡೆದ ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲಿ, ವಿಶ್ವದ ನಾಲ್ಕನೇ ಕ್ರಮಾಂಕದ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ 21-19, 21-19 ರಿಂದ ಸಿಂಗಪುರದ ಇಂಗ್ ಕೀಟ್ ವೆಸ್ಲಿ ಕೊ– ಜುನ್ಸುಕೆ ಕುಬೊ ಜೋಡಿಯನ್ನು ಸೋಲಿಸಿ ಅಂತಿಮ 16ರ ಸುತ್ತು ತಲುಪಿತ್ತು.

ಎಚ್.ಅಮ್ಸಕರುಣ್– ಎಂ.ಆರ್. ಅರ್ಜುನ್ ಜೋಡಿ ಮೊದಲ ಸುತ್ತಿನಲ್ಲಿ 21-16, 24-22 ರಲ್ಲಿ ತೈವಾನ್‌ನ ಚೆನ್ ಝಿ ರೇ–ಲಿನ್ ಯು ಚಿಯಾ ಅವರನ್ನು ಸೋಲಿಸಿತ್ತು.

ಗಾಯಾಳಾಗಿ ನಿವೃತ್ತಿ: ಭಾರತದ ಮಹಿಳೆಯರ ಡಬಲ್ಸ್ ಜೋಡಿ ಟ್ರಿಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಮೊದಲ ಸುತ್ತಿನ ಪಂದ್ಯದಲ್ಲಿ ಗಾಯಾಳಾಗಿ ನಿವೃತ್ತರಾದರು.

ತೈವಾನ್‌ನ ಹೂ ಲಿಂಗ್ ಫಾಂಗ್ ಮತ್ತು ಜೆಂಗ್ ಯು ಚೀಹ್ ವಿರುದ್ಧದ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು 7-13ರಿಂದ ಹಿನ್ನಡೆಯಲ್ಲಿದ್ದಾಗ ಸ್ಪರ್ಧೆಯಿಂದ ಹಿಂದೆ ಸರಿದರು.

ಏಷ್ಯನ್ ವೇಟ್‌ಲಿಫ್ಟಿಂಗ್ ಮುಂದೂಡಿಕೆ

ನವದೆಹಲಿ (ಪಿಟಿಐ): ಅಹಮದಾಬಾದಿನಲ್ಲಿ ಏಪ್ರಿಲ್ 1 ರಿಂದ 10ರವರೆಗೆ ನಡೆಯಬೇಕಿದ್ದ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ಅನ್ನು ಮೇ ತಿಂಗಳಿಗೆ ಮುಂದೂಡಲಾಗಿದೆ.


ಪಶ್ಚಿಮ ಏಷ್ಯಾದಲ್ಲಿ ತಲೆದೋರಿರುವ ಸಂಘರ್ಷದಿಂದ ಚಾಂಪಿಯನ್‌ಷಿಪ್ ಮುಂದಕ್ಕೆ ಹೋಗಿದ್ದು, ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಮೇ 12 ರಿಂದ 17ರವರೆಗೆ ನಡೆಯಲಿದೆ ಎಂದು ಏಷ್ಯನ್ ವೇಟ್‌ಲಿಫ್ಟಿಂಗ್ ಫೆಡರೇಷನ್ ಮಂಗಳವಾರ ಹೇಳಿಕೆಯಲ್ಲಿ ತಿಳಿಸಿದೆ.

ಮಕ್ಕಳ ಅಶ್ಲೀಲ ಚಿತ್ರ: ಜೈಲು ಖಚಿತ

ಒಂದನೇ ಪುಟದಿಂದ...

'ನನ್ನ ಮೊಬೈಲ್‌ನಲ್ಲಿ ಸಂಗ್ರಹಿಸಿರುವ ಚಿತ್ರಗಳನ್ನು ನಾನು ಯಾರೊಂದಿಗೂ ಹಂಚಿಕೊಂಡಿಲ್ಲ' ಎಂಬ ಅರ್ಜಿದಾರರ ವಾದವನ್ನು ನ್ಯಾಯಪೀಠ ಸಾರಾಸಗಟಾಗಿ ತಳ್ಳಿಹಾಕಿದೆ.

'ಅರ್ಜಿದಾರರ ವಿರುದ್ಧದ ಆರೋಪಗಳಿಗೆ ಪ್ರಾಸಿಕ್ಯೂಷನ್ ಪೂರಕ ಸಾಕ್ಷ್ಯಗಳನ್ನು ಮಂಡಿಸಿದೆ. ದಾಖಲೆಗಳು, ಆಪಾದಿತರು ಎಸಗಿರುವ ಅಪರಾಧ ದೃಢೀಕರಿಸುವ ಅಗತ್ಯ ಅಂಶಗಳನ್ನು ಬಹಿರಂಗಪಡಿಸಿವೆ. ಆದ್ದರಿಂದ, ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯಲ್ಲಿ ಅದೂ ಈ ಹಂತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.



ಮೊಬೈಲ್‌ನಲ್ಲಿರುವ ಮಕ್ಕಳ ಅಶ್ಲೀಲ ಚಿತ್ರಗಳನ್ನು ನಾನು ಹಂಚಿಕೊಳ್ಳುವ ಅಥವಾ ಬೇರೊಬ್ಬರಿಗೆ ರವಾನಿಸುವ ಉದ್ದೇಶ ಹೊಂದಿಲ್ಲ ಎಂಬುದು ನಿಷ್ಪ್ರಯೋಜಕ ಸಬೂಬು. ಐಟಿ, ಪೋಕ್ಸೊ ಕಾಯ್ದೆಯ ಕಾಠಿಣ್ಯವನ್ನು ಮೃದುಗೊಳಿಸಲಾಗದು

ನ್ಯಾ.ಎಂ.ನಾಗಪ್ರಸನ್ನ

ಸರಕು ನೌಕೆ ಮೇಲೆ ಇರಾನ್ ದಾಳಿ

ಒಂದನೇ ಪುಟದಿಂದ...

ತೈಲ ಸಾಗಿಸಲು ಬಿಡಲ್ಲ– ಇರಾನ್: ತನ್ನ ಯುದ್ಧನೌಕೆಗಳನ್ನು ಧ್ವಂಸಗೊಳಿಸಿದ್ದರಿಂದ ಕೆರಳಿರುವ ಇರಾನ್, ಪ್ರಾದೇಶಿಕ ತೈಲ ರಫ್ತನ್ನು ಪೂರ್ಣವಾಗಿ ನಿರ್ಬಂಧಿಸುವುದಾಗಿ ಕಟುವಾಗಿ ಪ್ರತಿಕ್ರಿಯಿಸಿದೆ. ಅಲ್ಲದೆ ಶತ್ರುಗಳಿಗೆ ಸಂಬಂಧಿಸಿದ ಒಂದೇ ಒಂದು ಲೀಟರ್ ತೈಲವನ್ನೂ ಇಲ್ಲಿಂದ ಸಾಗಿಸಲು ಬಿಡುವುದಿಲ್ಲ ಎಂದು ಪುನರುಚ್ಚರಿಸಿದೆ.

ವಾಣಿಜ್ಯ ಹಡಗುಗಳು ಮತ್ತು ಯುದ್ಧನೌಕೆಗಳ ಮೇಲಿನ ದಾಳಿಗಳಿಂದ ಜಾಗತಿಕ ಇಂಧನ ಭದ್ರತೆಗೆ ತೀವ್ರ ಆತಂಕ ಎದುರಾಗಿದೆ. ಈಗಾಗಲೇ ದೀರ್ಘಾವಧಿ ಸಾಗಣೆ ಅಡಚಣೆಯ ಆತಂಕದಿಂದ ಕಚ್ಚಾ ತೈಲ ಬೆಲೆ ಶೇ 20ರಷ್ಟು ಏರಿಕೆಯಾಗಿದ್ದು, ವಿಶ್ವದಾದ್ಯಂತ ಹಣಕಾಸು ಮಾರುಕಟ್ಟೆಗೆ ಭಾರಿ ಹೊಡೆತ ಬಿದ್ದಿದೆ ಎಂದು ವಿಶ್ಲೇಷಿಸಲಾಗಿದೆ.

ಇನ್ನೊಂದೆಡೆ, ಟ್ರಂಪ್ ಬೆದರಿಕೆಗೆ ಜಗ್ಗದ ಇರಾನ್ ನಾಯಕರು ಮಾತುಕತೆಯನ್ನು ತಳ್ಳಿಹಾಕಿದ್ದಾರೆ. ಅಲ್ಲದೆ ಇಸ್ರೇಲ್ ಮತ್ತು ಕೊಲ್ಲಿ ದೇಶಗಳ ವಿರುದ್ಧ ಹೊಸದಾಗಿ ದಾಳಿಗಳನ್ನು ನಡೆಸಿದೆ. ಮತ್ತೊಂದೆಡೆ ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಟೆಹರಾನ್ ಮೇಲಿನ ದಾಳಿಯನ್ನು ತೀವ್ರಗೊಳಿಸಿದ್ದು, ವಸತಿ ಪ್ರದೇಶಗಳನ್ನು ಗುರಿಯಾಗಿಸಿವೆ. ಇದರಿಂದ ಇರಾನ್‌ನ ಸಾವಿರಾರು ಜನರು ನಗರಗಳನ್ನು ತೊರೆದು ಗ್ರಾಮೀಣ ಭಾಗಗಳಲ್ಲಿ ಆಶ್ರಯ ಪಡೆದಿದ್ದಾರೆ ಎಂದು ಗೊತ್ತಾಗಿದೆ.

'ಎಂಟು ಡ್ರೋನ್‌ಗಳ ಧ್ವಂಸ'

ಒಂದನೇ ಪುಟದಿಂದ...

ಒಂದೆಡೆ ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆಯನ್ನು ಪರಿಣಾಮಕಾರಿಯಾಗಿ ನಿಲ್ಲಿಸಿರುವ ಇರಾನ್, ಮತ್ತೊಂದೆಡೆ ಕೊಲ್ಲಿ ದೇಶಗಳಲ್ಲಿನ ತೈಲ ನಿಕ್ಷೇಪಗಳು ಮತ್ತು ಸಂಸ್ಕರಣಾಗಾರಗಳನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದೆ. ಈ ಮೂಲಕ ಅಮೆರಿಕ ಮತ್ತು ಇಸ್ರೇಲ್ ಮೇಲೆ ತೀವ್ರ ಒತ್ತಡ ಹೇರುವ ಉದ್ದೇಶವನ್ನು ಅದು ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಚಿನ್ನಸ್ವಾಮಿಯಲ್ಲಿ ಉದ್ಘಾಟನಾ ಪಂದ್ಯ

ಐಪಿಎಲ್ ಮೊದಲ ಹಂತದ ವೇಳಾಪಟ್ಟಿ ಬಿಡುಗಡೆ • ಮಾರ್ಚ್ 28ರಿಂದ ಟೂರ್ನಿ ಆರಂಭ • ಆರ್‌ಸಿಬಿ–ಸನ್ ಹಣಾಹಣಿ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಮೊದಲ 16 ದಿನಗಳ ವೇಳಾಪಟ್ಟಿಯನ್ನು ಬುಧವಾರ ಪ್ರಕಟಿಸಲಾಗಿದೆ. ಇದರಲ್ಲಿ 20 ಪಂದ್ಯಗಳು ನಡೆಯಲಿವೆ.

ಮಾರ್ಚ್ 28ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಲಿವೆ. ಏಪ್ರಿಲ್ 5ರಂದು ಇಲ್ಲಿ ನಡೆಯುವ ಇನ್ನೊಂದು ಪಂದ್ಯದಲ್ಲಿ ಆರ್‌ಸಿಬಿ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಹಣಾಹಣಿ ನಡೆಸಲಿವೆ.

ಆದರೆ; ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿಯ ಕುರಿತು ಸರ್ಕಾರ ನೇಮಕ ಮಾಡಿರುವ ಪರಿಶೀಲನಾ ಸಮಿತಿಯು ಇದೇ 13ರಂದು ಅವಲೋಕನ ಮಾಡಲಿದೆ. ತದನಂತರ ವಷ್ಟೇ ಸಮಿತಿಯು ವರದಿ ನೀಡಲಿದೆ. ಹೋದ ವರ್ಷ ಜೂನ್‌ನಲ್ಲಿ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ದುರ್ಮರಣಕ್ಕೀಡಾಗಿದ್ದರು.

ಅಲ್ಲದೇ ಈ ಬಾರಿ ತಮಿಳುನಾಡು, ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆಗಳು ನಡೆಯಲಿವೆ. ಅವುಗಳ ವೇಳಾಪಟ್ಟಿ ಇನ್ನಷ್ಟೇ ಪ್ರಕಟವಾಗಬೇಕಿದೆ. ಚುನಾವಣೆ ದಿನಾಂಕಗಳು ಪ್ರಕಟವಾದ ನಂತರ ಆಯಾ ರಾಜ್ಯಗಳ ಕ್ರೀಡಾಂಗಣಗಳಲ್ಲಿ ನಿಗದಿಯಾಗಿರುವ ಪಂದ್ಯಗಳನ್ನು ಬೇರೆಡೆ ಸ್ಥಳಾಂತರಿಸುವ ಸಾಧ್ಯತೆಗಳೂ ಇವೆ.

ಪಶ್ಚಿಮ ಏಷ್ಯಾದಲ್ಲಿ ನಡೆದಿರುವ ಯುದ್ಧದಿಂದಾಗಿ ಪ್ರಮುಖ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳು ಇರುವ ದೋಹಾ ಮತ್ತು ದುಬೈಗಳಲ್ಲಿ ವಿಮಾನಯಾನವೂ ಅಸ್ತವ್ಯಸ್ತವಾಗಿದೆ. ಆದ್ದರಿಂದ ವಿದೇಶಿ ಆಟಗಾರರು ಐಪಿಎಲ್ ಟೂರ್ನಿಗೆ ಆಗಮಿಸುವ ಕುರಿತು ಗೊಂದಲಗಳು ಮೂಡಿವೆ.

‘ಭಾರತದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಆಟಗಾರರಿಗೆ ತಮ್ಮ ತವರಿಗೆ ಹಿಂತಿರುಗಲು ಇನ್ನೂ ಸಾಧ್ಯವಾಗಿಲ್ಲ. ಅವರನ್ನು ಸುರಕ್ಷಿತವಾಗಿ ಕಳಿಸಲು ಐಸಿಸಿಯು ಬುಧವಾರದಿಂದ ವ್ಯವಸ್ಥೆ ಮಾಡಿದೆ. ಆ ತಂಡಗಳಲ್ಲಿರುವ ಐಪಿಎಲ್ ಆಟಗಾರರು ಸರಿಯಾದ ಸಮಯಕ್ಕೆ ಮತ್ತೆ ಇಲ್ಲಿಗೆ ಬರುವುದು ಕಷ್ಟವಾಗಲಿದೆ’ ಎಂದು ತಂಡದ ಮೂಲಗಳು ತಿಳಿಸಿವೆ.

ಟೂರ್ನಿಯ ಎರಡನೇ ಪಂದ್ಯವು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದ್ದು ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಮುಂಬೈ ಇಂಡಿಯನ್ಸ್ ಮುಖಾಮುಖಿಯಾಗಲಿವೆ.

‘ಈ ಋತುವಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ತವರಿನಂಗಳದಲ್ಲಿ ಐದು ಪಂದ್ಯಗಳನ್ನು ಆಡಲಿದೆ. ಎರಡು ಪಂದ್ಯಳನ್ನು ರಾಯಪುರದಲ್ಲಿ ಆಡಲಿದೆ. ಪಂಜಾಬ್ ಕಿಂಗ್ಸ್ ತಂಡವು ತನ್ನ ತವರು ನವ ಚಂಡೀಗಢದಲ್ಲಿ (ಮುಲ್ಲನಪುರ) ನಾಲ್ಕು ಮತ್ತು ಧರ್ಮಶಾಲಾದಲ್ಲಿ ಮೂರು ಪಂದ್ಯಗಳನ್ನು ಆಡಲಿದೆ. ರಾಜಸ್ಥಾನ ರಾಯಲ್ಸ್ ಗುವಾಹಟಿಯಲ್ಲಿ ಮೂರು ಮತ್ತು ಜೈಪುರದಲ್ಲಿ ನಾಲ್ಕು ಪಂದ್ಯಗಳನ್ನು ಆಡಲಿದೆ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಮೊದಲ ಹಂತದ ವೇಳಾಪಟ್ಟಿಯ ಪ್ರಕಾರ ನಾಲ್ಕು ಡಬಲ್ ಹೆಡರ್‌ಗಳು ಇರಲಿವೆ. ಪಂದ್ಯಗಳು ಮಧ್ಯಾಹ್ನ 3.30ಕ್ಕೆ ಹಾಗೂ ರಾತ್ರಿ 7.30ಕ್ಕೆ ಆರಂಭವಾಗಲಿವೆ’ ಎಂದೂ ತಿಳಿಸಲಾಗಿದೆ.



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹೋದ ವರ್ಷ ನಡೆದ ಆರ್‌ಸಿಬಿ ವಿಜಯೋತ್ಸವ ಕಾರ್ಯಕ್ರಮದಲ್ಲಿ ಟ್ರೋಫಿಯೊಂದಿಗೆ ವಿರಾಟ್ ಕೊಹ್ಲಿ ಸಂಭ್ರಮಿಸಿದ್ದರು
ಪ್ರಜಾವಾಣಿ ಚಿತ್ರ ಸಂಗ್ರಹದಿಂದ

ನಾಳೆ ಸಮಗ್ರ ಪರಿಶೀಲನೆ

ಬೆಂಗಳೂರಿನಲ್ಲಿ ನಡೆಯುವ ಪಂದ್ಯಗಳು ಕರ್ನಾಟಕ ಸರ್ಕಾರ ರಚಿಸಿದ ತಜ್ಞರ ಸಮಿತಿಯ ಅನುಮತಿಗೆ ಒಳಪಟ್ಟಿರುತ್ತವೆ ಎಂದು ಬಿಸಿಸಿಐ ತಿಳಿಸಿದೆ.

ಈ ಮಧ್ಯೆ, ಸುರಕ್ಷತಾ ಕ್ರಮಗಳ ಕುರಿತು ಕೈಗೊಂಡಿರುವ ಕೆಲಸಗಳು ಸರಿಯಾದ ಹಾದಿಯಲ್ಲಿವೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಹೇಳಿಕೊಂಡಿದೆ.

ಕ್ರೀಡಾಂಗಣದ ಸಿದ್ಧತೆಯ ಮಟ್ಟವನ್ನು ಪರಿಶೀಲಿಸಲು ಇದೇ 13ರಂದು ಪೂರ್ಣಪ್ರಮಾಣದ ಅಣಕು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಖಚಿತಪಡಿಸಿದ್ದಾರೆ.

ಐಪಿಎಲ್ ವೇಳಾಪಟ್ಟಿ (ಮೊದಲ 20 ಪಂದ್ಯ)

ದಿನಾಂಕ	ತಂಡಗಳು	ತಾಣ	ಸಮಯ
ಮಾರ್ಚ್ 28	ಆರ್‌ಸಿಬಿ–ಎಸ್‌ಆರ್‌ಎಚ್	ಬೆಂಗಳೂರು	ರಾತ್ರಿ 7.30
ಮಾರ್ಚ್ 29	ಎಂಐ–ಕೆಕೆಆರ್	ಮುಂಬೈ	ರಾತ್ರಿ 7.30
ಮಾರ್ಚ್ 30	ಆರ್‌ಆರ್–ಸಿಎಸ್‌ಕೆ	ಗುವಾಹಟಿ	ರಾತ್ರಿ 7.30
ಮಾರ್ಚ್ 31	ಪಿಬಿಕೆಎಸ್–ಜಿಟಿ	ಮುಲ್ಲನಪುರ	ರಾತ್ರಿ 7.30
ಏ.1	ಎಲ್‌ಎಸ್‌ಜಿ–ಡಿಸಿ	ಲಖನೌ	ರಾತ್ರಿ 7.30
ಏ.2	ಕೆಕೆಆರ್–ಎಸ್‌ಆರ್‌ಎಚ್	ಕೋಲ್ಕತ್ತ	ರಾತ್ರಿ 7.30
ಏ.3	ಸಿಎಸ್‌ಕೆ–ಪಿಬಿಕೆಎಸ್	ಚೆನ್ನೈ	ರಾತ್ರಿ 7.30
ಏ.4	ಡಿಸಿ–ಎಂಐ	ದೆಹಲಿ	ಮಧ್ಯಾಹ್ನ 3.30
ಏ.4	ಜಿಟಿ–ಆರ್‌ಆರ್	ಅಹಮದಾಬಾದ್	ರಾತ್ರಿ 7.30
ಏ.5	ಎಸ್‌ಆರ್‌ಎಚ್–ಎಲ್‌ಎಸ್‌ಜಿ	ಹೈದರಾಬಾದ್	ಮಧ್ಯಾಹ್ನ 3.30
ಏ.5	ಆರ್‌ಸಿಬಿ–ಸಿಎಸ್‌ಕೆ	ಬೆಂಗಳೂರು	ರಾತ್ರಿ 7.30
ಏ.6	ಕೆಕೆಆರ್–ಪಿಬಿಕೆಎಸ್	ಕೋಲ್ಕತ್ತ	ರಾತ್ರಿ 7.30
ಏ.7	ಆರ್‌ಆರ್–ಎಂಐ	ಗುವಾಹಟಿ	ರಾತ್ರಿ 7.30
ಏ.8	ಡಿಸಿ–ಜಿಟಿ	ದೆಹಲಿ	ರಾತ್ರಿ 7.30
ಏ.9	ಕೆಕೆಆರ್–ಎಲ್‌ಎಸ್‌ಜಿ	ಕೋಲ್ಕತ್ತ	ರಾತ್ರಿ 7.30
ಏ.10	ಆರ್‌ಆರ್–ಆರ್‌ಸಿಬಿ	ಗುವಾಹಟಿ	ರಾತ್ರಿ 7.30
ಏ.11	ಪಿಬಿಕೆಎಸ್–ಎಸ್‌ಆರ್‌ಎಚ್	ಮುಲ್ಲನಪುರ	ಮಧ್ಯಾಹ್ನ 3.30
ಏ.11	ಸಿಎಸ್‌ಕೆ–ಡಿಸಿ	ಚೆನ್ನೈ	ರಾತ್ರಿ 7.30
ಏ.12	ಎಲ್‌ಎಸ್‌ಜಿ–ಜಿಟಿ	ಲಖನೌ	ಮಧ್ಯಾಹ್ನ 3.30
ಏ.12	ಎಂಐ–ಆರ್‌ಸಿಬಿ	ಮುಂಬೈ	ರಾತ್ರಿ 7.30

- ಆರ್‌ಸಿಬಿ-ರಾಯಲ್ ಚಾಲೆಂಜರ್ಸ್ ಬೆಂಗಳೂರು
- ಎಸ್‌ಆರ್‌ಎಚ್-ಸನ್‌ರೈಸರ್ಸ್ ಹೈದರಾಬಾದ್
- ಎಂಐ–ಮುಂಬೈ ಇಂಡಿಯನ್ಸ್
- ಕೆಕೆಆರ್–ಕೋಲ್ಕತ್ತ ನೈಟ್ ರೈಡರ್ಸ್
- ಆರ್‌ಆರ್–ರಾಜಸ್ಥಾನ ರಾಯಲ್ಸ್
- ಸಿಎಸ್‌ಕೆ– ಚೆನ್ನೈ ಸೂಪರ್ ಕಿಂಗ್ಸ್
- ಪಿಬಿಕೆಎಸ್–ಪಂಜಾಬ್ ಕಿಂಗ್ಸ್
- ಜಿಟಿ–ಗುಜರಾತ್ ಜೈಂಟ್ಸ್
- ಎಲ್‌ಎಸ್‌ಜಿ-ಲಖನೌ ಸೂಪರ್ ಜೈಂಟ್ಸ್
- ಡಿಸಿ–ಡೆಲ್ಲಿ ಕ್ಯಾಪಿಟಲ್ಸ್

ಅಹಮದಾಬಾದಿನಿಂದ ಮುಂಬೈಗೆ ರೈಲಿನಲ್ಲಿ ಪ್ರಯಾಣಿಸಿದ ಶಿವಂ ದುಬೆ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಸ್ಫೋಟಕ ಶೈಲಿಯ ಬ್ಯಾಟರ್ ಶಿವಂ ದುಬೆ ಅವರು ಟಿ20 ವಿಶ್ವಕಪ್ ಫೈನಲ್ ಪಂದ್ಯದ ನಂತರ ತಮ್ಮ ಪತ್ನಿಯೊಂದಿಗೆ ಅಹಮದಾಬಾದಿನಿಂದ ಮುಂಬೈಗೆ ರೈಲಿನಲ್ಲಿ ಪ್ರಯಾಣ ಮಾಡಿದ್ದಾರೆ.

ಫೈನಲ್ ಪಂದ್ಯದಲ್ಲಿ ಎಡಗೈ ಬ್ಯಾಟರ್ ಶಿವಂ ಅವರು ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ 24 ರನ್ ಸೂರೆ ಮಾಡಿದ್ದರು.

‘ಅಹಮದಾಬಾದಿನಿಂದ ಮುಂಬೈಗೆ ತೆರಳುವ ಎಲ್ಲ ವಿಮಾನಗಳ ಆಸನಗಳು ಭರ್ತಿಯಾಗಿದ್ದವು. ಆದ್ದರಿಂದ ಶಿವಂ ಅವರು ರೈಲಿನಲ್ಲಿ ಪ್ರಯಾಣ ಮಾಡಲು ನಿರ್ಧರಿಸಿದ್ದರು. ಮುಂಬೈನಲ್ಲಿ ತಮ್ಮ ಇಬ್ಬರು ಮಕ್ಕಳಷ್ಟೇ ಇರುವುದರಿಂದ ಮನೆಗೆ ಬೇಗ ತಲುಪುವ ಉದ್ದೇಶ ದುಬೆ ದಂಪತಿಯದ್ದಾಗಿತ್ತು. ಆದರೆ ರೈಲು ನಿಲ್ದಾಣ ಮತ್ತು ಪ್ರಯಾಣದಲ್ಲಿ ಸಾರ್ವಜನಿಕರು ಅವರನ್ನು ಗುರುತಿಸಿದ್ದರೆ ದಟ್ಟಣೆ ಉಂಟಾಗುವ ಆತಂಕವೂ ಇತ್ತು. ಆದರೂ ಶಿವಂ, ತಮ್ಮ ಪತ್ನಿ ಅಂಜುಮ್ ಮತ್ತು ಸ್ನೇಹಿತ ಸೇರಿ ರೈಲಿನಲ್ಲಿ ಪ್ರಯಾಣ ಮಾಡಿ ಮುಂಬೈ ತಲುಪಿದರೆಂದು ನಮಗೂ ಮಾಧ್ಯಮಗಳ ಮಾಹಿತಿಗಳಿಂದ ಗೊತ್ತಾಗಿದೆ’ ಎಂದು ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ 5.10ಕ್ಕೆ ಅಹಮದಾಬಾದಿನಿಂದ ಹೊರಟ ಸಯ್ಯಾಜಿ ನಗರಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಅವರು ಪ್ರಯಾಣ ಮಾಡಿದರು. ಎಂಟು ಗಂಟೆಗಳ ಪ್ರಯಾಣದ ನಂತರ ಮುಂಬೈ ತಲುಪಿದರು.

ರೈಲಿನಲ್ಲಿ ಟಿಕೆಟ್ ನಿರೀಕ್ಷಕರೊಬ್ಬರು ಪ್ರಯಾಣಿಕರ ಕಾಯ್ದಿಟ್ಟ ಆಸನಗಳ ಪಟ್ಟಿಯಲ್ಲಿ ದುಬೆ ಅವರ ಹೆಸರು ನೋಡಿ ಅಚ್ಚರಿಗೊಂಡಿದ್ದರು. ಟಿಕೆಟ್ ಪರಿಶೀಲನೆಗೆ ಅವರಿದ್ದ ಆಸನದ ಬಳಿ ತೆರಳಿ ಅಂಜುಮ್ ಅವರನ್ನು ಪ್ರಶ್ನಿಸಿದ್ದರು. ಆದರೆ, ಈ ಶಿವಂ ಕ್ರಿಕೆಟಿಗ ಅಲ್ಲ ಎಂಬ ಉತ್ತರ ಅಂಜುಮ್ ಅವರಿಂದ ಬಂದಿತ್ತು. ಈ ಹೊತ್ತಿನಲ್ಲಿ ಶಿವಂ ಅವರು ಸಹಪ್ರಯಾಣಿಕರಿಗೆ ಗುರುತು ಸಿಗದಂತೆ ಟೋಪಿ, ಮುಖಗವಸು ಮತ್ತು ಪೂರ್ಣ ತೋಳಿನ ಟೀ ಶರ್ಟ್ ಧರಿಸಿದ್ದರು. ವಾತಾನುಕೂಲಿತ (3 ಟಿಯರ್) ಬೋಗಿಯ ಮೇಲ್ಭಾಗದ ಬರ್ತ್‌ನಲ್ಲಿ ಮಲಗಿದ್ದರು. ಸುಮಾರು ಒಂದು ತಿಂಗಳು ನಡೆದ ಟೂರ್ನಿಯಲ್ಲಿ ಆಡಿ, ಫೈನಲ್‌ನಲ್ಲಿ ಗೆದ್ದ ನಂತರ ಸಂಭ್ರಮದಲ್ಲಿ ಸಹ ಆಟಗಾರರೊಂದಿಗೆ ಕುಣಿದು, ಕುಪ್ಪಳಿಸಿ ಸುಸ್ತಾಗಿದ್ದ ಅವರು ಗಾಢ ನಿದ್ದೆ ಮಾಡಿದ್ದರು.

ಆದರೆ ಮಧ್ಯಾಹ್ನ 1 ಗಂಟೆಗೆ ರೈಲು ಬೋರಿವಿಲಿ ನಿಲ್ದಾಣ ತಲುಪಿದಾಗ ಜನದಟ್ಟಣೆ ಉಂಟಾಗುವ ಬಗ್ಗೆ ಶಿವಂ ಅವರು ಮೊದಲೇ ಅಂದಾಜಿಸಿದ್ದರು. ರೈಲು ನಿಲ್ದಾಣದ ಪೊಲೀಸರನ್ನು ಮೊದಲೇ ಸಂಪರ್ಕಿಸಿದ್ದ ಅವರು ತಮ್ಮನ್ನು ಜನರ ಗಮನಕ್ಕೆ ಬರದಿಂದ ಹೊರಗೆ ಕರೆದೊಯ್ಯಲು ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿದ್ದರು. ಅವರ ಮನವಿಯನ್ನು ಪೊಲೀಸರು ಪುರಸ್ಕರಿಸಿದರು. ಸಮವಸ್ತ್ರ ಬಿಟ್ಟು ಸಾಮಾನ್ಯ ಉಡುಪು ಧರಿಸಿದ್ದ ಪೊಲೀಸ್ ಸಿಬ್ಬಂದಿಯು, ದುಬೆ ದಂಪತಿಯನ್ನು ನಿಲ್ದಾಣದ ಹೊರಗೆ ಕರೆದುಕೊಂಡು ಹೋಗಿ ಕಾರು ಹತ್ತಿಸಿದರು ಎಂದೂ ರೈಲ್ವೆ ಅಧಿಕಾರಿ ತಿಳಿಸಿದ್ದಾರೆ.



ಶಿವಂ ದುಬೆ

ಪ್ರಯಾಣ ವಿಳಂಬ: ಟೀಕೆಗಳಿಗೆ ಐಸಿಸಿ ಪ್ರತಿಕ್ರಿಯೆ

‘ಆಟಗಾರರ ಸುರಕ್ಷತೆಗೆ ಆದ್ಯತೆ’

ದುಬೈ (ಪಿಟಿಐ): ಭಾರತಕ್ಕೆ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲು ಬಂದಿದ್ದ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಆಟಗಾರರು ತಮ್ಮ ತವರಿಗೆ ತೆರಳಲು ವಿಳಂಬವಾಗಿರುವುದರ ಕುರಿತು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ‘ಸಹಾನುಭೂತಿ’ ವ್ಯಕ್ತಪಡಿಸಿದೆ.

ಈ ಬಗ್ಗೆ ವ್ಯಕ್ತವಾಗಿರುವ ಟೀಕೆಗಳನ್ನು ತಳ್ಳಿಹಾಕಿರುವ ಐಸಿಸಿಯು, ‘ಆಟಗಾರರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಅದು ಬಿಟ್ಟು ಬೇರೆ ಯಾವುದೇ ಕಾರಣವಿಲ್ಲ’ ಎಂದಿದೆ.

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ನಡೆಯುತ್ತಿರುವುದರಿಂದ ವಿಮಾನ ಯಾನ ವ್ಯವಸ್ಥೆಯಲ್ಲಿ ವ್ಯತ್ಯಯವುಂಟಾಗಿದೆ. ಅದರಲ್ಲೂ ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧದ ವಾತಾವರಣವಿರುವುದರಿಂದ ಬಹಳಷ್ಟು ವಿಮಾನ ಮಾರ್ಗಗಳನ್ನು ಮುಚ್ಚಲಾಗಿದೆ.

‘ಲಭ್ಯವಿರುವ ಪರ್ಯಾಯ ಮಾರ್ಗಗಳ ಮೂಲಕ ಪ್ರಯಾಣ ವ್ಯವಸ್ಥೆ ಮಾಡುವಾಗ ಆಟಗಾರರ ಸುರಕ್ಷತೆ ಮತ್ತು ಕ್ಷೇಮಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ. ಕಾಳಜಿಪೂರ್ವಕವಾಗಿ ಅವರ ಮರು ಪ್ರಯಾಣದ ವ್ಯವಸ್ಥೆ ಮಾಡಲಾಗುತ್ತಿದೆ’ ಎಂದು ಐಸಿಸಿ ತಿಳಿಸಿದೆ.

‘ದಕ್ಷಿಣ ಆಫ್ರಿಕಾದ ಆಟಗಾರರ ಮರಳುವಿಕೆಯು ಆರಂಭವಾಗಿದೆ. ತಂಡದ ನಾಲ್ವರು ಆಟಗಾರರು ಮತ್ತು ಐವರು ಕುಟುಂಬ ಸದಸ್ಯರು ಈಗಾಗಲೇ ವಿಮಾನವೇರಿದ್ದಾರೆ. ಇನ್ನುಳಿದ 29 ಸದಸ್ಯರ ತಂಡವು 24 ಗಂಟೆಗಳಲ್ಲಿ ಪ್ರಯಾಣ ಆರಂಭಿಸಲಿದೆ’ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

‘ವೆಸ್ಟ್ ಇಂಡೀಸ್ ತಂಡದ ಒಂಬತ್ತು ಮಂದಿ ಈಗಾಗಲೇ ಕೆರಿಬಿಯನ್ ದ್ವೀಪಗಳಿಗೆ ಪ್ರಯಾಣ ಬೆಳೆಸಿದ್ದಾರೆ. ಇನ್ನೂ 16 ಜನರಿಗೆ ಮುಂಬರುವ 12 ಗಂಟೆಗಳಲ್ಲಿ ಸ್ವದೇಶಕ್ಕೆ ಮರಳುವ ವ್ಯವಸ್ಥೆ ಮಾಡಲಾಗಿದೆ’ ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂಗ್ಲೆಂಡ್ ತಂಡದ ಮಾಜಿ ನಾಯಕ ಮೈಕೆಲ್ ವಾನ್ ಮತ್ತು ದಕ್ಷಿಣ ಆಫ್ರಿಕಾ ತಂಡದ ಆಟಗಾರ ಡೇವಿಡ್ ಮಿಲ್ಲರ್ ಅವರು ಐಸಿಸಿಯನ್ನು ಟೀಕಿಸಿದ್ದರು. ಇಂಗ್ಲೆಂಡ್ ಆಟಗಾರರು ಸೆಮಿಫೈನಲ್‌ನಲ್ಲಿ ಸೋತ ಮರುದಿನವೇ ಸ್ವದೇಶಕ್ಕೆ ಪ್ರಯಾಣಿಸಿದ್ದರು. ಅವರಿಗಿಂತ ಮುಂಚೆಯೇ ಮುಗಿದಿದ್ದ ಪಂದ್ಯಗಳಲ್ಲಿ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ಸೋತಿದ್ದವು. ಆದರೆ ಮರುಪ್ರಯಾಣ ಸಾಧ್ಯವಾಗದಿರುವ ಬಗ್ಗೆ ವಿಂಡೀಸ್ ಮುಖ್ಯ ಕೋಚ್ ಡ್ಯಾರೆನ್ ಸಾಮಿ ಬೇಸರ ವ್ಯಕ್ತಪಡಿಸಿದ್ದರು.

ಈ ಕುರಿತು ಯಾರ ಹೆಸರನ್ನೂ ಉಲ್ಲೇಖಿಸದೇ ಪ್ರತಿಕ್ರಿಯೆ ನೀಡಿರುವ ಐಸಿಸಿ, ‘ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್ ದೇಶಗಳಿಗೆ ಮಾಡುವ ಪ್ರಯಾಣದ ವ್ಯವಸ್ಥೆ ಮತ್ತು ಇಂಗ್ಲೆಂಡ್ ಪ್ರಯಾಣಕ್ಕಾಗಿ ಮಾಡಿದ ವ್ಯವಸ್ಥೆಗಳಿಗೆ ಯಾವುದೇ ಸಂಬಂಧ ಇಲ್ಲ. ಎರಡೂ ಕಡೆಯ ಪರಿಸ್ಥಿತಿ ಭಿನ್ನವಾಗಿವೆ. ಪ್ರಯಾಣದ ಮಾರ್ಗಗಳೂ ಬೇರೆ ಬೇರೆ’ ಎಂದಿದೆ.

ಚಾಂಪಿಯನ್ ಭಾರತ ತಂಡಕ್ಕೆ ₹25 ಕೋಟಿ ಬಹುಮಾನ

ದುಬೈ (ಪಿಟಿಐ): ತವರಿನಲ್ಲಿ ಟಿ20 ವಿಶ್ವಕಪ್ ಗೆದ್ದ ಭಾರತ ಪುರುಷರ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನಿಂದ ಸುಮಾರು ₹25 ಕೋಟಿ ಬಹುಮಾನ ಪಡೆದಿದೆ. ಒಟ್ಟು ₹103 ಕೋಟಿ ಬಹುಮಾನದ ಮೊತ್ತದಲ್ಲಿ ಬಹುಪಾಲು ಚಾಂಪಿಯನ್ ತಂಡಕ್ಕೆ ಲಭಿಸಿದೆ.

ಭಾರತ ತಂಡವು ಫೈನಲ್‌ನಲ್ಲಿ 96 ರನ್‌ಗಳ ಅಂತರದಿಂದ ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಪ್ರಶಸ್ತಿ ಗೆದ್ದಿತ್ತು. ರನ್ನರ್ ಅಪ್ ನ್ಯೂಜಿಲೆಂಡ್ ಸುಮಾರು ₹13 ಕೋಟಿ ಬಹುಮಾನ ಗಳಿಸಿದೆ.

ಸೆಮಿಫೈನಲ್ ತಲುಪಿದ್ದ ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ತಂಡಗಳು ಕ್ರಮವಾಗಿ ₹ 9.24 ಕೋಟಿ ಮತ್ತು ₹ 8.96 ಕೋಟಿ ಪಡೆದಿವೆ. ಸೂಪರ್ ಎಂಟರ ಹಂತದಲ್ಲಿ ಹೊರಬಿದ್ದ ಪಾಕಿಸ್ತಾನ ತಂಡವು ₹4.82 ಕೋಟಿ ಗಳಿಸಿದೆ.

ಎರಡನೇ ಸ್ಥಾನಕ್ಕೇರಿದ ಇಶಾನ್



ದುಬೈ (ಪಿಟಿಐ): ಇತ್ತೀಚಿನ ಟಿ20 ವಿಶ್ವಕಪ್‌ನಲ್ಲಿ ಅಮೋಘವಾಗಿ ಆಡಿದ್ದ ಇಶಾನ್ ಕಿಶನ್ ಅವರು ಬುಧವಾರ ಪ್ರಕಟವಾದ ಐಸಿಸಿ ಟಿ20 ಕ್ರಮಾಂಕ ಪಟ್ಟಿಯ ಬ್ಯಾಟರ್‌ಗಳ ವಿಭಾಗ ದಲ್ಲಿ ಎರಡನೇ ಸ್ಥಾನಕ್ಕೆ ಏರಿದ್ದಾರೆ. ಅಭಿಷೇಕ್ ಶರ್ಮಾ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ.

ವಿಶ್ವಕಪ್ ಫೈನಲ್‌ನಲ್ಲಿ ಬಿರುಸಿನ ಅರ್ಧಶತಕ ಹೊಡೆದಿದ್ದ ಅಭಿಷೇಕ್ 875 ರೇಟಿಂಗ್ ಪಾಯಿಂಟ್ಸ್ ಕಲೆಹಾಕಿದ್ದಾರೆ. ಅವರಿಗೂ ಅಗ್ರಸ್ಥಾನದಲ್ಲಿರುವ ಇಶಾನ್ ಕಿಶನ್ (870) ಅವರಿಗೂ ಐದು ಪಾಯಿಂಟ್‌ಗಳ ಅಂತರವಿದೆ. ವಿಶ್ವಕಪ್‌ನಲ್ಲಿ ಇಶಾನ್ 317 ರನ್ ಬಾರಿಸಿದ್ದರು. ನ್ಯೂಜಿಲೆಂಡ್‌ನ ಆರಂಭ ಆಟಗಾರ ಟಿಮ್ ಸೀಫರ್ಟ್ ಅವರು ನಾಲ್ಕು ಸ್ಥಾನ ಬಡ್ತಿ ಗಳಿಸಿ ಆರನೇ ಕ್ರಮಾಂಕಕ್ಕೇರಿದ್ದಾರೆ.

ವಿಶ್ವಕಪ್ ಟೂರ್ನಿಯಲ್ಲಿ ದುಬಾರಿಯೆನಿಸಿದ್ದ ಭಾರತದ ಸ್ಪಿನ್ನರ್ ವರುಣ್ ಚಕ್ರವರ್ತಿ ಅಗ್ರಸ್ಥಾನ ಕಳೆದುಕೊಂಡಿದ್ದಾರೆ. ಅಫ್ಗಾನಿಸ್ತಾನದ ಅನುಭವಿ ಸ್ಪಿನ್ನರ್ ರಶೀದ್ ಖಾನ್ ಮೊದಲ ಸ್ಥಾನಕ್ಕೇರಿದ್ದಾರೆ. ರಶೀದ್ 753 ರೇಟಿಂಗ್ ಪಾಯಿಂಟ್ಸ್ ಗಳಿಸಿದ್ದರೆ, ಎರಡನೇ ಸ್ಥಾನದಲ್ಲಿರುವ ಚಕ್ರವರ್ತಿ ಖಾತೆಯಲ್ಲಿ 740 ಪಾಯಿಂಟ್ಸ್ ಇದೆ.

ಭಾರತದ ಅಗ್ರಮಾನ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಒಂದು ಸ್ಥಾನ ಬಡ್ತಿ ಪಡೆದು ಆರನೇ ಕ್ರಮಾಂಕ ಗಳಿಸಿದ್ದಾರೆ. ಅಕ್ಷರ್ ಪಟೇಲ್ ಸಹ ಆರು ಸ್ಥಾನ ಮೇಲೇರಿ 17ನೇ ಕ್ರಮಾಂಕ ಗಳಿಸಿದ್ದಾರೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವು ಐಪಿಎಲ್ ಪಂದ್ಯಗಳನ್ನು ಆಯೋಜಿಸಲು ಯೋಗ್ಯವೇ?

• ಹೌದು • ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಟೈಟನ್ಸ್‌ಗೆ ದಹಿಯಾ ಸಹಾಯಕ ಕೋಚ್

ಅಹಮದಾಬಾದ್ (ಪಿಟಿಐ): ಭಾರತದ ಮಾಜಿ ವಿಕೆಟ್ ಕೀಪರ್ ವಿಜಯ್ ದಹಿಯಾ ಅವರನ್ನು ಗುಜರಾತ್ ಟೈಟನ್ಸ್ ತಂಡವು ಮುಂಬರುವ ಐಪಿಎಲ್ ಋತುವಿಗೆ ಸಹಾಯಕ ಕೋಚ್ ಆಗಿ ನೇಮಕ ಮಾಡಿಕೊಂಡಿದೆ.

ಆ ಮೂಲಕ ಕೋಚಿಂಗ್ ವಿಭಾಗಕ್ಕೆ ಬಲ ನೀಡಿದೆ. ಎರಡು ದಿನಗಳ ಹಿಂದಷ್ಟೇ ಮ್ಯಾಥ್ಯೂ ಹೇಡನ್ ಅವರನ್ನು ಬ್ಯಾಟಿಂಗ್ ಕೋಚ್ ಆಗಿ ನೇಮಕ ಮಾಡಿಕೊಂಡಿತ್ತು.

ಜೈಂಟ್ಸ್‌ಗೆ ರಣಧೀರ್ ಕೋಚ್




ಅಹಮದಾಬಾದ್ (ಪಿಟಿಐ): ಮಾಜಿ ಅಂತರರಾಷ್ಟ್ರೀಯ ಆಟಗಾರ ರಣಧೀರ್ ಸಿಂಗ್ ಸೆಹ್ರಾವತ್ ಅವರು ಮುಂಬರುವ ಪ್ರೊ ಕಬಡ್ಡಿ ಲೀಗ್ ಋತುವಿನಲ್ಲಿ ಗುಜರಾತ್ ಟೈಟನ್ಸ್ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ.

ಸೆಹ್ರಾವತ್ ಅವರು 11 ವರ್ಷ ಪಿಕೆಎಲ್ ಅನುಭವ ಹೊಂದಿದ್ದಾರೆ. 2014ರ ಮೊದಲ ಋತುವಿನಿಂದ ಅವರು ಬೆಂಗಳೂರು ಬುಲ್ಸ್ ತಂಡದ ಕೋಚ್ ಆಗಿದ್ದರು. ಅವರ ಅವಧಿಯಲ್ಲಿ ತಂಡ ಒಮ್ಮೆ (ಆರನೇ ಋತು ಚಾಂಪಿಯನ್ ಆಗಿತ್ತು. 6 ಬಾರಿ ತಂಡ ಪ್ಲೇ ಆಫ್ ತಲುಪಿದೆ.

ಅರ್ಜುನ ಪ್ರಶಸ್ತಿ ಪುರಸ್ಕೃತರಾಗಿರುವ ಸೆಹ್ರಾವತ್ ಅವರು ಕೋಚ್ ಆಗಿದ್ದಾಗ ರೈಲ್ವೇಸ್ ತಂಡ ಹಲವು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿದೆ. 1990ರಲ್ಲಿ ಏಷ್ಯನ್ ಗೇಮ್ಸ್ ಚಿನ್ನ ಗೆದ್ದ ಭಾರತ ತಂಡದ ಉಪನಾಯಕರಾಗಿದ್ದರು.

ಅದಾನಿ ಸಮೂಹವು ಗುಜರಾತ್ ಜೈಂಟ್ಸ್ ತಂಡದ ಒಡೆತನ ಹೊಂದಿದೆ.

ಕ್ವಾರ್ಟರ್‌ಗೆ ಕರ್ನಾಟಕ ವನಿತೆಯರು



ಬೆಂಗಳೂರು: ಬೌಲರ್‌ಗಳ ಪರಿಣಾಮಕಾರಿ ದಾಳಿಯ ನೆರವಿನಿಂದ ಕರ್ನಾಟಕ ವನಿತೆಯರ ತಂಡವು ಬುಧವಾರ ಬಿಸಿಸಿಐ 23 ವರ್ಷದೊಳಗಿನ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಬಿಹಾರ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಜೈಪುರದ ಅನಂತಂ ಮೈದಾನದಲ್ಲಿ ನಡೆದ ಎಲೀಟ್ ಬಿ ಗುಂಪಿನ ಕೊನೆಯ ಪಂದ್ಯದಲ್ಲಿ ಟಾಸ್ ಗೆದ್ದ ಬಿಹಾರ ಬ್ಯಾಟಿಂಗ್ ಆಯ್ದುಕೊಂಡಿತು. ವಂದಿತಾ ಕೆ.ರಾವ್ (18ಕ್ಕೆ 3) ಮತ್ತು ಸಲೋನಿ ಪಿ. (21ಕ್ಕೆ 3) ಅವರ ದಾಳಿಗೆ ಸಿಲುಕಿದ ಬಿಹಾರ ತಂಡವು 38.5 ಓವರ್‌ಗಳಲ್ಲಿ 129 ರನ್‌ಗಳಿಗೆ ಕುಸಿಯಿತು. ಆರಂಭ ಆಟಗಾರ್ತಿ ವೈದೇಹಿ ಯಾದವ್ (64;59ಎ) ಏಕಾಂಗಿ ಹೋರಾಟ ನಡೆಸಿದರು.

ಗುರಿ ಬೆನ್ನಟ್ಟಿದ ಕರ್ನಾಟಕ 31.3 ಓವರ್‌ಗಳಲ್ಲಿ 6 ವಿಕೆಟ್‌ಗೆ 131 ರನ್ ಗಳಿಸಿತು. ಎದುರಾಳಿ ಬೌಲರ್‌ಗಳ ದಾಳಿಗೆ ಒಂದೆಡೆ ವಿಕೆಟ್‌ಗಳು ನಿಯಮಿತವಾಗಿ ಉರುಳುತ್ತಿದ್ದರೂ, ಮತ್ತೊಂದೆಡೆ ತಾಳ್ಮೆಯ ಆಟವಾಡಿದ ಕೃಷಿಕಾ ರೆಡ್ಡಿ (ಔಟಾಗದೇ 62;97ಎ) ತಂಡವನ್ನು ದಡ ಸೇರಿಸಿದರು.

ಪಂದ್ಯಕ್ಕೂ ಮುನ್ನ ಬಿ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದ್ದ ಕರ್ನಾಟಕ ತಂಡವು ಈ ಗೆಲುವಿನೊಂದಿಗೆ ಅಗ್ರಸ್ಥಾನ ಪಡೆದು ಕ್ವಾರ್ಟರ್ ಫೈನಲ್‌ಗೆ ನೇರ ಪ್ರವೇಶ ಪಡೆಯಿತು. ಕರ್ನಾಟಕ ತಂಡವನ್ನು ಮಣಿಸಿ ಅಗ್ರಸ್ಥಾನಕ್ಕೇರಿದ್ದ ಮಧ್ಯಪ್ರದೇಶ ತಂಡವು ತನ್ನ ಕೊನೆಯ ಪಂದ್ಯದಲ್ಲಿ 72 ರನ್‌ಗಳಿಂದ ಬರೋಡಾ ತಂಡಕ್ಕೆ ಸೋತು, ಎರಡನೇ ಸ್ಥಾನಕ್ಕೆ ಇಳಿಯಿತು.

ಸಂಕ್ಷಿಪ್ತ ಸ್ಕೋರ್: ಬಿಹಾರ: 38.5 ಓವರ್‌ಗಳಲ್ಲಿ 129 (ವೈದೇಹಿ ಯಾದವ್ 64; ಪೂಜಾ ಕುಮಾರಿ 26ಕ್ಕೆ 2, ವಂದಿತಾ ಕೆ.ರಾವ್ 18ಕ್ಕೆ 3, ಸಲೋನಿ ಪಿ. 21ಕ್ಕೆ 3). ಕರ್ನಾಟಕ: 31.3 ಓವರ್‌ಗಳಲ್ಲಿ 6 ವಿಕೆಟ್‌ಗೆ 131 (ಕೃಷಿಕಾ ರೆಡ್ಡಿ ಔಟಾಗದೇ 62; ಸೂರ್ಯ 38ಕ್ಕೆ 2, ವೈದೇಹಿ ಯಾದವ್ 28ಕ್ಕೆ 2).